ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತ-ಇಂಗ್ಲೆಂಡ್ ಟೆಸ್ಟ್ ತಂಡ ಪ್ರಕಟ

- ಶುಭ್‌ಮನ್ ಗಿಲ್ ನಾಯಕ, ಪಂತ್ ಉಪನಾಯಕ
- ಎಂಟು ವರ್ಷದ ಬಳಿಕ ಕರುಣ್‌ಗೆ ಮತ್ತೆ ಬುಲಾವ್
- ರಾಹುಲ್, ಪ್ರಸಿದ್ಧ್ ಸೇರಿ ರಾಜ್ಯದ ಮೂವರಿಗೆ ಸ್ಥಾನ

ಆಪರೇಷನ್ ಸಿಂದೂರ ಹಾಗೂ ತುಪ್ಪದಲ್ಲಿ ಬಿದ್ದ ಜಾರ್ಜಿಯಾದ ಒಣರೊಟ್ಟಿ!

ಇದೇ ಅಂತರಂಗ ಸುದ್ದಿ ವಿಶ್ವೇಶ್ವರ ಭಟ್ 6

ಕನಕದಾಸರ ರಾಮ (ಧಾನ್ಯ) ಚರಿತೆ: ಸಾರಸಂಗ್ರಹ



ವಿದ್ಯಮಾನ ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ನಿಮ್ಮ ಬಗ್ಗೆ ಬೇರೆಯವರೂ ಅದೇ ಆತ್ಮೀಯತೆ, ನಿರೀಕ್ಷೆಯನ್ನು ಇಟ್ಟುಕೊಂಡರೆ ಮಾತ್ರ ಅಂಥವರೊಂದಿಗೆ ಅದೇ ರೀತಿಯ ಭಾವನೆಗಳನ್ನು ಹೊಂದಬಹುದು. ಇದು ಬರೀ ಏಕಮುಖವಾಗಿದ್ದರೆ ಅದರಿಂದ ನಿಮ್ಮಲ್ಲಿ ವಿಷಾದ, ಹತಾಶೆ ಮೂಡಬಹುದು. ಬೇರೆಯವರೊಂದಿಗಿನ ಸಂಬಂಧ ಸದಾ ನವಿರಾಗಿರುವಂತೆ ನೋಡಿಕೊಳ್ಳಬೇಕು.

ವಕ್ರತುಂಡೋಕ್ತಿ



ಕೆಲವರು ಮೂರೂ ಹೊತ್ತು ಜೀನ್ಸ್ ಧರಿಸಿರುತ್ತಾರೆ. ಅಂಥವರು ಅದನ್ನು ಹಾಸಿಗೆ ಎಂದು ಭಾವಿಸಿರುತ್ತಾರೆ.

16 ವರ್ಷಗಳಲ್ಲಿ ಮೊದಲ ಬಾರಿಗೆ ವಾಡಿಕೆಗಿಂತಲೂ ಮೊದಲೇ ಮುಂಗಾರು ಶುರು

ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ರೆಡ್ ಅಲರ್ಟ್ । ಮೊದಲ ಮಳೆಗೇ ಹೆದ್ದಾರಿ ಬಂದ್

ಮುಂಗಾರು ಆರ್ಭಟ

ದೆಹಲಿ: ಪ್ರಸಕ್ತ ವರ್ಷದ ನೈಋತ್ಯ ಮುಂಗಾರು ಶನಿವಾರ ಕೇರಳ ಪ್ರವೇಶಿಸಿದೆ ಎಂದು ಭಾರತೀಯ ಹವಾಮಾನ ಇಲಾಖೆ ಅಧಿಕೃತ ಮಾಹಿತಿ ನೀಡಿದೆ.

ಕರ್ನಾಟಕ, ಕೇರಳ, ತಮಿಳುನಾಡು ಸೇರಿದಂತೆ ದಕ್ಷಿಣ ಭಾರತದ ವಿವಿಧ ರಾಜ್ಯಗಳಲ್ಲಿ ಅತ್ಯಧಿಕ ಭಾರೀ ಮಳೆ ಆಗುವ ಸಾಧ್ಯತೆ ಇದ್ದು, ಐಎಂಡಿ ರೆಡ್ ಅಲರ್ಟ್ ಘೋಷಿಸಿದೆ. 2009ರ ನಂತರ ವಾಡಿಕೆಗಿಂತಲೂ ಮುಂಚಿತವಾಗಿ ಭಾರತದ ಮುಖ್ಯಭಾಗದಲ್ಲಿ ಮುಂಗಾರು ಪ್ರವೇಶಿಸಿರುವುದು ಇದೇ ಮೊದಲು (2009ರಲ್ಲಿ ಮೇ 23ರಂದು ಮುಂಗಾರು ಪ್ರವೇಶಿಸಿತ್ತು) ಎಂದು ಐಎಂಡಿ ತಿಳಿಸಿದೆ.

ಸಾಮಾನ್ಯವಾಗಿ ನೈರುತ್ಯ ಮುಂಗಾರು ಜೂನ್ 1ರಂದು ಕೇರಳಕ್ಕೆ ಪ್ರವೇಶಿಸುತ್ತದೆ. ಜುಲೈ 8ರ ಒಳಗಾಗಿ ಇಡೀ ದೇಶವನ್ನು ಆವರಿಸಿಕೊಳ್ಳುತ್ತದೆ. ಸೆಪ್ಟೆಂಬರ್ 17ರ ಸುಮಾರಿಗೆ ವಾಯವ್ಯ ಭಾರತದಿಂದ ಸ್ಥಳಾಂತರಗೊಂಡು, ಅಕ್ಟೋಬರ್ 15ರ ಹೊತ್ತಿಗೆ ಸಂಪೂರ್ಣವಾಗಿ ಕೊನೆಗೊಳ್ಳುತ್ತದೆ. ಕಳೆದ ವರ್ಷ ಮೇ 30ರಂದು ಕೇರಳಕ್ಕೆ ಮುಂಗಾರು ಪ್ರವೇಶಿಸಿತ್ತು. 2023ರಲ್ಲಿ ಜೂನ್ 8, 2022ರಲ್ಲಿ ಮೇ 29, 2021ರಲ್ಲಿ ಜೂನ್ 3, 2020ರಲ್ಲಿ ಜೂನ್ 1, 2019ರಲ್ಲಿ ಜೂನ್ 8 ಹಾಗೂ 2018ರಲ್ಲಿ ಮೇ 29ರಂದು ಪ್ರವೇಶಿಸಿತ್ತು.

→ 4

- ಮುಂದಿನ ಐದು ದಿನ ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ವರುಣನ ಆರ್ಭಟ
- ಉತ್ತರ ಕನ್ನಡದ ಕ್ಯಾಸಲ್ ರಾಕ್‌ನಲ್ಲಿ ಶನಿವಾರ 160 ಮಿ.ಮೀ ಗರಿಷ್ಠ ಮಳೆ
- ಭಾಗಮಂಡಲದಲ್ಲಿ 100 ಮಿ.ಮೀ, ಲೋಂಡಾದಲ್ಲಿ 60 ಮಿ.ಮೀ ಮಳೆ

2 ದಿನ ಭಾರೀ ಮಳೆ

ಕರ್ನಾಟಕದ ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಮತ್ತು ಉತ್ತರ ಕನ್ನಡದಲ್ಲಿ ಮೇ 24 ರಿಂದ 26 ರವರೆಗೆ ಭಾರೀ ಮಳೆಯಾಗುವ ಸಾಧ್ಯತೆಯಿದೆ. ಈ ಕಾರಣಕ್ಕಾಗಿ ರಾಜ್ಯದ ಕರಾವಳಿ ಭಾಗಕ್ಕೆ ರೆಡ್ ಅಲರ್ಟ್ ಘೋಷಿಸಲಾಗಿದೆ. ಬೆಂಗಳೂರು, ಮೈಸೂರು, ಮಂಡ್ಯ, ಕೊಡಗು, ಚಿಕ್ಕಮಗಳೂರು, ಮತ್ತು ಶಿವಮೊಗ್ಗ ಸೇರಿದಂತೆ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಗುಡುಗು-ಮಿಂಚಿನೊಂದಿಗೆ ಭಾರೀ ಮಳೆಯಾಗುವ ಮುನ್ಸೂಚನೆ ಇದೆ. ಈ ಪ್ರದೇಶಗಳಲ್ಲಿ ಗಂಟೆಗೆ 40-50 ಕಿ.ಮೀ ವೇಗದಲ್ಲಿ ಗಾಳಿಯೊಂದಿಗೆ ಮಳೆ ಸುರಿಯುವ ಸಾಧ್ಯತೆಯಿದ್ದು, ಜನರು ಎಚ್ಚರಿಕೆಯಿಂದಿರಲು ಸೂಚಿಸಲಾಗಿದೆ.

ಕುಮಟಾ-ಶಿರಸಿ ಸಂಪರ್ಕ ಕಡಿತ: ಕಾರವಾರ ಸಮೀಪದ ದೇವಿಮನೆ ಘಟ್ಟದಲ್ಲಿ ರಾಷ್ಟ್ರೀಯ ಹೆದ್ದಾರಿಯೇ ಕೊಚ್ಚಿ ಹೋಗಿದ್ದು ಕುಮಟಾ-ಶಿರಸಿ ಸಂಪರ್ಕ ಕಡಿತಗೊಂಡಿದೆ. ಕಳೆದ ಒಂದು ವರ್ಷದಿಂದ ಹೆದ್ದಾರಿ ಕಾಮಗಾರಿ ನಡೆಯುತಿತ್ತು. ಶುಕ್ರವಾರ ಸುರಿದ ಭಾರೀ ಮಳೆಗೆ ರಸ್ತೆಯೇ ಕೊಚ್ಚಿಹೋಗಿದೆ. ಈ ಭಾಗದಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಒಂದೇ ಕುಟುಂಬದ ಮೂವರು ಆತ್ಮಹತ್ಯೆ

ಎಚ್.ಡಿ.ಕೋಟೆ: ಹೆಬ್ಬಾಳ ಜಲಾಶಯದಲ್ಲಿ ನೀರಿಗೆ ಹಾರಿ ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೂದನೂರು ನಿವಾಸಿ ಮಹದೇವ ಸ್ವಾಮಿ (55), ಪತ್ನಿ ಮಂಜುಳಾ (42), ಪುತ್ರಿ ಹರ್ಷಿತಾ ಮೃತಪಟ್ಟವರು. ಇತ್ತೀಚೆಗೆ ಮಹದೇವಸ್ವಾಮಿ ದಂಪತಿಯ ಮೊದಲನೇ ಮಗಳು ಮನೆ ಬಿಟ್ಟು ಹೋಗಿದ್ದರು. ಇದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ. 'ಡೆತ್ ನೋಟ್ ಪರಿಶೀಲನೆ ಬಳಿಕ ಕಾರಣ ಗೊತ್ತಾಗಲಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಟೀಂ ಇಂಡಿಯಾ ರೀತಿ ಕೇಂದ್ರ-ರಾಜ್ಯ ಒಟ್ಟಾಗಿ ಕೆಲಸ ಮಾಡಬೇಕು: ಮೋದಿ

ದೆಹಲಿ: ಟೀಮ್ ಇಂಡಿಯಾದ ರೀತಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟಾಗಿ ಕೆಲಸ ಮಾಡಿದರೆ ಯಾವುದೇ ಗುರಿ ಸಾಧಿಸುವುದು ಅಸಾಧ್ಯವಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ನೀತಿ ಆಯೋಗದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾವು ಅಭಿವೃದ್ಧಿಯ ವೇಗವನ್ನು ಹೆಚ್ಚಿಸಬೇಕಾಗಿದೆ. ಟೀಂ ಇಂಡಿಯಾ ರೀತಿ ಕೇಂದ್ರ ಮತ್ತು ಎಲ್ಲ ರಾಜ್ಯಗಳು ಒಟ್ಟಾಗಿ ಕೆಲಸ ಮಾಡಿದರೆ ಇದು ಸಾಧ್ಯ. ವಿಕಸಿತ ಭಾರತ ನಿರ್ಮಾಣ ಮಾಡುವುದು ಪ್ರತಿಯೊಬ್ಬ ಭಾರತೀಯನ ಗುರಿಯಾಗಿದೆ. ರಾಜ್ಯಗಳು ಅಭಿವೃದ್ಧಿ ಹೊಂದಿದರೆ ದೇಶ ಅಭಿವೃದ್ಧಿ ಹೊಂದುತ್ತದೆ. ಇದು 140 ಕೋಟಿ ಭಾರತೀಯರ ಆಶಯವಾಗಿದೆ ಎಂದು ಪ್ರಧಾನಿ ಮೋದಿ ಅಭಿಪ್ರಾಯಪಟ್ಟರು.



ಕರೋನಾಗೆ ಒಬ್ಬರು ಬಲಿ

ಬೆಂಗಳೂರು: ಕರೋನಾ ಮತ್ತೆ ಪ್ರವೇಶಿಸಿದ್ದು, ಕರೋನಾ ಸೋಂಕಿಗೆ ತುತ್ತಾಗಿ ಬೆಂಗಳೂರಿನಲ್ಲಿ ಒಬ್ಬರು ಬಲಿಯಾಗಿದ್ದಾರೆ. ರಾಜ್ಯದಲ್ಲಿ ಶನಿವಾರ 108 ಜನರಿಗೆ ಕರೋನಾ ಪರೀಕ್ಷೆ ಮಾಡಲಾಗಿದೆ. ಈ ಪೈಕಿ ಐವರಿಗೆ ಕರೋನಾ ಪಾಸಿಟಿವ್ ಬಂದಿದ್ದು, ಒಬ್ಬರು ಸಾವನ್ನಪ್ಪಿದ್ದಾನೆ. ಬೆಂಗಳೂರಲ್ಲಿ 2, ಮೈಸೂರು 2 ಹಾಗೂ ವಿಜಯನಗರದಲ್ಲಿ ಒಂದು ಪ್ರಕರಣ ಪತ್ತೆಯಾಗಿದೆ. ರಾಜ್ಯದಲ್ಲಿ ಒಟ್ಟು 38 ಸಕ್ರಿಯ ಪ್ರಕರಣ ದಾಖಲಾಗಿವೆ. ಬೆಂಗಳೂರಿನಲ್ಲಿ 9 ತಿಂಗಳ ಮಗು ಸೇರಿ ಒಟ್ಟು ಮೂರು ಜನ ಮಕ್ಕಳಿಗೆ ಕರೋನಾ ಪಾಸಿಟಿವ್ ಬಂದಿದೆ.

ಎಂಜಿನಿಯರ್ ವಿಭಾಗದಲ್ಲಿ ಭವೇಶ್, ಅಗ್ರಿಕಲ್ಚರ್ ವಿಭಾಗದಲ್ಲಿ ಅಕ್ಷಯ್, ನರ್ಸಿಂಗ್ ಹಾಗೂ ಪಶು ವೈದ್ಯಕೀಯ ವಿಭಾಗದಲ್ಲಿ ಹರೀಶ್ ರಾಜ್‌ಗೆ ಪ್ರಥಮ

ಸಿಇಟಿ ಫಲಿತಾಂಶ

ಎಂಜಿನಿಯರಿಂಗ್ ವಿಭಾಗ

ಭವೇಶ್ ಜಯಂತಿ
ಪ್ರಥಮ



ಸಾತ್ವಿಕ್ ಬಿರಾದಾರ್
ದ್ವಿತೀಯ

ದಿನೇಶ್ ಗೋಮತಿ
ತೃತೀಯ

ಅಗ್ರಿಕಲ್ಚರ್

ಅಕ್ಷಯ್.ಎಂ
ಪ್ರಥಮ

ಪಶು ವೈದ್ಯಕೀಯ, ನರ್ಸಿಂಗ್

ಹರೀಶ್ ರಾಜ್
ಪ್ರಥಮ

ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಫಲಿತಾಂಶ ಪ್ರಕಟಿಸಿದರು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ 2025ರ ಫಲಿತಾಂಶವನ್ನು ಶನಿವಾರ ಕೆಇಎ ಕಚೇರಿಯಲ್ಲಿ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಪ್ರಕಟಿಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಸಿಇಟಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಮುಖ ಚಹರೆ ಪತ್ತೆ ರೀತಿ ಮೊಬೈಲ್ ಆ್ಯಪ್ ಸಿದ್ಧಪಡಿಸಿ 775 ಪರೀಕ್ಷಾ ಕೇಂದ್ರಗಳಿಗೆ ಪ್ರವೇಶ ಹಾಗೂ ಸಿಸಿಟಿವಿ ವೆಬ್ ಕಾಸ್ಟಿಂಗ್ ಮಾಡುವ ಮೂಲಕ ಅಕ್ರಮಗಳಿಗೆ ಆಸ್ಪದವಿಲ್ಲದಂತೆ ಪರೀಕ್ಷೆ ನಡೆಸಲಾಗಿದೆ. ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಶಿಕ್ಷಣ ಕೋರ್ಸ್ ಗಳ ಸಿಇಟಿ ಪರೀಕ್ಷೆಗೆ 3,30,787 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದು, 3,11,996 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ವಿಷಯವಾರು, 3,11,690 ಮಂದಿ ಭೌತಶಾಸ್ತ್ರ, 3,11,767 ಮಂದಿ ರಸಾಯನ ಶಾಸ್ತ್ರ, 3,04,170 ಮಂದಿ ಗಣಿತ, 2,39,459 ಮಂದಿ ಜೀವಶಾಸ್ತ್ರ ಪತ್ರಿಕೆ ಬರೆದಿದ್ದಾರೆ ಎಂದು ವಿವರಿಸಿದರು.

ವಿಷಯ ತಜ್ಞರು ಅಂತಿಮಗೊಳಿಸಿದ ಪರಿಷ್ಕೃತ ಉತ್ತರ ಕೀಲಿಗಳ ಆಧಾರದ ಮೇಲೆ ಮೆರಿಟ್ ಪಟ್ಟಿ ಸಿದ್ಧಪಡಿಸಲಾಗಿದೆ. ಅವರ ಶಿಫಾರಸುಗಳ ಪ್ರಕಾರ, ಭೌತಶಾಸ್ತ್ರದಲ್ಲಿ ಒಂದು ಪ್ರಶ್ನೆ, ರಸಾಯನಶಾಸ್ತ್ರದಲ್ಲಿ ಎರಡು ಮತ್ತು ಜೀವಶಾಸ್ತ್ರದಲ್ಲಿ ಎರಡು ಪ್ರಶ್ನೆಗಳನ್ನು ಸರಿಪಡಿಸಲಾಗಿದೆ. ಈ ಅಂತಿಮ ಉತ್ತರಗಳಿಗೆ ಅನುಗುಣವಾಗಿ ಮೌಲ್ಯ ಮಾಪನ ನಡೆಸಲಾಗಿದೆ.

→ 4

> **ಎಂಜಿನಿಯರಿಂಗ್ ಕೋರ್ಸ್‌ಗಳ ಸೀಟ್ ಬ್ಲಾಕಿಂಗ್ ಪ್ರಕರಣ ಸಂಬಂಧ ಮಲ್ಲೇಶ್ವರ ಸೆನ್ ಠಾಣೆ ಪೊಲೀಸರು ತನಿಖೆ ನಡೆಸಿ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ ಎಂದು ಮಾಹಿತಿ ಇದೆ. ಕೆಇಎ ಕೆಲ ಸಿಬ್ಬಂದಿ ದಂಧೆಯಲ್ಲಿ ಭಾಗಿಯಾಗಿರುವ ಬಗ್ಗೆ ಚಾರ್ಜ್ ಶೀಟ್‌ನಲ್ಲಿ ಪೊಲೀಸರು ಉಲ್ಲೇಖಿಸಿರುವುದಾಗಿ ಪ್ರಾಥಮಿಕ ಮಾಹಿತಿಯಲ್ಲಿ ತಿಳಿದು ಬಂದಿದೆ. ಪೂರ್ಣ ತನಿಖಾ ವರದಿ ಪಡೆದುಕೊಂಡು ಕಾನೂನು ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು.**
> **- ಎಂ.ಸಿ.ಸುಧಾಕರ್** ಉನ್ನತ ಶಿಕ್ಷಣ ಸಚಿವ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

ಗೌರವಾನ್ವಿತ ನ್ಯಾಯಮೂರ್ತಿ ಡಾ. ಹೆಚ್.ಎನ್.ನಾಗಮೋಹನ ದಾಸ್ ಏಕ ಸದಸ್ಯ ಆಯೋಗ

ಯವನಿಕಾ, ನೃಪತುಂಗ ರಸ್ತೆ, ಬೆಂಗಳೂರು.

ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆ - 2025

ಮನೆ-ಮನೆ ಭೇಟಿ ಸಮೀಕ್ಷೆ, ವಿಶೇಷ ಶಿಬಿರ ಹಾಗೂ ಆನ್‌ಲೈನ್ ಸ್ವಯಂ ಘೋಷಣೆಯ ದಿನಾಂಕವನ್ನು ವಿಸ್ತರಿಸಲಾಗಿದೆ.

ಸಮೀಕ್ಷೆಯ ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.

ಸಮೀಕ್ಷಾದಾರರಿಂದ ಮನೆ-ಮನೆ ಭೇಟಿ ಸಮೀಕ್ಷೆ	26-05-2025 ರಿಂದ 29-05-2025 ರವರೆಗೆ ವಿಸ್ತರಿಸಲಾಗಿದೆ
ವಿಶೇಷ ಶಿಬಿರ (ಮತದಾನದ ಮತಗಟ್ಟೆ ಕೇಂದ್ರಗಳಲ್ಲಿ)	30-05-2025 ರಿಂದ 01-06-2025 ರವರೆಗೆ ಮರು ನಿಗದಿಪಡಿಸಲಾಗಿದೆ
ಆನ್‌ಲೈನ್ ಮೂಲಕ ಸ್ವಯಂ ಘೋಷಣೆ	01-06-2025 ರವರೆಗೆ ಮುಂದುವರೆಯಲಿದೆ

- ಆನ್‌ಲೈನ್ ಮೂಲಕ ಸ್ವಯಂ ಘೋಷಣೆಯನ್ನು ಈ ಆನ್‌ಲೈನ್ ಲಿಂಕ್ https://schedulecastesurvey.karnataka.gov.in/selfdeclaration ನ ಮೂಲಕ ಮಾಡಿಕೊಳ್ಳಬಹುದು.
- ಆನ್‌ಲೈನ್ ಮೂಲಕ ಸ್ವಯಂ ಘೋಷಣೆ ಮಾಹಿತಿಯನ್ನು ಭರ್ತಿ ಮಾಡಲು ಪಡಿತರ ಚೀಟಿಯ ಸಂಖ್ಯೆ ಅಥವಾ ಆಧಾರ್ ಕಾರ್ಡ್ ನೊಂದಿಗೆ ಜಾತಿ ಪ್ರಮಾಣ ಪತ್ರದ ಆರ್.ಡಿ ಸಂಖ್ಯೆ ಅವಶ್ಯಕವಾಗಿರುತ್ತದೆ.
- ಮನೆ-ಮನೆ ಸಮೀಕ್ಷೆ ಸಂದರ್ಭದಲ್ಲಿ ತಮ್ಮ ಮಾಹಿತಿ ನೀಡಲು ಸಾಧ್ಯವಾಗದವರು ವಿಶೇಷ ಶಿಬಿರದ ದಿನದಂದು ಪಡಿತರ ಚೀಟಿ ಅಥವಾ ಆಧಾರ್ ಕಾರ್ಡ್‌ನೊಂದಿಗೆ ಹತ್ತಿರದ ಮತಗಟ್ಟೆ ಕೇಂದ್ರಗಳಿಗೆ ಭೇಟಿ ನೀಡಿ, ತಮ್ಮ ಮಾಹಿತಿಯನ್ನು ಸಲ್ಲಿಸಬಹುದು.

ಸಹಾಯವಾಣಿ 9481359000

ನಿಮ್ಮ ಸಾಮಾಜಿಕ ಜವಾಬ್ದಾರಿಯನ್ನು ಪೂರೈಸಲು ಒಂದು ಸುವರ್ಣಾವಕಾಶ

ನಿಮ್ಮ ಜಾತಿ,
ಆದಿ ಕರ್ನಾಟಕ
ಆದಿ ದ್ರಾವಿಡ
ಆದಿ ಆಂಧ್ರ
ಎಂದು ಇದ್ದಲ್ಲಿ, ಮೂಲ ಜಾತಿಯ ಹೆಸರನ್ನು ನಿಖರವಾಗಿ ನಮೂದಿಸಿ, ಸಮೀಕ್ಷೆಗೆ ಸಹಕರಿಸಿ

ಮಾನ್ಯ ಸಮಾಜ ಕಲ್ಯಾಣ ಸಚಿವರಾದ **ಡಾ. ಹೆಚ್.ಸಿ. ಮಹದೇವಪ್ಪ** ರವರು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿರುವುದು.

ನಮ್ಮ ಕರ್ನಾಟಕ ಗ್ಯಾರಂಟಿ ಕರ್ನಾಟಕ

ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಅನ್ನಭಾಗ್ಯ 10 kg | ಗೃಹ ಜ್ಯೋತಿ ಪ್ರತಿ ಮನೆಗೆ 200 | ಗೃಹಲಕ್ಷ್ಮಿ ₹2000 | ಯುವನಿಧಿ ₹3000 | ₹1500

ಸಮಾಚಾರ ಸಣ್ಣದಲ್ಲ

ಜನೌಷಧಿ ಮುಚ್ಚುವ ಆದೇಶ ಹಿಂಪಡೆಯಿರಿ

ಕಲಬುರಗಿ: ಕಾಂಗ್ರೆಸ್ ಸರಕಾರ ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿನ ಜನೌಷಧಿ ಕೇಂದ್ರಗಳನ್ನು ಮುಚ್ಚುವ ಆದೇಶ ಹೊರಡಿಸಿದೆ. ಕೂಡಲೆ, ಆದೇಶ ವಾಪಸ ಪಡೆಯಬೇಕು ಎಂದು ಜಿಲ್ಲಾ ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಬಾಲರಾಜ್ ಗುತ್ತೇದಾರ ಆಗ್ರಹಿಸಿದ್ದಾರೆ.ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸುವ ಅವರು, ಜನೌಷಧಿ ಯೋಜನೆಯಡಿ ಬಡವರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರೆಯುತ್ತಿದ್ದ ಔಷಧಿಗಳ ವಿತರಣೆಗೆ ಅಡ್ಡಗಾಲು ಹಾಕುವ ಯತ್ನವನ್ನು ಭ್ರಷ್ಟ ಕಾಂಗ್ರೆಸ್ ಸರಕಾರ ಮಾಡುತ್ತಿದೆ. ದಿನೇಶ್ ಗುಂಡೂರಾವ್ ಅವರ ಆರೋಗ್ಯ ಇಲಾಖೆಯಡಿ ತಾಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿನ ಸುಮಾರು 200 ಜನೌಷಧಿ ಕೇಂದ್ರಗಳನ್ನು ಮುಚ್ಚಿಸುವ ಮೂಲಕ ಬಡವರ ಹಣ ಹಾಗೂ ಹೆಣದ ಮೇಲೆ ಸವಾರಿ ಮಾಡುವ ಕೆಲಸಕ್ಕೆ ಕಾಂಗ್ರೆಸ್ ಕೈಹಾಕಿದೆ.

ಮನೆಯಲ್ಲಿಟ್ಟಿದ್ದ 18 ಲಕ್ಷ ರು. ಕಳ್ಳತನ

ಕಲಬುರಗಿ: ಖಾಸಗಿ ಫೈನಾನ್ಸ್‌ನಲ್ಲಿನ ಬಾಕಿ ತೀರಿಸಲು ಸ್ನೇಹಿತರಿಂದ ಕಡ ತಂದು ಮನೆಯಲ್ಲಿಟ್ಟಿದ್ದ 18 ಲಕ್ಷ ರು. ಕಳ್ಳತನವಾದ ಘಟನೆ ಪ್ರಕೃತಿ ಕಾಲೊನಿಯ ಕ್ಯೂಪಿ ಲೇಔಟ್‌ನಲ್ಲಿ ನಡೆದಿದೆ. ಹೋಟೆಲ್ ವ್ಯಾಪಾರಿ ರವಿಚಂದ್ರ ಪುಟಗಿ ಅವರ ಮನೆ ಕಳ್ಳತನವಾಗಿದೆ. ಖಾಸಗಿ ಫೈನಾನ್ಸ್‌ನಲ್ಲಿ ಸಾಲ ಪಡೆದಿದ್ದು ಅದನ್ನು ತೀರಿಸಲು ಸ್ನೇಹಿತರಿಂದ ಹಣ ತಂದು ಮನೆಯಲ್ಲಿಟ್ಟಿದ್ದರು. ಮೇ.20ರಂದು ಮದುವೆ ನಿಮಿತ್ತ ಮನೆಗೆ ಬೀಗ ಹಾಕಿಕೊಂಡು ಎಲ್ಲರೂ ಹೋಗಿದ್ದರು. ಮರುದಿನ ಬೆಳಗ್ಗೆ ಬಂದು ನೋಡಿದಾಗ ಮನೆಯಲ್ಲಿ ಕಳ್ಳತನವಾಗಿದ್ದು ಕಂಡು ಬಂದಿದೆ. ಮನೆಯ ಕೀಲಿ ಮುರಿದ ಕಳ್ಳರು ಬೆಡ್ ರೂಮ್‌ನಲ್ಲಿನ ಅಲಮಾರದಲ್ಲಿನ 18 ಲಕ್ಷ ರು. ನಗದು 40 ಸಾವಿರ ರು.ಮೌಲ್ಯದ ಬೆಳ್ಳಿ ಸಾಮಾನು ಸೇರಿ 18.50 ಲಕ್ಷ ರು. ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಿದ್ದಾರೆ ಎಂದು ಅಶೋಕನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರಿನಲ್ಲಿ ತಿಳಿಸಿದ್ದಾರೆ.

ವಸತಿ ನಿಲಯ ಪ್ರವೇಶಕ್ಕೆ ಆಹ್ವಾನ

ಸೇಡಂ: ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿಗಳಿಗೆ ಮಾತ್ರ ವಸತಿ ನಿಲಯಗಳಲ್ಲಿ 2025-26 ನೇ ಸಾಲಿಗೆ ಖಾಲಿ ಇರುವ ಸ್ಥಾನಗಳ ಪ್ರವೇಶಕ್ಕೆ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಸೇಡಂ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ. ಪ್ರವೇಶ ಪಡೆಯಲಿಚ್ಚಿಸುವ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ 2025ರ ಜೂನ್ 16 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಧೃಢೀಕೃತ ಪ್ರತಿ ಸಂಬಂಧಪಟ್ಟ ಕಾಲೇಜಿನ ಪ್ರಾಚಾಯರಿಂದ ಧೃಢೀಕರಿಸಿ ಎಂದು ಪ್ರಕಟಿಸಲಾಗಿದೆ.

ಇಂದು ನೀರಾವರಿ ಸಚಿವರ ಪ್ರವಾಸ

ಕಲಬುರಗಿ: ರಾಜ್ಯದ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್. ಭೋಸರಾಜು ಅವರು ರಾಯಚೂರದಿಂದ ರಸ್ತೆ ಮೂಲಕ ಮೇ 25 ರಂದು ಭಾನುವಾರ ರಾತ್ರಿ 7.30 ಗಂಟೆಗೆ ಕಲಬುರಗಿಗೆ ಆಗಮಿಸಿ ವಾಸ್ತವ್ಯ ಮಾಡುವರು. ಮೇ 26 ರಂದು ಸೋಮವಾರ ಬೆಳಿಗ್ಗೆ 10 ಗಂಟೆಗೆ ಕಲಬುರಗಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ನಡೆಯುತ್ತಿರುವ ವಿವಿಧ ಕಾಮಗಾರಿಗಳ ಪರಿವೀಕ್ಷಣೆ ಮಾಡುವರು. ಮಧ್ಯಾಹ್ನ 3 ಗಂಟೆಗೆ ಸಣ್ಣ ನೀರಾವರಿ ಇಲಾಖೆಯ ಕಲಬುರಗಿ ವಿಭಾಗದ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಸಂಜೆ 5.30 ಗಂಟೆಗೆ ಕಲಬುರಗಿ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಗೆ ಭೇಟಿ ನೀಡುವರು. ರಾತ್ರಿ 8.45 ಗಂಟೆಗೆ ಕಲಬುರಗಿಯಿಂದ ಸೋಲ್ಲಾಪುರ ಹಾಸನ್ ಎಕ್ಸ್‌ಪ್ರೆಸ್ ರೈಲಿನ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

ಅಗಲಿದ ಜೀವ

ಸಿದ್ದಪ್ಪ ಗೌಡ

ಕಲಬುರಗಿ: ಕಲಬುರಗಿ ಜಿಲ್ಲೆಯ ಸಾವಳಗಿ ಬಿ ಗ್ರಾಮದ ಸಿದ್ದಪ್ಪ ಗೌಡ (ಗೌಡಪ್ಪ ಗೌಡ) (76) ನಿಧನರಾದರು.

ಗ್ರಾಮದಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ ಸ್ವಂತ ಹೊಲದಲ್ಲಿ ಇವರ ಅಂತ್ಯ ಕ್ರಿಯೆ ನೆರವೇರಲಿದೆ. ಇವರು ಗೋವಾ ಹೋರಾಟದ ಚಳುವಳಿಯಲ್ಲಿ ಭಾಗವಹಿಸಿದರು. ಮೃತರಿಗೆ ತಂದೆ ಗುರುಶಾಂತಪ್ಪ ಮಾಲಿ ಪಾಟೀಲ, ಪತ್ನಿ,ಇಬ್ಬರು ಹೆಣ್ಣು, ಮೂವರು ಗಂಡು ಮಕ್ಕಳಿದ್ದಾರೆ.

{ ಸಿದ್ದರಾಮಯ್ಯ } ಮುಖ್ಯಮಂತ್ರಿ

ಜಾತಿ, ವರ್ಗ ರಹಿತ ಮಾನವೀಯ ಸಮಾಜ ಅವರ ತುಡಿತವಾಗಿತ್ತು. ಬಸವಾದಿ ಶರಣರ ಅನುಭಾವವೇ ವಚನಗಳಾಗಿವೆ. ವಚನ ಎಂದರೆ ಮಾತು. ಕನ್ನಡ ಸಾಹಿತ್ಯದಲ್ಲಿ ವಚನ ಮತ್ತು ದಾಸ ಸಾಹಿತ್ಯ ದೊಡ್ಡ ಮೈಲಿಗಲ್ಲು. ಅಕ್ಷರ ಸಂಸ್ಕೃತಿಯಿಂದ ವಂಚಿತರಾದವರಿಗೆ ವಚನ ಸಾಹಿತ್ಯ ಆಡು ಮಾತಿನ ಮೂಲಕ ತಲುಪಿತು.

ಬಿಜೆಪಿಯಿಂದ ಕಲಬುರಗಿ ಚಲೋ ಪ್ರತಿಭಟನೆ। ರಿಪಬ್ಲಿಕ್ ಆಫ್ ಕಲಬುರಗಿಗೆ ಕರೆ। ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ವಾಗ್ದಾಳಿ

ಖರ್ಗೆ ನಿಜಮಾನಾಳ್ವಿಕೆ ಕಲಬುರಗಿಯಲ್ಲಿ ನಡೆಯಲ್ಲ

ವಿಶ್ವವಾಣಿ ಸುದ್ದಿಮನೆ, ಕಲಬುರಗಿ

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲುವಾದಿ ನಾರಾಯಣಸ್ವಾಮಿಯವರನ್ನು ಚಿತ್ತಾಪುರ ಪ್ರವಾಸಿ ಮಂದಿರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕೂಡಿ ಹಾಕಿ, ಕಾರಿಗೆ ಬಣ್ಣ ಎರಚಿದ ಘಟನೆ ಖಂಡಿಸಿ, ಶನಿವಾರ ನಗರದಲ್ಲಿ ಬಿಜೆಪಿಯಿಂದ ಕಲಬುರಗಿ ಚಲೋ ಪ್ರತಿಭಟನೆ ನಡೆಸಿ, ಕಾಂಗ್ರೆಸ್ ಸರಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ವಾಗ್ದಾಳಿ ನಡೆಸಿದರು.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಬಿಜೆಪಿ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರು ಜಮಾವಣೆಗೊಂಡು ಸರಕಾರ ಹಾಗೂ ಸಚಿವ ಖರ್ಗೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಲಬುರಗಿಯನ್ನ ರಿಪಬ್ಲಿಕ್ ಆಫ್ ಕಲಬುರಗಿ ಆಗಲು ಬಿಡುವುದಿಲ್ಲ.

ಇಲ್ಲಿ ರಜಾಕರ್ ಆಡಳಿತ ನಡೆಸಲು ಅವಕಾಶ ನೀಡುವುದಿಲ್ಲ. ಎಲ್ಲರಿಗೂ ಬಾಬಾಸಾಹೇಬ ಅಂಬೇಡ್ಕರ್ ನೀಡಿದ ಸಂವಿಧಾನ ಒಂದೇ, ಎಲ್ಲರಿಗೂ ಸಮಾನ ಹಕ್ಕಿದೆ. ನಿಮ್ಮ ದಬ್ಬಾಳಿಕೆ, ಹಲ್ಲೆ ಹಾಗೂ ದರ್ಪದ ರಾಜಕಾರಣ ನಡೆಯಲ್ಲ ಎಂದು ಸಚಿವ ಖರ್ಗೆ ವಿರುದ್ಧ ಗುಡುಗಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಬೆಂಬಲಿಗರು ಹಾಗೂ ರಾಜಕೀಯ ಪುಡಾರಿಗಳಿಂದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲುವಾದಿ ನಾರಾಯಣಸ್ವಾಮಿ ಅವರನ್ನು ದಿಗ್ಬಂದನ ಹಾಕಿ, ಅಪಮಾನ ಮಾಡಿದ್ದಾರೆ. ರಾಜ್ಯದಲ್ಲಿ ಸುದೀರ್ಘ ಆಡಳಿತ ನಡೆಸಿದ ಹಿರಿಯ ರಾಜಕಾರಣಿ ಮಲ್ಲಿಕಾರ್ಜುನ ಖರ್ಗೆ ಅವರ ಸುಪುತ್ರನಾಗಿ ಪ್ರಿಯಾಂಕ್ ಖರ್ಗೆ ಇಂತಹ ಕೀಳು ಮಟ್ಟದ ರಾಜಕಾರಣಕ್ಕೆ ಇಳಿದಿದ್ದಾರೆ.

ಛಲುವಾದಿ ನಾರಾಯಣಸ್ವಾಮಿ ಬಡ ಕುಟುಂಬದಿಂದ ಬಂದ ದಲಿತ ನಾಯಕ ಎನ್ನುವ ಕಾರಣಕ್ಕೆ ಅವರ ಮೇಲೆ ದಬ್ಬಾಳಿಕೆ ಮಾಡುತ್ತಿದೀರಾ.? ಛಲುವಾದಿ ನಾರಾಯಣಸ್ವಾಮಿ ಅವರ ಮೇಲಿನ ನಿಮ್ಮ ನಡುವಳಿಕೆ ಅಕ್ಷಮ್ಯ ಅಪರಾಧ ಎಂದು ಕಿಡಿಕಾರಿದರು.

ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ಕಲಬುರಗಿ ಜನರನ್ನು ಖರ್ಗೆ ಅವರಿಂದ ಉಳಿಸಬೇಕು. ಯಾರೇ ಕಾರ್ಯಕರ್ತರಿಗೆ ತೊಂದರೆ ಆದರೆ, ನಾವು ಬಂದು ಹೋರಾಟ ಮಾಡುತ್ತೇವೆ. ದಿನ ಬೆಳಗಾದರೆ, ಸಂವಿಧಾನ ಇಟ್ಕೊಂಡು ಓಡಾಡುವ ಕಾಂಗ್ರೆಸ್ ನವರಿಗೆ ಯಾವ ಪೇಜ್ ನಲ್ಲಿ ಗುಂಡಾಗಿರಿ ಮಾಡಿ ಎಂದು ಅಂಬೇಡ್ಕರ್ ಬರೆದಿದ್ದಾರೆ.

ಯಾರೊಬ್ಬರೂ ಈ ಗುಂಡಾ ಸಂಸ್ಕೃತಿಯ ಬಗ್ಗೆ ಹೆದರಲ್ಲ. ಕಾರ್ಯಕರ್ತರ ಜತೆಗೆ ನಾವಿದ್ದೇವೆ ಎಂದು ಹೇಳಿದರು. ಮಾಜಿ ಸಚಿವ ಬಿ. ಶ್ರೀರಾಮುಲು ಮಾತನಾಡಿ, ಕಲಬುರಗಿಯನ್ನು ರಿಪಬ್ಲಿಕ್ ಆಫ್ ಕಲಬುರಗಿ ಮಾಡಲು ಹೊರಟಿದ್ದೀರಾ.? ಬಿಜೆಪಿ ಕಲಬುರಗಿಯನ್ನು ರಿಪಬ್ಲಿಕ್ ಕಲಬುರಗಿ ಆಗಲು ಬಿಡಲ್ಲ. ಸಂವಿಧಾನ ಹಾಗೂ ಸಂವಿಧಾನದ ಹುದ್ದೆಯ ಅಪಮಾನ ಆಗಿದೆ. ದೇಶದಲ್ಲಿ ಪೊಲೀಸ್ ಇಲಾಖೆಗೆ ಬಹಳಷ್ಟು ಗೌರವವಿದೆ. ಅದನ್ನು ಕಳೆಯುವ ಕೆಲಸ ಪೊಲೀಸರು ಮಾಡಬಾರದು. ರಾಜ್ಯದ ಎಲ್ಲಾ ವಿಚಾರ ಗಮನಿಸುತ್ತಿದ್ದೇವೆ.

ಬಿಜೆಪಿ ಕಾರ್ಯಕರ್ತರು ನಿರ್ಭತಿಯಿಂದ ಇರಿ ಮೂರು ವರ್ಷಗಳ ಬಳಿಕ ಮತ್ತೆ ಅಧಿಕಾರಕ್ಕೆ ಬಿಜೆಪಿ ಬರುತ್ತೆ. ಆಗ ಎಲ್ಲರಿಗೂ ತಕ್ಕ ಪಾಠ ಕಲಿಸುತ್ತೇವೆ. ನಮ್ಮ ಕಾರ್ಯಕರ್ತರು ಮನಸ್ಸು ಮಾಡಿದರೆ, ಕರ್ನಾಟಕದಲ್ಲಿ ಎಲ್ಲಿಯೂ ಕಾಂಗ್ರೆಸ್ ನಾಯಕರನ್ನು ಓಡಾಡಲು ಬಿಡುವುದಿಲ್ಲ. ಪೊಲೀಸರು, ಹಣ ಬಲ, ತೋಳುಬಲ ಒಂದು ಕಡೆ ಆಗಲಿ, ನಮ್ಮ ಕಾರ್ಯಕರ್ತರು ಒಂದು ಕಡೆ ನಿಲ್ಲುತ್ತೇವೆ ಬನ್ನಿ ಎಂದು ಆಹ್ವಾನ ನೀಡಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲುವಾದಿ ನಾರಾಯಣಸ್ವಾಮಿ, ಸಂಸದ ಗೋವಿಂದ್ ಕಾರಜೋಳ, ಮಾಜಿ ಪ್ರಧಾನ ಕಾರ್ಯದರ್ಶಿ ಸಿ.ಟಿ ರವಿ, ಮುನಿಸ್ವಾಮಿ, ಸಿದ್ದು ಸವದಿ, ಸಿಮೆಂಟ್ ಮಂಜು ಮಾತನಾಡಿದರು.

ಈ ಸಂದರ್ಭದಲ್ಲಿ ಪ್ರದಾನ ಕಾರ್ಯದರ್ಶಿ ಪ್ರೀತಮ್ ಗೌಡ, ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಹರೀಶ್ ಪೂಂಜಾ, ಶಾಸಕ ಹಾಗೂ ಎಸ್.ಸಿ.ಮೋರ್ಚಾ ರಾಜ್ಯಾಧ್ಯಕ್ಷ ಸಿಮೆಂಟ್ ಮಂಜು, ಶಾಸಕರಾದ ಸಿದ್ದು ಸವದಿ, ರಾಜ್ಯ ಕಾರ್ಯದರ್ಶಿ ಲಲಿತಾ ಅನಪೂರ್, ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ, ಸುನೀಲ್ ವಲ್ಲ್ಯಾಪುರೆ, ಬಿ.ಜಿ ಪಾಟೀಲ್, ಬಿಜೆಪಿ ಅಧ್ಯಕ್ಷರಾದ ಅಶೋಕ್ ಬಗಲಿ, ಚಂದು ಪಾಟೀಲ್, ಮಾಜಿ ಶಾಸಕರಾದ ರಾಜಕುಮಾರ ಪಾಟೀಲ್ ತೆಲ್ಕೂರ್, ದತ್ತಾತ್ರೇಯ ಪಾಟೀಲ್ ರೇವೂರ್, ಬಸವರಾಜ್ ದಡೆಸೂರು, ಅವ್ವಣ್ಣ ಮ್ಯಾಕೇರಿ, ಅಂಬರಾಯ ಅಷ್ಟಗಿ, ಶಿವರಾಜ್ ಪಾಟೀಲ್ ರದ್ದೇವಾಡಗಿ, ನಿತೀನ್ ಗುತ್ತೇದಾರ ಸೇರಿ ಜಿಲ್ಲೆಯ ಪಧಾಧಿಕಾರಿಗಳು, ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ನಗರದಲ್ಲಿ ಬಿಜೆಪಿಯಿಂದ ಕಲಬುರಗಿ ಚಲೋ ಪ್ರತಿಭಟನೆ ನಡೆಸಲಾಯಿತು.

ಕಳೆದ ಎರಡು ವರ್ಷದಿಂದ ರಿಪಬ್ಲಿಕ್ ಆಫ್ ಕಲಬುರಗಿ ಆಗಿದೆ. ನಾರಾಯಣಸ್ವಾಮಿ ಅವರಿಗೆ ಅಗೌರವ ತೋರುವ ಮೂಲಕ ಸಂವಿಧಾನ ಹುದ್ದೆಗೆ ಅಪಮಾನ ಮಾಡಿದ್ದಾರೆ. ದಬ್ಬಾಳಿಕೆಯೇ ಕಾಂಗ್ರೆಸ್ ಸಂಸ್ಕೃತಿಯಾಗಿದೆ. ಎಲ್ಲರೂ ಒಂದಾಗಿ ಹೋರಾಟ ಮಾಡಿ ಪ್ರಿಯಾಂಕ್ ಖರ್ಗೆಗೆ ಪಾಠ ಕಲಿಸಬೇಕು. ಕಲಬುರಗಿಯಲ್ಲಿ ಕೆಡಿಪಿ ಮೀಟಿಂಗ್ ಮಾಡಿಲ್ಲ. ಅಭಿವೃದ್ಧಿ ಕೆಲಸಗಳು ಮಾಡಿಲ್ಲ. ಎಂಪಿ ಒಂದು ಸಭೆ ನಡೆಸಿಲ್ಲ. ಇದರ ಬಗ್ಗೆ ಧ್ವನಿ ಎತ್ತಿಬೇಕಿದೆ.

– ಡಾ.ಅವಿನಾಶ್ ಜಾಧವ, ಶಾಸಕ

ನೈತಿಕತೆ ಹೊಣೆ ಹೊತ್ತು, ರಾಜೀನಾಮೆ ನೀಡಿ

ಜಿಲ್ಲೆಯಲ್ಲಿ ಎಲ್ಲವೂ ಪ್ರಿಯಾಂಕ್ ಖರ್ಗೆ ಅವರ ಅಣತಿಯಂತೆ ನಡೆಯುತ್ತಿದೆ. ಡಿಸಿ ಕಚೇರಿ ಸಂಪೂರ್ಣ ಸ್ವಾತಂತ್ರ್ಯ ಕಳೆದುಕೊಂಡಿದೆ. ಡಿಸಿ ತಮ್ಮ ಐಎಎಸ್ ಪರೀಕ್ಷೆ ಭಾರತದಲ್ಲಿ ಬರೆದಿದ್ದಾರೋ, ಇಲ್ಲ ಪಾಕಿಸ್ತಾನದಲ್ಲಿ ಬಂದಿದ್ದಾರೋ ಗೊತ್ತಿಲ್ಲ. ಡಿಸಿ ಅವರು ಏನು ಕ್ರಮಕೈಗೊಳ್ಳುವುದೇ ಇಲ್ಲ. ಇದು ರಜಾಕರ ಸರಕಾರವಲ್ಲ. ರಜಾಕರ ಸರ್ವಾಧಿಕಾರಿ ನೀತಿ ಬಿಡಬೇಕು. ಕೂಡಲೇ, ಚಿತ್ತಾಪುರ ಘಟನೆಯನ್ನು ನ್ಯಾಯಾಂಗ ತನಿಖೆಗೆ ಆಗಬೇಕು. ಎಲ್ಲರ ಕಾಲ್ ಲಿಸ್ಟ್ ತನಿಖೆ ಆಗಬೇಕು. ನಾಚಿಕೆ, ಮಾನ ಇದ್ದರೆ ಸಚಿವ ಪ್ರಿಯಾಂಕ್ ಖರ್ಗೆ ನೈತಿಕತೆ ಹೊಣೆ ಹೊತ್ತು, ರಾಜೀನಾಮೆ ನೀಡಲಿ ಎಂದು ಎನ್. ರವಿಕುಮಾರ್ ಸವಾಲ್ ಹಾಕಿದರು.

ಕಲಬುರಗಿಯಲ್ಲಿ ಜಿಲ್ಲಾಧಿಕಾರಿ, ಪೊಲೀಸ್ ಅಧಿಕಾರಿಗಳ ಅಧಿಕಾರಿ ನಡೆಯುತ್ತಿಲ್ಲ. ಕೇವಲ ಪ್ರಿಯಾಂಕ್ ಖರ್ಗೆ ಆಡಳಿತ ನಡೆಯುತ್ತಿದೆ. ಜಿಲ್ಲೆಯಲ್ಲಿ ಒಂದೇ ಒಂದು ಅಭಿವೃದ್ಧಿ ಕೆಲಸ ನಡೆಯುತ್ತಿಲ್ಲ. ಎಲ್ಲವನ್ನು ತಡೆ ಹಿಡಿಯುವ ಕೆಲಸ ನಡೆಯುತ್ತಿದೆ. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲುವಾದಿ ನಾರಾಯಣಸ್ವಾಮಿ ಅವರನ್ನು ಐದು ಗಂಟೆ ಕೂಡಿ ಹಾಕಿ ಅವಮಾನ ಮಾಡಲಾಗಿದೆ. ಚಿತ್ತಾಪುರ ಘಟನೆಯಲ್ಲಿ ಆರೋಪಿಗಳನ್ನು ಬಂಧಿಸಬೇಕು.

– ಬಸವರಾಜ್ ಮತ್ತಿಮಡು, ಶಾಸಕ

ವಿಶ್ವ ಚೇತನರಿಗಾಗಿ ಭಾರತ ಸುಗಮ್ಯ ಯಾತ್ರೆ

ಆಳಂದ: ತಾಲೂಕು ಪಂಚಾಯಿತಿಯ ಆಶ್ರಯದಲ್ಲಿ ಶುಕ್ರವಾರ ಭಾರತ ಸುಗಮ್ಯ ಯಾತ್ರೆ 2025ನೇ ಸಾಲಿನ ವಿಶ್ವ ಸುಲಭ ಲಭ್ಯತೆ ಅರಿವು ಜಾಥಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಯಿತು.

ಈ ಜಾಥಾವು ತಾಲೂಕು ಪಂಚಾಯಿತಿ ಕಚೇರಿಯಿಂದ ಆರಂಭಗೊಂಡು ಬಸ್ ನಿಲ್ದಾಣದವರೆಗೆ ಸಾಗಿ, ವಿಶೇಷಚೇತನರಿಗೆ ಸ್ನೇಹಿ ವಾತಾವರಣ ಮತ್ತು ಸಮಾನತೆಯ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿತು. ಕಾರ್ಯಕ್ರಮದ ಮುಖ್ಯ ಉದ್ದೇಶವು ಸಾರ್ವಜನಿಕ ಸ್ಥಳಗಳು ಮತ್ತು ಸರಕಾರಿ ಕಚೇರಿಗಳಲ್ಲಿ ವಿಶೇಷಚೇತನರಿಗೆ ಸುಲಭವಾಗಿ ಒದಗಿಸಬೇಕಾದ ಮೂಲ ಸೌಕರ್ಯಗಳ ಕುರಿತು ಜನರಲ್ಲಿ ಅರಿವು ಮೂಡಿಸುವುದಾಗಿತ್ತು. ವಿಶೇಷಚೇತನರಿಗೆ ಭೇದಭಾವ ರಹಿತ ವಾತಾವರಣವನ್ನು ಸೃಷ್ಟಿಸಿ, ಅವರಿಗೆ ಗೌರವ, ಘನತೆ ಮತ್ತು ಸಮಾನ ಅವಕಾಶಗಳನ್ನು ಒದಗಿಸಬೇಕು ಎಂಬ ಸಂದೇಶವನ್ನು ಈ ಜಾಥಾ ಪ್ರತಿಪಾದಿಸಿತು.

ವಿಶೇಷಚೇತನರ ಕಾಯಿದೆಯನ್ನು ಗೌರವಿಸುವುದು, ಅವರಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸುವುದು ಮತ್ತು ಸಮಾಜದಲ್ಲಿ ಅವರಿಗೆ ಗೌರವದಿಂದ ಬದುಕಲು ಅವಕಾಶ ನೀಡುವುದರ ಮಹತ್ವವನ್ನು ಒತ್ತಿ ಹೇಳಲಾಯಿತು. ವಿಶೇಷಚೇತನರಿಗೆ ಸೂಕ್ತ ಸೌಲಭ್ಯಗಳನ್ನು ಒದಗಿಸಿ, ಘನತೆಯ ಬದುಕಿಗೆ ದಾರಿ ಮಾಡಿಕೊಡಬೇಕು ಎಂಬ ಘೋಷಣೆಗಳು ಕಾರ್ಯಕ್ರಮದ ಸಂದರ್ಭದಲ್ಲಿ ಕೇಳಿಬಂದವು. ಜಾಥಾವನ್ನು ಆರಂಭದಲ್ಲಿ ತಾಪಂ ಸಿಬ್ಬಂದಿ ಮಲ್ಲಿನಾಥ ಮತ್ತು ಪಿಡಿಒ ಮಂಜೂರ ಪಟೇಲ್ ಅವರು ಚಾಲನೆ ನೀಡಿದರು. ತಾಲೂಕು ವಿಆರ್‌ಡಬ್ಲ್ಯೂ, ಎಂಆರ್‌ಡಬ್ಲ್ಯೂ, ಯುಆರ್‌ಡಬ್ಲ್ಯೂ ಸದಸ್ಯರುಗಳಾದ ಮುಖಂಡ ಮಲ್ಲಿಕಾರ್ಜುನ ಪಿ ಕಟ್ಟಿಮನಿ, ಶರಣು ಕವಲಗಾ, ಹಣಮಂತರಾಯ ಸನಗುಂದಾ, ದಯಾನಂದ ಕೆಂಪೆ, ಶಿವಲಿಲಾ ಕಾಂಬಳೆ, ಮಲ್ಲಿಕಾರ್ಜುನ ಪಾಟೀಲ, ಗುಂಡೇರಾವ್ ಪಾಂಡ್ರೆ, ನಿಲಮ್ಮ ಕೇರಿ ಅಂಬಲಗಾ, ಸವಿತಾ ಸಾವಳೇಶ್ವರ, ಹಣಮಂತರಾಯ ಕೊಡಲಹಂಗರಗಾ, ಸೈಬಣ್ಣಾ ಮೇತ್ರಿ, ರುಕ್ಮುದ್ದೀನ್ ಪಾಲಾಪೂರೆ, ಶರಣಮ್ಮ ಮಠ, ರೂಪಶ್ರೀ ಗರಡಕರ್ ಸೇರಿ ಮತ್ತಿತರರು ಪಾಲ್ಗೊಂಡಿದ್ದರು.



ತಾಲೂಕು ಪಂಚಾಯಿತಿಯ ಆಶ್ರಯದಲ್ಲಿ ಶುಕ್ರವಾರ ಭಾರತ ಸುಗಮ್ಯ ಯಾತ್ರೆ 2025ನೇ ಸಾಲಿನ ವಿಶ್ವ ಸುಲಭ ಲಭ್ಯತೆ ಅರಿವು ಜಾಥಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಯಿತು.

ಹೂಡಿಕೆ ಹಣದ ಲಾಭ ಕೊಡದ ವ್ಯಕಿಗೆ ಹಲ್ಲೆ : ದರೋಡೆ

ಕಲಬುರಗಿ: ಟ್ರೇಡಿಂಗ್ ಲಾಸ್ ಮಾಡಿದ್ದಾರೆ ಎಂದು ವ್ಯಕ್ತಿಯೊಬ್ಬನನ್ನು ಕಾರ್‌ನಲ್ಲಿ ಕರೆದೊಯ್ದು ಮಾರಣಾಂತಿಕ ಹಲ್ಲೆ, ನಡೆಸಿ ದರೋಡೆ ಮಾಡಿದ ಘಟನೆ ಅಶೋಕ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ನಗರದ ಸಂತೋಷ ಕಾಲೊನಿ ನಿವಾಸಿ, ಟ್ರೇಡಿಂಗ್ ಶಿಕ್ಷಕ ಆಕಾಶ ಪರಮೇಶ್ವರ ಉಡಗಿ ಹಲ್ಲೆಗೊಳಗಾದವರು. ಇವರ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ಸುರೇಶ ಮಳ್ಳಿ ಸೇರಿ ಹಲವು ಜನರು ವಿರುದ್ಧ ದೂರು ದಾಖಲಾಗಿದೆ. ವೃತ್ತಿಯಲ್ಲಿ ಟ್ರೇಡಿಂಗ್ ಶಿಕ್ಷಕ ಆಗಿರುವ ಆಕಾಶ ಪರಮೇಶ್ವರಗೆ ಕೆಲವು ದಿನಗಳ ಹಿಂದೆ ಅವರ ಡಿಮ್ಯಾಟ್ ಅಕೌಂಟ್ ಮೂಲಕ ಹಣ ಹೂಡಿಕೆಗೆ ಸುರೇಶ ಮಳ್ಳಿ ನೀಡಿದ್ದರು. ಆರಂಭದಲ್ಲಿ ಬಂದ ಲಾಭದಲ್ಲಿ ಪಾಲು ನೀಡಿದ್ದರು. ಕೆಲವು ದಿನಗಳ ನಂತರ ನಷ್ಟವಾದಾಗ ಹಣ ವಾಪಸ್ ಪಡೆದುಕೊಂಡಿದ್ದರು. ನಂತರ ಸುರೇಶ ಮಳ್ಳಿ ನೀನು ಹಣ ಹೂಡಿಕೆ ಮಾಡಿ ನನಗೆ ಲಾಭದ ಹಣ ನೀಡು ಎಂದು ಆಕಾಶ ಪರಮೇಶ್ವರಗೆ ಒತ್ತಾಯ ಮಾಡಿ ದ್ದರು. ಈ ವೇಳೆ ನನ್ನಲ್ಲಿ ಹಣ ಇಲ್ಲ ಎಂದು ಹೇಳಿದ್ದಲ್ಲ ನಾನು ಹಣ ಹೂಡಿಕೆ ಮಾಡುವುದಿಲ್ಲ ಎಂದು ಹೇಳಿದ್ದರು. ಅಂದಿನಿಂದ ಸುರೇಶ, ಪರಮೇಶ್ವರ ವಿರುದ್ಧ ದ್ವೇಷ ಸಾಧಿಸುತ್ತಿದ್ದರು. ಇದೇ ದ್ವೇಷದಿಂದ ಮೇ 20ರಂದು ಸ್ನೇಹಿತರ ಜೊತೆಗೂಡಿ ಕಾರ್‌ನಲ್ಲಿ ಅಪರಹಣ ಮಾಡಿಕೊಂಡು ಹೋಗಿದ್ದಾರೆ. ಅಲ್ಲದೆ ಅಜಲಪುರ ರಸ್ತೆಯ ಧಾಬಾ ಒಂದರ ಸಮೀಪ ಹಲ್ಲೆ ನಡೆಸಿ, 72 ಸಾವಿರ ರು. ಕಿತ್ತುಕೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಗಾಯ ಗೊಂಡಿರುವ ಆಕಾಶ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಾಳೆ ಸಾಧಕರಿಗೆ ಪ್ರಶಸ್ತಿ ಪ್ರದಾನ

ಜೇವರ್ಗಿ: ಪಟ್ಟಣದ ಮಹಾಲಕ್ಷ್ಮಿ ಮಹಿಳಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಹಾಗೂ ಶ್ರೀ ಸ್ವಾಮಿ ವಿವೇಕಾನಂದ ಮತ್ತು ಕಲಾ ವಾಣಿಜ್ಯ ಪದವಿಪೂರ್ವ ಕಾಲೇಜು ವತಿಯಿಂದ ಸಾಧಕರಿಗೆ ಪ್ರಶಸ್ತಿ ಪ್ರದಾನ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನ ಸಮಾರಂಭ ಮೇ. 26 ರಂದು ನಡೆಯಲಿದೆ ಎಂದು ಡಾ.ಧರ್ಮಣ್ಣ ಕೆ ಬಡಿಗೇರ ಹೇಳಿದರು.

ಶಿವಲಿಂಗಪ್ಪ ಗೌಡ ಪಾಟೀಲ್ ನರಿಬೋಳ ಎಜುಕೇಶನಲ್ ಚಾರಿಟೇಬಲ್ ಹಾಗೂ ಸೋಶಿಯಲ್ ವೆಲ್ಲರ್ ಟ್ರಸ್ಟ್ ನರಿಬೋಳ ಜೊತೆಗೂಡಿ ಗಂಗಾಧರೇಶ್ವರ ಗ್ರಾಮೀಣ ವಿದ್ಯಾವರ್ಧಕ ಸಂಘದ ವತಿಯಿಂದ ಸಾಧಕರಿಗೆ ಪ್ರಶಸ್ತಿ ಪ್ರದಾನ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ದಿವ್ಯ ಸಾನಿಧ್ಯ ಶ್ರೀ ತಪೋ ರತ್ನ ಶಿವಸಿದ್ಧ ಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಮುಕ್ತಿಮಠ ಬೆಳಗಾವಿ ಸನ್ನಿಧಿ ವಹಿಸಲಿದ್ದಾರೆ. ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಕರಣೇಶ್ವರ ಮಠ ಆಂದೋಲ, ಪೂಜ್ಯಶ್ರೀ ಗಂಗಾಧರೇಶ್ವರ ಮಹಾಸ್ವಾಮಿಗಳು ಸಿದ್ದಲಿಂಗೇಶ್ವರ ಬೆಟ್ಟ ಶಹಾಪುರ, ಅವಧೂತ ತ್ರಿಶೂಲಪ್ಪ ಶರಣರು, ಸತ್ಯಾನಂದ ಮುತ್ಯ ರೇವಣಸಿದ್ದೇಶ್ವರ ಬ್ರಹ್ಮಾಶ್ರಮ ಅಣಜಿಗಿ ಷಣ್ಮುಖ ವಹಿಸಲಿದ್ದಾರೆ ಉದ್ಘಾಟಕರಾಗಿ ಬಸವರಾಜ ಪಾಟೀಲ್ ನರಬೋಳ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು ಕಲಬುರ್ಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಶಿವರಾಜ್ ಪಾಟೀಲ್ ರದ್ದೆವಾಡಗಿ ಪ್ರೊ. ಲಕ್ಷ್ಮಿ ದೇವಿ ಹಾಲಕೊಡ, ರಾಜಶೇಖರ್ ಸೀರಿ, ದಂಡಾಧಿಕಾರಿ ಮಲ್ಲಣ್ಣ ಯಲಗೋಡ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಹಾಗೂ ರಾಜಕೀಯ ಮುಖಂಡ ವಿವಿಧ ಸಂಘಟನೆ ಭಾಗವಹಿಸಿದ್ದರು ಎಂದು ತಿಳಿಸಿದರು.

ಸೇವಾ ರತ್ನ ಪ್ರಶಸ್ತಿ ಪುರಸ್ಕೃತರು

ಪ್ರೊ.ಲಕ್ಷ್ಮೀದೇವಿ ವಾಯ್ ಹಾಲಕೋಡ, ಡಾ. ಶರಣು ಬಿ ಗದ್ದುಗೆ, ರಾಜಾ ಸಾಬ್ ನದಾಫ್, ಬಾಬುರಾವ್ ಯಡ್ರಾಮಿ, ಚಿದಾನಂದ ಎನ್. ವಿಶ್ವಕರ್ಮ, ಮಹಾರಾಜ್ ದಿಗ್ಗಿ, ವೀರೇಶ್ ಕಂದಗಲ್, ವಿಜಯಕುಮಾರ ಕಲ್ಲ, ಜಗನ್ನಾಥ್, ಎಸ್. ಇಮ್ಮಣ್ಣಿ ಡಾ. ಮಾಳಪ್ಪ ಪೂಜಾರಿ, ಮಡಿವಾಳಪ್ಪ ಗೌಡ ಮಾಲಿ ಪಾಟೀಲ್, ಭೀಮರಾಯ ಗುಂಡಾಪುರ.

ಎಸ್‌ಎಸ್‌ಎಲ್‌ಸಿ -2 ಪರೀಕ್ಷೆ ನಾಳೆಯಿಂದ

ಜಿಲ್ಲೆಯಲ್ಲಿ 73 ಸೆಂಟರ್। ಸೂಸತ್ರ ಪರೀಕ್ಷೆಗೆ ಎಡಿಸಿ ಸೂಚನೆ

ಕಲಬುರಗಿ: ಎಸ್.ಎಸ್.ಎಲ್.ಸಿ.-2 ಪರೀಕ್ಷೆಯು ಇದೇ ಮೇ 26 ರಿಂದ ಜೂನ್ 2ರ ವರೆಗೆ ಜಿಲ್ಲೆಯಾದ್ಯಂತ 73 ಪರೀಕ್ಷಾ ಕೇಂದ್ರದಲ್ಲಿ ನಡೆಯಲಿದ್ದು, ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದೆ ಪರೀಕ್ಷೆ ಸುಸೂತ್ರವಾಗಿ ಮತ್ತು ಪಾರದರ್ಶಕವಾಗಿ ನಡೆಸುವಂತೆ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅವರು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಸೂಚನೆ ನೀಡಿದರು.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಸಿದ ಅವರು, ಪರೀಕ್ಷೆ-2 ಕ್ಕೆ ಜಿಲ್ಲೆಯಿಂದ ಒಟ್ಟು 26,752 ವಿದ್ಯಾರ್ಥಿಗಳು ನೋಂದಣಿಯಾಗಿರುತ್ತಾರೆ.

60 ಸಾಮಾನ್ಯ, 9 ಸೂಕ್ಷ್ಮ ಹಾಗೂ 4 ಅತೀ ಸೂಕ್ಷ್ಮ ಪರೀಕ್ಷಾ ಕೇಂದ್ರಗಳನ್ನು ಗುರುತಿಸಿ ಅದರಂತೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಕಲು ತಡೆಯುವ ನಿಟ್ಟಿನಲ್ಲಿ ಪ್ರತಿ ಕೇಂದ್ರಕ್ಕೆ ಸ್ಥಳೀಯ ಜಾಗೃತ ದಳದ ಸದಸ್ಯರನ್ನು ನೇಮಿಸಲಾಗಿದೆ. ಸಿ.ಸಿ.ಟಿ.ವಿ ಕಣ್ಗಾವಲಿನಲ್ಲಿ ಪರೀಕ್ಷೆ ನಡೆಯಲಿದ್ದು, ಜಿಲ್ಲಾ ಪಂಚಾಯತ್ ಸಿ.ಇ.ಓ ನೇತೃತ್ವದಲ್ಲಿ 14 ವೆಬ್ ಕಾಸ್ಟಿಂಗ್ ತಂಡ ನಿಗಾ ಇಡಲಿದೆ.

ಇನ್ನು ಪರೀಕ್ಷಾ ಕೇಂದ್ರಕ್ಕೆ ಪ್ರಶ್ನೆ ಪತ್ರಿಕೆ ರವಾನಿಸಲು ತಾಲೂಕಿನ ತಹಶೀಲ್ದಾರ, ಖಜಾನೆ ಅಧಿಕಾರಿ, ಬಿ.ಇ.ಓ ಒಳಗೊಂಡ ತ್ರಿಸದಸ್ಯ ಸಮಿತಿ ರಚಿಸಲಾಗಿದೆ. 31-ಜನ ಅಧಿಕಾರಿಗಳನ್ನು ಮಾರ್ಗಾಧಿಕಾರಿಗಳಾಗಿ ನೇಮಕ ಮಾಡಲಾಗಿದೆ ಎಂದು ಎ.ಡಿ.ಸಿ. ರಾಯಪ್ಪ ಹುಣಸಗಿ ತಿಳಿಸಿದರು.

ಡಿ.ಡಿ.ಪಿ.ಐ ಸೂರ್ಯಕಾಂತ ಮದಾನೆ ಅವರು ಎಸ್.ಎಸ್.ಎಲ್.ಸಿ. ಪರೀಕ್ಷೆ-2 ಸಭೆಗೆ ತೆಗೆದುಕೊಂಡ ಸಿದ್ಧತೆ ಬಗ್ಗೆ ವಿವರಿಸಿದರು.

ಸಭೆಯಲ್ಲಿ ಹೆಚ್ಚುವರಿ ಎಸ್.ಪಿ. ಮಹೇಶ ಮೇಘಣ್ಣನವರ್, ಎ.ಸಿ.ಪಿ. ಪ್ರವೀಣ ನಾಯ್ಕ್, ಡಿ.ಎಚ್.ಓ. ಡಾ.ಶರಣಬಸಪ್ಪ ಕ್ಯಾತನಾಳ ಸೇರಿದಂತೆ ಪರೀಕ್ಷಾ ಕೇಮದ್ರದ ಮುಖ್ಯಸ್ಥರು, ಶಾಲಾ ಶಿಕ್ಷಣ ಇಲಾಖೆಯ ಇತರೆ ಅಧಿಕಾರಿಗಳಿದ್ದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಜಿಲ್ಲೆಯ ಎಲ್ಲಾ 73 ಪರೀಕ್ಷಾ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳು ಇರುವುದನ್ನು ಕೇಂದ್ರದ ಮುಖ್ಯಸ್ಥರು ಪರೀಕ್ಷಾ ಮುನ್ನವೇ ಖಾತ್ರಿಪಡಿಸಿಕೊಳ್ಳಬೇಕು. ಇತ್ತೀಚೆಗೆ ದಿನಂಪ್ರತಿ ಮಳೆ ಬರುತ್ತಿರುವುದರಿಂದ ಈ ಬಗ್ಗೆಯೂ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು. ಪೊಲೀಸ್ ಇಲಾಖೆಯಿಂದ ಫ್ರಿಸ್ಕಿಂಗ್ ಮಾಡಲು ಪೊಲೀಸರನ್ನು ನಿಯೋಜಿಸಬೇಕು.

– ರಾಯಪ್ಪ ಹುಣಸಗಿ, ಎಡಿಸಿ

ಸಂಗೀತ ಪರೀಕ್ಷಾ ಕೇಂದ್ರ ರದ್ದುಪಡಿಸಲು ಆಗ್ರಹ

ಕಲಬುರಗಿ: ಈ ಹಿಂದೆ ನಡೆಸುತ್ತಿದ್ದ ಸಂಗೀತ ಪ್ರಾಯೋಗಿ ಪರೀಕ್ಷೆಗಳನ್ನು ಕಲ್ಯಾಣ ಕರ್ನಾಟಕ ಭಾಗದಲ್ಲಿ ಪರೀಕ್ಷಾ ಕೇಂದ್ರಗಳನ್ನು ರದ್ದುಪಡಿಸಿ ಕೇವಲ ಹುಬ್ಬಳ್ಳಿಯಲ್ಲಿ ನಡೆಸಲು ಆದೇಶ ಹೊರಡಿಸಿದ್ದನ್ನು ತಕ್ಷಣವೇ ರದ್ದುಪಡಿಸಬೇಕೆಂದು ನವ ಕರ್ನಾಟಕ ಸಂಗೀತ ಪದವಿಧರರ ಸಂಘದ ಅಧ್ಯಕ್ಷ ಬಂಡಯ್ಯ ಎಸ್. ಹಿರೇಮಠ ಆಗ್ರಹಿಸಿದರು. ನಗರದ ಪತ್ರಿಕಾ ಭವನದಲಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ ಮೈಸೂರು ನಡೆಸುವ ಪ್ರಾಯೋಗಿಕ ಪರೀಕ್ಷೆಗಳು ಕಲ್ಯಾಣ ಕರ್ನಾಟಕ ಭಾಗದ ಕೇಂದ್ರವಾಗಿರುವ ಕಲಬುರಗಿಯಲ್ಲಿ ನಡೆಸಬೇಕು ಇದರಿಂದ ಈ ಭಾಗದ ಕಲಾವಿದರಿಗೆ ಮತ್ತು ವಿದ್ವತ್ ಪರೀಕ್ಷೆಗಳ ಹಾಜರಾಗಲು ಅನುಕೂಲವಾಗುತ್ತದೆ, ದೂರದ ಹುಬ್ಬಳ್ಳಿಗೆ ಹೋಗಿ ಪರೀಕ್ಷೆಗೆ ಹಾಜರಾಗಲು ಸಾಕಷ್ಟು ಕಷ್ಟವಾಗುತ್ತದೆ ಎಂದರು. ಸರಕಾರ ಕೂಡಲೇ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮತ್ತು ಎಲ್ಲಾ ವಸತಿ ಶಾಲೆಗಳಲ್ಲಿ ಖಾಲಿಯಿರುವ ಸಂಗೀತ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕೆಂದು ಒತ್ತಾ ಯಿಸಿದರು. ಸಂಗೀತ ಕಲಾವಿ ದರಾದ ಬಸಯ್ಯ ಗುತ್ತೇದಾರ, ಸಿದ್ದಾಥ ಚಿಮ್ಮಾ ಇದಲಾಯಿ, ನಾಗ ಲಿಂಗಯ್ಯ ಸ್ಥಾವರಮಠ, ಬಾಬುರಾವ ಕೋಬಾಳ ಇದ್ದರು.

ಭಯವಿಲ್ಲದೆ ಬಿಸಿಜಿ ಲಸಿಕೆ ಹಾಕಿಸಿಕೊಳ್ಳಿ: ಡಿಸಿ ಫೌಜಿಯಾ

ಸಮನ್ವಯ ಸಮಿತಿ ಸಭೆ। ಕ್ಷಯರೋಗ ತಡೆಗೆ ಮುಂಜಾಗ್ರತಾ ಕ್ರಮ

ಕಲಬುರಗಿ: ಕ್ಷಯರೋಗ ತಡೆಯುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವಾಗಿ ಅಪಾಯದಂಚಿನಲ್ಲಿರುವ 18 ವರ್ಷ ಮತ್ತು ಮೇಲ್ಪಟ್ಟ ವಯಸ್ಕರಿಗೆ ವಯಸ್ಕರ ಬಿ.ಸಿ.ಜಿ ಲಸಿಕೆ ನೀಡಲಾಗುತ್ತಿದೆ. ಇದು ಸುರಕ್ಷಿತವಾಗಿದ್ದು, ಯಾವುದೇ ಅಡ್ಡಿ ಪರಿಣಾಮ ಇರುವುದಿಲ್ಲ. ಅನಗತ್ಯ ಭಯಪಡದೆ ಲಸಿಕೆ ಹಾಕಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಜಿಲ್ಲೆಯ ವಯಸ್ಕರ ಜನತೆಯಲ್ಲಿ ಮನವಿ ಮಾಡಿದ್ದಾರೆ.

ಇವರಿಗೆ ಲಸಿಕೆ ಇಲ್ಲ

18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ, ಒಪ್ಪಿಗೆ ನೀಡದವರಿಗೆ, ಎಚ್‌ಐವಿ ರೋಗದಿಂದ ಬಳಲುತ್ತಿರುವವರಿಗೆ, ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿರುವವರಿಗೆ, ರೋಗ ನಿರೋಧಕ ಶಕ್ತಿ ಕಡಿಮೆಯಿರುವವರಿಗೆ ಹಾಗೂ ಅಂಗಾಂಗಗಳನ್ನು ಕಸಿ ಮಾಡಿಕೊಂಡಿರುವವರಿಗೆ, ಗರ್ಭಿಣಿ ಹಾಗೂ ಹಾಲುಣಿಸುವ ಮಹಿಳೆಯರಿಗೆ, ಕಳೆದ 3 ತಿಂಗಳುಗಳಲ್ಲಿ ರಕ್ತ ವರ್ಗಾವಣೆ ಇತಿಹಾಸ ಹೊಂದಿರುವವರಿಗೆ, ಹೆಚ್.ಐ.ವಿ ಸೋಂಕಿಗೆ ಒಳಗಾಗುವ ಹೆಚ್ಚಿನ ಅಪಾಯಕ್ಕೆ ಕಾರಣವಾಗುವ ಇತಿಹಾಸ ಹೊಂದಿರುವವರಿಗೆ ಹಾಗೂ ಯಾವುದೇ ಕಾರಣದಿಂದ ಪ್ರಸುತ್ತ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಬಿ.ಸಿ.ಜಿ ಲಸಿಕೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಜಿಲ್ಲಾ ಸಮನ್ವಯ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮಾತನಾಡಿದರು.

ಲಸಿಕಾಕರಣ ಕಳೆದ ಮೇ 5 ರಿಂದಲೆ ಆರಂಭವಾಗಿದ್ದು, ಜೂನ್ ಅಂತ್ಯದ ವರೆಗೆ ಇರಲಿದೆ. ಜಿಲ್ಲೆಯಾದ್ಯಂತ ಮನೆ ಮನೆ ಸಮೀಕ್ಷೆ ಮಾಡಿ ಅಪಾಯದಂಚಿನಲ್ಲಿರುವ 4,11,460 ಜನರನ್ನು ಈಗಾಗಲೇ ಗುರುತಿಸಲಾಗಿದೆ. ಇದರಲ್ಲಿ 55,056 ಜನ ಲಸಿಕೆ ಪಡೆಯಲು ಮೌಖಿಕ ಒಪ್ಪಿಗೆ ಸೂಚಿಸಿದ್ದು, ಈ ಪೈಕಿ ಇದುವರೆಗೆ 19,970 ವಯಸ್ಕರಿಗೆ ಬಿಸಿಜಿ ಲಸಿಕೆ ನೀಡಲಾಗಿದೆ. ಇನ್ನು ಒಪ್ಪಿಗೆ ಸೂಚಿಸಿದವರು ಹಿಂದೇಟು ಹಾಕದೆ ಕೂಡಲೆ ಒಪ್ಪಿಗೆ ಸೂಚಿಸಿ ಲಸಿಕೆ ಹಾಕಿಸಿಕೊಳ್ಳುಬೇಕೆಂದು ಅವರು ತಿಳಿಸಿದ್ದಾರೆ.

ದೇಶದ 23 ರಾಜ್ಯಗಳ 274 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಕೇಂದ್ರ, ಸರಕಾರವು ಈ ಒಂದು ಲಸಿಕಾಕರಣ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದರಲ್ಲಿ ಕಲಬುರಗಿ ಸೇರಿ ರಾಜ್ಯದ 16 ಜಿಲ್ಲೆಗಳಲ್ಲಿ ನಡೆಯುತ್ತಿದೆ. ಜಿಲ್ಲೆಯಲ್ಲಿ ಕಾರ್ಯಕ್ರಮ ಯಶಸ್ವಿಗೆ ವಯಸ್ಕರು ಸಹಕರಿಸಬೇಕೆಂದು ಅವರು ಕೋರಿದ್ದಾರೆ.

ಯಾರಿಗೆಲ್ಲ ಲಸಿಕೆ

ಕಳೆದ 5 ವರ್ಷಗಳಲ್ಲಿ ಕನಿಷ್ಠ ಒಂದು ಬಾರಿಯಾದರೂ ಕ್ಷಯರೋಗವನ್ನು ಹೊಂದಿ ಗುಣಮುಖರಾದವರು, ಕ್ಷಯರೋಗಿಗಳ ನಿಕಟ ಸಂಪರ್ಕದಲ್ಲಿರುವವರು, ಪ್ರಸ್ತುತ ಕ್ಷಯರೋಗಿಗಳ ಸಂಪರ್ಕದಲ್ಲಿರುವವರು ಮತ್ತು ಜನೆವರಿ 2021 ರಿಂದ ನೀಕ್ಷಯ್ ತಂತ್ರಾಂಶದಲ್ಲಿ ದಾಖಲಾಗಿರುವ ರೋಗಿಗಳ ಸಂಪರ್ಕದಲ್ಲಿರುವವರು, 60 ವರ್ಷ ಅಥವಾ ಮೇಲ್ಪಟ್ಟ ವಯಸ್ಸಿನ ವ್ಯಕ್ತಿಗಳು, ಮಧುಮೇಹ (ಸಕ್ಕರೆ ಕಾಯಿಲೆ) ದಿಂದ ಬಳಲುತ್ತಿರುವವರು, ಪ್ರಸ್ತುತ ಹಾಗೂ ಹಿಂದೆ ಧೂಮಪಾನ ಸೇವನೆ ಮಾಡಿರುವವರು ಹಾಗೂ ಅಪೌಷ್ಟಿಕತೆಯಿಂದ ಬಳಲುತ್ತಿರುವವರಿಗೆ ವಯಸ್ಕರ ಬಿ.ಸಿ.ಜಿ ಲಸಿಕೆ ನೀಡಲಾಗುತ್ತದೆ. ಇನ್ನು ಕ್ಷಯರೋಗದಿಂದ ಬಳಲುತ್ತಿದ್ದು, ಚಿಕಿತ್ಸೆ ಮುಗಿದ 4 ವಾರಗಳ ನಂತರ ವಯಸ್ಕರ ಬಿಸಿಜಿ ಲಸಿಕೆಯನ್ನು ಪಡೆಯಬಹುದಾಗಿದೆ. ಅನಾರೋಗ್ಯದಿಂದ ಬಳಲಿ ಗುಣಮುಖರಾದವರಿಗೆ ವೈದ್ಯಕೀಯ ಸಲಹೆ ಮೇರೆಗೆ ಹಾಗೂ ರಕ್ತ ವರ್ಗಾವಣೆ ಮಾಡಿಕೊಂಡ 3 ತಿಂಗಳ ಅವಧಿ ಪೂರೈಸಿದವರಿಗೆ ವಯಸ್ಕರ ಬಿಸಿಜಿ ಲಸಿಕೆ ನೀಡಲು ವಿಶೇಷವಾಗಿ ಪರಿಗಣಿಸಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ಒಳ ಮೀಸಲಾತಿ ಅವಧಿ ವಿಸ್ತರಣೆ

ಹುಣಸಗಿ: ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರನ್ನು ಗುರುತಿಸಲು ಪರಿಶಿಷ್ಟ ಜಾತಿಗಳಲ್ಲಿ (ಎಸ್.ಸಿ) ಆಂತರಿಕ ಬೇಡಿಕೆಗಳನ್ನು ಪರಿಹರಿಸಲು ಸರಕಾರ ಪರಿಶಿಷ್ಟ ಜಾತಿ ಒಳ ಮೀಸಲಾತಿ ಸಮೀಕ್ಷೆ ನಡೆಸುತ್ತಿದ್ದು. ಜಿಲ್ಲೆಯ ಜನತೆ https://schedilecastesurvey.karnatak.gov.in/selfdiclaration ಲಿಂಕ್ ಮೂಲಕ ಸ್ವಯಂ ಘೋಷಣೆ ಸಲ್ಲಿಸಬಹುದಾಗಿದೆ ಎಂದು ಸುರಪುರ ತಾಲೂಕ ಸಮಾಜ ಕಲ್ಯಾಣಾಧಿಕಾರಿ ಮಹ್ಮದ್ ಸಲೀಂ ಅವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ. ಈ ಮೂಲಕ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಮೇ25 ರಿಂದ 29ರ ವರೆಗೆ ಆನ್‌ಲೈನ್ ಮೂಲಕ ಮಾಹಿತಿ ಸಲ್ಲಿಸಲು ದಿನಾಂಕವನ್ನು ವಿಸ್ತರಿಸಿ ಅವಕಾಶ ನೀಡಿದ್ದು. ಆನ್ ಲೈನ್ ನೋಂದಣಿಗೆ ಆಧಾರ ಕಾರ್ಡ್.ಜಾತಿ ಪ್ರಮಾಣ ಪತ್ರದ ಆರ್.ಡಿ ಸಂಖ್ಯೆ, ಅವಶ್ಯಕವಾಗಿರುತ್ತದೆ. ಜಿಲ್ಲೆಯ ಪರಿಶಿಷ್ಟ ಜಾತಿಯ ಸಮುದಾಯ ನಿಗಧಿತ ಅವದಿಯಲ್ಲಿ ಮಾಹಿತಿ ಸಲ್ಲಿಸುವ ಮೂಲಕ ಸಾಮಾಜಿಕ ಜವಾಬ್ದಾರಿಯಲ್ಲಿ ಬಾಗವಹಿಸಬೇಕೆಂದು ಅವರು ಕೋರಿದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದವರು ತಮ್ಮ ಮೂಲ ಜಾತಿ,ಶಿಕ್ಷಣ,ವರಮಾನ.ಉದ್ಯೋಗ ಮತ್ತು ಇನ್ನಿತರ ನಿಖರ ಮಾಹಿತಿ ನೀಡುವ ಮೂಲಕ ಸಮೀಕ್ಷಾ ಕಾರ್ಯಕ್ಕೆ ಸಹಕರಿಸಬೇಕೆಂದು ತಿಳಿಸಿದ್ದಾರೆ.

ವಸತಿ ನಿಲಯ ಖಾಲಿ ಸ್ಥಾನ ಭರ್ತಿಗೆ ಅರ್ಜಿ

ಭಾಲ್ಕಿ: ತಾಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ವಿವಿಧೆಡೆ ನಡೆಯುವ ಮೆಟ್ರಿಕ್ ಪೂರ್ವ ಮತ್ತು ನಂತರದ ಬಾಲಕ, ಬಾಲಕಿಯರ ವಸತಿ ನಿಲಯಗಳ ಖಾಲಿ ಸ್ಥಾನಗಳ ಭರ್ತಿಗೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಸತೀಶಕುಮಾರ ಸಂಗನ್ ತಿಳಿಸಿದ್ದಾರೆ. 2025-26 ನೇ ಸಾಲಿನಲ್ಲಿ ಖಾಲಿ ಇರುವ ಸ್ಥಾನಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಕರೆಯಲಾಗಿದೆ. 5 ರಿಂದ 10ನೆಯ ತರಗತಿ, ಪಿಯುಸಿ, ಪದವಿ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಆಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿದೆ. ಇಲಾಖೆಯ ವೆಬ್ ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಹಿಂದಿನ ತರಗತಿಯಲ್ಲಿ ತೇರ್ಗಡೆಯಾದ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ , ವಾಸಸ್ಥಳ ಪ್ರಮಾಣ ಪತ್ರ, ಆಧಾರ ಕಾರ್ಡ, ಬ್ಯಾಂಕ್ ಖಾತೆ ಸಂಖ್ಯೆ, ವಿದ್ಯಾರ್ಥಿ ಸ್ಯಾಟ್ಸ್ ಹಾಗೂ ಎಸ್.ಎಸ್.ಪಿ ವಿದ್ಯಾರ್ಥಿ ಐಡಿ ಸಂಖ್ಯೆಯೊಂದಿಗೆ ಆನ್‌ಲೈನ್ ಅರ್ಜಿ ಭರ್ತಿ ಮಾಡಿ ಪ್ರಿಂಟ್ ಕಾಪಿ ಮತ್ತು ವಿದ್ಯಾರ್ಥಿಯ ಇತ್ತಿಚಿನ 4 ಭಾವಚಿತ್ರದೊಂದಿಗೆ ಸಹಿತ ವಸತಿ ನಿಲಯ ಪಾಲಕರಿಗೆ ಸಲ್ಲಿಸಲು ಪ್ರಕಟಣೆ ಮೂಲಕ ಕೋರಲಾಗಿದೆ.

ಪಿಯುಸಿ ಪರೀಕ್ಷೆ-3ಗೆ ನೋಂದಣಿಗೆ ಮನವಿ

ಬೀದರ್: 2025ರ ದ್ವಿತೀಯ ಪಿಯುಸಿ ಪರೀಕ್ಷೆ-2ಕ್ಕೆ ಅವಕಾಶ ಕಲ್ಪಿಸಿದ್ದರಿಂದ ಪರೀಕ್ಷೆ ಬರೆದ 5727 ವಿದ್ಯಾರ್ಥಿಗಳ ಪೈಕಿ 2066 ವಿದ್ಯಾರ್ಥಿಗಳು ಉತ್ತೀರ್ಣರಾಗಿ 2025ರ ದ್ವಿತೀಯ ಪಿಯುಸಿ ಒಟ್ಟಾರೆ ಫಲಿತಾಂಶ ಉತ್ತಮಗೊಂಡಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ನೀಡುವ ಸಂಬಂಧ ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ ತಂದು 2025ರ ದ್ವಿತೀಯ ಪಿಯುಸಿ-3ನೇ ಪರೀಕ್ಷೆಯನ್ನು ಜೂನ್ 9 ರಿಂದ ಜೂನ್ 20 ರ ವರೆಗೆ ನಡೆಸಲಾಗುತ್ತಿದೆ. ಕಾರಣ ವಿದ್ಯಾರ್ಥಿಗಳು ಮೇ.26 ರೊಳಗಾಗಿ ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡು ಪರೀಕ್ಷೆಗೆ ಹಾಜರಾಗಬೇಕು ಎಂದು ಬೀದರ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಬೀದರ್: 110/33/11ಕೆವಿ ಜನವಾಡ ಉಪಕೇಂದ್ರ ಮೇಲೆ ಬರುವ 33ಕೆವಿ ಫೀಡರಗಳಾದ ವಾಟರ್ ಸಪ್ಲೈ, ಚಿಮಕೋಡ, ಮಾರವಲ್ ಸೋಲಾರ ಹಾಗೂ 11 ಕೆವಿ ಫೀಡರಗಳಾದ ಯರನಳ್ಳಿ ಐಪಿ, ಜನವಾಡ. ಅಲಿಯಂಬರ ಎನ್‌ಜೆವೈ, ಕೌಠಾ ಐಪಿ, ಚಾಂಬೋಳ ಐಪಿ ಸಿದ್ದಾಪುರ ಐಪಿ, ಕೆಎಮ್‌ಎಫ್ ಎನ್‌ಜೆವೈ ಮರಖಲ ಐಪಿ ಮತ್ತು ಮಮದಾಪುರ ಐಪಿ ಫೀಡರಗಳಲ್ಲಿ ಮೇ.25ರಂದು ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಆಗಲಿದೆ. ಗ್ರಾಹಕರು ಸಹಕರಿಸಬೇಕು ಎಂದು ಬೀದರ ವಿಭಾಗದ ಜೆಸ್ಕಾಂ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಬಿ.ವೈ ವಿಜಯೇಂದ್ರ} ಬಿಜೆಪಿ ರಾಜ್ಯಾಧ್ಯಕ್ಷ

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಬಂದಾಗಿಂದ ಕಲಬುರಗಿಯಲ್ಲಿ ಪಾಳೇಗಾರಿಕೆ ನಡೆಯುತ್ತಿದೆ. ಅನೇಕ ಕೊಲೆಗಳು, ಆತ್ಮಹತ್ಯೆ ನಡೆದಿವೆ. ಪೊಲೀಸರನ್ನು ಬಳಸಿ, ಕಾರ್ಯಕರ್ತರನ್ನು ಹತ್ತಿಕ್ಕುವ ಕೆಲಸ ನಡೆದಿದೆ. ಪಾಳೇಗಾರಿಕೆ, ಗುಂಡಾಗಿರಿ ರಾಜ್ಯದಲ್ಲಿ ನಡೆಯಲ್ಲ. ನಿಮ್ಮ ದಬ್ಬಾಳಿಕೆ, ದರ್ಪ, ಅಹಂಕಾರ ಹಾಗೂ ಅಧಿಕಾರ ಯಾವುದು ಶಾಶ್ವತವಲ್ಲ.

ವೈಭವದ ವಚನ ವಿಜಯೋತ್ಸವ ಪಥ ಸಂಚಲನ

ಅಕ್ಕ ಅನ್ನಪೂರ್ಣತಾಯಿ ಅವರ ಸ್ಮರಣೋತ್ಸವ ಪ್ರಯುಕ್ತ ಬೀದರನಲ್ಲಿ ವಚನ ವಿಜಯೋತ್ಸವ ಪಥ ಸಂಚಲನ ಜರುಗಿತು.

ಬೀದರ್: ಅಕ್ಕ ಅನ್ನಪೂರ್ಣತಾಯಿ ಪ್ರಥಮ ಸ್ಮರಣೋತ್ಸವ ನಿಮಿತ್ತ ಲಿಂಗಾಯತ ಮಹಾ ಮಠದ ವತಿಯಿಂದ ನಗರದಲ್ಲಿ ಶನಿವಾರ ವಚನ ವಿಜಯೋತ್ಸವ ಪಥ ಸಂಚಲನ ವೈಭವದಿಂದ ಜರುಗಿತು.

ಪಾಪನಾಶ ಗೇಟ್‌ದಿಂದ ಆರಂಭಗೊಂಡ ಪಥ ಸಂಚಲನವು ಪಾಪನಾಶ ದೇಗುಲದ ಮೂಲಕ ಹಾಯ್ದು ಬಸವಗಿರಿಗೆ ತಲುಪಿ ಸಮಾರೋಪಗೊಂಡಿತು.

ಲಿಂಗಾಯತ ಮಹಾಮಠದ ಪ್ರಭುದೇವ ಸ್ವಾಮೀಜಿ ಅವರ ನೇತೃತ್ವದಲ್ಲಿ ಸಹಸ್ರಾರು ಶರಣ- ಶರಣೆಯರು ತಲೆ ಮೇಲೆ ವಚನ ಸಾಹಿತ್ಯ ಹೊತ್ತು ಶ್ರದ್ಧೆ, ಭಕ್ತಿಯಿಂದ ಸಾಗಿದರು.

ಅಲಂಕೃತ 10 ಆಟೊಗಳ ಮೇಲೆ ಬಸವಣ್ಣ, ಅಕ್ಕ ಮಹಾದೇವಿ, ಅಕ್ಕ ಅನ್ನಪೂರ್ಣತಾಯಿ, ಮಡಿವಾಳ ಮಾಚಿದೇವ, ಅಲ್ಲಮಪ್ರಭು ದೇವರು, ಮೋಳಿಗೆ ಮಾರಯ್ಯ, ಹರಳಯ್ಯ, ಕಲ್ಯಾಣಮ್ಮ, ನೂಲಿಯ ಚಂದಯ್ಯ ಮೊದಲಾದವರ ಭಾವಚಿತ್ರಗಳನ್ನು ಇಡಲಾಗಿತ್ತು.

ಪ್ರಭುದೇವ ಸ್ವಾಮೀಜಿ ಸ್ವತಃ ತಲೆ ಮೇಲೆ ಲಿಂಗಾಯತ ಧರ್ಮಗ್ರಂಥ ಗುರುವಚನ ಹೊತ್ತು ಮುಂಚೂಣಿಯಲ್ಲಿ ಸಾಗಿದ್ದು ನೆರೆದವರ ಉತ್ಸಾಹ ಇಮ್ಮಡಿಗೊಳಿಸಿತು. ಸ್ಥಲ ಧ್ವಜಗಳು, ಛತ್ರಿ, ಚಾಮರಗಳು ಮೆರವಣಿಗೆ ಮೆರುಗು ಹೆಚ್ಚಿಸಿದವು. ವಿಶ್ವಗುರು ಬಸವಣ್ಣನವರಿಗೆ ಜಯವಾಗಲಿ, ಅಕ್ಕ ಅನ್ನಪೂರ್ಣತಾಯಿ ಅವರಿಗೆ ಜಯವಾಗಲಿ ಎಂಬ ಘೋಷಣೆಗಳು ಮೊಳಗಿದವು.

ಪಥ ಸಂಚಲನಕ್ಕೆ ಧಾರವಾಡದ ಡಾ. ಬಸವಾನಂದ ಸ್ವಾಮೀಜಿ ವಚನ ಓದಿಸುವ ಮೂಲಕ ಚಾಲನೆ ನೀಡಿದರು. ಪಥ ಸಂಚಲನವು ಹನ್ನೆರಡನೆಯ ಶತಮಾನದಲ್ಲಿ ವಚನ ಸಾಹಿತ್ಯ ರಕ್ಷಣೆಗೆ ಶರಣರು ಕಾಡಿನಲ್ಲಿ ಸಂಚರಿಸಿದಂತಹ ಅನುಭವ ನೀಡಿತು.

ಇಂದಿರಾ ಕ್ಯಾಂಟಿನ್ ವಿದ್ಯಾರ್ಥಿಗಳಿಗೆ, ಬೀದಿ ಬದಿ ವ್ಯಾಪಾರಿಗಳಿಗೆ ವರ: ಸಚಿವ ಶರಣಬಸಪ್ಪಗೌಡ ದರ್ಶನಾಪುರ

ಇಂದಿರಾ ಕ್ಯಾಂಟಿನ್ ಕಾಮಗಾರಿಗಳ ಪರಿಶೀಲನೆ

ಶಹಾಪುರ: ಕಾಂಗ್ರೆಸ್ ಸರಕಾರದ ಮಹಾತ್ವಕಾಂಕ್ಷಿ ಯೋಜನೆ, ಜನರ ಬಹುದಿನದ ಬೇಡಿಕೆಯಾದ ಇಂದಿರಾ ಕ್ಯಾಂಟಿನ್ ನಿರ್ಮಾಣದಿಂದ ಬಡವರಿಗೆ , ವಿದ್ಯಾರ್ಥಿಗಳಿಗೆ, ಬೀದಿ ಬದಿ ವ್ಯಾಪಾರಿಗಳು ಸೇರಿದಂತೆ ಅನೇಕರಿಗೆ ವರದಾನವಾಗಲಿದ್ದು, ಆದಷ್ಟು ಬೇಗ ಕಾಮಗಾರಿ ಉದ್ಘಾಟಿಸಲಾಗುವುದು ಎಂದು ಸಣ್ಣ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ಶೈಕ್ಷಣಿಕ ಪ್ರಗತಿಗೆ ಕ್ರಮ

ಜಿಲ್ಲೆಯಲ್ಲಿ ಶೈಕ್ಷಣಿಕವಾಗಿ ಶೇಖಡವಾರು ಹೆಚ್ಚಿಸಲು 5 ಜರರನ್ನೊಳಗೊಂಡ ತಜ್ಞರ ಸಮಿತಿ ರಚಿಸಲಾಗಿದೆ. ಕೇವಲ ಮೂಲಭೂತ ಸೌಕರ್ಯ ಒದಗಿಸುವುದಲ್ಲಾ. ಫಲಿತಾಂಶ ನೀಡಲು ಕ್ರಮ ವಹಿಸಬೇಕಿದ್ದು. ಕಳೆದ ವರ್ಷಕ್ಕಿಂತ ಈ ಬಾರಿ ಜಿಲ್ಲೇಗೆ ಶೇ.51 ರಷ್ಟು ಫಲಿತಾಂಶ ಬಂದಿದ್ದು, ಮುಂದಿನ ದಿನಗಳಲ್ಲಿ ಶೈಕ್ಷಣಿಕವಾಗಿ ಜಿಲ್ಲೆಯು ಫಲಿತಾಂಶ ನೀಡಲು ಎಲ್ಲಾ ರೀತಿಯ ಕ್ರಮ ವಹಿಸಲಾಗುವುದು ಎಂದರು.

ನಗರದ ಹಳೇ ಬಸ್ ನಿಲ್ದಾಣದ ಹಿಂದುಗಡೆ 87 ಲಕ್ಷ ರು.ವೆಚ್ಚದ ಅಡುಗೆ ಕೋಣೆ ಸಹಿತವಾದ ಸುಸಜ್ಜಿತ ಇಂದಿರಾ ಕ್ಯಾಂಟಿನ್ ಕಾಮಗಾರಿಯನ್ನು ಸಚಿವ ಶರಣಬಸಪ್ಪಗೌಡ ದರ್ಶನಾಪುರ ವೀಕ್ಷಿಸಿದರು.

ನಗರದ ಹಳೇ ಬಸ್ ನಿಲ್ದಾಣದ ಹಿಂದುಗಡೆ 87 ಲಕ್ಷ ರು.ವೆಚ್ಚದ ಅಡುಗೆ ಕೋಣೆ ಸಹಿತವಾದ ಸುಸಜ್ಜಿತ ಇಂದಿರಾ ಕ್ಯಾಂಟಿನ್ ಕಾಮಗಾರಿ ವೀಕ್ಷಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಹತ್ವಕಾಂಕ್ಷೆ ಯೋಜನೆ, ಬಡವರ, ಕೂಲಿ ಕಾರ್ಮಿಕರ ಕಾಮಧೇನು ಹಸಿದ ಹೊಟ್ಟೆ ತುಂಬಿಸಲು ಇಂದಿರಾ ಕ್ಯಾಂಟೀನ್ ಸಹ ಪ್ರಮುಖವಾಗಿದೆ. ಕ್ಯಾಂಟೀನ್‌ಗೆ ಉತ್ತಮ ಸೂಕ್ತ ಸ್ಥಳ ದೊರೆತಿರುವುದು ಸಂತೋಷ ತಂದಿದೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಂಡು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪೌರಾಯುಕ್ತ ಜೀವನ್ ಕಟ್ಟಿಮನಿ, ಆಶ್ರಯ ಸಮಿತಿ ಅಧ್ಯಕ್ಷ ವಸಂತ ಸುರಪುರಕರ್, ಎಇಇ ನಾನಾಸಾಬ್, ಸದ್ದಂದಾದುಲ್ಲಾ, ಶಾಂತಪ್ಪ ಕಟ್ಟಿಮನಿ ಸೇರಿದಂತೆ ಇತರರಿದ್ದರು.

ನಿವೇಶನಗಳ ಪರಿಶೀಲನೆ: ಸರ್ವೆ. ನಂ 299ರ ಆಶ್ರಯ ಲೇಔಟ್‌ನಲ್ಲಿ 2 ಎಕರೆ ಸ್ಥಳದಲ್ಲಿ 64 ನಿವೇಶನಗಳು ಹಂಚಿಕೆಗೆ ಸಿದ್ದತೆ ನಡೆದಿದ್ದು, ಎಸ್‌ಸಿ -11, ಎಸ್‌ಟಿ-4 ಕುಂಬಾರ-17, ಮೈನಾರಿಟಿ-6, ಸಾಮಾನ್ಯ-6, ಫೀಸಾಡಿ ಜನಾಂಗದ ಜನರಿಗೆ 20/30 ನಿವೇಶನ ಹಂಚಿಕೆಗೆ ತಯಾರಿದ್ದು ಮುಂದಿನ ತಿಂಗಳು ಜೂ.5 ರಂದು ಫೈನಾಲ್ ಮಾಡಿ ಮುಂದಿನ ದಿನಗಳಲ್ಲಿ ಹಂಚಿಕೆ ಮಾಡಲಾಗುವುದು. ಈಗಾಗಲೇ 200 ಮನೆಗಳು ಸಹ ನಿರ್ಮಾಣಗೊಂಡಿದ್ದು ಸುಮಾರು 15 ವರ್ಷಗಳಿಂದ ಕಾರಣಾಂತರಗಳಿಂದ ನೆನೆಗುದಿಗೆ ಬಿದ್ದಿದ್ದು ಅವುಗಳಲ್ಲಿ ಯುಜಿಡಿ, ಕುಡಿಯುವ ನೀರು ಸೇರಿ ಮೂಲಭೂತ ಸೌಕರ್ಯಗಳ ಕೊರತೆಯಿದ್ದು ಅವುಗಳನ್ನು ಸರಿಮಾಡಿ ಮುಂದಿನ ದಿನಗಳಲ್ಲಿ ಹಂಚಿಕೆ ಮಾಡುವ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

ಬಿಜೆಪಿಯವರಿಗೆ ಹುಚ್ಚು ಹಿಡಿದಿದೆ

ಶಹಾಪುರ: ಬಿಜೆಪಿಯವರು ಸತ್ಯದ ತಲೆ ಮೇಲೆ ಹೊಡೆದಂತೆ ಸುಳ್ಳು ಹೇಳುತ್ತಾರೆ. ಜನಾಕ್ರೋಶ ಇರುವುದು ಕೇಂದ್ರ ಸರಕಾರದ ವಿರುದ್ದವೇ ಹೊರತು ,ನಮ್ಮ ರಾಜ್ಯದ ಕಾಂಗ್ರೆಸ್ ಸರಕಾರದ ಮೇಲಲ್ಲ ಎಂದು ಸಣ್ಣ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ವಾಗ್ದಾಳಿ ನಡೆಸಿದರು.

ನಗರದಲ್ಲಿ ವಿವಿಧ ಕಾಮಗಾರಿ ವಿಕ್ಷಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಬಿಜೆಪಿಯವರು ಮೊದಲು ಜನ ಮತ ಪಡೆದು ನಿಮ್ಮ ಅರ್ಹತೆಯನ್ನು ಸಾಬೀತು ಪಡಿಸಿ ಕೊಳ್ಳಿ. ಗ್ಯಾರಂಟಿ ಯೋಜನೆಗಳಿಂದ ಖಜಾನೆ ಖಾಲಿ ಯಾಗಿ ದೆ ಎಂದು ಪ್ರಧಾನಿ ಹೇಳಿದರು. ಆದರೆ ಮಹಾರಾಷ್ಟ್ರ, ಮಧ್ಯಪ್ರದೇಶ, ಹರಿಯಾಣ ಸೇರಿದಂತೆ ಎಲ್ಲ ರಾಜ್ಯಗಳ ಚುನಾವಣೆಗಳಲ್ಲಿ ಗ್ಯಾರಂಟಿ ಯೋಜನೆಗಳನ್ನು ಅವರೇ ಘೋಷಣೆ ಮಾಡಿದ್ದಾರೆ. ನಮ್ಮ ಯೋಜನೆಗಳು ಕರ್ನಾಟಕ ಮಾಡೆಲ್ ಆಗಿ ದೇಶಕ್ಕೆ ಮಾದರಿಯಾಗಿದೆ. 15 ಲಕ್ಷ ರು ಕೊಡುತ್ತೇವೆ ಎಂದು ಹೇಳಿ 11 ವರ್ಷ ಕಳೆಯಿತು ಆದರೂ 1 ರು ಜಮಾ ಆಗಲಿಲ್ಲಾ. ರೈತರಿಗೆ ಸಾಲಮನ್ನಾ ಮಾಡಿದ್ದಾರೆಯೇ, ಗೊಬ್ಬರ ಬೆಲೆ ಕಡಿಮೆ ಮಾಡಿದ್ದಾರೆಯೇ. ಆದರೆ ರಾಜ್ಯ ಸರಕಾರ ಗಂಭೀರ ಪರಿಸ್ಥಿತಿ ಯ ಲ್ಲಿಯೂ ರೈತರಗೆ ಬಡ್ಡಿಮನ್ನಾ ಮಾಡಿದೆ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ ಪರ ದರ್ಶನಾಪುರ ಬ್ಯಾಟಿಂಗ್: ಸಚಿವ ಪ್ರಿಯಾಂಕ್ ಅವರು ಪ್ರಧಾನಿ ಮೋದಿ ಅವರಿಗೆ ಕೆಟ್ಟ ಶಬ್ದ ಬಳಕೆ ಮಾಡಿದ್ದಾರೆಯೇ. ರಕ್ಷಣಾ ಸಚಿವರಾಗಿದ್ದ ಬಾಬು ಜಗಜೀವನ್‌ರಾಂ ಅವರು ಗೃಹ ಮಂತ್ರಿಗಳಾಗಿದ್ದ ವೇಳೆ ನಾವು ಯುದ್ದವನ್ನು ಗೆದ್ದಿಲ್ಲವೇ. ಈಗಾಲೂ ಒಂದೆರಡು ಬಾಂಬ್ ಹಾಕಿರಬಹುದು. ಇಂಧೀರಾ ಗಾಂಧಿ ಅವರು ಸಹ ಯುದ್ದವನ್ನು ಗೆದ್ದಿದ್ದಾರೆ. ಆದರೆ ಬಿಜೆಪಿಯವರು ಗಡಿಯಲ್ಲಿ ಸೈನಿಕರು ಯುದ್ಧ ಮಾಡಿದರೆ ಇಲ್ಲಿ ತಾವೇ ಯುದ್ಧ ಮಾಡಿದ ಹಾಗೇ ಬಿಂಬಿಸುತ್ತಿದ್ದಾರೆ. ಕದನ ವಿರಾಮ ಘೋಷಿಸಬಾರದಿತ್ತು, ಒಂದು ಬಾರಿ ಭಾರತೀಯ ಸೇನೆಯ ಶಕ್ತಿ ಏನು ಎಂಬುದನ್ನು ತೋರಿಸಬೇಕಾಗಿತ್ತು ಎಂದರು.

ಕಲ್ಯಾಣ ಪಥ ಯೋಜನೆಯಡಿ ಗ್ರಾಮೀಣ ರಸ್ತೆ ಅಭಿವೃದ್ಧಿ

ಕಲ್ಯಾಣ ಪಥ ಯೋಜನೆಯಡಿಯಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ದಿಗೆ ಆದ್ಯತೆ ನೀಡಲಾಗಿದೆ. 850 ಕೋಟಿ ರು ವೆಚ್ಚದಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ 24 ಪಿಎಚ್‌ಸಿ, 6 ಸಿಎಚ್‌ಸಿ, ತಾಲೂಕು ಆಸ್ಪತ್ರೆಗಳು, 150 ಹಾಸಿಗೆ ಆಸ್ಪತ್ರೆ ಗಳು, 100 ಹಾಸಿಗೆ ಆಸ್ಪತ್ರೆಗಳು ಮಂಜೂರಿ ಯಾಗಿದ್ದು, ಟೆಂಡರ್ ಆಗಿವೆ. ಶಹಾಪುರ ಕ್ಷೇತ್ರದಲ್ಲಿ 14 ಕೋಟಿ ರು.ವೆಚ್ಚದಲ್ಲಿ ಗೋಗಿ ಕಮ್ಯೂನಿಟಿ ಹಾಲ್, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸೇರಿ ಇನ್ನಿತರ ಕಾಮಗಾರಿಗೆ ಅನುದಾನ ಮಂಜೂರಿಯಾಗಿದೆ. ಮುಂದಿನ ತಿಂಗಳು ಜೂ.14ಕ್ಕೆ ಇವೆಲ್ಲ ವಕ್ಕೂ ಭೂಮಿ ಪೂಜೆ ನೆರವೇರಲಿದೆ. ಶೈಕ್ಷಣೀಕ, ಆರೋಗ್ಯ, ಕುಡಿಯುವ ನೀರು, ರಸ್ತೆಗಳ ಅಭಿವೃದ್ಧಿ ಈಗೇ ಪ್ರತಿ ಕ್ಷೇತ್ರಕ್ಕೂ ಭರಪೂರ ಅನುದಾನ ನೀಡಲಾಗುತ್ತಿದೆ ಎಂದರು.

ಸಿದ್ದರಾಮಯ್ಯ ದೇಶದ ನಂಬರ್ ಒನ್ ಮುಖ್ಯಮಂತ್ರಿ: ಅಂಜನೇಯ

ಬೀದರ್ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎಚ್. ಅಂಜನೇಯ ಮಾತನಾಡಿದರು.

ಬೀದರ್: ಇಡೀ ದೇಶದಲ್ಲಿ ಸಿದ್ದರಾಮಯ್ಯ ನವರಂತೆ ಯಾವ ಮುಖ್ಯಮಂತ್ರಿಯೂ ಕೆಲಸ ಮಾಡಿಲ್ಲ. ಅವರು ದೇಶದ ನಂಬರ್ ಒನ್ ಮುಖ್ಯಮಂತ್ರಿಯಾಗಿದ್ದಾರೆ. ಸಾಮಾಜಿಕ ನ್ಯಾಯದ ಹರಿಕಾರರು ಅವರೇ ನಮ್ಮ ಪಾಲಿಗೆ ಅಂಬೇಡ್ಕರ್ ಎಂದು ಮಾಜಿ ಸಚಿವ ಎಚ್. ಆಂಜನೇಯ ಹೇಳಿದರು.

ಬೀದರ್ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿಗಾಗಿ ಜಾತಿ ಜನಗಣತಿ ಸಮೀಕ್ಷೆ ಕೈಗೊಳ್ಳಲಾಗಿದೆ. ಜಿಪಿಎಸ್ ಆಧಾರಿತ ಆ್ಯಪ್ ಮೂಲಕ ಸಮೀಕ್ಷೆ ನಡೆಸಲಾಗು ತ್ತಿದೆ. ಪರಿಶಿಷ್ಟ ಜಾತಿಯಲ್ಲಿರುವ 101 ಉಪಜಾ ತಿಯವರು ಸಮೀಕ್ಷೆಯಲ್ಲಿ ಭಾಗವಹಿಸಿ ಉಪಜಾತಿ ಸೇರಿದಂತೆ ಎಲ್ಲಾ ವಿವರ ದಾಖಲಿಸಬೇಕು. ಅಗತ್ಯ ಮಾಹಿತಿ ಸಲ್ಲಿಸಬೇಕು ಎಂದು ಸಲಹೆ ಮಾಡಿದರು.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರ ಏಕ ಸದಸ್ಯ ಆಯೋಗದಿಂದ ನ್ಯಾಯ ಸಿಗುವ ವಿಶ್ವಾಸವಿದೆ. ಪರಿಶಿಷ್ಟ ಜಾತಿಯಲ್ಲಿ ಇರುವ ಅನೇಕ ಜಾತಿಗಳು ರಾಜಕೀಯ ಶೈಕ್ಷಣಿಕವಾಗಿ ಬಹಳ ಹಿಂದುಳಿದಿವೆ. ಸಮೀಕ್ಷೆ ಪೂರ್ಣಗೊಂಡ ನಂತರ ಒಳ ಮೀಸಲಾತಿಯನ್ನು ಸರಕಾರ ಜಾರಿಗೆ ತರುವ ವಿಶ್ವಾಸವಿದೆ. ಆಗ ವಂಚಿತರಿಗೆ ನ್ಯಾಯ ದೊರಕಲಿದೆ ಎಂದು ಹೇಳಿದರು. ಒಳ ಮೀಸಲಾತಿಗಾಗಿ ಸುಮಾರು 30- 35 ವರ್ಷಗಳಿಂದ ಹೋರಾಟ ನಡೆಸಿಕೊಂಡು ಬರಲಾಗಿದೆ. ಸಮೀಕ್ಷೆಯಲ್ಲಿ ಸ್ವಯಂ ಪ್ರೇರಣೆಯಿಂದ ಪಾಲ್ಗೊಂಡು ನಮ್ಮ ವಿವರ ದಾಖಲಿಸುವುದು ಅಷ್ಟೇ ಮುಖ್ಯ. ಎಲ್ಲ ಮಾದಿಗರು ಸಮೀಕ್ಷೆಯಲ್ಲಿ ಮಾದಿಗರೆಂದು ನಮೂದಿಸಬೇಕು ಎಂದು ಮನವಿ ಮಾಡಿದರು. ಮುಖಂಡರಾದ ಚಂದ್ರಕಾಂತ ಹಿಪ್ಪಳಗಾಂವ್, ವಿಜಯಕುಮಾರ ಜಿ. ದೇವದಾಸ ಚಿಂತಲಗೇರಾ, ವಿಜಯಕುಮಾರ ಕೌಡ್ಯಾಳ, ರಮೇಶ ಕಟ್ಟಿತೂಗಾಂವ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಎಸ್ಸಿ-ಎಸ್ಟಿ ಜನರ ಸಮಸ್ಯೆಗಳಿಗೆ ಜಿಲ್ಲಾಡಳಿತ ಸ್ಪಂದನೆ

ಹುಣಸಗಿ ತಾಲೂಕಿನ ಬಪ್ಪರಗಿ ಗ್ರಾಮದಲ್ಲಿ ಎಸ್ಸಿ-ಎಸ್ಟಿ ಜನರ ಕುಂದುಕೊರತೆಗಳ ಸಭೆ ನಡೆಸಲಾಯಿತು.

ಹುಣಸಗಿ: ಎಸ್ಸಿ-ಎಸ್ಟಿ ಜನರ ಯಾವುದೇ ಸಮಸ್ಯೆಗಳಿಗೆ ಜಿಲ್ಲಾಡಳಿತವು ತಕ್ಷಣವೇ ಸ್ಪಂದಿಸಲಿದೆ ಎಂದು ಜಿಲ್ಲಾಧಿಕಾರಿ ಸುಶೀಲಾ.ಬಿ. ಹೇಳಿದರು.

ತಾಲೂಕಿನ ಬಪ್ಪರಗಿ ಗ್ರಾಮದಲ್ಲಿ ಜಿಲ್ಲಾ ಪೊಲೀಸ್ ಹಾಗೂ ಸುರಪುರ ಉಪ-ವಿಭಾಗ, ನಾರಾಯಣಪೂರ ಪೊಲೀಸ್ ಠಾಣೆ ಸಹಯೋಗದಲ್ಲಿ ನಡೆದ ಎಸ್ಸಿ-ಎಸ್ಟಿ ಕುಂದುಕೊರತೆ ಸಭೆಯಲ್ಲಿ ಮಾತನಾಡಿದ ಅವರು, ಮೂಲಭೂತ ಸೌಕರ್ಯ ಮತ್ತು ವಿವಿಧ ಗಂಭೀರ ಸಮಸ್ಯೆ ಇದ್ದಾಗ ನೇರವಾಗಿಯೇ ಗಮನಕ್ಕೆತರಬಹುದು.

ನರೇಗಾ ಯೋಜನೆಯಡಿ ಕೆಲಸ ಹಾಗೂ ವಸತಿ ಕಲ್ಪಿಸಲು ಸ್ಥಳೀಯ ಗ್ರಾಮ ಪಂಚಾಯಿ ತಿ ಆಡಳಿತಕ್ಕೆ ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್‌ಶಂಕರ್ ಮಾತನಾಡಿ, ಯಾವುದೇ ತೊಂದರೆ ಉಂಟಾದಾಗ ಎಸ್ಸಿ-ಎಸ್ಟಿ ಕಾಯ್ದೆಯಡಿ ಕಠಿಣ ಕಾನೂನು ಕ್ರಮ ಮತ್ತು ಅವುಗಳ ಮಹತ್ವವನ್ನು ತಿಳಿಸಿದ ಅವರು ಅಕ್ರಮ ಮದ್ಯ ಮಾರಾಟ, ಇಸ್ಪೀಟ್, ಮಟಕಾ ಹೀಗೇ ಸಮಾ ಜಕ್ಕೆ ಮಾರಕವಾದ ದಂಧೆಗಳು ನಡೆದರೆ ಮಾಹಿತಿ ನೀಡತಕ್ಕದು ಎಂದರು.

ನಂತರ ಗ್ರಾಮದ ದಲಿತ ನಿವಾಸಿಗರು ತಮ್ಮ ವಿವಿಧ ಸಮಸ್ಯೆಗಳನ್ನು ಅಧಿಕಾರಿಗಳ ಎದುರು ಬಿಚ್ಚಿಟ್ಟರು.

ಈ ಸಂದರ್ಭ ಡಿವೈಎಸ್ಪಿ ಜಾವೀದ್ ಇನಾಮದಾರ್, ತಹಸೀಲ್ದಾರ ಬಸಲಿಂಗಪ್ಪ ನೈಕೋಡಿ, ಸಿಪಿಐ ರವಿಕುಮಾರ್, ಇಒ ಬಸಣ್ಣ ನಾಯಕ, ಪಿಎಸ್‌ಐ ಚಂದ್ರಶೇಖರ್ ನಾರಾಯಣಪುರ ಸೇರಿದಂತೆ ಗ್ರಾಮಸ್ಥರು ಇದ್ದರು.

ಪಾಂಡಿಚೇರಿ ವಾಹನ ನೋಂದಣಿ ರದ್ದುಪಡಿಸಿ

ಭಾಲ್ಕಿ: ಬೀದರ್ ಜಿಲ್ಲೆಯಾದ್ಯಂತ ಓಡಾಟ ನಡೆಸಿರುವ ಪಾಂಡಿಚೇರಿ ವಾಹನಗಳ ನೋಂದಣಿ ರದ್ದುಪಡಿಸಿ ಅವುಗಳ ಓಡಾಟ ನಿಷೇಧಿಸಬೇಕು ಎಂದು ನಮ್ಮ ಕರ್ನಾಟಕ ಸೇನೆ ಜಿಲ್ಲಾ ಘಟಕ ಒತ್ತಾಯಿಸಿದೆ.

ಈ ಕುರಿತು ಪಟ್ಟಣದ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಸೋಮವಾರ ನಮ್ಮ ಕರ್ನಾಟಕ ಸೇನೆಯ ಜಿಲ್ಲಾಧ್ಯಕ್ಷ ಗಣೇಶ ಪಾಟೀಲ್ ನೇತೃತ್ವದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಮೂಲಕ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.ಬೀದರ್ ಜಿಲ್ಲೆಯಲ್ಲಿ ಪಾಂಡಿಚೇರಿ ಪರವಾನಿಗೆ ಹೊಂದಿರುವ ವಾಹನಗಳು ರಾಜರೋಷವಾಗಿ ಓಡಾಟ ನಡೆಸಿವೆ. ಪಾಂಡಿಚೇರಿ ಪರವಾನಿಗೆ ಹೊಂದಿರುವ ವಾಹನ ಮಾಲೀಕರು ನಮ್ಮ ರಾಜ್ಯಕ್ಕೆ ತೆರಿಗೆ ಕಟ್ಟದೆ ವಂಚನೆ ಮಾಡುತ್ತಿದ್ದಾರೆ.

ಸುಳ್ಳು ದಾಖಲೆ ಸೃಷ್ಟಿಸಿ ಪಾಂಡಿಚೇರಿ ಪರವಾನಿಗೆ ಹೊಂದಿರುವ ವಾಹನಗಳನ್ನು ಖರೀದಿಸಿ ಮಾಲೀಕರು ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದ್ದಾರೆ. ಸಾರಿಗೆ ಅಧಿಕಾರಿಗಳು ಪಾಂಡಿಚೇರಿ ಪರವಾನಿಗೆ ಹೊಂದಿರುವ ವಾಹನಗಳನ್ನು ವಶಕ್ಕೆ ಪಡೆದು ಸಂಬಂಧಿತರ ವಿರುದ್ಧ ಕ್ರಮ ಜರುಗಿಸಬೇಕು. ಪಾಂಡಿಚೇರಿ ವಾಹನಗಳ ಓಡಾಟ ನಿಷೇಧಕ್ಕೆ ವಿಳಂಬ ನೀತಿ ಅನುಸರಿಸಿದರೆ ಮುಂಬರುವ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಮನವಿ ಪತ್ರದಲ್ಲಿ ಎಚ್ಚರಿಕೆ ನೀಡಲಾಗಿದೆ.

ಈ ಸಂದರ್ಭದಲ್ಲಿ ನಮ್ಮ ಕರ್ನಾಟಕ ಸೇನೆಯ ಯುವ ಘಟಕದ ಜಿಲ್ಲಾಧ್ಯಕ್ಷ ಸುದೀಪ ತೂಗಾವೆ, ತಾಲೂಕು ಅಧ್ಯಕ್ಷ ಬಸವರಾಜ ಕಾರಬಾರಿ, ಪ್ರಧಾನ ಕಾರ್ಯದರ್ಶಿ ಭದ್ರಯ್ಯ ಸ್ವಾಮಿ, ಸಹ ಕಾರ್ಯದರ್ಶಿಗಳಾದ ಜಗದೀಶ ಪಾಟೀಲ್, ಸಂಗಮೇಶ ಮಾರ್ಗೆ, ಪ್ರಮುಖರಾದ ಸಚಿನ ಪಾಟೀಲ್, ಅನಿಲ ಮಮದಾಗಾವೆ, ಓಂಕಾರ ಪಾಟೀಲ್, ಶಂಕರ ಡೊಂಗರಗೆ, ನಾಗೇಶ ಡೊಂಗರಗೆ, ಸೇರಿದಂತೆ ಇತರರು ಇದ್ದರು

ಗಡಿಕುಶನೂರ ಗ್ರಾಮದಲ್ಲಿ ಬಸವ ಜಯಂತಿ ಇಂದು

ಬೀದರ್: ಔರಾದ್ ತಾಲೂಕಿನ ಗಡಿಕುಶನೂರ ಗ್ರಾಮದಲ್ಲಿ ಬಸವ ಮಂಟಪ ಸೇವಾ ಸಮಿತಿ ವತಿಯಿಂದ ಮೇ 25 ರಂದು ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ ನವರ ಜಯಂತ್ಯೋತ್ಸವ ಹಮ್ಮಿಕೊಳ್ಳಲಾಗಿದೆ. ಜಯಂತ್ಯೋತ್ಸವ ಪ್ರಯುಕ್ತ ಬೆಳಗ್ಗೆ 9ಕ್ಕೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬಸವಣ್ಣನವರ ಭಾವಚಿತ್ರದ ಭವ್ಯ ಮೆರವಣಿಗೆ ಜರುಗಲಿದೆ. ಕಲಾ ತಂಡಗಳು ಮೆರವಣಿಗೆಗೆ ಮೆರುಗು ನೀಡಲಿವೆ. ಬಸವ ಮಂಟಪದಲ್ಲಿ ಮಧ್ಯಾಹ್ನ 1ಕ್ಕೆ ನಡೆಯುವ ಮೊದಲ ಗೋಷ್ಠಿಯನ್ನು ಶಾಸಕ ಪ್ರಭು ಚವಾಣ್ ಉದ್ಘಾಟಿಸುವರು. ಸಂಜೆ 6ಕ್ಕೆ ಜರುಗುವ ಎರಡನೇ ಗೋಷ್ಠಿಯನ್ನು ಸಂಸದ ಸಾಗರ್ ಖಂಡ್ರೆ ಉದ್ಘಾಟಿಸುವರು. ಕೂಡಲಸಂಗಮದ ಬಸವ ಧರ್ಮ ಪೀಠಾಧ್ಯಕ್ಷೆ ಮಾತೆ ಡಾ. ಗಂಗಾದೇವಿ, ಬಸವಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷ ಡಾ. ಬಸವಲಿಂಗ ಪಟ್ಟದ್ದೇವರು, ಗುರುಬಸವ ದೇವರು ಸಾನಿಧ್ಯ ವಹಿಸುವರು. ಬಸವ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ಜೈರಾಜ ಖಂಡ್ರೆ ಧ್ವಜಾರೋಹಣ ಮಾಡುವರು. ಉದ್ಯಮಿ ವೀರಶೆಟ್ಟಿ ತೇಗಂಪುರ, ಮಹಮ್ಮದ್ ವಲಿಯೊದ್ದಿನ್, ಕಂಟೆಪ್ಪ ಗಂದಿಗುಡೆ, ವಿಜಯಕುಮಾರ ಪಟ್ನೆ, ಚಂದ್ರಕಾಂತ ಪಟ್ನೆ ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ ವಚನ ನೃತ್ಯ, ರೂಪಕ ಪ್ರದರ್ಶನಗೊಳ್ಳಲಿವೆ. ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನ ನಡೆಯಲಿದೆ ಎಂದು ಬಸವ ಜಯಂತಿ ಉತ್ಸವ ಸಮಿತಿಯ ಸಂಚಾಲಕ ಹನುಮಂತರಾವ್ ಪಾಟೀಲ ಹಾಗೂ ಅಶೋಕ ಮಾಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಗ್ಗು ಗುಂಡಿಗಳ ಮಧ್ಯೆ ತೋರಣಾವಾಡಿ ರಸ್ತೆ

ಲಕ್ಷ್ಮಣ ರಾಠೋಡ, ಕಮಲನಗರ

ತಾಲೂಕಿನ ಖತಗಾಂವ ಕ್ರಾಸ್ ನಿಂದ ರಾಂಪುರ್ ಹಾಗೂ ತೋರಣಾವಾಡಿ ವರೆಗೆ ರಸ್ತೆಯ ಮಧ್ಯೆ ತಗ್ಗು ಗುಂಡಿಗಳು ಬಿದ್ದು ರಸ್ತೆಯ ಮಧ್ಯೆ ಗುಂಡಿಯೋ ಗುಂಡಿಯ ಮಧ್ಯೆ ರಸ್ತೆಯೋ ಎನ್ನುವಂತಾಗಿದೆ. ರಾಜ್ಯದ ಗಡಿಗ್ರಾಮ ತಾಲೂಕು ಕೇಂದ್ರ ಕಮಲನಗರ ಹಾಗೂ ಔರಾದ ಸೇರಿದಂತೆ ಹೆದ್ದಾರಿ ರಸ್ತೆ ಮಹಾರಾಷ್ಟ್ರ ಉದಗೀರ ಸಂಪರ್ಕ ಕಲ್ಪಿಸುವ ಈ ರಸ್ತೆಯಾಗಿದ್ದು. ರಸ್ತೆಯ ಮಧ್ಯೆ ತಗ್ಗು ಗುಂಡಿಗಳು ಬಿದ್ದಿರುವುದರಿಂದ ವಾಹನ ಸವಾರರು ಪರದಾಡುವಂತಹ ಪರಿಸ್ಥಿತಿ ಎದುರಾಗಿದೆ. ಹದಗೆಟ್ಟ ರಸ್ತೆ ದುರುಸ್ತಿ ಕಾಣದಂತಾಗಿ ಡಾಂಬರ ಕಿತ್ತುಹೋಗಿದೆ. ಬೇಸಿಗೆ ಕಾಲದಲ್ಲಿ ಈ ಗತಿಯಾದರೆ ಮಳೆಗಾಲದಲ್ಲಿ ತಗ್ಗು ಗುಂಡಿಗಳಲ್ಲಿ ನೀರು ನಿಂತು ರಸ್ತೆ ಕಾಣದಂತಾಗುತ್ತದೆ. ನಮ್ಮ ಸಮಸ್ಯೆ ಕೇಳುವವರೇ ಇಲ್ಲದಂತಾಗಿದೆ ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ವಿರುದ್ದ ಸಾರ್ವಜನಿಕರು ದಿನನಿತ್ಯ ಹಿಡಿಶಾಪ ಹಾಕುತ್ತಿದ್ದಾರೆ. ರಾತ್ರಿ ಹೊತ್ತಿನಲ್ಲಿ ಈ ರಸ್ತೆಯಲ್ಲಿ ಸಂಚರಿಸಲು ಜೀವ ಕೈಯಲ್ಲಿ ಹಿಡಿದುಕೊಂಡು ಸಂಚರಿಸುವ ಪರಿಸ್ಥಿತಿ ಎದುರಾಗಿದೆ. ಸ್ವಲ್ಪ ಗಮನ ತಪ್ಪಿದರೆ ಅಪಘಾತ ಖಂಡಿತ ಎಂದು ವಾಹನ ಸವಾರರು ತಿಳಿಸಿದ್ದಾರೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಸಾಕಷ್ಟು ಬಾರಿ ಅಪಘಾತ ಸಂಭವಿಸಿ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ಜರುಗಿದೆ. ಈ ಕುರಿತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದರು ಕೂಡ ಯಾವುದೇ ಪ್ರಯೋಜನೆಯಿಲ್ಲ ಎಂದು ಅಧಿಕಾರಿಗಳ ವಿರುದ್ದ ಅಸಮಧಾನ ಹೊರಹಾಕಿದ್ದಾರೆ. ಶೀಘ್ರದಲ್ಲೇ ಮಳೆಗಾಲ ಆರಂಭವಾಗುತ್ತಿದೆ ಇನ್ನೂ ಸಂಚಾರಕ್ಕೆ ಹೆಚ್ಚು ಸಮಸ್ಯೆಯಾಗುತ್ತದೆ. ಗುಣಮಟ್ಟದ ರಸ್ತೆ ನಿರ್ಮಿಸಬೇಕು ಎಂದು ಸ್ಥಳೀಯ ನಿವಾಸಿಗಳಾದ ದೇಚವಿದಾಸ ಹೊನ್ನಾಳಿ ಹಾಗೂ ಸುನಿಲ ಸಿಗರೆ ಗ್ರಾಪಂ ಅಧ್ಯಕ್ಷರು ತೋರಣಾ ಒತ್ತಾಯಿಸಿದ್ದಾರೆ.

ಹದಗೆಟ್ಟಿರುವ ರಸ್ತೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಗಮನ ಹರಿಸುವ ಮೂಲಕ ರಸ್ತೆ ದುರುಸ್ಥಿಗೆ ಮುಂದಾಗಬೇಕು ಹಾಗೂ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ರಸ್ತೆಯ ಮಧ್ಯೆ ಗುಂಡಿಗಳು ಬಿದ್ದು ನೀರು ಸಂಗ್ರಹವಾಗಿ ರಸ್ತೆ ಕಾಣದಂತಾಗಿದೆ.

– ಸಂತೋಷ ಬಿರಾದಾರ, ಗ್ರಾಪಂ ಸದಸ್ಯರು

ಕಮಲನಗರ ತಾಲೂಕು ಕೇಂದ್ರಕ್ಕೆ ತೆರಳುವ ತೋರಣಾವಾಡಿ ಹಾಗೂ ರಾಂಪುರ್ ಮತ್ತು ಖತಗಾಂವ ಕ್ರಾಸ್ ರಸ್ತೆ ಸಂಪೂರ್ಣ ಹದಗೆಟ್ಟಿರುವುದು.

ತೋರಣಾ ಹಾಗೂ ತೋರಣಾವಾಡಿ. ಖತಗಾಂವ ಸೇರಿದಂತೆ ಇನ್ನಿತರೆ ಗ್ರಾಮಗಳ ಜನರು ತಾಲೂಕು ಕೇಂದ್ರ ಕಮಲನಗರಗೆ ತೆರಳಲು ಸಮಸ್ಯೆ ಎದುರಾಗಿದೆ. ಸ್ವಲ್ಪ ಮಳೆ ಬಂದರು ತಗ್ಗು ಗುಂಡಿಗಳ ಮಧ್ಯ ನೀರು ಸಂಗ್ರಹವಾಗಿ ರಸ್ತೆ ಕಾಣದಂತಾಗಿದೆ. ಬೈಕ್ ಸವಾರರು ಬಿದ್ದು ಗಂಭೀರವಾಗಿ ಗಾಯಗೊಂಡಿರುವ ಘಟನೆಗಳು ಜರುಗಿವೆ. ಶೀಘ್ರದಲ್ಲೇ ಅಧಿಕಾರಿಗಳು ಗಮನಹರಿಸುವ ಮೂಲಕ ಗುಣಮಟ್ಟದ ರಸ್ತೆ ನಿರ್ಮಿಸಲು ಮುಂದಾಗಬೇಕು.

– ಸುನೀಲ ಕೋರೆ ತೋರಣಾ, ಗ್ರಾಮದ ನಿವಾಸಿ

ಸಮಾಚಾರ ಸಣ್ಣದಲ್ಲ

ಬಸ್ ಪಲ್ಟಿ: 40ಕ್ಕೂ ಹೆಚ್ಚು ಮಂದಿಗೆ ಗಾಯ

ದಾವಣಗೆರೆ: ಚಾಲಕನ ನಿಯಂತ್ರಣ ತಪ್ಪಿ ಸಾರಿಗೆ ಇಲಾಖೆಯ ಬಸ್ ಪಲ್ಟಿಯಾದ ಪರಿಣಾಮ 40ಕ್ಕೂ ಹೆಚ್ಚು ಮಂದಿಗೆ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ದಾವಣಗೆರೆಯಲ್ಲಿ ನಡೆದಿದೆ. ದಾವಣಗೆರೆ ತಾಲೂಕಿನ ಆಲೇಕಲ್ಲು ಗ್ರಾಮದ ಬಳಿ ಘಟನೆ ನಡೆದಿದೆ. ಎದುರಿಗೆ ಕುರಿಹಿಂಡು ಬಂದ ಹಿನ್ನೆಲೆ ಪಕ್ಕ ತೆಗದುಕೊಳ್ಳಲು ಹೋಗಿ ಬಸ್ ಪಲ್ಟಿಯಾಗಿದೆ. ಘಟನೆಯಲ್ಲಿ 40ಕ್ಕೂ ಹೆಚ್ಚುಮಂದಿ ಗಾಯ ಗೊಂಡಿದ್ದು, ಆಸ್ಪತ್ರೆಗೆ ರವಾನಿಸಲಾಗಿದೆ. ಬಸ್ ಹುಲಿಕಟ್ಟೆಯಿಂದ ದಾವಣಗೆರೆಗೆ ಬರುತ್ತಿದ್ದ ವೇಳೆ ಅವಘಡ ಸಂಭವಿಸಿದೆ.

ಶಾಸಕ ಪೊನ್ನಣ್ಣ ಆಪ್ತ ಸಹಾಯಕನ ಪತ್ನಿ ಆತ್ಮಹತ್ಯೆ

ಹಾಸನ: ಶಾಸಕ ಪೊನ್ನಣ್ಣ ಅವರ ಆಪ್ತ ಸಹಾಯಕ ಹಾಗೂ ಮಾಜಿ ಸಚಿವ ಎಚ್.ಕೆ. ಕುಮಾರಸ್ವಾಮಿ ಅವರ ಮಾಜಿ ಆಪ್ತ ಸಹಾಯಕ ಮಹೇಂದ್ರ ಅವರ ಪತ್ನಿ ಸಕಲೇಶಪುರದ ಪಿಡಬ್ಲ್ಯೂಡಿ ಕ್ವಾಟರ್ಸ್‌ನಲ್ಲಿ ಆತ್ಮಹತ್ಯೆ ಶರಣಾಗಿದ್ದಾರೆ.

ಶೃತಿ (35) ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾದ ಮಹಿಳೆ. ಕಲ್ಗಣೆ ಗ್ರಾಮದ ಸರಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದ ಶೃತಿ ಕೆಲ ತಿಂಗಳುಗಳಿಂದ ಮಾನಸಿಕ ಖಿನ್ನತೆ ಒಳಗಾಗಿದ್ದರು. ಶನಿವಾರ ಮನೆಯಲ್ಲಿಯೇ ವಿಷ ಸೇವಿಸಿದ್ದು ತೀವ್ರ ಅಸ್ವಸ್ಥಗೊಂಡಿದ ಅವರನ್ನು ಚಿಕಿತ್ಸೆಗಾಗಿ ಹಾಸನದ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆಯೇ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತ ಶಿಕ್ಷಕಿಯ ಅಂತ್ಯಕ್ರಿಯೆ ಆಲೂರು ತಾಲೂಕಿನ ಗಂಜಿಗೆರೆಯಲ್ಲಿ ಭಾನುವಾರ ನಡೆಯಲಿದೆ. ಆತ್ಮಹತ್ಯೆಗೂ ಮುನ್ನ ಡೆತ್ ನೋಟ್ ಬರೆದಿಟ್ಟಿರುವ ಶ್ರುತಿ ನಾನು ಕೆಲವು ದಿನಗಳಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದೇನೆ. ನನ್ನ ಗಂಡನನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ. ನನ್ನ ಮಕ್ಕಳನ್ನು ಚೆನ್ನಾಗಿ ಓದಿಸಿ ಎಂದು ಬರೆದಿದ್ದಾರೆ ಎಂದು ತಿಳಿದುಬಂದಿದೆ.

ಮದುವೆಗೆ ನಕಾರ: ಯುವಕ ಆತ್ಮಹತ್ಯೆ

ಚಿಕ್ಕಬಳ್ಳಾಪುರ: ಸೋದರ ಮಾವನ ಮಗಳ ಜತೆ ಮದುವೆಗೆ ನಕಾರ ಹಿನ್ನೆಲೆ ಸಂಬಂಧಿ ಯುವಕ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಚಿಕ್ಕಬಳ್ಳಾಪುರ ತಾಲೂಕಿನ ಅಜ್ಜವಾರ ಗ್ರಾಮದಲ್ಲಿ ನಡೆದಿದೆ. ಅಜ್ಜವಾರ ಗ್ರಾಮದ 27 ವರ್ಷದ ಮಂಜುನಾಥ್ ನೇಣಿಗೆ ಶರಣಾದ ದುರ್ದೈವಿ. ಮಂಜುನಾಥ್ ಶಿಡ್ಲಘಟ್ಟ ತಾಲೂಕಿನ ಸೋದರ ಮಾವನ ಅಪ್ರಾಪ್ತ ಮಗಳನ್ನ ಕೆಲ ವರ್ಷಗಳಿಂದ ಪ್ರೀತಿಸುತ್ತಿದ್ದ ಎನ್ನಲಾಗಿದೆ. ಶುಕ್ರವಾರ ಸಹ ಬಾಲಕಿಯ ಹುಟ್ಟು ಹಬ್ಬದ ಅಂಗವಾಗಿ ಮನೆಗೆ ಹೋಗಿ ವಿಶ್ ಮಾಡಿ ಬಂದಿದ್ದ. ಈ ವೇಳೆ ಬಾಲಕಿಯನ್ನು ಮದುವೆಯಾಗುವುದಾಗಿ ಮಂಜುನಾಥ್ ಹೇಳಿದ್ದು ಇದಕ್ಕೆ ಸೋದರ ಮಾವ ಹಾಗೂ ಅತ್ತೆ ಮಗಳನ್ನ ಕೊಡೋದಿಲ್ಲ ಎಂದಿದ್ದರಂತೆ.

ಫನ್ ತರಂಗ

- ರಘುಪತಿ ಶೃಂಗೇರಿ -

ಬೆಂಗಳೂರಲ್ಲಿ ಡ್ರೈವರ್‌ಲೆಸ್ ಕಾರ್ ಪ್ರಾಯೋಗಿಕ ಸಂಚಾರ

ರಿಪಬ್ಲಿಕ್ ಆಫ್ ಕಲಬುರಗಿ ಆಗಲು ಬಿಡಲ್ಲ | ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ನಾಯಕರ ವಾಗ್ದಾಳಿ

ಅಂಬೇಡ್ಕರರನ್ನು ಸೋಲಿಸಿದ್ದು ಕಾಂಗ್ರೆಸ್

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಇತ್ತೀಚೆಗೆ ಚಿತ್ತಾಪುರದಲ್ಲಿ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರನ್ನು ಪ್ರವಾಸ ಮಂದಿರದಲ್ಲಿ ದಿಗ್ಬಂಧನ ಹಾಕಿ, ಕಾರಿಗೆ ಬಣ್ಣ ಎರಚಿದ ಘಟನೆ ಖಂಡಿಸಿ ಶನಿವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾ ಗದಲ್ಲಿ ಕಲಬುರಗಿ ಚಲೋ ಪ್ರತಿಭಟನೆ ನಡೆಸಿದರು.

ಸಾವಿರಾರು ಸಂಖ್ಯೆಯಲ್ಲಿ ಬಿಜೆಪಿ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರು ಜಮಾವಣೆಗೊಂಡು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿ, ಸಚಿವ ಸ್ಥಾನದಿಂದ ಪ್ರಿಯಾಂಕ್ ಖರ್ಗೆ ಅವರನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಬಳಿಕ ಮಾತನಾಡಿದ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ರಾಜ್ಯದಲ್ಲಿ ಅಪ್ಪಟ ದಲಿತ ಯಾರಾದರೂ ಇದ್ದರೆ ಅದು ಛಲವಾದಿ ನಾರಾಯಣಸ್ವಾಮಿ. ಚಾಪೆ ಮೇಲೆ ಮಲಗಿದ್ದೇನೆ. ಚಾಪೆ ಇಲ್ಲದೆ ಮಣ್ಣಿನ ಮೇಲೆ ಮಲಗಿದ್ದೇನೆ. ಕೆರೆ ಕುಂಟೆಗಳ ನೀರು ಕುಡಿದಿದ್ದೇನೆ. ಕೊಟ್ಟ ತಂಗಳು ತಿಂದಿದ್ದೇನೆ. ನಾನು ಪ್ರಿಯಾಂಕ್ ಖರ್ಗೆ ಅವರಂತೆ ಚಿನ್ನದ ಚಮಚ ಇಟ್ಟುಕೊಂಡು ಹುಟ್ಟಿದವನಲ್ಲ. ಹೋರಾಟದಿಂದ ಬಂದ ಅಪ್ಪಟ ದಲಿತನಾಗಿದ್ದೇನೆ. ಡಾ.ಅಂಬೇಡ್ಕರರನ್ನು ಸೋಲಿಸಿದ್ದು, ಅಪಮಾನ ಮಾಡಿದ್ದು ಕಾಂಗ್ರೆಸ್ ಎಂದು ಹೇಳಿದರು.

ನಾನು ಬಲಿತ ದಲಿತ ಅಲ್ಲ, ಆಸ್ತಿ ಮಾಡಿಲ್ಲ, ಅಧಿಕಾರ ಅನುಭವಿಸಿಲ್ಲ, 40 ವರ್ಷ ಕಾಂಗ್ರೆಸ್ಸಿನಲ್ಲಿ ದುಡಿದೆ. ಗುರುಮಿಠಕಲ್‌ನಲ್ಲಿ 9 ಬಾರಿ ಗೆದ್ದಿದ್ದಾರೆ. ಅಲ್ಲಿ ಒಬ್ಬ ದಲಿತ ನಾಯಕ ಹುಟ್ಟಲಿಲ್ಲ. ನೀವು ನಡೆದ ಕಡೆ ಹುಲ್ಲೂ ಸಹ ಹುಟ್ಟುವುದಿಲ್ಲ. ನಿಮ್ಮನ್ನು ಹೊತ್ತು ತಿರುಗಿ ನಿಮ್ಮ ಹೆಸರು ಎಲ್ಲೆಡೆ ಹೇಳುವಂತೆ ಮಾಡಿದ್ದು ನಾನು. ಖರ್ಗೆಯವರು ಮುಖ್ಯ ಮಂತ್ರಿ ಆಗಬೇಕೆಂದು ರಾಹುಲ್ ಗಾಂಧಿಯವರಿಗೆ ಮನವಿ ಪತ್ರ ಕೊಟ್ಟಿದವರು ನಾವು. ದಲಿತ ಎಂಬ ಹೆಸರಿನಲ್ಲಿ ಮುಖ್ಯಮಂತ್ರಿ ಪದವಿ ಬೇಡ ಎಂದವ ರಲ್ಲವೇ ನೀವು? ಹಾಗಿದ್ದರೆ ದಲಿತರ ಕ್ಷೇತ್ರದಲ್ಲಿ ನಿಮ್ಮ ಸ್ಪರ್ಧೆ ಏಕೆ ಎಂದು ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಗೌಡ, ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಹರೀಶ್ ಪೂಂಜಾ, ಶಾಸಕ ಹಾಗೂ ಎಸ್.ಸಿ.ಮೋರ್ಚಾ ರಾಜ್ಯಾಧ್ಯಕ್ಷ ಸಿಮೆಂಟ್ ಮಂಜು, ಶಾಸಕರಾದ ಸಿದ್ದು ಸವದಿ, ರಾಜ್ಯ ಕಾರ್ಯದರ್ಶಿ ಲಲಿತಾ ಅನಪೂರ್, ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ, ಸುನೀಲ್ ವಲ್ಲ್ಯಾಪುರೆ, ಬಿ.ಜಿ ಪಾಟೀಲ್, ಬಿಜೆಪಿ ಅಧ್ಯಕ್ಷರಾದ ಅಶೋಕ್ ಬಗಲಿ, ಚಂದು ಪಾಟೀಲ್, ಮಾಜಿ ಶಾಸಕರಾದ ರಾಜಕುಮಾರ ಪಾಟೀಲ್ ತೆಲ್ಕೂರ್, ದತ್ತಾತ್ರೇಯ ಪಾಟೀಲ್ ರೇವೂರ್, ಬಸವರಾಜ್ ದಡೆಸೂರು ಕಾರ್ಯಕರ್ತರು ಉಪಸ್ಥಿತರಿದ್ದರು.

ಚಿತ್ತಾಪುರದಲ್ಲಿ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರನ್ನು ಪ್ರವಾಸ ಮಂದಿರದಲ್ಲಿ ದಿಗ್ಬಂಧನ ಹಾಕಿ, ಕಾರಿಗೆ ಬಣ್ಣ ಎರಚಿದ ಘಟನೆ ಖಂಡಿಸಿ ಬಿಜೆಪಿ ನಾಯಕರು ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಕಲಬುರಗಿ ಚಲೋ ಪ್ರತಿಭಟನೆ ನಡೆಸಿದರು.

> ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಬಂದಾಗಿಂದ ಕಲಬುರಗಿಯಲ್ಲಿ ಪಾಳೇಗಾರಿಕೆ ನಡೆಯುತ್ತಿದೆ. ಅನೇಕ ಕೊಲೆಗಳು, ಆತ್ಮಹತ್ಯೆ ನಡೆದಿವೆ. ಪೊಲೀಸರನ್ನು ಬಳಸಿ, ಕಾರ್ಯಕರ್ತರನ್ನು ಹತ್ತಿಕ್ಕುವ ಕೆಲಸ ನಡೆದಿದೆ. ಪಾಳೇಗಾರಿಕೆ, ಗುಂಡಾಗಿರಿ ರಾಜ್ಯದಲ್ಲಿ ನಡೆಯಲ್ಲ. ನಿಮ್ಮ ದಬ್ಬಾಳಿಕೆ, ದರ್ಪ, ಅಹಂಕಾರ ಹಾಗೂ ಅಧಿಕಾರ ಯಾವುದು ಶಾಶ್ವತವಲ್ಲ. ಹದ್ದುಬಸ್ತಿನಲ್ಲಿದ್ದು ಮಾತನಾಡಿ.
>
> -**ಬಿ.ವೈ ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

> ಪೊಲೀಸ್ ಅಧಿಕಾರಿಗಳು ಪ್ರಿಯಾಂಕ್ ಖರ್ಗೆ ಅವರ ಗುಲಾಮರಂತೆ ವರ್ತಿಸುತ್ತಿದ್ದಾರೆ. ರಾಜ್ಯದ ಎಲ್ಲಾ ಪೊಲೀಸ್ ಸ್ಟೇಷನ್ ಕಾಂಗ್ರೆಸ್ ಸ್ಟೇಷನ್ ಮಾಡಿದ್ದಾರೆ. ನ್ಯಾಯ ಕೊಡಲು ಆಗದೇ, ಇದ್ದರೆ, ಸ್ಟೇಷನ್ ಗಳು ಏಕೆ ಬೇಕು. ಮುಚ್ಚಿ ಹಾಕಿ, ದಬ್ಬಾಳಿಕೆ, ದರ್ಪ ಜಾಸ್ತಿ ದಿನ ನಡೆಯಲ್ಲ. ಸಂವಿಧಾನಾತ್ಮಕ, ಕಾನೂನಾತ್ಮಕ ಆಡಳಿತ ನಡೆಸಿ.
>
> -**ಆರ್. ಅಶೋಕ್**, ಪ್ರತಿ ಪಕ್ಷ ನಾಯಕ

ನಿಜಾಮಗಿರಿ ಪ್ರದರ್ಶನ ಬೇಡ

ಪ್ರಿಯಾಂಕ್ ಖರ್ಗೆ ರವರೇ 1948ರಲ್ಲೇ ನಿಜಾಮನ ಶಾಸನ ಹೋಗಿದೆ. ನೀವು ನಿಜಾಮರ ಉತ್ತರಾಧಿಕಾರಿಗಳಲ್ಲ. ಪ್ರಜಾಪ್ರಭುತ್ವದಲ್ಲಿ ನಿಜಾಮಗಿರಿಯನ್ನು ತೋರಿಸುವ ಪ್ರಯತ್ನ ಮಾಡಬೇಡಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಗೂಂಡಾಗಿರಿ ನಡೆಯುವುದಕ್ಕೆ ಸಾಧ್ಯವಿಲ್ಲ. ಪ್ರಜಾಪ್ರಭುತ್ವ ಮತ್ತು ಗೂಂಡಾ ಗಿರಿ ಎರಡು ಒಟ್ಟಿಗೆ ಹೋಗಲು ಸಾಧ್ಯವಿಲ್ಲ. ಒಬ್ಬ ವಿರೋಧ ಪಕ್ಷದ ನಾಯಕರು ರಾಜ್ಯದ ಛಾಯಾ ಮುಖ್ಯಮಂತ್ರಿಗಳು ಎಂದು ಕರೆಯುತ್ತಾರೆ. ಅವರ ಮೇಲೆ ನಿಮ್ಮ ದೌರ್ಜನ್ಯ ಮಾಡಿರುವುದು ಪ್ರಜಾಪ್ರಭುತ್ವದ ದೌರ್ಜನ್ಯಕ್ಕೆ ಸಮ ಎಂದು ವಿಧಾನ ಪರಿಷತ್ತಿನ ಸದಸ್ಯ ಸಿ.ಟಿ. ರವಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರಿಯಾಂಕ್ ಕೈವಾಡ

ತಿರಂಗಾ ಯಾತ್ರೆಯಲ್ಲಿ ಭಾಗಿಯಾಗಲು ಚಿತ್ತಾಪುರಕ್ಕೆ ಹೋದಾಗ, 400 ಜನರು ನಮ್ಮ ವರು ಹೊರಗಡೆ ಇದ್ದರು. ಆರಂಭ ದಲ್ಲಿ ನಮ್ಮ ವಿರುದ್ಧ 20 ಜನ ಇದ್ದರು. 25 ಆಯಿತು. 40 ಆಯಿತು. 300-400 ಪೊಲೀಸರು ಇದ್ದರೂ ಅವರನ್ನು ಹೊರಕ್ಕೆ ಕಳಿಸದೇ, ನೀನು ಅತ್ತ ಹಾಗೆ ಮಾಡು; ನಾನು ಸತ್ತ ಹಾಗೆ ಮಾಡುವೆ ಎಂಬ ನಾಟಕವಾಡಿದ್ದಾರೆ. ಪೊಲೀಸರು ನಮ್ಮ ಕಾರ್ಯಕರ್ತರ ಮೇಲೆ ಲಾಠಿಚಾರ್ಜ್ ಮಾಡಲು ಮುಂದಾಗಿದ್ದರು. ಇದರ ಹಿಂದಿನ ಪಿತೂರಿ ಪ್ರಿಯಾಂಕ್ ಖರ್ಗೆ ಅವರದೇ ಕೈವಾಡ ವಿದೆ. ಪೊಲೀಸರು ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕೆಂದು ಆಗ್ರಹಿಸಿದರು.

ಇ-ಸ್ವತ್ತು ಸಾಫ್ಟ್‌ವೇರ್ ಹ್ಯಾಕ್: ಮೂವರ ಸೆರೆ

ರಾಮನಗರ: ಸರಕಾರದ ಇ-ಸ್ವತ್ತು ಸಾಫ್ಟ್‌ವೇರ್ ಕನ್ನ ಹಾಕಿ ದಾಖಲೆಗಳ ತಿದ್ದುಪಡಿ ಮಾಡುತ್ತಿದ್ದ ಮೂವರು ಖದೀಮರನ್ನು ಬಂಧಿಸುವಲ್ಲಿ ರಾಮ ನಗರದ ಸೆನ್ ಪೊಲೀಸರು ಯಶಸ್ವಿಯಾಗಿದ್ದಾರೆ.

ಲೋಪದೋಷವುಳ್ಳ ಖಾತೆಗಳ ದಾಖಲಾತಿಗಳನ್ನು ಅಕ್ರಮ ತಿದ್ದುಪಡಿ ಮಾಡುತ್ತಿದ್ದ ಆರೋಪಿಗಳು ಸುಮಾರು 500ಕ್ಕೂ ಹೆಚ್ಚು ಇ ಸ್ವತ್ತು ದಾಖಲೆಗಳ ತಿದ್ದುಪಡಿ ಮಾಡಿದ್ದಾರೆ. ಶರತ್ (30), ನದೀಮ್ (38), ದೀಪಕ್ (27) ಬಂಧಿತ ಆರೋಪಿಗಳು. ಮಾಗಡಿ ತಾಲೂಕಿನ ನಾರಸಂದ್ರ ಗ್ರಾ.ಪಂ ಮಾಜಿ ನೌಕರ ಶರತ್ ಪ್ರಕರಣದ ಮಾಸ್ಟರ್ ಮೈಂಡ್.

ಇ-ಸ್ವತ್ತು ಸಾಫ್ಟ್ ವೇರ್ ಲೋಪದೋಷ ಅರಿತಿದ್ದ ಶರತ್ ನಕಲಿ ಪಾಸ್ವರ್ಡ್ ಹಾಕಿ ಸಾಫ್ಟ್‌ವೇರ್ ಹ್ಯಾಕ್ ಮಾಡಿ ದ್ದಾನೆ. ಕಂಪ್ಯೂಟರ್ ರಿಪೇರಿ ಮಾಡುತ್ತಿದ್ದ ನದೀಮ್ ಹಾಗೂ ದೀಪಕ್ ಜೊತೆ ಸೇರಿ ಖಾತೆಗಳ ಅಕ್ರಮ ತಿದ್ದುಪಡಿ ಮಾಡುತ್ತಿದ್ದ ಖದೀಮ ರಾಮ ನಗರ, ಬೆಂಗಳೂರು, ಹಾಸನ, ತುಮಕೂರು ಜಿಲ್ಲೆಗೆ ಸೇರಿದ ಹಲವು ಗ್ರಾ.ಪಂಗಳ ದಾಖಲೆ ಗಳನ್ನ ತಿದ್ದುಪಡಿ ಮಾಡಿದ್ದಾನೆ. ಈ ಬಗ್ಗೆ ಮಾಗಡಿ ತಾಲೂಕಿನ ನಾರಸಂದ್ರ ಗ್ರಾ.ಪಂ ಪಿಡಿಒ ರಾಮನಗರ ಸೈಬರ್ ಠಾಣೆಗೆ ದೂರು ನೀಡಿದ ಹಿನ್ನೆಲೆ ಪ್ರಕರಣದ ತನಿಖೆ ನಡೆಸಿದ ಸೆನ್ ಪೊಲೀಸರು ಆರೋಪಿಗಳನ್ನ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪ್ರಕರಣದಲ್ಲಿ ಮತ್ತಷ್ಟು ಆರೋಪಿ ಗಳು ಭಾಗಿಯಾಗಿದ್ದು, ತನಿಖೆ ಮುಂದುವರಿದಿದೆ ಎಂದು ರಾಮನಗರ ಎಸ್ಪಿ ಶ್ರೀನಿವಾಸ್ ಗೌಡ ಮಾಹಿತಿ ನೀಡಿದ್ದಾರೆ.

ರಾಯಚೂರು, ಬಾಗಲಕೋಟೆ ಸೇರಿದಂತೆ ವಿವಿಧ ಭಾಗದಲ್ಲಿ ಲೈಂಗಿಕ ದೌರ್ಜನ್ಯ

ಬಾಲಕಿ ಮೇಲೆ ಅತ್ಯಾಚಾರ: ಸ್ವಾಮೀಜಿ ಸೆರೆ

ಬೆಳಗಾವಿ: ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ನಡೆದಿದ್ದು ಮಾತ್ರವಲ್ಲದೆ ಕೊಲೆ ಬೆದರಿಕೆ ಆರೋಪದ ಮೇಲೆ ರಾಮ ಮಂದಿರ ಮಠದ ಲೋಕೇಶ್ವರ ಸ್ವಾಮೀಜಿಯನ್ನು (30) ಪೊಲೀಸರು ಬಂಧಿಸಿದ್ದಾರೆ.

ಬೆಳಗಾವಿ ಜಿಲ್ಲೆ ರಾಯಬಾಗ ತಾಲೂಕಿನ ಮೇಕಳಿ ಗ್ರಾಮದ ರಾಮ ಮಂದಿರ ಮಠದ ಸ್ವಾಮೀಜಿ ತಮ್ಮ ಮಠಕ್ಕೆ ಬರುತ್ತಿದ್ದ ಭಕ್ತನ ಮಗಳನ್ನು ಹೊರ ಜಿಲ್ಲೆಯ ಲಾಡ್ಜ್‌ಗಳಿಗೆ ಕರೆದೊಯ್ದು ಅತ್ಯಾಚಾರ ಎಸಗಿ ಕೊಲೆ ಬೆದರಿಕೆ ಹಾಕಿದ್ದ ಆರೋಪದ ಮೇಲೆ ಪ್ರಕರಣ ದಾಖಲಿಸಿಕೊಂಡು ಮೂಡಲಗಿ ಪೊಲೀಸರು ಆರೋಪಿ ಸ್ವಾಮೀಜಿಯನ್ನು ಬಂಧಿಸಿದ್ದಾರೆ.

ಪ್ರಕರಣ ಕುರಿತು ಮಾಹಿತಿ ನೀಡಿದ ಬೆಳಗಾವಿ ಪೊಲೀಸ್ ವರಿಷ್ಠಾಧಿಕಾರಿ ಡಾ. ಭೀಮಾಶಂಕರ ಗುಳೇದ್, ಮೇ 13 ರಂದು ತಮ್ಮ ಮಠಕ್ಕೆ ಬಂದ ಭಕ್ತೆ ಬಾಲಕಿಯನ್ನು ತನ್ನ ಕಾರಿನಲ್ಲಿ ಸ್ವಾಮೀಜಿ ಕರೆದೊಯ್ದಿದ್ದಾನೆ. ರಾಯಚೂರು, ಬಾಗಲಕೋಟೆ ಸೇರಿದಂತೆ ವಿವಿಧ ಭಾಗದಲ್ಲಿ ಬಾಲಕಿಯನ್ನು ಸುತ್ತಾಡಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ನಂತರ ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರ ನಗರ ಬಸ್ ನಿಲ್ದಾಣದಲ್ಲಿ ಬಿಟ್ಟು ಸ್ವಾಮಿ ಪರಾರಿಯಾಗಿದ್ದಾನೆ. ಈ ಕುರಿತು ಮೇ 21 ರಂದು ಬಾಲಕಿ ಕುಟುಂಬದವರು ಬಾಗಲಕೋಟೆ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ನಂತರ ಪ್ರಕರಣವನ್ನು ಬೆಳಗಾವಿ ಜಿಲ್ಲೆ ಮೂಡಲಗಿ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿ ಆರೋಪಿ ಬಂಧನಕ್ಕೆ ಬಲೆ ಬೀಸಲಾಗಿತ್ತು. ಶುಕ್ರವಾರ ಅತ್ಯಾಚಾರ ಆರೋಪಿ ಲೋಕೇಶ್ವರ ಸ್ವಾಮೀಜಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

> ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಪರಿಚಯ ಇರದವರ ಜತೆ ಬಿಡುವ ಮುಂಚೆ ಪೋಷಕರು ಹತ್ತು ಬಾರಿ ವಿಚಾರ ಮಾಡಬೇಕು. ಅಷ್ಟೇ ಅಲ್ಲದೆ ನಂಬಿಕೆಗಳ ಜೊತೆ ಭಾವನಾತ್ಮಕವಾಗಿ ಅಂಟಿಕೊಳ್ಳದೆ, ಪೂರ್ವಾಪರ ಅರಿತು ತಮ್ಮ ಧಾರ್ಮಿಕ ಭಾವನೆ ಮುಂದುವರಿಸಿಕೊಂಡು ಸಾಗುವುದು ಒಳಿತು.
>
> -**ಡಾ. ಭೀಮಾಶಂಕರ ಗುಳೇದ್**, ಎಸ್ಪಿ ಬೆಳಗಾವಿ

ಗೋವುಗಳ ಸಾಗಣೆ: ಮೂವರು ವಶಕ್ಕೆ

ಭಟ್ಕಳ: ಹೊನ್ನಾವರ ಕಡೆಯಿಂದ ಭಟ್ಕಳದ ಕಡೆಗೆ ಲಾರಿಯೊಂದರಲ್ಲಿ ಅಕ್ರಮವಾಗಿ ಹಾಗೂ ಹಿಂಸಾತ್ಮಕವಾಗಿ ಸಾಗಿಸುತ್ತಿದ್ದ ಗೋವುಗಳನ್ನು ಮೂವರು ವ್ಯಕ್ತಿಗಳನ್ನು ಶಿರಾಲಿ ಚೆಕ್ ಪೋಸ್ಟ್ ಬಳಿಯಲ್ಲಿ ಲಾರಿ ಸಮೇತ ಭಟ್ಕಳ ಗ್ರಾಮೀಣ ಠಾಣೆ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಆರೋಪಿಗಳನ್ನು ಗದಗ ನಿವಾಸಿಗಳಾದ ಚೇತನ ಕಡ್ಲಿ (26), ಸಂತೋಷ ಬೋರದ (25), ದುರ್ಗಪ್ಪ ಛಲವಾದಿ(50) ಎಂದು ಗುರುತಿಸಲಾಗಿದೆ.

ವಶಕ್ಕೆ ಪಡೆದಿ ರುವ ಲಾರಿ ಹಾಗೂ ಜಾನುವಾರುಗಳ ಅಂದಾಜು ಮೌಲ್ಯ ಸುಮಾರು 5.70 ಲಕ್ಷ ಎಂದು ಅಂದಾಜಿಸಲಾಗಿದೆ.

ಮುಂಗಾರು ಆರ್ಭಟ

← ಮೊದಲಪುಟದಿಂದ

1975ರಿಂದ ಸಂಗ್ರಹಿಸಿದ ಅಂಕಿಅಂಶಗಳ ಪ್ರಕಾರ, 1990ರಲ್ಲಿ ಮೇ 19ರಂದೇ ಕೇರಳಕ್ಕೆ ಮುಂಗಾರು ಪ್ರವೇಶಿಸಿತ್ತು. ಸಾಮಾನ್ಯ ವರ್ಷಕ್ಕೆ ಹೋಲಿಸಿದರೆ 13 ದಿನಗಳು ಮುಂಚಿತವಾಗಿ ನೈರುತ್ಯ ಮುಂಗಾರು ಅಪ್ಪಳಿಸಿತ್ತು.

'ಮಳೆಯ ಆರಂಭದ ದಿನಾಂಕಕ್ಕೂ, ದೇಶದಲ್ಲಿ ಒಟ್ಟಾರೆ ಮಳೆ ಸುರಿಯುವ ಪ್ರಮಾಣಕ್ಕೂ ನೇರವಾಗಿ ಯಾವುದೇ ಸಂಬಂಧವಿಲ್ಲ. ಕೇರಳಕ್ಕೆ ಮುಂಚಿತವಾಗಿ ಮುಂಗಾರು ಪ್ರವೇಶಿಸಿದ್ದರೂ, ಇಡೀ ದೇಶವನ್ನು ತಕ್ಷಣವೇ ಆವರಿಸಿಕೊಳ್ಳುತ್ತದೆ ಎಂದು ಈಗಲೇ ಅಂದಾಜಿಸಲು ಸಾಧ್ಯವಿಲ್ಲ. ಜಾಗತಿಕ ಹಾಗೂ ಪ್ರಾದೇಶಿಕವಾಗಿ ಸಾಕಷ್ಟು ವ್ಯತ್ಯಾಸಗಳು ಉಂಟಾಗುತ್ತವೆ' ಎಂದು ಐಎಂಡಿ ಅಧಿಕಾರಿಗಳು ತಿಳಿಸಿದ್ದಾರೆ.

ಸಮುದ್ರದ ಮೇಲ್ಮೈನಲ್ಲಿ ಪೂರಕ ವಾತಾವರಣ: ದಕ್ಷಿಣ ಮತ್ತು ಮಧ್ಯ ಅರಬ್ಬಿ ಸಮುದ್ರ, ಮಾಲ್ಡೀವ್ಸ್ ಹಾಗೂ ಕೊಮೊರಿನ್ ಪ್ರದೇಶ, ಲಕ್ಷದ್ವೀಪದ ಕೆಲವು ಭಾಗಗಳು, ಕರ್ನಾಟಕ, ತಮಿಳುನಾಡು, ದಕ್ಷಿಣ ಮತ್ತು ಮಧ್ಯ ಬಂಗಾಳ ಕೊಲ್ಲಿಯ ಕರಾವಳಿ ಭಾಗಗಳು, ಉತ್ತರ ಬಂಗಾಳ ಕೊಲ್ಲಿ ಭಾಗದಲ್ಲಿ ಸದ್ಯದ ವಾತಾವರಣ ಮುಂಗಾರು ಮಳೆ ಪ್ರವೇಶಕ್ಕೆ ಅನುಕೂಲಕರವಾಗಿದೆ ಎಂದು ಐಎಂಡಿ ಹೇಳಿದೆ.

ದಕ್ಷಿಣ ಕೊಂಕಣ-ಗೋವಾ ಕರಾವಳಿಯಿಂದ ಪೂರ್ವ-ಮಧ್ಯ ಅರಬ್ಬಿ ಸಮುದ್ರದ ಮೇಲ್ಮೈವರೆಗೆ ಕಡಿಮೆ-ಒತ್ತಡದ ಪ್ರದೇಶ ನಿರ್ಮಾಣವಾಗಿದೆ. ಈ ವೈಪರೀತ್ಯವು ಮುಂದಿನ 3 ದಿನಗಳಲ್ಲಿ ಮತ್ತಷ್ಟು ತೀವ್ರಗೊಂಡು ಉತ್ತರದತ್ತ ಚಲಿಸುವ ಸಾಧ್ಯತೆ ಇದೆ. ಇದು ಮುಂಗಾರು ಮಳೆ ಆರಂಭದಲ್ಲೇ ಹೆಚ್ಚಿನ ಪ್ರಮಾಣದಲ್ಲಿ ಸುರಿಯಲು ಪ್ರಭಾವ ಬೀರಬಹುದು. ಈ ವೇಳೆ ಗಾಳಿಯಲ್ಲಿ ಬದಲಾವಣೆ ಆಗಲಿದೆ. ಮುಂಗಾರು ಆರಂಭವಾದ ನಂತರ ಪೂರಕೆ ವಾತಾವರಣ ಇದ್ದರೆ ಕೆಲವೇ ದಿನಗಳಲ್ಲಿ ಇಡೀ ದೇಶಾದ್ಯಂತ ಪೂರ್ವ ಮುಂಗಾರು ಸಕ್ರಿಯವಾಗಲಿದೆ ಎಂದು ಹವಾಮಾನ ಇಲಾಖೆ ಅಂದಾಜಿಸಿದೆ.

ಎಲ್ಲೆಲ್ಲಿ ಯಾವ ದಿನ ಮಳೆಯಾಗಲಿದೆ?

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು (ಮೇ 24-26), ವಿದರ್ಭ ಮತ್ತು ಛತ್ತೀಸಗಢ (ಮೇ 24), ಬಿಹಾರ (ಮೇ 25), ಒಡಿಶಾ (ಮೇ 24 ಮತ್ತು ಮೇ 27-29), ಮತ್ತು ಉಪ-ಹಿಮಾಲಯನ್ ಪಶ್ಚಿಮ ಬಂಗಾಳ ಮತ್ತು ಸಿಕ್ಕಿಂ (ಮೇ 28-29) ನಲ್ಲಿ ಪ್ರತ್ಯೇಕವಾದ ಭಾರೀ ಮಳೆಯಾಗುವ ಸಾಧ್ಯತೆಯಿದೆ.

ಕೊಚ್ಚಿ ಹೋದ ಹೆದ್ದಾರಿ; ಕುಮಟಾ-ಶಿರಸಿ ಸಂಪರ್ಕ ಕಡಿತ: ಕಾರವಾರ ಸಮೀಪದ ದೇವಿಮನೆ ಘಟ್ಟದಲ್ಲಿ ರಾಷ್ಟ್ರೀಯ ಹೆದ್ದಾರಿಯೇ ಕೊಚ್ಚಿ ಹೋಗಿದ್ದು ಕುಮಟಾ-ಶಿರಸಿ ಸಂಪರ್ಕ ಕಡಿತಗೊಂಡಿದೆ. ಕಳೆದ ಒಂದು ವರ್ಷದಿಂದ ಹೆದ್ದಾರಿ ಕಾಮಗಾರಿ ನಡೆಯುತಿತ್ತು. ಶುಕ್ರವಾರ ಸುರಿದ ಭಾರೀ ಮಳೆಗೆ ರಸ್ತೆಯೇ ಕೊಚ್ಚಿ ಹೋಗಿದೆ. ಬೆಣ್ಣೆ ಹೊಳೆ ಹಳ್ಳದ ನೀರು ರಭಸವಾಗಿ ಹರಿದು ಹೆದ್ದಾರಿಯ ಬದಿಯಲ್ಲಿ ನಿರ್ಮಾಣ ಮಾಡಿದ್ದ ತಾತ್ಕಾಲಿಕ ರಸ್ತೆಯೂ ಸಂಪೂರ್ಣ ನಾಶವಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಕುಮಟಾ ಮೂಲಕ ದೇವಿಮನೆ ಘಟ್ಟ ಭಾಗದಲ್ಲಿ ವಾಹನ ಸಂಚಾರ ನಿರ್ಬಂಧಿಸಿ ಮಾಡಿ ಆದೇಶ ಹೊರಡಿಸಲಾಗಿದೆ.

3 ವರ್ಷದ ಮಗುವನ್ನು ಕೊಂದ ಕಿರಾತಕರು

ಬೆಳಗಾವಿ: ಪತ್ನಿಯ ಮೊದಲ ಗಂಡನ ಮೂರು ವರ್ಷದ ಮಗುವನ್ನು ಬರ್ಬರವಾಗಿ ಹತ್ಯೆ ಮಾಡಿದ ಮಲತಂದೆ ಹಾಗೂ ಕೊಲೆಗೆ ಪ್ರಚೋದನೆ ನೀಡಿದ್ದ ಮೂವರು ಆರೋಪಿಗಳನ್ನು ಬಂಧಿಸಿರುವ ಘಟನೆ ಮುರುಗೋಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ನಡೆದಿದೆ.

ಸವದತ್ತಿ ತಾಲೂಕಿನ ಹಾರುಗೊಪ್ಪ ಗ್ರಾಮದ ರಂಗೀಲಾ ಮಾಂಜಿ ಎಂಬ ಮಹಿಳೆ ಗ್ರಾಮದ ಮಹೇಶ ಮಾಂಜಿ ಎಂಬಾತನ ಜತೆ ಎರಡನೇ ಮದುವೆಯಾಗಿದ್ದಳು. ಮೊದಲ ಪತಿಯಿಂದ ಮೂರು ವರ್ಷದ ಮಗುವಿನ ಜತೆ ಮಹಿಳೆ ಮಹೇಶ್ ಜತೆ ವಾಸವಿದ್ದಳು. ಆದರೆ ಮಗುವನ್ನು ನೋಡಿದರೆ ನನಗೆ ಆಗಿಬರುವುದಿಲ್ಲ. ಎಲ್ಲಿಯಾದರೂ ಬಿಟ್ಟುಬಿಡು ಎಂದು ಆರೋಪಿ ಮಹೇಶ್ ಮಾಂಜಿ ಆಗಾಗ್ಗೆ ಪೀಡಿಸುತ್ತಿದ್ದ. ಮಗುವಿನ ವಿಚಾರವಾಗಿ ಆರೋಪಿ ಮಹೇಶ್ ಹಾಗೂ ರಂಗೀಲಾ ನಡುವೆ ಜಗಳ ನಡೆಯುತ್ತಿದ್ದ ಸಂದರ್ಭದಲ್ಲಿ ಮೂರು ವರ್ಷದ ಮಗುವನ್ನು ಮಹೇಶ್ ಹೊಡೆದಿದ್ದಾನೆ. ಈ ಸಂದರ್ಭದಲ್ಲಿ ಇನ್ನುಳಿದ ಮೂವರು ಆರೋಪಿಗಳು ಕೊಲೆಗೆ ಪ್ರಚೋದನೆ ನೀಡಿದ್ದು ಈ ಸಂದರ್ಭದಲ್ಲಿ ಮಗುವನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಈ ಕುರಿತು ಮುರಗೋಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಇಟಿ ಫಲಿತಾಂಶ

← ಮೊದಲಪುಟದಿಂದ

ಕೆಎಸ್ಇಎಬಿ ನಡೆಸಿದ ದ್ವಿತೀಯ ಪಿಯುಸಿಯ ಪ್ರಥಮ ಮತ್ತು ದ್ವಿತೀಯ ಪರೀಕ್ಷೆಗಳಲ್ಲಿ ಪಡೆದ ಅತ್ಯಧಿಕ ಅಂಕಗಳನ್ನು ಪರಿಗಣಿಸಿ ಸಿಇಟಿ ರ‍್ಯಾಂಕ್ ಪಟ್ಟಿ ಸಿದ್ಧಪಡಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಜನಿವಾರ ತೆಗೆಸಿದ್ದ ಅಭ್ಯರ್ಥಿಗೆ ಸರಾಸರಿ ಅಂಕ: ಜನಿವಾರ ಧರಿಸಿ ಪರೀಕ್ಷೆ ಬರೆಯಲು ಬಂದಿದ್ದ ಬೀದರ್‌ನ ವಿದ್ಯಾರ್ಥಿಗೆ ನ್ಯಾಯ ನೀಡಿದ್ದೇವೆ. ಉದ್ದೇಶಪೂರ್ವಕವಾಗಿ ಅಂದು ಈ ಘಟನೆ ನಡೆದಿರಲಿಲ್ಲ. ಸಿಬ್ಬಂದಿ ಎಡವಟ್ಟಿನಿಂದ ಈ ಘಟನೆಯಾಗಿದೆ. ವಿದ್ಯಾರ್ಥಿ ಸುಚಿವ್ರತ ಕುಲಕರ್ಣಿ ಪೋಷಕರೊಂದಿಗೆ ಮಾತುಕತೆ ನಡೆಸಿ ಅವರ ಅಭಿಪ್ರಾಯವನ್ನು ಲಿಖಿತವಾಗಿ ರೂಪ ದಲ್ಲಿ ಪಡೆದುಕೊಂಡು ಆತ ಗಳಿಸಿದ್ದ ಅಂಕಗಳ ಸರಾಸರಿ ಆಧಾರದ ಮೇರೆಗೆ ನ್ಯಾಯ ಒದಗಿಸ ಲಾಗಿದೆ. ಈ ವಿದ್ಯಾರ್ಥಿಗೆ 2 ಲಕ್ಷದ 6 ಸಾವಿರ ರ‍್ಯಾಂಕ್ ಬಂದಿದೆ. ದ್ವಿತೀಯ ಪಿಯುಸಿಯಲ್ಲಿ ವಿದ್ಯಾರ್ಥಿಯು ಶೇ.56ರಷ್ಟು ಅಂಕ ಪಡೆದಿದ್ದ ಎಂದು ಸಚಿವರು ತಿಳಿಸಿದರು.

ಎಂಜಿನಿಯರಿಂಗ್ ವಿಭಾಗ	
ಪ್ರಥಮ ಸ್ಥಾನ	ಭವೇಶ್ ಜಯಂತಿ
ದ್ವಿತೀಯ ಸ್ಥಾನ	ಸಾತ್ವಿಕ್ ಬಿರಾದರ್
ತೃತೀಯ ಸ್ಥಾನ	ದಿನೇಶ್ ಗೋಮತಿ ಶಂಕರ್
ಅಗ್ರಿಕಲ್ಚರ್ ವಿಭಾಗ	
ಪ್ರಥಮ ಸ್ಥಾನ	ಅಕ್ಷಯ್.ಎಂ
ದ್ವಿತೀಯ ಸ್ಥಾನ	ಸಾಯಿ ಶರವಣ ಪಂಡಿತ್
ತೃತೀಯ ಸ್ಥಾನ	ಸುಚಿತ್.ಪಿ.ಪ್ರಸಾದ್
ನರ್ಸಿಂಗ್ ವಿಭಾಗ	
ಪ್ರಥಮ ಸ್ಥಾನ	ಹರೀಶ್ ರಾಜ್
ದ್ವಿತೀಯ ಸ್ಥಾನ	ಆತ್ರೇಯ
ತೃತೀಯ ಸ್ಥಾನ	ಶಾಪಲ್ ಶೆಟ್ಟಿ
ಪಶು ವೈದ್ಯಕೀಯ ವಿಭಾಗ	
ಪ್ರಥಮ ಸ್ಥಾನ	ಹರೀಶ್ ರಾಜ್
ದ್ವಿತೀಯ ಸ್ಥಾನ	ಆತ್ರೇಯ
ತೃತೀಯ ಸ್ಥಾನ	ಶಾಪಲ್ ಶೆಟ್ಟಿ
ವೆಟರ್ನರಿ ಪ್ರಾಕ್ಟಿಕಲ್	
ಪ್ರಥಮ ಸ್ಥಾನ	ರಕ್ಷಿತಾ.ವಿ.ಪಿ
ದ್ವಿತೀಯ ಸ್ಥಾನ	ನಂದನ್
ತೃತೀಯ ಸ್ಥಾನ	ಭುವನೇಶ್ವರಿ

ಯತ್ನಾಳ್ ಬಿಜೆಪಿಗೆ ಮರಳುವ ವಿಶ್ವಾಸವಿದೆ

ರಾಯಚೂರು: ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆದಷ್ಟು ಬೇಗ ಬಿಜೆಪಿಗೆ ಮರಳುವ ಸಂಪೂರ್ಣ ವಿಶ್ವಾಸವಿದೆ. ನಾವೆಲ್ಲ ಅವರೊಟ್ಟಿಗೆ ಇದ್ದೇವೆ ಎಂದು ಮಾಜಿ ಸಚಿವ ಕುಮಾರ ಬಂಗಾರಪ್ಪ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ನಿಲವು ಇವತ್ತಿಗೂ ಅದೆ ಆಯಗಿದೆ. ಪಕ್ಷ ಅವರನ್ನು ಯಾವುದೇ ಕಾರಣಕ್ಕೂ ಉಚ್ಚಾಟಿಸಿರಬಹುದು. ಆದರೆ, ಅವರು ಮರಳಿ ಬಿಜೆಪಿಗೆ ಬರಲಿದ್ದಾರೆ. ಅಲ್ಲದೆ, ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಆಗುವವರೆಗೂ ನಾವು ನಮ್ಮ ಹೋರಾಟ ನಿಲ್ಲಿಸುವುದಿಲ್ಲ ಎಂದರು.

ನ್ಯಾಶನಲ್ ಹೆರಾಲ್ಡ್ ಗೆ ಡಿ.ಕೆ.ಶಿವಕುಮಾರ್ ಅವರು ಟ್ರಸ್ಟ್ ಮೂಲಕ ದೇಣಿಗೆ ನೀಡಿದ್ದಾಗಿ ಹೇಳಿದ್ದಾರೆ. ತನಿಖೆ ವೇಳೆ ಸತ್ಯಾಸತ್ಯತೆ ಗೊತ್ತಾಗುತ್ತದೆ. ಆದರೆ, ನ್ಯಾಷನಲ್ ಹೆರಾಲ್ಡ್ ಪ್ರಕರಣವನ್ನು ಆದಷ್ಟು ಬೇಗ ಇತ್ಯರ್ಥಪಡಿಸಬೇಕು ಎನ್ನುವುದು ನಮ್ಮ ಒತ್ತಾಯ ಎಂದರು. ಮೈಸೂರು ಸ್ಯಾಂಡಲ್ ಸೋಪಿನ ಬ್ರಾಂಡ್ ಅಂಬಾಸಿಡರ್ ಆಗಿ ತಮನ್ನಾ ಭಾಟಿಯಾ ಬದಲಿಗೆ ಕನ್ನಡ ಮೂಲದ ನಟಿಯರಿಗೆ ಅವಕಾಶ ನೀಡಬೇಕಿತ್ತು. ತಮನ್ನಾರಿಂದ ಮೈಸೂರು ಸ್ಯಾಂಡಲ್ ಸೋಪಿಗೆ ದೇಶದ ಬೇರೆ ರಾಜ್ಯಗಳಲ್ಲಿ ಬೇಡಿಕೆ ಹೆಚ್ಚಾದರೆ ಸ್ವಾಗತಿಸುತ್ತೇವೆ ಎಂದರು.

ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.

ಸಂಖ್ಯೆ: ಕಾಅ/ಗ್ರಾಕುನೀಸ&ನೈವಿ/ದಾ/ಸ.ಇಂ-1/ಟೆಂಡರ್/2025-26/231
ದಿನಾಂಕ: 23.05.2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ-2ನೇ ಕರೆ

(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ದಾವಣಗೆರೆ ಜಿಲ್ಲೆಯ 3 ಗ್ರಾಮಗಳಲ್ಲಿ-2024-25 ಎಸ್‌ಬಿಎಂ (ಜಿ) ಅಡಿಯಲ್ಲಿ ರೂ. 48.00 ಲಕ್ಷಗಳಿಗೆ ಅನುಮೋದನೆಯಾಗಿರುವ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಉಪಕರಣಗಳ ಸರಬರಾಜಿಗಾಗಿ ಕರ್ನಾಟಕದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರಿನ ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ ಇವರು ಅರ್ಹ ನೋಂದಾಯಿತ ಸರಬರಾಜುದಾರರು/ತಯಾರಕರು ಹಾಗೂ ಇ-ಪೋರ್ಟಲ್ ಕೋಶದಲ್ಲಿ ನೋಂದಾಯಿತರಾಗಿರುವವರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರುಗಳನ್ನು ಆಹ್ವಾನಿಸಿರುವರು. ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವ ದಿಸೆಯಲ್ಲಿ ಸ್ಟ್ಯಾಂಡರ್ಡ್ ಬಿಡ್ ದಸ್ತಾವೇಜು ಕೆಜಿ ಅನ್ವಯ ಮಾತ್ರ ಐಟಂ ದರದ ಸರಕುಗಳ ಟೆಂಡರ್ ಅನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಹಾಗಾಗಿ ಟೆಂಡರ್‌ನ ಭೌತಿಕ ನಮೂನೆ ಇರುವುದಿಲ್ಲ. ಟೆಂಡರ್ ಸಲ್ಲಿಸುವ ಕಡೆಯ **ದಿನಾಂಕ: 31.05.2025** ರಂದು ಸಂಜೆ 5.00 ಗಂಟೆಗೆ. ಹೆಚ್ಚಿನ ವಿವರಗಳನ್ನು ಸದರಿ ಕಚೇರಿ ದೂರವಾಣಿ ಸಂಖ್ಯೆ: 08192-262126 ಮೂಲಕ ಅಥವಾ ವೆಬ್‌ಸೈಟ್:https://kppp.karnataka.gov.in ಮೂಲಕ ಪಡೆಯಬಹುದು.

ವಾಸಾಇ/ಡಿವಿಜಿ/92/ಕೆಎಸ್‌ಎಂಸಿಎ/2025-26

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ & ನೈ. ವಿಭಾಗ, ದಾವಣಗೆರೆ.

ನಮ್ಮ ನಡೆ ಅನುಭವ ಮಂಟಪದ ಕಡೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

ಅನುಭವ ಮಂಟಪ ಮುಂದಿನ ವರ್ಷಕ್ಕೆ ಪೂರ್ಣ: ಸಿಎಂ

ಮೈಸೂರು: ನಮ್ಮ ಸರಕಾರ ಆರಂಭಿಸಿರುವ 600 ಕೋಟಿಗೂ ಅಧಿಕ ವೆಚ್ಚದ ಅನುಭವ ಮಂಟಪವನ್ನು ಮುಂದಿನ ವರ್ಷ ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬಸವ ಬಳಗಗಳ ಒಕ್ಕೂಟ, ವೀರಶೈವ-ಲಿಂಗಾಯತ ಮಹಾಸಭಾ ವತಿಯಿಂದ ಶನಿವಾರ ನಗರದ ಕಲಾಮಂದಿರದಲ್ಲಿ ಆಯೋಜಿಸಿದ್ದ ಬಸವ ಜಯಂತಿ-2025, ನಮ್ಮ ನಡೆ ಅನುಭವ ಮಂಟಪದ ಕಡೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾನಾಡಿ, ಸಕಲ ವೃತ್ತಿಗಳೂ ಪವಿತ್ರ ಎನ್ನುವ ಮಹಾನ್ ಮಾನವೀಯ ಸಂದೇಶವನ್ನು ಜಗತ್ತಿಗೆ ನೀಡಿದ ಬಸವಣ್ಣ ಕೇವಲ ಕ್ರಾಂತಿಪುರುಷ ಮಾತ್ರವಲ್ಲ, ವಿಶ್ವ ವಿಖ್ಯಾತ ಆರ್ಥಿಕ ತಜ್ಞರೂ ಆಗಿದ್ದರು. ಕಾಯಕ ಮತ್ತು ದಾಸೋಹದ ಶ್ರಮ ಸಂಸ್ಕೃತಿಯ ಮಹತ್ವವನ್ನು ಬಸವಣ್ಣ ಇಡೀ ವಿಶ್ವಕ್ಕೆ ನೀಡಿದರು ಎಂದರು.

ಬಸವಾದಿ ಶರಣರಿಂದ ಆದ ಜಾತಿ ವ್ಯವಸ್ಥೆ ವಿರುದ್ಧ ಸಾಮಾಜಿಕ ಕ್ರಾಂತಿ ಪ್ರಪಂಚದ ಬೇರೆ ಎಲ್ಲೂ ನಡೆದಿಲ್ಲ. ಸಮ ಸಮಾಜ ಮತ್ತು ಜಾತ್ಯತೀತ ಸಮಾಜಕ್ಕಾಗಿ ಹೋರಾಡಿದ ಬಸವಾದಿ ಶರಣರು ನುಡಿದಂತೆ ನಡೆದರು ಎಂದು ಬಣ್ಣಿಸಿದರು. ಸುತ್ತೂರು ಕ್ಷೇತ್ರದ ಪೀಠಾಧಿಪತಿ ಶ್ರೀಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಪೌರಾಡಳಿತ ಸಚಿವ ರಹೀಂ ಖಾನ್, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಕೆ. ಹರೀಶ್ ಗೌಡ, ವಿಧಾನಸಭಾ ಪರಿಷತ್ ಸದಸ್ಯರಾದ ಯತ್ರೀಂದ್ರ ಸಿದ್ದರಾಮಯ್ಯ, ಡಿ.ತಿಮ್ಮಯ್ಯ ಮತ್ತಿತರರು ಉಪಸ್ಥಿತರಿದ್ದರು.

ನಗರದ ಕಲಾಮಂದಿರದಲ್ಲಿ ಆಯೋಜಿಸಿದ್ದ ಬಸವ ಜಯಂತಿ-2025, ನಮ್ಮ ನಡೆ ಅನುಭವ ಮಂಟಪದ ಕಡೆ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ನನ್ನ ಶಿಕ್ಷಣಕ್ಕೆ ರಾಜಪ್ಪ ಮೇಷ್ಟ್ರು ಕಾರಣ

ಶೂದ್ರ ಸಮುದಾಯ ಶಿಕ್ಷಣದಿಂದ ವಂಚಿತರಾದರು. ನನ್ನ ಅಪ್ಪ, ಅವ್ವ ಇಬ್ಬರೂ ಶಿಕ್ಷಣದಿಂದ ವಂಚಿತರಾಗಿದ್ದರು. ರಾಜಪ್ಪ ಮೇಷ್ಟ್ರು ತೋರಿದ ಕಾಳಜಿ ಕಾರಣದಿಂದ ನಾನು ನೇರವಾಗಿ ಐದನೇ ತರಗತಿಗೆ ದಾಖಲಾಗಿ ಶಿಕ್ಷಣ ಪಡೆದು ಎರಡು ಬಾರಿ ಮುಖ್ಯಮಂತ್ರಿಯಾದೆ. ಅಂಬೇಡ್ಕರ್ ಅವರ ಕಾರಣದಿಂದ ನನಗೆ ಶಿಕ್ಷಣ ಸಿಕ್ಕರೆ, ಸಂವಿಧಾನದ ಕಾರಣದಿಂದ ನಾನು ಮುಖ್ಯಮಂತ್ರಿಯಾದೆ ಎಂದು ಸಿಎಂ ತಮ್ಮ ಬದುಕಿನ ಸಾಧನೆ ಪಥ ವಿವರಿಸಿದರು.

> ಜಾತಿ, ವರ್ಗ ರಹಿತ ಮಾನವೀಯ ಸಮಾಜ ಅವರ ತುಡಿತವಾಗಿತ್ತು. ಬಸವಾದಿ ಶರಣರ ಅನುಭಾವವೇ ವಚನಗಳಾಗಿವೆ. ವಚನ ಎಂದರೆ ಮಾತು. ಕನ್ನಡ ಸಾಹಿತ್ಯದಲ್ಲಿ ವಚನ ಮತ್ತು ದಾಸ ಸಾಹಿತ್ಯ ದೊಡ್ಡ ಮೈಲಿಗಲ್ಲು. ಅಕ್ಷರ ಸಂಸ್ಕೃತಿಯಿಂದ ವಂಚಿತರಾದವರಿಗೆ ವಚನ ಸಾಹಿತ್ಯ ಆಡು ಮಾತಿನ ಮೂಲಕ ತಲುಪಿತು. ಬಸವ ಬಳಗಗಳ ಒಕ್ಕೂಟದ ಬೇಡಿಕೆಯಂತೆ ಬಸವ ಭವನ ನಿರ್ಮಿಸಲು ಹೆಚ್ಚಿನ ಅನುದಾನವನ್ನು ಒದಗಿಸಲಾಗುವುದು.
>
> -**ಸಿದ್ದರಾಮಯ್ಯ**, ಮುಖ್ಯಮಂತ್ರಿ

ಸಮಾಚಾರ ಸಣ್ಣದಲ್ಲ

ಹೃದಯಾಘಾತ: ಯುವಕ ಸಾವು

ವಿಜಯಪುರ: ಸಂಬಂಧಿಕರ ಮದುವೆಯಲ್ಲಿ ಡ್ಯಾನ್ಸ್ ಮಾಡುವ ಸಂದರ್ಭ ಹೃದಯಾಘಾತಕ್ಕೊಳಗಾಗಿ ಯುವಕ ಸಾವನ್ನಪ್ಪಿದ ಘಟನೆ ವಿಜಯಪುರ ನಗರದ ಚಪ್ಪರಬಂದ ಕಾಲೋನಿಯಲ್ಲಿ ನಡೆದಿದೆ.

ಮಹಮ್ಮದ್ ಪೈಗಂಬರ್ ಗಂಗನಹಳ್ಳಿ (28) ಹೃದಯಾಘಾತದಿಂದ ಮೃತಪಟ್ಟ ಯುವಕ. ಮಹಮ್ಮದ್ ಪೈಗಂಬರ್ಆಲ್ಯೂಮೀನಿಯಂ ಕಿಟಕಿ, ಬಾಗಿಲು ಕೆಲಸ ಮಾಡುತ್ತಿದ್ದ. ಸಂಬಂಧಿಕರ ಮದುವೆಯಲ್ಲಿ ಡ್ಯಾನ್ಸ್ ಮಾಡುವಾಗ ಏಕಾಏಕಿ ಹೃದಯಾಘಾತಕ್ಕೊಳಗಾಗಿ ಕುಸಿದು ಬಿದ್ದಿದ್ದಾನೆ. ಕೂಡಲೇ ಯುವಕನನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅಷ್ಟುಹೊತ್ತಿಗಾಗಲೇ ಆತನ ಪ್ರಾಣಪಕ್ಷಿ ಹಾರಿಹೋಗಿತ್ತು. ಗೋಳಗುಮ್ಮಟ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮಂಗನ ಕಾಯಿಲೆಗೆ ಮತ್ತೊಂದು ಬಲಿ



ಹೊನ್ನಾವರ: ಕೆಎಫ್‌ಡಿಗೆ ಜಿಲ್ಲೆಯಲ್ಲಿ 2ನೇ ಬಲಿಯಾದ ಘಟನೆ ಶನಿವಾರ ನಡೆದಿದೆ. ಇಲ್ಲಿನ ಹಳದಿಪುರ ಮೀನು ಮಾರುಕಟ್ಟೆ ಬಳಿಯ ನಿವಾಸಿ, ನಾಣಿ ಹಮ್ಮಣ ಗೌಡ (74) ಮೃತಪಟ್ಟವರು. ಅವರು ಮಣಿಪಾಲದ ಆಸ್ಪತ್ರೆಯಲ್ಲಿ ಕೆಎಫ್‌ಡಿ ಚಿಕಿತ್ಸೆ ಪಡೆಯುತ್ತಿದ್ದು, ಚಿಕಿತ್ಸೆ ಫಲಕಾರಿಯಾಗದೆ ಶನಿವಾರ ನಸುಕಿನ ವೇಳೆ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಮೇ 9ರಂದು ನಾಣಿ ಹಮ್ಮಣ ಗೌಡ ಅವರಲ್ಲಿ ಕೆಎಫ್‌ಡಿ ಪ್ರಕರಣ ಕಂಡು ಬಂದಿದ್ದು, ಆ ದಿನವೇ ತಾಲೂಕು ಆಸ್ಪತ್ರೆಯಿಂದ ತಕ್ಷಣ ಆರೋಗ್ಯ ಇಲಾಖೆ ಅಧಿಕಾರಿಗಳು ಮಣಿಪಾಲಕ್ಕೆ ಕಳುಹಿಸಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಇವರಿಗೆ ಕೆಎಫ್‌ಡಿ. ಯೊಂದಿಗೆ ಕಿಡ್ನಿ ಹಾಗೂ ಲಿವರ್ ಸಂಬಂಧಿತ ಕಾಯಿಲೆಗಳಿದ್ದು, ಚಿಕಿತ್ಸೆ ಸ್ಪಂದಿಸಿದರೂ ಸಹ ಇತರ ವಯೋಸಹಜ ಕಾಯಿಲೆಗೆ ತುತ್ತಾಗಿ ದ್ದಾರೆ. ಇವರು ಜನಕಡ್ಕಲ ಕಡೆ ಒಣ ಎಲೆಗಳನ್ನು ಸಂಗ್ರಹಿಸುವ ಕೆಲಸಕ್ಕೆ ಹೋಗಿದ್ದು, ಅಲ್ಲಿಂದಲೇ ಅನಾರೋಗ್ಯಕ್ಕೆ ತುತ್ತಾಗಿದ್ದರು ಎನ್ನಲಾಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಶಿಡ್ಲಘಟ್ಟ

ಸಮಸ್ಯೆಯೇನು..?

- ಶಿಡ್ಲಘಟ್ಟ ತಾಲೂಕು ಜೆ.ವೆಂಕಟಾಪುರ ಗ್ರಾಮಪಂಚಾಯ್ತಿ ಬೈರಸಂದ್ರ ಗ್ರಾಮದ ಜೆಜೆಎಂ ಕಾಮಗಾರಿಯಿಂದ ರಸ್ತೆ,ಪೈಪ್‌ಲೈನ್ ಹಾಳಾಗಿರುವುದು.
- **ಪರಿಹಾರ:** ಶಿಡ್ಲಘಟ್ಟ ತಾಲೂಕು ಜೆ.ವೆಂಕಟಾಪುರ ಗ್ರಾಮಪಂಚಾಯ್ತಿ ಬೈರಸಂದ್ರ ಗ್ರಾಮದ ಜೆಜೆಎಂ ಕಾಮಗಾರಿಯನ್ನು ಅಧಿಕಾರಿಗಳು ಪರಿಶೀಲನೆ ನಡೆಸಿದ್ದು, ಗ್ರಾಮದಲ್ಲಿ ಓಎಚ್‌ಟಿ ನಿರ್ಮಿಸಲು ಜಾಗವನ್ನು ತ್ವರಿತವಾಗಿ ಗುರುತಿಸಿದ್ದಲ್ಲಿ ಕಾಮಗಾರಿ ಪೂರ್ಣಗೊಳಿಸಿ,ಅಗೆದಿರುವ ಕಾಂಕ್ರೀಟ್ ರಸ್ತೆ ಭಾಗವನ್ನು ಶೀಘ್ರ ಕಾಂಕ್ರೀಟ್ ಹಾಕಿ ಸರಿಪಡಿಸಲಾಗುವುದು.

ಟ್ವೀಟೂ-ಖಾರಾ

ಕರ್ನಾಟಕ, ಬಿಜೆಪಿ

ರಾಮನಗರ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಎಂದು ಬದಲಾಯಿಸಿರುವುದು siddaramaiah ಸರಕಾರದ ದುರಾಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಕೇವಲ ರಿಯಲ್ ಎಸ್ಟೇಟ್ ಉದ್ದೇಶದಿಂದ ಉಪ ಮುಖ್ಯಮಂತ್ರಿ DKShivakumar ಅವರು ಅತೀವ ಆಸಕ್ತಿ ತೋರಿ ರಾಮನಗರ ಜಿಲ್ಲೆ ಎಂಬ ಗುರುತನ್ನು ಅಳಿಸಿ ಹಾಕಿದ್ದಾರೆ. ರಾಜಕೀಯ ಮತ್ತು ರಿಯಲ್ ಎಸ್ಟೇಟ್ ದಂಧೆ ನಡೆಸುವವರಿಗಷ್ಟೇ ಸರಕಾರದ ಈ ನಿರ್ಧಾರ ಉಪಯೋಗವಾಗಲಿದೆ. ಜನಸಾಮಾನ್ಯರಿಗೆ ಯಾವುದೇ ಲಾಭವಿಲ್ಲ. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಿಸಲು ನಿರಂತರವಾಗಿ ವಿರೋಧಿಸುತ್ತಲೇ ಬಂದ INCIndia ಈಗ ರಾಮನ ಹೆಸರಿನಲ್ಲಿರುವ ಊರುಗಳ ಇತಿಹಾಸವನ್ನು ಅಳಿಸಲು ಯತ್ನಿಸುತ್ತಿದೆ

ಶ್ರೀಕಾಂತ್ ಸ್ವಾಮಿ

ಅಣ್ಣಾ ಸುಮ್ಮನೆ ಯಾಕೆ ಬೊಬ್ಬೆ ಹೊಡಿತ್ತೀರಿ, ರಾಮನಗರ ಹೆಸರು ಬದಲಾಯಿಸಿಲ್ಲಾ, ರಾಮನಗರ ಜಗತ್ ಪ್ರಸಿದ್ಧ ಬೆಂಗಳೂರು ನಗರದಲ್ಲಿ ಸೇರಿಸಿದ್ದು ಜನಸಾಮಾನ್ಯರಿಗೆ ಲಾಭ ಆಗಿದೆ, ನಗರ ಅಭಿವೃದ್ಧಿ ಬಜೆಟ್ ರಾಮನಗರ ಸುತ್ತ ಗ್ರಾಮಗಳಿಗೂ ವಿಸ್ತಾರ ಆಗುತ್ತದೆ, ಜಮೀನಿಗೆ ಕಿಮ್ಮತ್ತು ಹೆಚ್ಚಾಗುತ್ತದೆ. ಮೆಟ್ರೋ ಅಲ್ಲಿಯವರೆಗೆ ವಿಸ್ತಾರ ಆಗುತ್ತದೆ.

ಇಂದಿನಿಂದ ಕರೋನಾ ಪರೀಕ್ಷೆ ಆರಂಭ | ಟೆಸ್ಟ್ ಲ್ಯಾಬ್‌ಗಳು ಪುನಾರಂಭಿಸಲು ನಿರ್ಧಾರ

ರಾಜ್ಯದಲ್ಲಿ ಮತ್ತೆ ಕರೋನಾ ಕಾರ್ಮೋಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಕರೋನಾ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಕರೋನಾ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದು, ಇಂದಿನಿಂದ (ಭಾನುವಾರ) ಕರೋನಾ ಪರೀಕ್ಷೆಯನ್ನು ಆರಂಭಿಸಲು ಮುಂದಾಗಿದೆ.

ಕಳೆದ ಕೆಲ ದಿನಗಳಿಂದ ರಾಜ್ಯದಲ್ಲಿ ಕರೋನಾ ಸೋಂಕು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಸಭೆ ನಡೆಸಿದ್ದ ಕರೋನಾ ತಾಂತ್ರಿಕ ಸಮಿತಿ ಕರೋನಾ ಪರೀಕ್ಷೆಗಳನ್ನು ಪುನಾರಂಭಿಸಲು ಶಿಫಾರಸ್ಸು ಮಾಡಿದ್ದು, ಅದರಂತೆ ರಾಜ್ಯ ಆರೋಗ್ಯ ಇಲಾಖೆ ಪರೀಕ್ಷೆಗಳನ್ನು ಆರಂಭಿಸಲು ಮುಂದಾಗಿದ್ದು, ಪರೀಕ್ಷೆ ಲ್ಯಾಬ್‌ಗಳನ್ನು ಪುನಾರಂಭಿಸಲು ನಿರ್ಧರಿಸಿದೆ.

ರಾಜ್ಯದ ವಿವಿಧೆಡೆ ಎಂಟು ಆರ್‌ಟಿಪಿಸಿಆರ್ ಪರೀಕ್ಷೆ ಲ್ಯಾಬ್‌ಗಳನ್ನು ಆರಂಭಿಸುವ ನಿರ್ಧಾರ ಮಾಡಲಾಗಿದೆ. ರಾಜ್ಯದ ಆಯ್ದ ಸರಕಾರಿ ಆಸ್ಪತ್ರೆ, ಮೆಡಿಕಲ್ ಕಾಲೇಜು ಆಸ್ಪತ್ರೆ ಮತ್ತು ಜಿಲ್ಲಾಸ್ಪತ್ರೆಗಳಲ್ಲಿ ಕರೋನಾ ಪರೀಕ್ಷೆಗಳ ಆರಂಭಕ್ಕೆ ಸಿದ್ಧತೆ ನಡೆದಿದ್ದು, ಭಾನುವಾರದಿಂದ ಕರೋನಾ ಪರೀಕ್ಷೆಗಳು ಆರಂಭವಾಗಲಿದೆ. ರಾಜ್ಯದಲ್ಲಿ ಕರೋನಾ ಸೋಂಕು ಹೆಚ್ಚಳವಾಗುತ್ತಿರುವ ಹಿನ್ನಲೆಯಲ್ಲಿ ಆರಂಭಿಕವಾಗಿ ಉಸಿರಾಟದ ತೊಂದರೆ, ಇತರೆ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಕರೋನಾ ಪರೀಕ್ಷೆಯನ್ನು ಕಡ್ಡಾಯ ಮಾಡುವ ಬಗ್ಗೆ ಸರಕಾರ ಚಿಂತನೆ ನಡೆಸಿದೆ.

ದೇಶದಲ್ಲಿ ಕರೋನಾ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿದ್ದು ಮಹಾರಾಷ್ಟ್ರದಲ್ಲಿ ಮೂರು ಮಂದಿ ಕರೋನಾಗೆ ಬಲಿಯಾಗಿದ್ದಾರೆ ಎಂದು ಹೇಳಲಾಗಿದ್ದು ಮಹಾರಾಷ್ಟ್ರ, ದೆಹಲಿ, ಆಂಧ್ರ ಪ್ರದೇಶ, ಕೇರಳ ಸೇರಿದಂತೆ ಹಲವು ರಾಜ್ಯಗಳಲ್ಲಿ ಈಗಾಗಲೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದು, ಆಂಧ್ರದಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯ ಮಾಡಲಾಗಿದೆ. ದೆಹಲಿ, ಮಹಾರಾಷ್ಟ್ರದಲ್ಲೂ ಕರೋನಾ ಮಾರ್ಗ ಸೂಚಿಗಳನ್ನು ಪ್ರಕಟಿಸಲಾಗಿದ್ದು, ರಾಜ್ಯ ಸರಕಾರ ಸಹ ಕರೋನಾ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ರಾಜ್ಯದಲ್ಲಿ 2025ರಲ್ಲಿ ಕರೋನಾ ಸಂಬಂಧಿತ ಸಾವುಗಳು ವರದಿಯಾಗಿಲ್ಲ. ಆದರೂ ಸೋಂಕು ಹರಡುವುದನ್ನು ತಡೆಯಲು ಎಚ್ಚರಿಕೆ ಅವಶ್ಯ. ಹಾಗಾಗಿ ಗರ್ಭಿಣಿಯರು, ಮಕ್ಕಳು, ಇತರೆ ಕಾಯಿಲೆಗಳಿಂದ ಬಳಲುತ್ತಿರುವವರು, ಮತ್ತು ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು.



ಮುಂಜಾಗ್ರತಾ ಕ್ರಮ ಏನು?

- ಗರ್ಭಿಣಿಯರು, ಮಕ್ಕಳು, ವಯಸ್ಕರು ಮಾಸ್ಕ್ ಧರಿಸಿದರೆ ಒಳ್ಳೆದು.
- ಗುಂಪು ಪ್ರದೇಶಗಳಲ್ಲಿ ಮಾಸ್ಕ್ ಹಾಕಿಕೊಳ್ಳಲು ಸಲಹೆ.
- ಸ್ಯಾನಿಟೈಸರ್ ಬಳಕೆಗೆ ಸಲಹೆ.
- ಐಎಲ್‌ಐ, ಸ್ಯಾರಿ ಲಕ್ಷಣ ಇರುವವರು ಸೂಕ್ತ ಚಿಕಿತ್ಸೆ ತೆಗೆದುಕೊಳ್ಳಬೇಕು.

ಜನದಟ್ಟಣೆ ಇರುವ ಪ್ರದೇಶಗಳಲ್ಲಿ ಮುಖಕ್ಕೆ ಮಾಸ್ಕ್ ಧರಿಸಿ ಓಡಾಡಲು ಆರೋಗ್ಯ ಇಲಾಖೆ ಸಲಹಾರೂಪದ ಸೂಚನೆ ನೀಡಿದೆ. ಸಾರ್ವಜನಿಕರು ಕೈಗಳ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಹ್ಯಾಂಡ್ ಸ್ಯಾನಿಟೈಸರ್‌ಗಳನ್ನು ಬಳಸಲು ಸಲಹೆ ನೀಡಲಾಗಿದೆ. ತೀವ್ರ ಉಸಿರಾಟದ ಕಾಯಿಲೆಗಳ ಲಕ್ಷಣಗಳನ್ನು ಹೊಂದಿರುವವರು ಸಕಾಲಿಕವಾಗಿ ಚಿಕಿತ್ಸೆಯನ್ನು ಪಡೆಯಬೇಕು. ಸಂಭಾವ್ಯ ಅಪಾಯ ತಡೆಗಟ್ಟಲು ಕರೋನಾ ಪರೀಕ್ಷೆಯನ್ನು ತಕ್ಷಣವೇ ಮಾಡಿಕೊಳ್ಳಲು ಸಲಹೆ ನೀಡಲಾಗಿದೆ.

9 ತಿಂಗಳ ಮಗು ಸೇರಿದಂತೆ 3 ಮಕ್ಕಳಿಗೆ ಕರೋನಾ

ರಾಜ್ಯದಲ್ಲಿ ಕರೋನಾ ವೈರಸ್ ಮತ್ತೆ ತನ್ನ ಉಗ್ರ ರೂಪ ತೋರಿಸುತ್ತಿದೆ. ರಾಜಧಾನಿ ಬೆಂಗಳೂರಿನಲ್ಲಿ 9 ತಿಂಗಳ ಮಗು ಸೇರಿದಂತೆ ಮೂರು ಮಕ್ಕಳಿಗೆ ಕರೋನಾ ಸೋಂಕು ದೃಢಪಟ್ಟಿದೆ. ಈ ಮಕ್ಕಳೆಲ್ಲರೂ ಆರೋಗ್ಯವಾಗಿದ್ದು, ಯಾವುದೇ ಗಂಭೀರ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿಲ್ಲ. ರಾಜ್ಯದಲ್ಲಿ ಸಕ್ರಿಯ ಕರೋನಾ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ರಾಜ್ಯದಲ್ಲಿ ಒಟ್ಟು 35 ಕೊರೊನಾ ಪ್ರಕರಣಗಳು ದಾಖಲಾಗಿದ್ದು, ಇವುಗಳಲ್ಲಿ 33 ಪ್ರಕರಣಗಳು ಬೆಂಗಳೂರಿನಿಂದಲೇ ವರದಿಯಾಗಿವೆ. ಈ ಏರಿಕೆಯಿಂದ ಗರ್ಭಿಣಿಯರು, ಮಕ್ಕಳು ಮತ್ತು ಹಿರಿಯ ನಾಗರಿಕರಿಗೆ ಎಚ್ಚರಿಕೆಯಿಂದ ಇರಲು ಆರೋಗ್ಯ ಇಲಾಖೆ ಸೂಚಿಸಿದೆ. ಬೆಂಗಳೂರಿನ ಆಸ್ಪತ್ರೆಗಳು ಮತ್ತು ಕರೋನಾ ಕೇಂದ್ರಗಳು ತುರ್ತು ಸಂದರ್ಭಗಳಿಗೆ ಸಿದ್ಧವಾಗಿವೆ.

ಬೆಳಗಾವಿ: ಗರ್ಭಿಣಿಗೆ ಸೋಂಕು

ಬೆಳಗಾವಿ: ಜಿಲ್ಲೆಯಲ್ಲಿ ಒಬ್ಬ ಗರ್ಭಿಣಿಗೆ ಸೋಂಕು ತಗುಲಿದೆ. ಮಕ್ಕಳು, ಗರ್ಭಿಣಿಯರು ಜಾಗರೂಕತೆಯಿಂದ ಇರಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಈಶ್ವರ ಗಡಾದ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕೋವಿಡ್ ಸಮಸ್ಯೆಯನ್ನು ನಾವು ಎದುರಿಸಿದ್ದೇವೆ ಎಂದರು.

ಕರ್ನಾಟಕದಲ್ಲಿ ಕರೋನಾ ವೈರಸ್ ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಉಸಿರಾಟ ಸಮಸ್ಯೆ ಮತ್ತು ಹೃದಯ ಸಂಬಂಧಿ ಕಾಯಿಲೆ ಇರುವವರಿಗೆ ಕಡ್ಡಾಯವಾಗಿ ಕರೋನಾ ಪರೀಕ್ಷೆ ಮಾಡಬೇಕು. ಉಸಿರಾಟ ಹಾಗೂ ಹೃದಯಸಂಬಂಧಿ ಕಾಯಿಲೆಯಿಂದ ದಾಖಲಾಗಿರುವ ರೋಗಿಗಳಿಂದ ಆಸ್ಪತ್ರೆ ಸಿಬ್ಬಂದಿ ಸ್ಯಾಂಪಲ್ ಸಂಗ್ರಹ ಮಾಡಿ ಕಡ್ಡಾಯವಾಗಿ ಕರೋನಾ ಪರೀಕ್ಷೆ ಮಾಡಬೇಕು.

-ದಿನೇಶ್ ಗುಂಡೂರಾವ್, ಆರೋಗ್ಯ ಇಲಾಖೆ ಸಚಿವ

ಪ್ರಕೃತಿ ವಿಕೋಪ, ಕರೋನಾ ಆತಂಕ



ಬೆಳಗಾವಿ: ಕರೋನಾ ಮಹಾಮಾರಿ ಐದು ವರ್ಷಗಳ ವರೆಗೆ ಬೇರೆ, ಬೇರೆ ರೂಪದಲ್ಲಿ ಬರಲಿದೆ. ಉಸಿರಾಟದ ತೊಂದರೆಯಿಂದ ಸಾವು ಸಂಭವಿಸುವ ಸಾಧ್ಯತೆ ಇದ್ದು, ಜಲ ಹಾಗೂ ವಾಯುವಿನಿಂದ ಗಂಡಾಂತರ ಇದೆ ಎಂದು ಕೋಡಿ ಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾ ಸ್ವಾಮಿಗಳು ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ವಾಯು ರೂಪದಲ್ಲಿ ಮತ್ತೊಮ್ಮೆ ರೋಗ ಆವರಿಸಲಿದೆ. ಈ ರೋಗದ ಕುರಿತು ಜನ ಎಚ್ಚರಿಕೆಯಿಂದ ಇರುವುದು ಒಳಿತು ಎಂದರು.

ದೇವಿಮನೆ ಘಟ್ಟದಲ್ಲಿ ಕೊಚ್ಚಿಹೋದ ರಾಷ್ಟ್ರೀಯ ಹೆದ್ದಾರಿ | ಧರೆಗುರುಳಿದ ಮರಗಳು | ನಾನಾ ಮನೆಗಳಿಗೆ ಹಾನಿ

ರಾಜ್ಯದಲ್ಲಿ ಮುಂದುವರಿದ ಮಳೆಯ ಅಬ್ಬರ

ಮೂಡಿಗೆರೆ ತಾಲೂಕಿನ ತ್ರಿಪುರ ಗ್ರಾಮದ ಜಾರಗಲ್ ಸುಶೀಲಾ ಎಂಬುವರ ಮನೆಯ ಮೇಲೆ ಮರ ಬಿದ್ದು, ಕಾರು ಜಖಂಗೊಂಡಿರುವುದು.



ತೀರ್ಥಹಳ್ಳಿ ತಾಲೂಕಿನ ತುಡ್ಕಿ ಗ್ರಾಮದಲ್ಲಿ ಮನೆ ಮೇಲೆ ಮರ ಬಿದ್ದು ಹಾನಿಯಾಗಿರುವುದು.

ಬೆಂಗಳೂರು: ಕರ್ನಾಟಕದ ಹಲವು ಭಾಗಗಳಲ್ಲಿ ಉತ್ತಮ ಮಳೆಯಾಗಿದೆ. ಉತ್ತರ ಕನ್ನಡ , ಚಿಕ್ಕಮಗಳೂರು, ಕೋಲಾರ, ಕೊಡಗು, ಶಿವಮೊಗ್ಗ, ಧಾರವಾಡ ಜಿಲ್ಲೆಗಳಲ್ಲಿ ಮಳೆಯ ಅಬ್ಬರ ಮುಂದುವರಿದಿದೆ. ಮಳೆಗೆ ಕೆಲವೆಡೆ ಭೂಕುಸಿತ, ಮನೆಗಳಿಗೆ ಹಾನಿಯಾಗಿ ಆತಂಕ ಸೃಷ್ಟಿಸಿದೆ.

ಕೊಚ್ಚಿಹೋದ ರಾಷ್ಟ್ರೀಯ ಹೆದ್ದಾರಿ: ಕಾರವಾರ ದಲ್ಲಿ ಅಬ್ಬರದ ಮಳೆಗೆ ದೇವಿಮನೆ ಘಟ್ಟದಲ್ಲಿ ರಾಷ್ಟ್ರೀಯ ಹೆದ್ದಾರಿಯೇ ಕೊಚ್ಚಿ ಹೋಗಿದೆ. ಉತ್ತರ ಕನ್ನಡ ಜಿಲ್ಲೆಯ ಕುಮಟಾ - ಶಿರಸಿ ಸಂಪರ್ಕ ಕಡಿತಗೊಂಡಿದೆ. ಕಳೆದ ಒಂದು ವರ್ಷದಿಂದ 766ಇ ಹೆದ್ದಾರಿ ಕಾಮಗಾರಿ ನಡೆಯುತಿತ್ತು. ಶುಕ್ರವಾರ ಸುರಿದ ಭಾರೀ ಮಳೆಗೆ ರಸ್ತೆಯೇ ಕೊಚ್ಚಿಹೋಗಿದೆ. ಅಬ್ಬರದ ಮಳೆಯಿಂದ ಬೆಣ್ಣೆ ಹೊಳೆ ಹಳ್ಳದ ನೀರು ಹರಿದು ಬಂದು ಹೆದ್ದಾರಿಯ ಬದಿಯಲ್ಲಿ ನಿರ್ಮಾಣ ಮಾಡಿದ್ದ ತಾತ್ಕಾಲಿಕ ರಸ್ತೆಯೂ ಸಂಪೂರ್ಣ ನಾಶವಾಗಿದೆ.

ಚಿಕ್ಕಪಡಸಲಗಿ ಬ್ಯಾರೇಜ್‌ಗೆ ಜೀವಕಳೆ: ನಿರಂತರ ಮಳೆಯಿಂದ ಕೃಷ್ಣಾ ನದಿಯಲ್ಲಿ ನೀರು ಹೆಚ್ಚಾಗಿದ್ದು ಚಿಕ್ಕಪಡಸಲಗಿ ಬ್ಯಾರೇಜ್‌ಗೆ ಜೀವ ಕಳೆ ಬಂದಿದೆ. ಬಯಲು ಸೀಮೆ ನಾಡು ಬಾಗಲಕೋಟೆ ಜಿಲ್ಲೆಯಲ್ಲಿ ಈಗಾಗಲೇ ಉತ್ತಮ ಮಳೆ ಆಗುತ್ತಿದ್ದು ಕೆರೆ ಕಟ್ಟೆಗಳಿಗೆ ನೀರು ಹರಿದು ಬರುತ್ತಿದೆ. ನಿರಂತರ ಮಳೆಯಿಂದ ಭರ್ಜರಿ ನೀರು ಬಂದಿದ್ದು, ನದಿ ತೀರದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ತೀರ್ಥಹಳ್ಳಿಯಲ್ಲಿ ಮನೆಗಳಿಗೆ ಹಾನಿ: ತೀರ್ಥಹಳ್ಳಿ ತಾಲೂಕಿನ ಸುತ್ತಮುತ್ತ ಶನಿವಾರ ಜೋರಾಗಿ ಬೀಸುವ ಗಾಳಿಯ ಜತೆಗೆ ಧಾರಾಕಾರ ಮಳೆಯಾಗುತ್ತಿದೆ. ಆಗುಂಬೆ ಹೋಬಳಿಯಲ್ಲಿ ಮಳೆಯಿಂದಾಗಿ ವಿದ್ಯುತ್ ಪೂರೈಕೆಯಲ್ಲಿ ಭಾರಿ ವ್ಯತ್ಯಯವಾಗಿದೆ.

ತಲಕಾವೇರಿ ವ್ಯಾಪ್ತಿಯಲ್ಲಿ ಬಿರುಸಿನ ಮಳೆ: ಮಡಿಕೇರಿಯಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಮಳೆ ಗ್ರಾಮೀಣ ಜನರನ್ನು ಹೈರಾಣಾಗಿಸಿದೆ. ತಲಕಾವೇರಿ ವ್ಯಾಪ್ತಿಯಲ್ಲಿ ಬಿರುಸಿನ ಮಳೆಯಾಗಿದೆ. 24 ಗಂಟೆಗಳಲ್ಲಿ 125 ಸೆ.ಮೀ ದಾಖಲೆ ಮಳೆಯಾಗಿದೆ. ಬಿರುಸಿನ ಮಳೆಯಿಂದಾಗಿ ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ.

60ಕ್ಕೂ ಅಧಿಕ ವಿದ್ಯುತ್ ಕಂಬಗಳು ಧರೆಗೆ: ಮೂಡಿಗೆರೆ ತಾಲೂಕಿನಾದ್ಯಂತ ಅಪಾರ ಪ್ರಮಾಣದ ಹಾನಿ ಉಂಟಾಗಿದೆ. ಶುಕ್ರವಾರ ತಡರಾತ್ರಿಯಿಂದಲೂ ಆರ್ಭಟಿಸಿದ ಮಳೆಯು, ನದಿಗಳಲ್ಲಿ ನೀರಿನ ಮಟ್ಟ ಗಣನೀಯವಾಗಿ ಹೆಚ್ಚಳವಾಗುವಂತೆ ಮಾಡಿತ್ತು. ಜತೆಗೆ ತಾಲೂಕಿನಾದ್ಯಂತ ಅಪಾರ ಪ್ರಮಾಣದ ಹಾನಿಯುಂಟಾಯಿತು. ಬಣಕಲ್ ಸಮೀಪದ ಚಕ್ಕಮಕ್ಕಿ ಗ್ರಾಮದಲ್ಲಿ ಮಹಮ್ಮದ್ ಎಂಬುವವರ ಕುರಿಶೆಡ್ ಕುಸಿದಿದ್ದರಿಂದ, ಅದರ ಒಳಗಿದ್ದ ಒಂದು ಕುರಿ ಸಾವನ್ನಪ್ಪಿದ್ದು, ಹಲವು ಕುರಿಗಳಿಗೆ ಗಂಭೀರವಾಗಿ ಗಾಯಗಳಾಗಿವೆ. ಮಳೆಯೊಂದಿಗೆ ಗಾಳಿಯೂ ಹೆಚ್ಚಾಗಿದ್ದರಿಂದ ಹಾನಿಯ ಪ್ರಮಾಣ ಹೆಚ್ಚಾಗಿದ್ದು, 60ಕ್ಕೂ ಅಧಿಕ ವಿದ್ಯುತ್ ಕಂಬಗಳು ಧರೆಗುರುಳಿರುವುದರಿಂದ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಪೂರೈಕೆ ಸಂಪೂರ್ಣ ಸ್ಥಗಿತವಾಗಿದೆ.

ಕಾರವಾರದಲ್ಲಿ ಅಬ್ಬರದ ಮಳೆಗೆ ದೇವಿಮನೆ ಘಟ್ಟದಲ್ಲಿ ರಾಷ್ಟ್ರೀಯ ಹೆದ್ದಾರಿಯೇ ಕೊಚ್ಚಿ ಹೋಗಿರುವುದು.

ತುಂಬಿ ಹರಿಯುತ್ತಿರುವ ನದಿಗಳು

ಬಿರುಗಾಳಿಯೊಂದಿಗೆ ಸುರಿದ ಭಾರಿ ಮಳೆಯಿಂದಾಗಿ ಬೆಳ್ತಂಗಡಿ ತಾಲೂಕಿನ ಪಾರೆಂಕಿ ಗ್ರಾಮದ ಹುಪ್ಪ ಎಂಬಲ್ಲಿ ನಝೀರ್ ಎಂಬುವರ ಮನೆಯ ಪಕ್ಕದ ತಡೆಗೋಡೆ ಶನಿವಾರ ಕುಸಿದು ಬಿದ್ದಿದೆ. ಇಂದಬೆಟ್ಟು ಗ್ರಾಮದ ಕಜೆ ಎಂಬಲ್ಲಿ ರೋಹಿಣಿ ಎಂಬುವರ ಮನೆಗೆ ರಬ್ಬರ್ ಮರ ಬಿದ್ದು ಹಾನಿಯಾಗಿದೆ. ಅಂಗನವಾಡಿ ಕಟ್ಟಡದ ಚಾವಣಿಯ ಶೀಟ್‌ಗೂ ಹಾನಿಯಾಗಿದೆ. ಸಾವಿರಾರು ಅಡಿಕೆ ಗಿಡಗಳು, ರಬ್ಬರ್ ಗಿಡಗಳು ಮುರಿದು ಬಿದ್ದಿವೆ. ಮರೋಡಿ ಗ್ರಾಮದಲ್ಲಿ ಬಾವಿಯ ತಡೆಗೋಡೆ ಕುಸಿದಿದೆ. ಧರ್ಮಸ್ಥಳದಲ್ಲಿ ನೇತ್ರಾವತಿ ನದಿ ಹಾಗೂ ಮುಂಡಾಜೆಯಲ್ಲಿ ಮೃತ್ಯುಂಜಯ ನದಿಗಳು ತುಂಬಿ ಹರಿಯುತ್ತಿವೆ.

ಇಂದಬೆಟ್ಟು ಗ್ರಾಮದ ಕಜೆಬೈಲು ಎಂಬಲ್ಲಿ ಬಿರುಗಾಳಿಯಿಂದ ಬಾಳೆ ಗಿಡಗಳು ಉರುಳಿವೆ.

1.21 ಕೋಟಿ ರು. ಮೌಲ್ಯದ ಬೆಳೆ ನಾಶ

ಮುಂಗಾರು ಪೂರ್ವ ಮಳೆಯಅಬ್ಬರಕ್ಕೆ ಕೋಲಾರದಲ್ಲಿ 1.21 ಕೋಟಿ ರು. ಮೌಲ್ಯದ ಬೆಳೆ ನಾಶವಾಗಿದೆ. ಕಳೆದ ವಾರ ಸುರಿದ ಮಳೆಯಿಂದ ವಿಶ್ವ ಪ್ರಸಿದ್ಧ ಮಾವು ಹಾಗೂ ಬಾಳೆ ಸೇರಿದಂತೆ ವಿವಿಧ ಬೆಳೆಗಳು ಹಾನಿಯಾಗಿವೆ. ಒಟ್ಟು 304 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ 1 ಕೋಟಿ 21 ಲಕ್ಷ ರು. ಮೌಲ್ಯದ ಬೆಳೆ ನಷ್ಟ ಆಗಿರುವ ಕುರಿತು ಅಂದಾಜು ಮಾಡಲಾಗಿದೆ. 200 ಹೆಕ್ಟೇರ್ ಮಾವು ಹಾಗೂ 104 ಹೆಕ್ಟೆರು ತೋಟಗಾರಿಕೆ ಬೆಳೆಗಳು ಹಾನಿಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಟೆಂಡರ್ ಕರೆಯುವ ಮುನ್ನ ಪೊಲೀಸ್ ಅಧಿಕಾರಿಗಳ ಜತೆ ಚರ್ಚೆ | ಕಸ ವಿಲೇವಾರಿಗೆ ಸ್ವಚ್ಛ ಬೆಂಗಳೂರು ಕಾರ್ಯಕ್ರಮ

ಶೀಘ್ರ ಸುರಂಗ ಮಾರ್ಗಕ್ಕೆ ಟೆಂಡರ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಚಿವ ಸಂಪುಟ ಸಭೆಯಲ್ಲಿ ಬೆಂಗಳೂರಿನ ಎರಡು ಹಂತದ ಸುರಂಗ ರಸ್ತೆ ನಿರ್ಮಾಣಕ್ಕೆ ಅನುಮೋದನೆ ದೊರೆತಿದ್ದು, ಮೊದಲ ಹಂತದ ಯೋಜನೆಗೆ ಶೀಘ್ರವೇ ಟೆಂಡರ್ ಕರೆಯಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರಲ್ಲಿ ಸುರಂಗ ರಸ್ತೆ ನಿರ್ಮಾಣ ಹಾಗೂ ಮಂಡ್ಯದ ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ನಡೆಸುವ ಸಂಬಂಧ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನಸೌಧದಲ್ಲಿ ಸಭೆ ನಡೆಸಿದರು.

ಕಾವೇರಿ ಆರತಿ ನಮ್ಮ ರಾಜ್ಯದ ಸಂಸ್ಕೃತಿ, ಪರಂಪರೆಯ ಪ್ರತೀಕವಾಗಲಿದೆ. ಕೊಡಗು, ಮಲೆನಾಡು, ಕರಾವಳಿ, ಬೆಂಗಳೂರು ಭಾಗದ ಆಚರಣೆ, ಈ ಭಾಗದ ಮಠಗಳನ್ನು ಒಳಗೊಂಡು ಈ ಕಾರ್ಯಕ್ರಮದ ವಿಧಾನ ರೂಪಿಸಲಾಗುವುದು. ವಾರಾಂತ್ಯದ ಮೂರು ದಿನಗಳ ಕಾಲ ಈ ಕಾರ್ಯಕ್ರಮ ನಡೆಯಬೇಕು ಎಂದು ನಾನು ಆಲೋಚಿಸುತ್ತಿದ್ದೇನೆ. ಪೂಜಾ ಕಾರ್ಯದ ಜತೆಗೆ ಸಾಂಸ್ಕೃತಿಕ ಕಾರ್ಯಕ್ರಮ ಮಾಡಲಾಗುವುದು. ಇದಕ್ಕಾಗಿ ಕಾವೇರಿ ನಿಗಮದಲ್ಲಿ 92 ಕೋಟಿ ಹಣ ಮೀಸಲಿಡಲಾಗಿದೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಂಗಳೂರಿನ ಸುರಂಗ ರಸ್ತೆಯ ಪ್ರವೇಶ ಹಾಗೂ ನಿರ್ಗಮನದ ಭಾಗದಲ್ಲಿ ಸಂಚಾರ ದಟ್ಟಣೆ ಆಗಬಾರದು ಎಂಬ ಉದ್ದೇಶದಿಂದ ಈ ಯೋಜನೆಗೆ ಟೆಂಡರ್ ಕರೆಯುವ ಮುನ್ನ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಅಧಿಕಾರಿಗಳು, ಪೊಲೀಸ್ ಇಲಾಖೆಯ ಡಿಜಿಪಿ, ಐಜಿಪಿ ಮತ್ತು ಸಂಚಾರಿ ಪೊಲೀಸ್ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

ವಿಧಾನಸೌಧದ ಒಂದು ಕಿ.ಮೀ ಸುತ್ತಮುತ್ತ ಎಲ್ಲೂ ನಿರ್ಗಮನಕ್ಕೆ ಅವಕಾಶ ಕಲ್ಪಿಸುವುದಿಲ್ಲ. ಇಲ್ಲಿ ಟ್ರಾಫಿಕ್ ಜಾಮ್ ಆದರೆ ಎಲ್ಲಾ ಕಡೆ ಆಗುತ್ತದೆ. ಹೀಗಾಗಿ ಇದನ್ನು ಪರಿಶೀಲಿಸಲು ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದ್ದೇನೆ. ನಾನು, ಸರಕಾರದ ಮುಖ್ಯ ಕಾರ್ಯದರ್ಶಿಗಳು, ಜಿಬಿಎ ಮುಖ್ಯ ಆಡಳಿತಾಧಿಕಾರಿಗಳು ಈ ಸಭೆ ಮಾಡಿದ್ದೇವೆ ಎಂದು ಹೇಳಿದರು. ಬೆಂಗಳೂರಿನಲ್ಲಿ 114 ಕಿ.ಮೀ ಎಲಿವೇಟೆಡ್ ಕಾರಿಡಾರ್ ನಿರ್ಮಾಣಕ್ಕೆ ತೀರ್ಮಾನ ಮಾಡಿದ್ದು, ಈ ಯೋಜನೆ ಸಂಬಂಧ ಸಂಚಾರ ಪೊಲೀಸ್ ಅಧಿಕಾರಿಗಳ ಅಭಿಪ್ರಾಯ ಪಡೆಯಲಾಗಿದೆ ಎಂದರು.

ಕಸ ವಿಲೇವಾರಿಗೆ ಸ್ವಚ್ಛ ಬೆಂಗಳೂರು ಕಾರ್ಯಕ್ರಮ: ಇನ್ನು ಬೆಂಗಳೂರಿನ ಕಸ ವಿಲೇವಾರಿ ವಿಚಾರವಾಗಿ ದೊಡ್ಡ ಕ್ಷೇತ್ರಗಳಲ್ಲಿ ಎರಡರಂತೆ ಪ್ರತಿಯೊಂದು ಕ್ಷೇತ್ರಕ್ಕೆ ಒಂದೊಂದರಂತೆ ಒಟ್ಟು 33 ಪ್ಯಾಕೇಜ್ ಗಳನ್ನು ಕರೆಯಲು ತೀರ್ಮಾನಿಸಿದ್ದೇವೆ. ಸುಮಾರು 4000 ಕೋಟಿ ಮೊತ್ತದ ಈ ಯೋಜನೆಗೆ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ಏಳು ವರ್ಷಗಳ ಅವಧಿಗೆ ಟೆಂಡರ್ ಕರೆಯಲಾಗುತ್ತಿದೆ. ಸ್ವಚ್ಛ ಬೆಂಗಳೂರು ಕಾರ್ಯಕ್ರಮದ ಮೂಲಕ ಬೆಂಗಳೂರಿನ ಎಲ್ಲಾ ಭಾಗಗಳಲ್ಲಿ ಇರುವ ಕಟ್ಟಡ ತ್ಯಾಜ್ಯ ಹಾಗೂ ಇತರೆ ಕಸವನ್ನು ಒಮ್ಮೆಲೇ ಸ್ವಚ್ಛ ಮಾಡಲು ತೀರ್ಮಾನಿಸಲಾಗಿದೆ. ನಾಗರೀಕರು ಕೂಡ ಈ ಕಾರ್ಯಕ್ರಮದಲ್ಲಿ ಕೈಜೋಡಿಸಿ, ಎಲ್ಲೆಲ್ಲಿ ಕಸ ಇದೆ ಎಂದು ಜಿಬಿಎ ಅಧಿಕಾರಿಗಳಿಗೆ ಆಪ್ ಅಥವಾ ನೀಡಲಾಗುವ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಿದರೆ, ಅಲ್ಲಿರುವ ಕಸವನ್ನು ತೆಗೆಯಲಾಗುವುದು. ಇದಕ್ಕಾಗಿ ಅಧಿಕಾರಿಗಳು, ಮಾರ್ಷಲ್ ಗಳನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು.

ಮಂಡ್ಯ ಜಿಲ್ಲೆ ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ನಡೆಸುವ ಸಂಬಂಧ ಶಾಸಕರು ಹಾಗೂ ಅಧಿಕಾರಿಗಳ ಜತೆ ಡಿಸಿಎಂ ಡಿ. ಕೆ. ಶಿವಕುಮಾರ್ ಅವರು ವಿಧಾನಸೌಧದಲ್ಲಿ ಶನಿವಾರ ಸಭೆ ನಡೆಸಿದರು. ಶಾಸಕ ರಮೇಶ್ ಬಂಡಿಸಿದ್ದೇಗೌಡ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೇರಿದಂತೆ ಹಲವರು ಇದ್ದರು.

ವೇದಿಕೆ ನಿರ್ಮಾಣಕ್ಕೆ ಶೀಘ್ರವೇ ಟೆಂಡರ್

ಇಂಧನ ಇಲಾಖೆ, ಲೋಕೋಪಯೋಗಿ, ಪ್ರವಾಸೋದ್ಯಮ, ಧಾರ್ಮಿಕ ದತ್ತಿ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೂ ಈ ಕಾರ್ಯಕ್ರಮಕ್ಕೆ ಕೈ ಜೋಡಿಸಲಿದೆ. ಈ ಕಾರ್ಯಕ್ರಮದ ಸಾರ್ವಜನಿಕ ವೀಕ್ಷಣೆಗಾಗಿ 10 ಸಾವಿರ ಆಸನಗಳ ಗ್ಯಾಲರಿಯ ವಿನ್ಯಾಸ ಕೂಡ ಸಿದ್ಧವಾಗಿದ್ದು, ಅತ್ಯುತ್ತಮ ಗೀತೆ ರಚನೆಗೆ ಆಹ್ವಾನ ನೀಡಿದ್ದೇವೆ. ಇದು ದಕ್ಷಿಣ ಭಾರತದ ಕಾರ್ಯಕ್ರಮವಾಗಲಿದೆ. ಕಾವೇರಿ ನದಿ ಹರಿಯುವ ಕರ್ನಾಟಕ, ತಮಿಳುನಾಡು, ಕೇರಳ, ಪುದುಚೇರಿ ರಾಜ್ಯ ಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು. ಈ ಎಲ್ಲಾ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ. ಬಹುತೇಕ ಎಲ್ಲಾ ನೀಲನಕ್ಷೆಗಳು ಸಿದ್ಧವಾಗಿವೆ. ಇವು ಪೂರ್ಣಗೊಂಡ ನಂತರ ಸಾರ್ವಜನಿಕರಿಗೆ ಮಾಹಿತಿ ನೀಡಲಾಗು ವುದು ಎಂದು ಹೇಳಿದರು. ಹರಿಯುವ ನೀರಿ ನಲ್ಲಿ ಈ ಕಾರ್ಯಕ್ರಮದ ವೇದಿಕೆ ನಿರ್ಮಿ ಸಲಾಗುವುದು. ಈ ವೇದಿಕೆ ನಿರ್ಮಾಣಕ್ಕೆ ಶೀಘ್ರದಲ್ಲೇ ಟೆಂಡರ್ ಕರೆಯಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಕಿಡಿಗೇಡಿಗಳಿಂದ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಬೆಂಕಿ

ಯಾದಗಿರಿ: ನಗರದಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಕಿಡಿಗೇಡಿಗಳಿಂದ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಘಟನೆ ಶುಕ್ರವಾರ ತಡರಾತ್ರಿ ಜರುಗಿದೆ. ಇನ್ನೂ ಘಟನೆಯಿಂದ ಕಚೇರಿಯಲ್ಲಿದ್ದ ಪೀಠೋಪಕರಣ ಸೇರಿ ಸೋಫಾ, ಎಸಿ ಎಲ್ಲವೂ ಸುಟ್ಟು ಕರಕಲಾಗಿದೆ. ಶುಕ್ರವಾರ ಮಧ್ಯರಾತ್ರಿ ಕಿಡಿಗೇಡಿಗಳು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿರುವ ಅನುಮಾನ ವ್ಯಕ್ತವಾಗಿದ್ದು, ಕ್ಯಾನ್‌ನಲ್ಲಿ ಪೆಟ್ರೋಲ್ ತಂದು ಬೆಂಕಿ ಹಚ್ಚಿದ ನಂತರ ಕ್ಯಾನ್ ಅಲ್ಲಿಯೇ ಬಿಟ್ಟು ಕಿಡಿಗೇಡಿಗಳು ಪರಾರಿಯಾಗಿದ್ದಾರೆ. ಘಟನೆ ಮಾಹಿತಿ ತಿಳಿದು ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷರು ಸೇರಿ ಮುಖಂಡರು ಕಚೇರಿಯತ್ತ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಸ್ಥಳಕ್ಕೆ ಯಾದಗಿರಿ ನಗರ ಠಾಣೆಯ ಪೊಲೀಸರು, ಶ್ವಾನ ದಳದ ತಂಡದವರು ಕಿಡಿಗೇಡಿಗಳ ಶೋಧ ಕಾರ್ಯ ನಡೆಸಿದ್ದಾರೆ. ಘಟನೆಗೆ ನಿಖರ ಮಾಹಿತಿ ಹೊರಬಿದ್ದಿಲ್ಲ. ಈ ಕುರಿತು ಯಾದಗಿರಿ ನಗರ ಠಾಣೆಯಲ್ಲಿ ಕೇಸ್ ದಾಖಲಾಗಿದೆ.

ಆಪರೇಷನ್ ಸಿಂದೂರ ಹಾಗೂ ತುಪ್ಪದಲ್ಲಿ ಬಿದ್ದ ಜಾರ್ಜಿಯಾದ ಒಣರೊಟ್ಟಿ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಒಂದು ವಾರ ಜಾರ್ಜಿಯಾ ದೇಶದ ರಾಜಧಾನಿ ಟಿಬಿಲಿಸಿ, ಗುಡೌರಿ ಮುಂತಾದ ಪ್ರದೇಶಗಳಲ್ಲಿ ಸುತ್ತಾಡಿದ ಅನುಭವ ಅಮೋಘವಾದುದು. ಜಾರ್ಜಿಯಾ ದೇಶ ನನಗೆ ಹೊಸತಲ್ಲ. ಇದು ನನ್ನ ಎರಡನೇ ಭೇಟಿ. ಐದು ವರ್ಷಗಳ ಹಿಂದೆ, ನಾನು ಮೊದಲ ಬಾರಿಗೆ ಅಲ್ಲಿಗೆ ಹೋಗಿದ್ದೆ. ಆಗ 9 ದಿನ ಇಡೀ ದೇಶದಲ್ಲಿ ಸುತ್ತುಹಾಕಿದ್ದೆ. ಇದು ಕಪ್ಪು ಸಮುದ್ರ ಮತ್ತು ಕ್ಯಾಸ್ಪಿಯನ್ ಸಮುದ್ರಗಳ ಮಧ್ಯೆ ಇರುವ, ಕಾಕೇಷಸ್ ಪರ್ವತ ಶ್ರೇಣಿಗಳ ನಡುವಿನ ಸುಂದರ ನಗರ. ಈ ನಗರವು ತನ್ನ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಭೌಗೋಳಿಕ ಮಹತ್ವದಿಂದ ಗಮನ ಸೆಳೆದಿದೆ. ಕೂರಾ ನದಿಯ ತೀರದಲ್ಲಿರುವ ಈ ನಗರ, ಪರ್ವತ, ಹಸಿರು ಬೆಟ್ಟ-ಗುಡ್ಡಗಳಿಂದ ಸುತ್ತುವರಿಯಲ್ಪಟ್ಟಿದೆ. ಸಮುದ್ರ ಮಟ್ಟದಿಂದ ಸುಮಾರು 400 ಮೀ. ಎತ್ತರದಲ್ಲಿರುವ ಈ ನಗರವು ವಿಶಿಷ್ಟ ಭೌಗೋಳಿಕ ರಚನೆ ಮತ್ತು ನೈಸರ್ಗಿಕ ಸೌಂದರ್ಯದಿಂದ ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾಗಿದೆ.

ಜಾರ್ಜಿಯಾ ಒಂದು ವಿಶಿಷ್ಟವಾದ ಭೌಗೋಳಿಕ ಪ್ರದೇಶದಲ್ಲಿದೆ. ಪೂರ್ವ ಯುರೋಪ್ ಮತ್ತು ಪಶ್ಚಿಮ ಏಷ್ಯಾದ ಮಧ್ಯೆ ಇರುವ, ಕಪ್ಪು ಸಮುದ್ರ, ರಷ್ಯಾ, ಟರ್ಕಿ, ಅರ್ಮೇನಿಯ ಮತ್ತು ಅಜರ್ಬೈಜಾನ್ ಅನ್ನು ಗಡಿಗೆ ಕಟ್ಟಿಕೊಂಡಿರುವ ಜಾರ್ಜಿಯಾದ ಮೇಲೆ ಯುರೋಪ್ ಮತ್ತು ಏಷ್ಯಾದ ಗಾಢಪ್ರಭಾವ ಇರುವುದನ್ನು ಕಾಣಬಹುದು. ಈ ನಗರ ಹಲವು ಶತಮಾನಗಳವರೆಗೆ ಪರ್ಷಿಯನ್, ಅರಬ್, ಮೊಂಗೋಲ್, ಒಟ್ಟೋಮನ್ ಮತ್ತು ರಷ್ಯನ್ ಸಾಮ್ರಾಜ್ಯಗಳ ಅಧೀನದಲ್ಲಿತ್ತು. ಇದರಿಂದ ಟಿಬಿಲಿಸಿಗೆ ಬಹುಸಾಂಸ್ಕೃತಿಕ ಆಯಾಮವಿದೆ. ಪ್ರತಿ ಆಳ್ವಿಕೆಯಿಂದಲೂ ಇಲ್ಲಿನ ಕಲೆ, ವಾಸ್ತುಶಿಲ್ಪ ಹಾಗೂ ಆಹಾರದ ವೈವಿಧ್ಯ ಶ್ರೀಮಂತವಾಗಿದ್ದನ್ನು ಕಾಣಬಹುದು. ಟಿಬಿಲಿಸಿಯ ಜನಸಂಖ್ಯೆ ಸುಮಾರು 12 ಲಕ್ಷ. ಜಾರ್ಜಿಯಾದ ಜನಸಂಖ್ಯೆ ಸುಮಾರು 37 ಲಕ್ಷ. ಜಾರ್ಜಿಯಾದಲ್ಲಿ ಬಹುಸಂಖ್ಯಾಕರು ಕ್ರಿಶ್ಚಿಯನ್ನರು. ಬಹುಪಾಲು ಜನ ಜಾರ್ಜಿಯನ್ ಭಾಷೆಯನ್ನೇ ಮಾತನಾಡುತ್ತಾರೆ. ಜತೆಗೆ ರಷ್ಯನ್, ಇಂಗ್ಲಿಷ್ ಮತ್ತು ಅರ್ಮೇನಿಯನ್ ಭಾಷೆಗಳ ಬಳಕೆಯೂ ಇದೆ. ಇತ್ತೀಚಿನ ವರ್ಷಗಳಲ್ಲಿ ಪ್ರವಾಸೋದ್ಯಮದ ಬೆಳವಣಿಗೆಯು ಇಂಗ್ಲಿಷ್ ಭಾಷಾ ಬಳಕೆಯನ್ನು ಹೆಚ್ಚಿಸಿದೆ. ಸೋವಿಯತ್ ರಷ್ಯಾದ ಭಾಗವೇ ಆಗಿದ್ದ ಜಾರ್ಜಿಯಾ, 1991ರಲ್ಲಿ ರಷ್ಯಾದಿಂದ ಬೇರ್ಪಟ್ಟು ಸ್ವತಂತ್ರ ರಾಷ್ಟ್ರವಾಯಿತು. 1990ರ ದಶಕದ ಉದ್ದಕ್ಕೂ, ದೇಶವು ಅಂತರ್ಯುದ್ಧ, ಆರ್ಥಿಕ ಬಿಕ್ಕಟ್ಟುಗಳು, ರಾಜಕೀಯ ಅಸ್ಥಿರತೆ ಮತ್ತು ರಷ್ಯಾ ಬೆಂಬಲಿತ ಪ್ರತ್ಯೇಕತಾವಾದಿ ಸಂಘರ್ಷಗಳಿಂದ ಘಾಸಿಗೊಂಡಿತ್ತು. ಜಾರ್ಜಿಯಾ ಆರಂಭದಲ್ಲಿ, ರಷ್ಯಾದೊಂದಿಗೆ ಆಳವಾದ ಸಂಬಂಧವನ್ನು ಹೊಂದಿತ್ತು. ಆದರೆ ಜಾರ್ಜಿಯಾದಲ್ಲಿ ಅಧಿಕಾರಕ್ಕೆ ಬಂದವರೆಲ್ಲ, ಅದರಲ್ಲೂ ವಿಶೇಷವಾಗಿ 2002ರ ನಂತರ ಬಂದವರು, ಅಧಿಕೃತವಾಗಿ ಪಾಶ್ಚಿಮಾತ್ಯ ಪರ ವಿದೇಶಾಂಗ ನೀತಿಯನ್ನು ಘೋಷಿಸಿದರು.

2003ರಲ್ಲಿ ನಡೆದ ಶಾಂತಿಯುತ ಕ್ರಾಂತಿಯಿಂದ ಜಾರ್ಜಿಯಾದ ನಾಗರಿಕರ ಒಕ್ಕೂಟ ಉರುಳಿತು. ನಂತರ ಮಿಖೈಲ್ ಸಾಕಾಶ್ವಿಲಿ ದೇಶದ ಅಧ್ಯಕ್ಷರಾದರು. ಅವರು ವಿವಿಧ ಆರ್ಥಿಕ ಮತ್ತು ಸರಕಾರಿ ಸುಧಾರಣೆಗಳನ್ನು ಜಾರಿಗೆ ತಂದರು ಮತ್ತು ಹೆಚ್ಚು ಪೂರ್ವಭಾವಿ ಪಾಶ್ಚಿಮಾತ್ಯ ಪರ ದೃಷ್ಟಿಕೋನವನ್ನು ಅನುಸರಿಸಿದರು. ಇದರಿಂದ ರಷ್ಯಾದೊಂದಿಗಿನ ಸಂಬಂಧಗಳು ಹದಗೆಟ್ಟವು, ಇದು 2008ರ ರುಸ್ಸೋ-ಜಾರ್ಜಿಯನ್ ಯುದ್ಧದಲ್ಲಿ ಮತ್ತು ಜಾರ್ಜಿಯಾದ ಕೆಲವು ಭಾಗಗಳನ್ನು ರಷ್ಯಾ ಆಕ್ರಮಿಸಿಕೊಳ್ಳುವುದರಲ್ಲಿ ಕೊನೆಗೊಂಡಿತು. ಜಾರ್ಜಿಯಾ ಮತ್ತು ರಷ್ಯಾ ಇತಿಹಾಸವನ್ನು ನೋಡುತ್ತಾ ಬಂದವರಿಗೆ ಗೊಂದಲವಾಗುವುದು ಸಹಜ. ಕಾರಣ ಇವೆರಡು ರಾಷ್ಟ್ರಗಳ ಸಂಬಂಧ ಯಾವಾಗ ಬದಲಾಗುತ್ತದೆ, ಬಿಗಡಾಯಿಸುತ್ತದೆ, ಸುಧಾರಿಸುತ್ತದೆ ಎಂದು ಹೇಳುವುದು ಕಷ್ಟ.

ಜಾರ್ಜಿಯಾ ಒಂದು ಪ್ರತಿನಿಧಿ ಪ್ರಜಾಪ್ರಭುತ್ವವಾಗಿದ್ದು, ಏಕೀಕೃತ ಸಂಸದೀಯ ಗಣರಾಜ್ಯವಾಗಿ ರೂಪುಗೊಂಡಿದೆ. ಇದು ಅತಿ ಹೆಚ್ಚು ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಉದಯೋನ್ಮುಖ ಮಾರುಕಟ್ಟೆ ಆರ್ಥಿಕತೆಯನ್ನು ಹೊಂದಿರುವ ಅಭಿವೃದ್ಧಿಶೀಲ ರಾಷ್ಟ್ರವಾಗಿದೆ. 2003ರಿಂದ ವ್ಯಾಪಕವಾದ ಆರ್ಥಿಕ ಸುಧಾರಣೆಗಳು ವಿಶ್ವದ ಅತ್ಯಂತ ಮುಕ್ತ ವ್ಯಾಪಾರ ವಾತಾವರಣಗಳಲ್ಲಿ ಒಂದು ಎಂಬ ಖ್ಯಾತಿಯನ್ನು ತಂದುಕೊಟ್ಟಿವೆ. ಹೆಚ್ಚಿನ ಆರ್ಥಿಕ ಸ್ವಾತಂತ್ರ್ಯ, ಪಾರದರ್ಶಕತೆ ಮತ್ತು ಜಿಡಿಪಿ ಬೆಳವಣಿಗೆಯ ವೇಗದ ದರಗಳಿಂದ ಇವೆಲ್ಲ ಸಾಧ್ಯವಾಗಿವೆ. 2018ರಲ್ಲಿ, ಜಾರ್ಜಿಯಾ ಗಾಂಜಾವನ್ನು ಕಾನೂನುಬದ್ಧಗೊಳಿಸಿದ ಎರಡನೇ ದೇಶ ಮತ್ತು ಹಾಗೆ ಮಾಡಿದ ಮೊದಲ ಹಿಂದಿನ ಸಮಾಜವಾದಿ ದೇಶ ಎಂದು ಕರೆಯಿಸಿಕೊಂಡಿತು. ಜಾರ್ಜಿಯಾ ಯುರೋಪ್ ಕೌನ್ಸಿಲ್, ಯೂರೋಕಂಟ್ರೋಲ್, ಬಿಎಸ್‌ಇಸಿ, ಜಿಯುಎಎಂ, ಎನರ್ಜಿ ಕಮ್ಯುನಿಟಿ ಸೇರಿದಂತೆ ಹಲವು ಅಂತಾರಾಷ್ಟ್ರೀಯ ಸಂಸ್ಥೆಗಳ ಸದಸ್ಯ. ಅಸೋಸಿಯೇಷನ್ ಟ್ರಿಯೊದ ಭಾಗವಾಗಿ, ಜಾರ್ಜಿಯಾ ಯುರೋಪಿಯನ್ ಒಕ್ಕೂಟದಲ್ಲಿ ಸದಸ್ಯತ್ವಕ್ಕಾಗಿ ಅಧಿಕೃತ ಅಭ್ಯರ್ಥಿ ದೇಶವಾಗಿದೆ. ಟಿಬಿಲಿಸಿ ಜಾರ್ಜಿಯಾದ ಆರ್ಥಿಕ, ಶೈಕ್ಷಣಿಕ ಮತ್ತು ವಾಣಿಜ್ಯ ಕೇಂದ್ರವಾಗಿದೆ. ಬ್ಯಾಂಕುಗಳು, ಇನ್ಶುರೆನ್ಸ್ ಕಂಪನಿಗಳು ಮತ್ತು ಸ್ಟಾರ್ಟಪ್ ಕಂಪನಿಗಳು ಇಲ್ಲಿವೆ. ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ, ಶಿಕ್ಷಣ ಮತ್ತು ವಾಣಿಜ್ಯ ಕ್ಷೇತ್ರಗಳು ಇಲ್ಲಿನ ಆರ್ಥಿಕತೆಯ ಮುಖ್ಯ ಅಂಶಗಳು.

ಟಿಬಿಲಿಸಿಯು ಬೃಹತ್ ಸಾಂಸ್ಕೃತಿಕ ಮೇಳವಾಗಿದೆ. ಇಲ್ಲಿ ಅನೇಕ ನೃತ್ಯ, ಸಂಗೀತ, ಚಿತ್ರಕಲೆ ಹಾಗೂ ನಾಟಕ ಪ್ರದರ್ಶನಗಳು ನಿರಂತರ ನಡೆಯುತ್ತವೆ. ಈ ನಗರದಲ್ಲಿ ಪ್ರತಿವರ್ಷವೂ ಟಿಬಿಲಿಸಿ ಫಿಲ್ಮ್ ಫೆಸ್ಟಿವಲ್, ಜಾಜ್ ಫೆಸ್ಟಿವಲ್ ಮತ್ತು ಬೇರೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಟಿಬಿಲಿಸಿಯು ಜಾರ್ಜಿಯಾದ ಶೈಕ್ಷಣಿಕ ಕೇಂದ್ರವೂ ಆಗಿದೆ. ಟಿಬಿಲಿಸಿ ಸ್ಟೇಟ್ ಯೂನಿವರ್ಸಿಟಿ, ಜಾರ್ಜಿಯನ್ ಟೆಕ್ನಿಕಲ್ ಯುನಿವರ್ಸಿಟಿ ಮತ್ತು ಇನ್ನಷ್ಟು ಸಂಸ್ಥೆಗಳು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿವೆ. ಬಹುಭಾಷಾ ಶಿಕ್ಷಣವು ಇಲ್ಲಿನ ವೈಶಿಷ್ಟ್ಯ. ಆಶ್ಚರ್ಯವೆಂದರೆ ಈ ನಗರದಲ್ಲಿ ಸುಮಾರು 25,000 ಕನ್ನಡಿಗ ವಿದ್ಯಾರ್ಥಿಗಳಿದ್ದಾರೆ. ಇವರೆಲ್ಲ ವೈದ್ಯಕೀಯ ವ್ಯಾಸಂಗಕ್ಕೆ ಬಂದವರು. ಟಿಬಿಲಿಸಿಯಲ್ಲಿ ನಡೆದಾಡುವಾಗ, ಕನ್ನಡಿಗ ವಿದ್ಯಾರ್ಥಿಗಳು, ಅವರನ್ನು ನೋಡಲು ಬರುವ ಪಾಲಕರನ್ನು ಕಾಣಬಹುದು. ಟಿಬಿಲಿಸಿ ಒಂದು ಚಲನಶೀಲ ಮತ್ತು ಕ್ರಿಯಾತ್ಮಕ ನಗರ. ಇಲ್ಲಿ ಪುರಾತನ ಇತಿಹಾಸವೂ ಇದೆ ಮತ್ತು ಆಧುನಿಕತೆಯ ಸ್ಪರ್ಶವೂ ಇದೆ. ಇಲ್ಲಿನ ಸಂಸ್ಕೃತಿ, ಆಹಾರ, ವಾಸ್ತುಶಿಲ್ಪ, ಜನಪದ, ನೃತ್ಯ ಮತ್ತು ಹಿತಕರ ಹವಾಮಾನ ಈ ನಗರದ ವೈಶಿಷ್ಟ್ಯ. 'ಜಾರ್ಜಿಯಾದ ಅರಮನೆ' ಎಂದೇ ಹೇಳಬಹುದಾದ ಈ ನಗರ, ಇಂದಿಗೂ ಅನೇಕರ ಕಲ್ಪನೆಗಳ ಮೇಲೆ ಸವಾರಿ ಮಾಡುತ್ತದೆ.

ಮೊನ್ನಿನ 'ಆಪರೇಷನ್ ಸಿಂದೂರ' ಬಳಿಕ, ಟರ್ಕಿ ಮತ್ತು ಅಜರ್ಬೈಜಾನ್ ಅನ್ನು ಭಾರತ ಕಪ್ಪು ಪಟ್ಟಿಗೆ ಸೇರಿಸಿದೆ. ಇದರಿಂದ ಅದರ ಪಕ್ಕದಲ್ಲಿರುವ ಜಾರ್ಜಿಯಾದ ಒಣರೊಟ್ಟಿ ತುಪ್ಪದಲ್ಲಿ ಬಿದ್ದಂತೆ ಆಗಿದೆ. ಭಾರತೀಯರು ಅದರಲ್ಲೂ ವಿಶೇಷವಾಗಿ ಕನ್ನಡಿಗರು ಈಗ ಜಾರ್ಜಿಯಾ ಕಡೆಗೆ ಮುಖ ಮಾಡಲಾರಂಭಿಸಿದ್ದಾರೆ.

ಆತಿಥ್ಯದ ತವರೂರು

ಜಾರ್ಜಿಯಾ ಜನರು ತಮ್ಮ ಅಪರೂಪದ ಆತಿಥ್ಯ, ಸತ್ಕಾರ, ಐತಿಹಾಸಿಕ ಪರಂಪರೆ, ಭಾಷಾಭಿಮಾನ ಮತ್ತು ಧಾರ್ಮಿಕ ನಿಷ್ಠೆಯಿಂದ ಪ್ರಸಿದ್ಧರಾಗಿದ್ದಾರೆ. ಆ ದೇಶದ ಸಂಸ್ಕೃತಿಯ ಹೃದಯವೇ 'ಅತಿಥಿ ದೇವೋ ಭವ' ಎಂಬುದು. ಅತಿಥಿ ಸತ್ಕಾರದಲ್ಲಿ ಅವರದು ಎತ್ತಿದ ಕೈ. Guest is a gift from God ಎಂಬುದು ಅವರ ನಂಬಿಕೆ. ಇದು ಸಮಾಜದಲ್ಲಿ ಆಳವಾಗಿ ನೆಲೆಸಿದೆ. ಜಾರ್ಜಿಯಾದಲ್ಲಿ 'A guest is a gift from God' ಎಂಬ ನಂಬಿಕೆ ಕೇವಲ ಮಾತಲ್ಲ, ಆದರೆ ಪ್ರತಿ ಮನೆಯ ಮೂರನೆಯ ತಲೆಮಾರಿಗೆ ಹರಿಯುತ್ತಿರುವ ಮನೋಭಾವ. ಅತಿಥಿಯು ಮನೆಗೆ ಬಂದ ಕೂಡಲೇ, ಆತ ಅವರೆಲ್ಲರ ಪಾಲಿಗೂ ಗೌರವಪಾತ್ರ ವ್ಯಕ್ತಿಯಾಗುತ್ತಾನೆ. ತಕ್ಷಣವೇ ತಿನಿಸು, ಪಾನೀಯ ಮತ್ತು ಆತ್ಮೀಯ ಮಾತುಗಳಿಂದ ಆತಿಥ್ಯ ನೀಡುವ ಸಂಸ್ಕೃತಿ ಸಾಮಾನ್ಯ.

ಜಾರ್ಜಿಯಾದ ಜನರು ಅಪರಿಚಿತ ವ್ಯಕ್ತಿಯನ್ನೂ ಗೆಳೆಯನಂತೆ ನಡೆಸಿಕೊಳ್ಳುತ್ತಾರೆ. ನಮ್ಮೊಂದಿಗಿದ್ದ ಗೈಡ್, ''ನೀವು ಜಾರ್ಜಿಯಾದಲ್ಲಿ ಯಾರ ಮನೆಗೆ ತೆರಳಿದರೂ, ನಿಮ್ಮ ಕೈಯಲ್ಲಿ ವೈನ್, ಚಹಾ, ಕಾಫಿ, ಪಾನ್ ಅಥವಾ ಊಟ ನೀಡದೇ ಕಳಿಸುವುದಿಲ್ಲ. ಅತಿಥಿಯು ಕೂತಿದ್ದರೆ, ಅದು ಆಶೀರ್ವಾದವೆಂದು ಎಣಿಸುವ ಮನೋಭಾವ ಈ ದೇಶದ ಆಧ್ಯಾತ್ಮಿಕ ಧಾರಾಳತೆಯ ಪ್ರತೀಕವಾಗಿದೆ'' ಎಂದು ಹೇಳಿದಾಗ ನನಗೆ ಆಶ್ಚರ್ಯವಾಯಿತು.

ಜಾರ್ಜಿಯಾದಲ್ಲಿ ಕುಟುಂಬ ಮತ್ತು ಸ್ನೇಹಿತರು ಎಂಬುದು ಸಾಂಸ್ಕೃತಿಕ ಕೇಂದ್ರಬಿಂದು. ಕುಟುಂಬದ ಸದಸ್ಯರ ಮಧ್ಯೆ ಏನಾದರೂ ಭಿನ್ನಾಭಿಪ್ರಾಯ, ಕಲಹವುಂಟಾದರೆ ತಕ್ಷಣ ಬಗೆಹರಿಸಿಕೊಳ್ಳಲಾಗುತ್ತದೆ. ದ್ವೇಷ, ಸಂಬಂಧ ಕಡಿದುಕೊಳ್ಳುವುದರಲ್ಲಿ ಅವರಿಗೆ ನಂಬಿಕೆ ಇಲ್ಲ. ಸಂಬಂಧಿಕರಲ್ಲಿ ಸಂಬಂಧ ಸರಿ ಇಟ್ಟುಕೊಳ್ಳದಿದ್ದರೆ ಆತ ನಿಷ್ಪ್ರಯೋಜಕ ಎಂಬ ಭಾವನೆ ಅವರಲ್ಲಿದೆ. ಉಡುಗೆ-ತೊಡುಗೆ, ಭಾಷಾಶೈಲಿ, ಜೀವನ ಶೈಲಿಗಳಲ್ಲೂ ಅವರ ಕೌಟುಂಬಿಕ ಮೌಲ್ಯ, ಜೀವನ ದರ್ಶನದ ಅನಾವರಣವಾಗುತ್ತದೆ.

ಸ್ನೇಹಿತರನ್ನು ಕೂಡ ಜಾರ್ಜಿಯನ್ನರು ತಮ್ಮ ಕುಟುಂಬದ ಭಾಗವಾಗಿಯೇ ಪರಿಗಣಿಸುತ್ತಾರೆ. ಒಮ್ಮೆ ಒಬ್ಬ ವ್ಯಕ್ತಿಯನ್ನು ಸ್ನೇಹಿತನಾಗಿ ಸ್ವೀಕರಿಸಿದರೆ, ಆತನ ಜೀವಮಾನದ ಸ್ನೇಹಿತ. ಜಾರ್ಜಿಯಾದ ನಿಜವಾದ ಶಕ್ತಿ ಅಲ್ಲಿನ ಬೆರಗಿನ ಪರ್ವತಗಳಲ್ಲಿ ಇಲ್ಲ, ಹಿಮ ಆವರಿಸಿದ ಗಿರಿ-ಶಿಖರಗಳಲ್ಲಿ ಇಲ್ಲ. ಅದು ಅಲ್ಲಿನ ಜನರ ಮನಸ್ಸುಗಳಲ್ಲಿ, ಅವರ ಆತ್ಮೀಯತೆ ಮತ್ತು ಸಂಸ್ಕೃತಿಯ ಮೇಲಿನ ಪ್ರೀತಿಯಲ್ಲಿ ಇದೆ. ಅವರ ಜೀವನ, ಭಾಷೆ, ಭೋಜನ, ಧರ್ಮ, ಕಲಾಶಕ್ತಿ- ಇವೆಲ್ಲವೂ ಸೇರಿ ಜಾರ್ಜಿಯಾವನ್ನು ವಿಶ್ವದ ವಿನೂತನ ಸಾಂಸ್ಕೃತಿಕ ಹೆಜ್ಜೆಗಲ್ಲಾಗಿ ರೂಪಿಸಿವೆ. ಜಾರ್ಜಿಯಾದ ಇತಿಹಾಸ ಹಲವು ಆಕ್ರಮಣಗಳನ್ನು ಕಂಡಿದೆ. ಪರ್ಷಿಯಾ, ಟರ್ಕಿ,

ಅರಬ್, ಸೋವಿಯತ್ ಒಕ್ಕೂಟ ಮತ್ತು ನಂತರ ರಷ್ಯಾ.. ಇವೆಲ್ಲ ಜಾರ್ಜಿಯಾ ಮೇಲೆ ಕಾಲಕಾಲಕ್ಕೆ ಆಕ್ರಮಣ ಮಾಡಿದರೂ, ಜಾರ್ಜಿಯಾ ತನ್ನ ಪರಂಪರೆ, ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡ ಅಪರೂಪದ ರಾಷ್ಟ್ರವಾಗಿದೆ.

ಜಾರ್ಜಿಯನ್ನರು ತಮ್ಮ ಇತಿಹಾಸವನ್ನು ಪುಸ್ತಕಗಳಲ್ಲಿ ಮಾತ್ರ ಅಲ್ಲ, ಜೀವನದ ಪ್ರತಿಯೊಂದು ಹಂತದಲ್ಲೂ ನೆನೆಸಿಕೊಳ್ಳುತ್ತಾರೆ. ಕುಟುಂಬದ ಹಿರಿಯರು ಮಕ್ಕಳಿಗೆ ಇತಿಹಾಸದ ಕಥೆಗಳನ್ನು ಹೇಳುತ್ತಾರೆ, ದೇಗುಲಗಳಲ್ಲಿ ಹಳೆಯ ಶಿಲಾಲೇಖಗಳನ್ನು ಉಳಿಸಿಕೊಂಡಿದ್ದಾರೆ ಮತ್ತು ಹಬ್ಬಗಳಲ್ಲಿ ಪುರಾತನ ಕಲೆಗಳನ್ನು ಜೀವಂತವಾಗಿಟ್ಟಿದ್ದಾರೆ. ಜಾರ್ಜಿಯಾ ದೇಶವು ಕ್ರೈಸ್ತ ಧರ್ಮವನ್ನು ಸ್ವೀಕರಿಸಿದ ಮೊದಲ ರಾಷ್ಟ್ರಗಳಲ್ಲಿ ಒಂದಾಗಿದೆ. 4ನೇ ಶತಮಾನದಲ್ಲಿ ಕ್ರೈಸ್ತ ಧರ್ಮವನ್ನು ರಾಷ್ಟ್ರೀಯ ಧರ್ಮವಾಗಿ ಅಂಗೀಕರಿಸಿದ ಜಾರ್ಜಿಯಾ, ಇದನ್ನು ತನ್ನ ಜೀವನದ ಭಾಗವಾಗಿ ತೆಗೆದುಕೊಂಡಿದೆ. ಜಾರ್ಜಿಯನ್ ಆರ್ಥಡಾಕ್ಸ್ ಚರ್ಚ್ ಈ ದೇಶದ ಸಾಂಸ್ಕೃತಿಕ ಮತ್ತು ಧಾರ್ಮಿಕ ಗುಣಪಾಲುಗಳಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇಲ್ಲಿನ ಚರ್ಚುಗಳು- ಉದಾಹರಣೆಗೆ, ಸ್ವೇತಿತ್ಸಖೆ, ಮೊಟ್ಸಮೆತಾ, ಜೆಲಾಟಿ ಮುಂತಾದವು- ಶಿಲ್ಪಕಲೆ, ಧಾರ್ಮಿಕ ಭಕ್ತಿ ಮತ್ತು ಇತಿಹಾಸವನ್ನು ಪ್ರತಿಬಿಂಬಿಸುತ್ತವೆ. ಜಾರ್ಜಿಯಾ ಇಂದಿನ ಜಾಗತೀಕರಣ ಯುಗದಲ್ಲೂ ತನ್ನ ಗುಣಸತ್ವವನ್ನು ಕಳೆದುಹೋಗದಂತೆ ಉಳಿಸಿಕೊಂಡ, ಸದಾ ಉಸಿರಾಡುವ ಒಂದು ಸಂಸ್ಕೃತಿಯ ಜೀವಂತ ಪುಸ್ತಕ.

ಜಾರ್ಜಿಯಾ ತನ್ನ ಶಕ್ತಿ ಕೇವಲ ಭೌಗೋಳಿಕವಾಗಿ ಅಲ್ಲ, ಬೌದ್ಧಿಕವಾಗಿ ಹೇಗೆ ವ್ಯಕ್ತವಾಗಬೇಕು ಎಂಬುದನ್ನೂ ಪ್ರಪಂಚಕ್ಕೆ ತೋರಿಸಿದೆ. ಹಲವು ಕವಿಗಳು, ಚಿಂತಕರು, ಸಾಹಿತಿಗಳು ಈ ದೇಶದಲ್ಲಿ ಹುಟ್ಟಿ ಜಗತ್ತಿಗೆ ತಮ್ಮ ಕೊಡುಗೆ ನೀಡಿದ್ದಾರೆ. ಪ್ರಸಿದ್ಧ ಕವಿ ಶೋತಾ ರುಸ್ತಾವೆಲಿಯ The Knight in the Panther's Skin ಎಂಬ ಮಹಾಕಾವ್ಯ ಜಾರ್ಜಿಯಾದ ಅಂತರಂಗಗೀತೆಯಾಗಿದೆ. ಅಷ್ಟೇ ಅಲ್ಲ, ಶೋತಾ ರುಸ್ತಾವೆಲಿ ಹೆಸರನ್ನು ರಾಜಧಾನಿಯಲ್ಲಿರುವ ಟಿಬಿಲಿಸಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಇಡಲಾಗಿದೆ.

ಜಾರ್ಜಿಯಾದಲ್ಲಿ 'ಸುಪರಾ' ಎಂಬುದು ಆತಿಥ್ಯದ ಪ್ರಮುಖ ಆಚರಣೆ. ಸುಪರಾ ಅಂದರೆ ಒಂದು ವಿಶಿಷ್ಟ ರೀತಿಯ ಭೋಜನ ಕೂಟ. ಇಡೀ ಕುಟುಂಬ, ಸ್ನೇಹಿತರು ಹಾಗೂ ಅತಿಥಿಗಳು ಸೇರಿ ಊಟಮಾಡುವ ಸಂಭ್ರಮ. ಈ ಭೋಜನದ ವೇಳೆಯಲ್ಲಿ ಕೆಲವು ವಿಶಿಷ್ಟ ರೂಢಿಗಳಿರುತ್ತವೆ. ಎಲ್ಲರೂ ಒಂದಾಗಿ ಕುಳಿತು ಭೋಜನ ಮಾಡುವುದು- ಆತ್ಮೀಯತೆ ಮತ್ತು ಮಾನವೀಯತೆಯ ಸಂಕೇತ. ಸುಪರಾ ಒಂದು ಭೋಜನಕೂಟವಷ್ಟೇ ಅಲ್ಲ, ಅದು ಜಾರ್ಜಿಯಾದ ಸಂಸ್ಕೃತಿಯ ಬಿಂಬ ಮತ್ತು ಮಾನವೀಯತೆಯ ಪ್ರತಿಬಿಂಬ.

ಹದಿಮೂರು ಸ್ವಾರಸ್ಯಕರ ಸಂಗತಿಗಳು

ಜಾರ್ಜಿಯಾ ಬಗ್ಗೆ ಹೇಳಲು ಹಲವು ಕತೆಗಳಿವೆ, ರೋಚಕ ಸಂಗತಿಗಳಿವೆ. ಆ ಪೈಕಿ ಕೆಲವು..

- ಜಾರ್ಜಿಯಾ ವೈನಿನ ಜನ್ಮಸ್ಥಳ. ವೈನ್ ಇಲ್ಲದ ಜಗತ್ತನ್ನು ಊಹಿಸಿಕೊಳ್ಳುವುದು ಕಷ್ಟ. ಅದರ ಸೃಷ್ಟಿಗೆ ಕಾರಣವಾದ ಜಾರ್ಜಿಯಾಕ್ಕೆ ಇಡೀ ಮನುಕುಲ ಉಪಕೃತವಾಗಿರಬೇಕಂತೆ. ಅವರು ಕನಿಷ್ಠ 8,000 ವರ್ಷಗಳಿಂದ ಈ ಅದ್ಭುತ ಪಾನೀಯವನ್ನು ತಯಾರಿಸುತ್ತಿದ್ದಾರೆ ಮತ್ತು ಕಾಲಕಾಲಕ್ಕೆ ಅದನ್ನು ಪರಿಪೂರ್ಣಗೊಳಿಸುವುದರಲ್ಲಿ ನಿರತರಾಗಿದ್ದಾರೆ. ಕ್ವೆವ್ರಿ ಎಂಬ ಮಣ್ಣಿನ ಜಾಡಿಯನ್ನು ಒಳಗೊಂಡಿರುವ, ವೈನ್ ತಯಾರಿಕೆಗೆ ಅವರು ಬಳಸುವ ತಂತ್ರವನ್ನು ಯುನೆಸ್ಕೋ ಅಮೂರ್ತ ಸಾಂಸ್ಕೃತಿಕ ಪರಂಪರೆಯ ಮಾನವೀಯತೆಯ ಪಟ್ಟಿಯಲ್ಲಿ ಸೇರಿಸಲಾಗಿದೆ.
- ಜಾರ್ಜಿಯಾ ಮೊದಲ ಯುರೋಪಿಯನ್ನರಿಗೆ ನೆಲೆಯಾಗಿತ್ತು. ಕಾಕಸಸ್‌ನ ಅತ್ಯಂತ ಹಳೆಯ ಮಾನವ ತಲೆಬುರುಡೆಗಳು, 1.8 ದಶಲಕ್ಷ ವರ್ಷಗಳ ಹಳೆಯ ಜೆಜ್ವಾ ಮತ್ತು ಮ್ಜಿಯಾ ದಂಪತಿಗಳಿಗೆ ಸೇರಿದವು. ಅವು ಡ್ಮಾನಿಸಿಯಲ್ಲಿ ಪುರಾತತ್ತ್ವ ಶಾಸ್ತ್ರದ ಉತ್ಖನನದ ಸಮಯದಲ್ಲಿ ಪತ್ತೆಯಾಗಿವೆ. ಅವುಗಳನ್ನು ಆಫ್ರಿಕನ್ ಮತ್ತು ಯುರೋಪಿಯನ್ ಪೂರ್ವಜರ ನಡುವಿನ ಪ್ರಮುಖ ಕೊಂಡಿಯಾಗಿ ನೋಡಲಾಗುತ್ತದೆ.
- ಜಾರ್ಜಿಯಾದಲ್ಲಿ 12 ವಿಭಿನ್ನ ಹವಾಮಾನ ವಲಯಗಳಿವೆ. ಉಷ್ಣವಲಯದಿಂದ ಅರೆ ಮರುಭೂಮಿಯವರೆಗೆ ಮತ್ತು ಆಲ್ಪೈನ್‌ನವರೆಗೆ ಹವಾಮಾನವನ್ನು ಹೊಂದಿರುವ ಜಾರ್ಜಿಯಾ, ಭೂಮಿಯ ಮೇಲಿನ ಅತ್ಯಂತ ಪರಿಸರ ವೈವಿಧ್ಯಮಯ ದೇಶಗಳಲ್ಲಿ ಒಂದಾಗಿದೆ.
- ವಿಶ್ವದ ಅತ್ಯಂತ ಆಳವಾದ ಗುಹೆ ಜಾರ್ಜಿಯಾದಲ್ಲಿದೆ. ನೀವು ಗುಹೆಗಳಲ್ಲಿ ಆಸಕ್ತಿ ಹೊಂದಿದ್ದರೆ, ಪಶ್ಚಿಮ ಕಾಕಸಸ್ ಪ್ರದೇಶದ ಗಾಗ್ರಾ ಪರ್ವತ ಶ್ರೇಣಿಯ ನಡುವೆ ಅಡಗಿರುವ ವೆರಿಯೋವ್ಕಿನಾ ಗುಹೆಯನ್ನು ಇಷ್ಟಪಡುತ್ತೀರಿ. ಈ ಗುಹೆ 2,212 ಮೀಟರ್ ಆಳವಾಗಿದ್ದು, ಭೂಮಿಯ ಮೇಲಿನ ಅತ್ಯಂತ ಆಳವಾದ ಗುಹೆಯಾಗಿದೆ!
- ಕಾಕಸಸ್ ಯುರೋಪಿನ ಅತಿ ಎತ್ತರದ ಪರ್ವತ ಶ್ರೇಣಿಯಾಗಿದೆ. ಹೆಚ್ಚಿನ ಜನರು ಆಲ್ಪ್ಸ್ ಯುರೋಪಿನ ಅತಿ ಎತ್ತರದ ಪರ್ವತ ಶ್ರೇಣಿ ಎಂದು ಭಾವಿಸಿದ್ದಾರೆ. ಆದರೆ ಅದು ನಿಜವಲ್ಲ! ಜಾರ್ಜಿಯಾ ಮತ್ತು ರಷ್ಯಾದ ನಡುವಿನ ಗಡಿಯಲ್ಲಿ ವ್ಯಾಪಿಸಿರುವ ಕಾಕಸಸ್ ಪರ್ವತಗಳು ವಾಸ್ತವವಾಗಿ ಹೆಚ್ಚು ಎತ್ತರವಾಗಿವೆ. ಅತಿ ಎತ್ತರದ ಶಿಖರ ರಷ್ಯಾದಲ್ಲಿದೆ, ಆದರೆ ಜಾರ್ಜಿಯಾದ ಅತಿ ಎತ್ತರದ ಪರ್ವತವಾದ 5,193 ಮೀಟರ್ ಎತ್ತರವಿರುವ ಶಖರಾ ಇನ್ನೂ ಫ್ರಾನ್ಸ್‌ನ ಮಾಂಟ್ ಬ್ಲಾಂಕ್ ಗಿಂತ ಸುಮಾರು 400 ಮೀಟರ್ ಎತ್ತರವಾಗಿದೆ.
- ನೀವು ಇಲ್ಲಿ ಯುರೋಪಿನ ಅತಿ ಎತ್ತರದ ವಸಾಹತು ಪ್ರದೇಶದಲ್ಲಿ ವಾಸಿಸಬಹುದು. ಸ್ವಾನೆಟಿ ಪರ್ವತ ಪ್ರದೇಶದಲ್ಲಿ ನೆಲೆಗೊಂಡಿರುವ ಉಷ್ಗುಲಿಯನ್ನು ರೂಪಿಸುವ ಪ್ರಾಚೀನ ಹಳ್ಳಿಗಳು ಯುರೋಪಿನ ಅತಿ ಎತ್ತರದ ವಸಾಹತುಗಳಾಗಿವೆ, ಇವು ಸಮುದ್ರ ಮಟ್ಟದಿಂದ 2,100 ಮೀಟರ್ ಎತ್ತರದಲ್ಲಿವೆ. ಬೆರಗುಗೊಳಿಸುವ ಭೂದೃಶ್ಯಗಳನ್ನು ನೋಡಿದರೆ, ಅವರು ಇಲ್ಲಿ ನೆಲೆಸಲು ಏಕೆ ನಿರ್ಧರಿಸಿದರು ಎಂಬುದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು.
- ಜಾರ್ಜಿಯಾ ತನ್ನದೇ ಆದ ವಿಶಿಷ್ಟ ಭಾಷೆಯನ್ನು ಹೊಂದಿದೆ. ಜಾರ್ಜಿಯನ್ ಭಾಷೆಯು ಗ್ರೀಕ್ ಮತ್ತು ಇರಾನಿನ ಭಾಷೆಗಳಿಂದ ವಿಶಿಷ್ಟ ಪ್ರಭಾವವನ್ನು ಹೊಂದಿದ್ದು, ಇದು ತನ್ನದೇ ಆದ ವರ್ಣಮಾಲೆ ಹೊಂದಿದೆ. ಇತಿಹಾಸದುದ್ದಕ್ಕೂ ಭಾಷೆಯ 3 ವಿಭಿನ್ನ ಪುನರಾವರ್ತನೆಗಳು ನಡೆದಿದ್ದು, ಇಂದು ಬಳಸಲಾಗುವ ಭಾಷೆಯಲ್ಲಿ 33 ಅಕ್ಷರಗಳಿವೆ. ಇದಲ್ಲದೇ, ಜಾರ್ಜಿಯನ್ ಭಾಷೆಯು ಲಿಂಗ ಅಥವಾ ಕ್ಯಾಪಿಟಲ್ ಅಕ್ಷರಗಳನ್ನು ಬಳಸುವುದಿಲ್ಲ. ಅದರ ದೀರ್ಘ ಇತಿಹಾಸದಲ್ಲಿ ಭಾಷೆ ಹೆಚ್ಚು ಬದಲಾಗಿಲ್ಲ. ಅದಕ್ಕಾಗಿಯೇ ಶಾಲೆಯಲ್ಲಿ ಮಕ್ಕಳು 15ನೇ ಶತಮಾನದ ಪಠ್ಯವನ್ನು ಸುಲಭವಾಗಿ ಓದುತ್ತಾರೆ. ಏಕೆಂದರೆ ಅವರಿಗೆ ಹಳೆಯ ಪದಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಯಾವುದೇ ಸಮಸ್ಯೆ ಇಲ್ಲ.
- ಜಾರ್ಜಿಯಾ ಜೋಸೆಫ್ ಸ್ಟಾಲಿನ್ ಜನಿಸಿದ ದೇಶ. 1878ರಲ್ಲಿ ಸ್ಟಾಲಿನ್, ಗೋರಿ ಎಂಬ ನಗರದಲ್ಲಿ ಜನಿಸಿದ. ಅದು ಆ ಸಮಯದಲ್ಲಿ ರಷ್ಯಾದ ಸಾಮ್ರಾಜ್ಯದ ಭಾಗವಾಗಿತ್ತು. ಈಗ ಗೋರಿಯಲ್ಲಿ ಸ್ಟಾಲಿನ್‌ಗೆ ಮೀಸಲಾಗಿರುವ ವಸ್ತು ಸಂಗ್ರಹಾಲಯವಿದೆ, ಅದು ಆತನ ಜೀವನವನ್ನು ಸಂಪೂರ್ಣವಾಗಿ ಪರಿಚಯಿಸುತ್ತದೆ.
- ಜಾರ್ಜಿಯನ್ನರು ತಮ್ಮ ದೇಶಕ್ಕೆ ಬೇರೆ ಹೆಸರನ್ನು ಹೊಂದಿದ್ದಾರೆ. ಸ್ಥಳೀಯರು ಇದನ್ನು ಸಕಾರ್ಟ್ವೆಲೊ ಎಂದು ಕರೆಯುತ್ತಾರೆ ಮತ್ತು ತಮ್ಮನ್ನು ಕಾರ್ಟ್ವೆಲಿ ಎಂದು ಕರೆದುಕೊಳ್ಳುತ್ತಾರೆ, ಇದು ಬಹುಶಃ ಜಾರ್ಜಿಯಾದ ಮಧ್ಯ ಪ್ರದೇಶವಾದ ಕಾರ್ಟ್ಲಿಯಿಂದ ಬಂದಿದೆ. ಜಾರ್ಜಿಯಾ ಎಂಬ ಹೆಸರು ಎಲ್ಲಿಂದ ಬಂದಿದೆ ಎಂಬುದರ ಕುರಿತು ಕೆಲವು ಚರ್ಚೆಗಳಿವೆ. ಅದು ಈ ದೇಶದ ಪೋಷಕ ಸಂತ ಸೇಂಟ್ ಜಾರ್ಜ್‌ನಿಂದ ಬಂದಿದೆಯೇ ಅಥವಾ ಕೃಷಿ ಬುಡಕಟ್ಟುಗಳಿಗೆ ಗ್ರೀಕ್ ಹೆಸರಾದ ಜಾರ್ಜಿಯಿಂದ ಬಂದಿದೆಯೇ ಅಥವಾ ತೋಳಗಳ ಭೂಮಿ ಎಂದರ್ಥವಿರುವ ಪರ್ಷಿಯನ್-ಅರೇಬಿಕ್ ಪದ ಗುರ್ಗ್‌ನಿಂದ ಬಂದಿದೆಯೇ ಎಂಬುದು ಇನ್ನೂ ಚರ್ಚಾಸ್ಪದ.
- ಜಾರ್ಜಿಯಾ ಭೇಟಿ ನೀಡಲು ಅತ್ಯಂತ ಸುರಕ್ಷಿತ ದೇಶ. 2017ರಲ್ಲಿ ವಿಶ್ವದಲ್ಲಿ ಭೇಟಿ ನೀಡಲು 7ನೇ ಸುರಕ್ಷಿತ ದೇಶವೆಂದು ರೇಟಿಂಗ್ ಪಡೆದಿತ್ತು. ಆದರೆ ರಷ್ಯಾದ ಗಡಿಯುದ್ದಕ್ಕೂ ಕೆಲವು ಪ್ರದೇಶಗಳಿಂದ ದೂರವಿರುವುದು ಕ್ಷೇಮ ಎಂದು ಅಲ್ಲಿನ ಸ್ಥಳೀಯರು ಹೇಳುತ್ತಾರೆ.
- ಜಾರ್ಜಿಯಾ ಅತ್ಯಂತ ಹಳೆಯ ಕ್ರಿಶ್ಚಿಯನ್ ದೇಶಗಳಲ್ಲಿ ಒಂದಾಗಿದೆ. ನಾಲ್ಕನೇ ಶತಮಾನದ ಆರಂಭದಲ್ಲಿ ಕ್ರಿಶ್ಚಿಯನ್ ಧರ್ಮವನ್ನು ತನ್ನ ರಾಜ್ಯಧರ್ಮವಾಗಿ ಅಳವಡಿಸಿಕೊಂಡಿದೆ. ಜಾರ್ಜಿಯನ್ ಆರ್ಥೊಡಾಕ್ಸ್ ಚರ್ಚ್ ರಾಷ್ಟ್ರದ ಇತಿಹಾಸ ಮತ್ತು ಸಾಂಸ್ಕೃತಿಕ ಗುರುತಿನಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸ್ವೆಟಿಟ್ಸ್ಕೋವೆಲಿ ಕ್ಯಾಥೆಡ್ರಲ್ ಮತ್ತು ಜ್ವಾರಿ ಮೊನಾಸ್ಟರಿ ಸೇರಿದಂತೆ ಅನೇಕ ಪ್ರಾಚೀನ ಚರ್ಚುಗಳು ಮತ್ತು ಧರ್ಮಶಾಲೆಗಳು ಜಾರ್ಜಿಯಾದಲ್ಲಿವೆ.
- ಜಾರ್ಜಿಯಾ ವಿಶ್ವದ ಅತ್ಯಂತ ಹಳೆಯ ಯಹೂದಿ ಸಮುದಾಯಗಳಲ್ಲಿ ಒಂದನ್ನು ಹೊಂದಿದ್ದು, 2,600 ವರ್ಷಗಳ ಹಿಂದಿನ ಇತಿಹಾಸವನ್ನು ಹೊಂದಿದೆ. ಜಾರ್ಜಿಯಾದ ಯಹೂದಿ ಸಮುದಾಯವು ದೇಶದ ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಆ ಸಂಪ್ರದಾಯಗಳನ್ನು ಕಾಪಾಡಿಕೊಳ್ಳುವ ಮೂಲಕ ಜಾರ್ಜಿಯಾದ ವೈವಿಧ್ಯಮಯ ಸಾಂಸ್ಕೃತಿಕ ಆಯಾಮಕ್ಕೆ ತನ್ನದೇ ಕೊಡುಗೆ ನೀಡಿದೆ.
- ಜಾರ್ಜಿಯನ್ ಪಾಲಿಫೋನಿಕ್ ಗಾಯನವು ಅದರ ಸಂಕೀರ್ಣ ಸಾಮರಸ್ಯ ಮತ್ತು ಶ್ರೀಮಂತ ಗಾಯನ ರಚನೆಗಳಿಂದ ಪ್ರಸಿದ್ಧವಾಗಿದೆ. ಇದು ದೇಶದ ಸಾಂಸ್ಕೃತಿಕ ಪರಂಪರೆಯ ವಿಶಿಷ್ಟ ಮತ್ತು ಅವಿಭಾಜ್ಯ ಅಂಗವೂ ಹೌದು. ಯುನೆಸ್ಕೋದಿಂದ ಅಮೂರ್ತ ಸಾಂಸ್ಕೃತಿಕ ಪರಂಪರೆಯೆಂದು ಪರಿಗಣಿತವಾಗಿರುವ ಈ ಪ್ರಾಚೀನ ಸಂಪ್ರದಾಯವನ್ನು ವಿವಿಧ ಪ್ರಾದೇಶಿಕ ಶೈಲಿಗಳಲ್ಲಿ ಪ್ರದರ್ಶಿಸಲಾಗುತ್ತದೆ. ಇದು ಜಾರ್ಜಿಯನ್ ಆಚರಣೆಗಳು ಮತ್ತು ಧಾರ್ಮಿಕ ಸಮಾರಂಭಗಳ ಅತ್ಯಗತ್ಯ ಅಂಶವಾಗಿದೆ.

ಮುಸ್ಸೋಲಿನಿಯ ಮೊದಲ ಮಡದಿ ಮತ್ತು ಮಗನ ಮರುಕಗಾಥೆ

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅವಂಟಿ!' ಎಂಬ ಹೆಸರಿನ ಇಟಾಲಿಯನ್ ವೃತ್ತಪತ್ರಿಕೆಯ ಸಂಪಾದಕನಾಗಿ ನೇಮಕಗೊಂಡಾಗ ಬೆನಿಟೊ ಮುಸ್ಸೊಲಿನಿಯ ವಯಸ್ಸು 30ರ ಆಸುಪಾಸು. ಆಗಿನ್ನೂ ಆತ ಸಮಾಜವಾದಿ ಧೋರಣೆಯವನೇ ಆಗಿದ್ದನು. ಆತ ಸೇರಿಕೊಂಡಿದ್ದ ಪತ್ರಿಕೆಯೂ ಇಟಲಿಯ ಸೋಷಿಯಲಿಸ್ಟ್ ಪಕ್ಷದ ಮುಖವಾಣಿಯೇ ಆಗಿತ್ತು. ಇಟಾಲಿಯನ್ ಭಾಷೆಯಲ್ಲಿ Avanti ಎಂದರೆ ಇಂಗ್ಲಿಷ್‌ನಲ್ಲಿ Forward ಎಂಬ ಅರ್ಥವಂತೆ. ಪುರೋಗಾಮಿ ಪ್ರಜಾಪ್ರಭುತ್ವದ ಚಿಂತನೆ ಆ ಪಾರ್ಟಿಯದೂ, ಪತ್ರಿಕೆಯದೂ ಮತ್ತು ಅಲ್ಲಿಯವರೆಗೆ ಮುಸ್ಸೊಲಿನಿಯದೂ. 1914ರಲ್ಲಿ ಮೊದಲ ಪ್ರಪಂಚಯುದ್ಧ ಆರಂಭವಾಗುವವರೆಗೂ ಮುಸ್ಸೊಲಿನಿ ಅವಂಟಿ ಪತ್ರಿಕೆಗೆ ಕೆಲಸ ಮಾಡಿದ್ದನು. ಯುದ್ಧದ ಬಗೆಗೆ ಸೋಷಿಯಲಿಸ್ಟ್ ಪಾರ್ಟಿಯದು ತಟಸ್ಥ ಧೋರಣೆಯಾದರೆ ಮುಸ್ಸೊಲಿನಿಗೆ ಎಲ್ಲಿಲ್ಲದ ಸಮರೋತ್ಸಾಹ. ಇಟಲಿ ದೇಶವೂ ಯುದ್ಧದಲ್ಲಿ ಸೇರಿಕೊಳ್ಳಬೇಕೆಂಬುದು ಆತನ ಉತ್ಕಟ ಇಚ್ಛೆ. ಆ ಭಿನ್ನಾಭಿಪ್ರಾಯದಿಂದಾಗಿಯೇ ಆತ ಅವಂಟಿ ಪತ್ರಿಕೆಯನ್ನು ಬಿಡಬೇಕಾಯಿತು. ಯುದ್ಧಕ್ಕೆ ಪ್ರಚೋದನೆ ನೀಡುತ್ತ ತನ್ನದೇ ಮಾಲೀಕತ್ವದ ಹೊಸದೊಂದು ಪತ್ರಿಕೆಯನ್ನು ಆರಂಭಿಸಬೇಕೆಂದು ಮುಸ್ಸೊಲಿನಿ ಯೋಜನೆ ಹಾಕಿಕೊಂಡನು. ಅದಕ್ಕೆಂದೇ Il Popolo d'Italia ಎಂದು ಪತ್ರಿಕೆಗೆ ಹೆಸರಿಟ್ಟನು. ಇಂಗ್ಲಿಷ್‌ನಲ್ಲಿ ಆ ಹೆಸರಿನ ಅರ್ಥ The People of Italy ಎಂದು.

ಸ್ವಂತ ಪತ್ರಿಕೆ ನಡೆಸುವುದೆಂದರೆ ಬಂಡವಾಳ ಬೇಕಲ್ಲ? ಮುಸ್ಸೊಲಿನಿ ಆಗರ್ಭ ಶ್ರೀಮಂತನೇನಲ್ಲ. ಆತನ ತಂದೆ ಒಬ್ಬ ಕಮ್ಮಾರವೃತ್ತಿಯವನಾಗಿದ್ದನು. ಶಾಲಾಬಾಲಕನಾಗಿದ್ದಾಗಲೇ ಮುಸ್ಸೊಲಿನಿಯದು ಉಗ್ರ, ಮುಂಗೋಪಿ ಸ್ವಭಾವ. ಒಂದೆರಡು ಬಾರಿ ಸಿಟ್ಟಿನಿಂದ ಸಹಪಾಠಿಗಳನ್ನು ಇರಿದ ಘಟನೆಗಳೂ ನಡೆದಿದ್ದವು. ಒಟ್ಟಾರೆಯಾಗಿ ಇತ್ತ ಅಷ್ಟೇನೂ ಜನಬಲವೂ ಇಲ್ಲದ, ಅತ್ತ ಧನಬಲವೂ ಇಲ್ಲದ, ಆದರೆ ಕಂಗಳಲ್ಲಿ ಸಾಕಷ್ಟು ಕನಸುಗಳಿದ್ದ ವ್ಯಕ್ತಿತ್ವ ಆತನದು. ಆ ಸಮಯದಲ್ಲಿ ಮುಸ್ಸೊಲಿನಿಗೆ ಒಬ್ಬಳು ಪ್ರೇಯಸಿಯಿದ್ದಳು. ಇಡಾ ಡೆಲ್ಸರ್ ಎಂದು ಆಕೆಯ ಹೆಸರು. ಮಿಲಾನ್ ನಗರದಲ್ಲಿ ಆಕೆ ಒಂದು ಬ್ಯೂಟಿ ಪಾರ್ಲರ್ ನಡೆಸುತ್ತಿದ್ದಳು. ಮುಸ್ಸೊಲಿನಿ ಮತ್ತು ಇಡಾ ಪರಸ್ಪರ ಪ್ರೀತಿಸಿ ಮದುವೆಯಾದರು. ಇಡಾ ತನ್ನ ಬ್ಯೂಟಿ ಪಾರ್ಲರನ್ನು ಮಾರಿದಳು. ತನ್ನಲ್ಲಿದ್ದ ಆಭರಣಗಳನ್ನೂ ಗಿರವಿಗೆ ಇಟ್ಟಳು. ಬಂದ ದುಡ್ಡನ್ನು ಪತ್ರಿಕೆ ಆರಂಭಿಸುವುದಕ್ಕೆ ಬಂಡವಾಳವೆಂದು ಮುಸ್ಸೊಲಿನಿಯ ಕೈಗಿತ್ತಳು. ಪತ್ರಕರ್ತ ಮುಸ್ಸೊಲಿನಿ 1915ರಲ್ಲಿ ಪುತ್ರಕರ್ತನೂ ಆದನು. ಮಗುವಿಗೆ ಬೆನಿಟೊ ಅಲ್ಬಿನೊ ಮುಸ್ಸೊಲಿನಿ ಎಂದೇ ಹೆಸರಿಟ್ಟರು. ಹೆಸರಿನ ಗೊಂದಲ ಅನಿಸಿದರೆ 'ಜೂನಿಯರ್ ಮುಸ್ಸೊಲಿನಿ' ಎನ್ನಿ. ಅಂದಹಾಗೆ ಸೀನಿಯರ್ ಮುಸ್ಸೊಲಿನಿಯ ಪೂರ್ಣ ಹೆಸರು ಬೆನಿಟೊ ಎಮಿಲ್ಕೇರ್ ಆಂಡ್ರಿಯಾ ಮುಸ್ಸೊಲಿನಿ ಎಂಬುದಾಗಿತ್ತು.

ಯಾವ ಕೆಟ್ಟ ಗಳಿಗೆಯಲ್ಲಿ ಹುಟ್ಟಿತ್ತೋ ಪಾಪ, ಆ ಪಾಪುವಿಗೆ ಒಂದು ತಿಂಗಳಾಗುವುದರೊಳಗೆ ಹಿರಿಯ ಮುಸ್ಸೊಲಿನಿ ಒಂದು ದಿನ ಇದ್ದಕ್ಕಿದ್ದಂತೆ- ಅಥವಾ ಸಿದ್ಧಾರ್ಥಬುದ್ಧನಂತೆ ಎನ್ನೋಣ- ಮಡದಿ ಮತ್ತು ಮಗನನ್ನು ಬಿಟ್ಟು ಎದ್ದೋದನು! ಎಲ್ಲಿಗೆ? ಅದಾಗಲೇ ಅವನಿಗೆ ಪರಿಚಯವಾಗಿದ್ದ ರಚೆಲ್ ಗಿಯ್ಡಿ ಎಂಬ ಮಹಿಳೆಯಿದ್ದಲ್ಲಿಗೆ! ಆಮೇಲೆ ಮುಸ್ಸೊಲಿನಿ ಆಕೆಯನ್ನೇ ಮದುವೆಯೂ ಆದನು, ಇಡಾ ಡೆಲ್ಸರ್‌ಗೆ ವಿಚ್ಛೇದನ ಕೊಡದೆಯೇ. ಅಲ್ಲಿಂದ ಶುರುವಾಯ್ತು ನೋಡಿ ಆ ನತದೃಷ್ಟ ಅಮ್ಮ-ಮಗನ ಕರುಣಾಜನಕ ಕಥೆ.

ಇಟಲಿಯು ಕೊನೆಗೂ 1915ರಲ್ಲಿ ಪ್ರಪಂಚಯುದ್ಧದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿತು. ಸಮರೋತ್ಸಾಹಿ ಮುಸ್ಸೊಲಿನಿ ಇಟಲಿಯ ಸೈನ್ಯವನ್ನು ಸೇರಿಕೊಂಡನು. ಯುದ್ಧ ಮುಗಿದ ಮೇಲೆ ರಾಜಕೀಯ ಪ್ರವೇಶಿಸಿ 1921ರಲ್ಲಿ ನ್ಯಾಷನಲ್ ಫ್ಯಾಸಿಸ್ಟ್ ಪಾರ್ಟಿಯನ್ನು ಆರಂಭಿಸಿದನು. ನಿರಂಕುಶ ಪ್ರಭುತ್ವ ಎಂದು ಪಾರ್ಟಿಯ ಹೆಸರಿನಲ್ಲೇ ಸೂಚನೆಯಿತ್ತು. ಅದೇ ವರ್ಷ ಆತ ಇಟಲಿಯ ಸಂಸತ್ಸದಸ್ಯನಾಗಿಯೂ ಚುನಾಯಿತನಾದನು. ಬರೀ ಸಂಸತ್ಸದಸ್ಯನಾಗಿದ್ದು ಏನು ಪ್ರಯೋಜನ ಪ್ರಧಾನಮಂತ್ರಿಯೇ ಆಗುವೆನು ಎಂದುಕೊಂಡ ಮುಸ್ಸೊಲಿನಿ 1922ರಲ್ಲಿ ಸುಮಾರು 25000 ಸೇನಾಸದೃಶ ಯೋಧರೊಡನೆ (ಕಪ್ಪಂಗಿ ದಳ ಎಂದೇ ಪ್ರಸಿದ್ಧಿ) ರೋಮ್ ನಗರಕ್ಕೆ ಮುತ್ತಿಗೆ ಹಾಕಿದನು. ಆಶ್ಚರ್ಯವೆಂಬಂತೆ ಅಲ್ಲಿ ರೋಮ್ ಚಕ್ರವರ್ತಿಯಿಂದ ಯಾವೊಂದು ಪ್ರತಿರೋಧವೂ ಕಂಡುಬರಲಿಲ್ಲ! ಇಟಲಿಯ ಪ್ರಧಾನಿ ಹುದ್ದೆಗೆ ಮುಸ್ಸೊಲಿನಿಗೆ ಒಪ್ಪಿಗೆಯ ಮುದ್ರೆ ಸಿಕ್ಕಿತು. ಅಧಿಕಾರದ ಗದ್ದುಗೆಯೇರಿದ ಮೇಲೆ ದಿನಕಳೆದಂತೆಲ್ಲ ಮುಸ್ಸೊಲಿನಿಯ 'ಮುಸ್ಸೊಲಿನಿತ್ವ' ಜಾಹೀರಾಗತೊಡಗಿತು. ಇಟಲಿಯ ಪ್ರಜಾಪ್ರಭುತ್ವದ ಸ್ತಂಭಗಳೆಲ್ಲ ಬಲಹೀನವಾಗತೊಡಗಿದವು. ಇಟಾಲಿಯನ್ ಭಾಷೆಯಲ್ಲಿ Il Duce, ಅಂದರೆ ಇಂಗ್ಲಿಷ್‌ನಲ್ಲಿ The Leader ಎಂದು ಕರೆಸಿಕೊಂಡ ಮುಸ್ಸೊಲಿನಿ ಸರ್ವಾಧಿಕಾರಿಯಾದನು.

ಸರಿಸುಮಾರು ಅದೇ ಹೊತ್ತಿಗೆ ರಷ್ಯಾದಲ್ಲಿ ಜೋಸೆಫ್ ಸ್ಟಾಲಿನ್ ಮತ್ತು ಜರ್ಮನಿಯಲ್ಲಿ ಅಡಾಲ್ಫ್ ಹಿಟ್ಲರ್ ಸಹ ಅಧಿಕಾರದಲ್ಲಿದ್ದರು ಅಥವಾ ಸರ್ವಾಧಿಕಾರದತ್ತ ದಾಪುಗಾಲಿಟ್ಟಿದ್ದರು. ಒಂದು ನಮೂನೆಯ ಕ್ರೂರ ವರ್ಚಸ್ಸಿನ ವ್ಯಕ್ತಿತ್ವದಲ್ಲಿ ಆ ಮೂವರಿಗೂ ಪೈಪೋಟಿಯೂ ಇತ್ತು. ಹಿಟ್ಲರ್ ಮುಸ್ಸೊಲಿನಿಯನ್ನು ತನ್ನ ಆದರ್ಶ ಎಂದು ತಿಳಿದುಕೊಂಡಿದ್ದೂ ಇತ್ತು. ಆದರೂ ಇಟಲಿಯ ಮಟ್ಟಿಗೆ ಮುಸ್ಸೊಲಿನಿ, ಅವನ ಎರಡನೆಯ ಹೆಂಡತಿ ರಚೆಲ್ ಗಿಯ್ಡಿ ಮತ್ತು ಆಕೆಯಿಂದ ಹುಟ್ಟಿದ ಮಕ್ಕಳನ್ನು ನಿರಂಕುಶ ಪ್ರಭುತ್ವದ ಶಿಖರಬಿಂದು ಎಂಬ ಭಯವನ್ನೂ ಭ್ರಮೆಯನ್ನೂ ಜನಸಾಮಾನ್ಯರಲ್ಲಿ ತುಂಬುವ ಪ್ರಯತ್ನ ನಡೆಯಿತು. ಅದಕ್ಕಿದ್ದ ಒಂದೇ

ತೊಂದರೆ ಅಥವಾ ಅಡ್ಡಗಾಲೆಂದರೆ ಮುಸ್ಸೊಲಿನಿಯ ಮೊದಲ ಮಡದಿ ಇಡಾ ಡೆಲ್ಸರ್. ಆಕೆ ಸಾಧ್ಯವಾದಲ್ಲೆಲ್ಲ ಜನರನ್ನು ಒಟ್ಟುಗೂಡಿಸಿ ತಾನೇ ಮುಸ್ಸೊಲಿನಿಯ ಅಧಿಕೃತ ಪತ್ನಿ, ತನಗೆ ಹುಟ್ಟಿದ ಬೆನಿಟೊ ಅಲ್ಬಿನೊ ಮುಸ್ಸೊಲಿನಿಯೇ ಹಿರಿಯ ಮುಸ್ಸೊಲಿನಿಯ ಉತ್ತರಾಧಿಕಾರಿ ಎಂದು ತಿಳಿಹೇಳಲು ಯತ್ನಿಸುತ್ತಿದ್ದಳು. ಕೆಲವೊಮ್ಮೆ ಅವಳ ಪ್ರಯತ್ನಗಳು ಗಲಭೆ ದೊಂಬಿಯ ರೂಪವನ್ನೂ ತಾಳುತ್ತಿದ್ದವಂತೆ. ಆದರೆ ಮುಸ್ಸೊಲಿನಿ ತನ್ನ ಮೊದಲ ಹೆಂಡತಿಯನ್ನು ಮಗು ಹುಟ್ಟಿದ ಒಂದು ತಿಂಗಳೊಳಗೇ ಬಿಟ್ಟುಹೋಗಿದ್ದರಿಂದ ಆ ಮಗುವಿನ ಬಗ್ಗೆ ದೇಶದ ಪ್ರಜೆಗಳಿಗೆ ಗೊತ್ತೇ ಇರಲಿಲ್ಲ. ಇಡಾ ಹೇಳಿದ್ದನ್ನು ನಂಬುವವರ ಸಂಖ್ಯೆ ಹೆಚ್ಚಿರಲಿಲ್ಲ.

ಮುಸ್ಸೊಲಿನಿ ಮೊದಲ ಮದುವೆಯಿಂದ ವಿಚ್ಛೇದನ ಪಡೆಯದೆಯೇ ಎರಡನೆಯ ಮದುವೆಯಾಗಿದ್ದಾನೆ, ಮೊದಲ ಹೆಂಡತಿ ಮತ್ತು ಮಗುವನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬ ಆರೋಪವೇ ಸಾಕಾಗುತ್ತಿತ್ತೇನೋ ಅವನನ್ನು ಅಧಿಕಾರದಿಂದ ಇಳಿಸಲಿಕ್ಕೆ. ಆದರೆ ವಿರೋಧಿಗಳಲ್ಲಿ ಒಗ್ಗಟ್ಟಿರಲಿಲ್ಲ, ಅಲ್ಲದೇ ಅದು ತೀರಾ ವ್ಯಕ್ತಿಗತ ವಿಚಾರವಾದ್ದರಿಂದ ಇಡೀ ದೇಶದಲ್ಲಿ ಸಂಚಲನ ಉಂಟುಮಾಡುವುದು ಕಷ್ಟವೇ ಇತ್ತು. ಹಾಗಾಗಿ ಇಡಾ ಡೆಲ್ಸರ್‌ಳ ಆ ಹೋರಾಟ ಅರಣ್ಯರೋದನವೇ ಆಯಿತು. ಆದರೆ ಆಕೆಯ ಬಳಿ ಮುಸ್ಸೊಲಿನಿಯ ಬಗ್ಗೆ ಇನ್ನೊಂದು ಘನತರ ಆರೋಪವೂ ಇತ್ತು. ಅದೇನೆಂದರೆ, ಮೊದಲನೆಯ ಪ್ರಪಂಚಯುದ್ಧದಲ್ಲಿ ಇಟಲಿಯೂ ಪಾಲ್ಗೊಳ್ಳುವಂತೆ ಮುಸ್ಸೊಲಿನಿ ಅಷ್ಟೆಲ್ಲ ಪ್ರಚಾರ-ಪ್ರಭಾವ ಬೀರಲು ಯತ್ನಿಸಿದ್ದು ಹಾಗೆ ಮಾಡಲಿಕ್ಕೆ ಆತನಿಗೆ ಫ್ರೆಂಚ್ ಸರಕಾರವು ಲಂಚ ಕೊಟ್ಟಿದ್ದರಿಂದ ಎಂದು. ಅದರಲ್ಲೇನಾದರೂ ಸತ್ಯಾಂಶ ಹೊರಬಂದಿದ್ದರೆ ಮುಸ್ಸೊಲಿನಿಯ ಅಧಿಕಾರಕ್ಕೆ ಸಂಚಕಾರ ಬರುತ್ತಿತ್ತು. ಆದರೂ ಒಟ್ಟಾರೆಯಾಗಿ ಇಡಾಳಿಂದ ಕಿರಿಕಿರಿ ತಪ್ಪಿದ್ದಲ್ಲ ಎಂದುಕೊಂಡ ಮುಸ್ಸೊಲಿನಿ ಆಕೆಯ ಮೇಲೆ ಮತ್ತು ಮಗ ಜ್ಯೂನಿಯರ್ ಮುಸ್ಸೊಲಿನಿಯ ಮೇಲೆ ಕಣ್ಗಾವಲು ಇಡುವುದಕ್ಕೆ ತನ್ನ ಫ್ಯಾಸಿಸ್ಟ್ ಪಾರ್ಟಿಯ ಏಜೆಂಟರನ್ನು ನೇಮಿಸಿದನು. ಆ ಏಜೆಂಟರು ಇಡಾ ಡೆಲ್ಸರ್ ಮಗನೊಂದಿಗೆ ವಾಸವಾಗಿದ್ದ ಮನೆಗೆ ನುಗ್ಗಿ ಮ್ಯಾರೇಜ್ ಸರ್ಟಿಫಿಕೇಟ್, ಜನನ ಪ್ರಮಾಣಪತ್ರ ಮತ್ತು ಅಂಥ ಇತರ ದಾಖಲೆಪತ್ರಗಳನ್ನು ನಾಶಪಡಿಸಿದರು. ಮುಸ್ಸೊಲಿನಿಗೂ ಇಡಾಗೂ ಏನೂ ಸಂಬಂಧವಿಲ್ಲವೆಂದು ಸ್ಥಾಪಿಸುವುದು ಅವರ ಗುರಿಯಾಗಿತ್ತು. ಆದರೂ ಕೆಲವು ದಾಖಲೆಪತ್ರಗಳು ಆ ಏಜೆಂಟರ ಕಣ್ತಪ್ಪಿಸಿ ಉಳಿದುಕೊಂಡವು. 1915ರ ಆರಂಭದಲ್ಲಿ ಮುಸ್ಸೊಲಿನಿ ಸಹಿ ಮಾಡಿದ್ದ ಒಂದು ಅಫಿಡವಿಟ್- ಅದರಲ್ಲಿ ಇಡಾ ಡೆಲ್ಸರ್ ಮುಸ್ಸೊಲಿನಿಯ ಪತ್ನಿ, ಮತ್ತು ಬೆನಿಟೊ ಅಲ್ಬಿನೊ ಮುಸ್ಸೊಲಿನಿ ಹಿರಿಯ ಮುಸ್ಸೊಲಿನಿಯ ಪುತ್ರ ಎಂದು ಸ್ಪಷ್ಟವಾಗಿ ಬರೆದದ್ದಿತ್ತು. ಅವರಿಬ್ಬರಿಗೆ ಜೀವನಾಂಶ ಒದಗಿಸುವುದು ಮುಸ್ಸೊಲಿನಿಯ ಕರ್ತವ್ಯ ಮತ್ತು ಜವಾಬ್ದಾರಿ ಎಂದು ಕೂಡ ಇತ್ತು. 1916ರ ಇನ್ನೊಂದು ದಾಖಲೆಪತ್ರದಲ್ಲಿ ಈ ಹಿಂದಿನ ಅಫಿಡವಿಟ್ಟನ್ನು ಮುಸ್ಸೊಲಿನಿ ಸದಾ ಮಾನ್ಯ ಮಾಡಬೇಕೆಂಬ ಆದೇಶವೂ ಇತ್ತು. ಆದರೆ ಆ ರೀತಿ ಆತ ನಡೆದುಕೊಂಡಿರಲಿಲ್ಲ ಎನ್ನುವುದು ಬೇರೆ ಮಾತು.

ಅಷ್ಟಾದರೂ ಇಡಾ ಡೆಲ್ಸರ್ ತನ್ನ ಹೋರಾಟವನ್ನು ನಿಲ್ಲಿಸಲಿಲ್ಲ. ಮುಸ್ಸೊಲಿನಿಯ ಸರಕಾರದ ಮತ್ತು ಆತನ ಫ್ಯಾಸಿಸ್ಟ್ ಪಾರ್ಟಿಯ ಬೇರೆಬೇರೆ ಅಧಿಕಾರಿಗಳ ಕಾಲು ಹಿಡಿದು ತನಗೆ ನ್ಯಾಯ ಒದಗಿಸುವಂತೆ ಗೋಗರೆದಳು. ಇದು ಸುಮಾರು 1926ರವರೆಗೂ ಮುಂದುವರಿಯಿತು. ಆ ವರ್ಷ ಆಕೆಯನ್ನು ಬಂಧಿಸಲಾಯಿತು. ಮಾಮೂಲಿ ಸೆರೆಮನೆಯಲ್ಲಲ್ಲ, ಹುಚ್ಚಾಸ್ಪತ್ರೆಯಲ್ಲಿ ಸೇರಿಸಲಾಯಿತು! 1937ರಲ್ಲಿ ನಿಧನ ಹೊಂದುವವರೆಗೂ ಇಡಾ ಅಲ್ಲೇ ಇದ್ದಳು. ಆಕೆ ಸತ್ತಾಗ ಮಿದುಳಿನ ರಕ್ತಸ್ರಾವವೇ ಕಾರಣ ಎಂದು ಹೇಳಿ ಜನರನ್ನು ನಂಬಿಸಲಾಯಿತು.

ಜೂನಿಯರ್ ಮುಸ್ಸೊಲಿನಿಯ ಪರಿಸ್ಥಿತಿ ಅಮ್ಮನಿಗಾದಷ್ಟು ದಾರುಣವಲ್ಲದಿದ್ದರೂ ಹೂವಿನ ಹಾಸಿಗೆಯಂತೂ ಖಂಡಿತ ಆಗಿರಲಿಲ್ಲ. ಅಮ್ಮನನ್ನು ಬಂಧಿಸಿ ಹುಚ್ಚಾಸ್ಪತ್ರೆಗೆ ಸೇರಿಸಿದಾಗ ಆ ಬಾಲಕನಿಗಿನ್ನೂ 11 ವರ್ಷ ವಯಸ್ಸು. ಅಮ್ಮ ಸತ್ತುಹೋಗಿದ್ದಾಳೆಂದು ಆತನ ಬಳಿ ಸುಳ್ಳು ಹೇಳಲಾಗಿತ್ತು. ದಿವ್ಯಾಂಗರ ವಸತಿಯೊಂದಕ್ಕೆ ಆತನನ್ನು ಸೇರಿಸಲಾಗಿತ್ತು. ಆತನಿಗೆ 15 ವರ್ಷ ಪ್ರಾಯವಾದಾಗ ಫ್ಯಾಸಿಸ್ಟ್ ಪಕ್ಷದವನೇ ಒಬ್ಬ ಅಧಿಕಾರಿ ಆತನನ್ನು ದತ್ತು ತೆಗೆದುಕೊಂಡು ಆತನ ಹೆಸರಿನಲ್ಲಿದ್ದ ಮುಸ್ಸೊಲಿನಿ ಎಂಬ ಭಾಗಕ್ಕೆ ಬದಲಾಗಿ ಬೇರೊಂದು ಹೆಸರನ್ನಿಟ್ಟನು. ಪ್ರಾಥಮಿಕ ಶಿಕ್ಷಣವಷ್ಟೇ ಅಲ್ಲದೇ ಕಾಲೇಜಿಗೆ ಪ್ರವೇಶ ಪಡೆಯುವ ಅವಕಾಶವೂ ಆತನಿಗೆ ದೊರಕಿತು. ಅಷ್ಟುಹೊತ್ತಿಗೆ ಎರಡನೆ ಪ್ರಪಂಚ ಯುದ್ಧದ ಕಾರ್ಮೋಡ ಕವಿಯತೊಡಗಿತ್ತು. ಇಟಾಲಿಯನ್ ನೌಕಾದಳವನ್ನು ಆ ಯುವಕ ಸೇರಿಕೊಂಡನು. ಹಿರಿಯ ಮುಸ್ಸೊಲಿನಿಯ ಮಗ ತಾನು ಎಂದು ಎಲ್ಲಿಯೂ ಹೇಳಿಕೊಳ್ಳದಂತೆ ಆತನಿಗೆ ತಾಕೀತು ಮಾಡಲಾಗಿತ್ತು. ಆತ ಎಲ್ಲಿಯೂ ಹೇಳಿಕೊಳ್ಳದೇ ಇದ್ದರೂ ಹಿರಿಯ ಮುಸ್ಸೊಲಿನಿಗೆ ಆ ಹೆದರಿಕೆ ಇದ್ದೇಇತ್ತು. ಹಾಗಾಗಿ ಅವನನ್ನೂ ಬಂಧಿಸಿ ಹುಚ್ಚಾಸ್ಪತ್ರೆಗೆ ಸೇರಿಸಲಾಯಿತು. 1942ರ ಜುಲೈಯಲ್ಲಿ, 27 ವರ್ಷದವನಾಗಿದ್ದಾಗ ಆತ ಸತ್ತುಹೋದನು. ಕೋಮಾ ಸ್ಥಿತಿಗೆ ತಳ್ಳುವ ಇಂಜೆಕ್ಷನ್ ಕೊಟ್ಟು ಸಾಯಿಸಿದ್ದೆಂದು ಕೆಲವರು ಹೇಳಿದರೆ ವಿದ್ಯುದಾಘಾತ ಕೊಟ್ಟು ಕೊಂದದ್ದೆಂದು ಇನ್ನು ಕೆಲವರು ಹೇಳುತ್ತಿದ್ದರು. ಆತನನ್ನು ದತ್ತು ತೆಗೆದುಕೊಂಡಿದ್ದ ಪೋಷಕರಿಗೆ ಮಾತ್ರ ಆತ ಯುದ್ಧದಲ್ಲಿ ಸತ್ತುಹೋದನು ಎಂದೇ ತಿಳಿಸಲಾಗಿತ್ತಂತೆ. ಚರಿತ್ರೆಯ ಪುಟಗಳಿಂದ ಅವನನ್ನು ಸಂಪೂರ್ಣ ಅಳಿಸಿಬಿಡುವ ಕೊನೆಯ ಹಂತವಾಗಿ ಅನಾಥರ ಶವಸಂಸ್ಕಾರದಂತೆ ಅವನ ಶವವನ್ನು ಹೂಳಿದ ಜಾಗದಲ್ಲಿ ಹೆಸರಿಲ್ಲದ ಸಮಾಧಿ ಕಲ್ಲನ್ನು ನೆಡಲಾಯಿತು.

ಹಿರಿಯ ಮುಸ್ಸೊಲಿನಿ ಆಮೇಲೆ ಹೆಚ್ಚು ವರ್ಷಗಳ ಕಾಲವೇನೂ ಬದುಕುಳಿಯಲಿಲ್ಲ. ಜುಲೈ 1943ರಲ್ಲಿ ಎದುರಾಳಿ ಮಿತ್ರಕೂಟದ ಪಡೆಗಳು ಇಟಲಿಯ ಸಿಸಿಲಿ ನಗರಕ್ಕೆ ಮುತ್ತಿಗೆ ಹಾಕಿದ ಒಂದೆರಡು ವಾರಗಳೊಳಗೆ ಮುಸ್ಸೊಲಿನಿಯನ್ನು ಅಧಿಕಾರದ ಗದ್ದುಗೆಯಿಂದಿಳಿಸಿ ಬಂಧಿಸಲಾಯಿತು. ಶತ್ರುವಿನೆದುರು ಶರಣಾಗುವುದೇ ಒಳಿತೆಂದುಕೊಂಡಿತು ಇಟಲಿಯ ಸರಕಾರ. ಹಿಟ್ಲರನಿಗೆ ಮುಸ್ಸೊಲಿನಿಯ ಬಗ್ಗೆ ಅಭಿಮಾನವಿದ್ದುದರಿಂದ ನಾತ್ಸಿ ಕಮಾಂಡೊಗಳು ಮುಸ್ಸೊಲಿನಿಯನ್ನು ಬಂಧನದಿಂದ ಬಿಡಿಸಿ ಜರ್ಮನ್ ಆಕ್ರಮಿತ ಇಟಲಿಯ ಉತ್ತರ ಭಾಗವೊಂದರ ಮುಖ್ಯಸ್ಥನೆಂದು ಸ್ಥಾಪಿಸಿದರು. ಅದೂ ಹೆಚ್ಚು ಕಾಲ ಉಳಿಯಲಿಲ್ಲ. 1945ರ ಏಪ್ರಿಲ್‌ನಲ್ಲಿ ಎದುರಾಳಿ ಪಡೆಗಳು ಇಟಲಿಯಲ್ಲಿ ಚಿಕ್ಕಪುಟ್ಟ ಪ್ರಮಾಣದಲ್ಲಿದ್ದ ಜರ್ಮನ್ ಸೇನೆಯನ್ನೆಲ್ಲ ನೆಲಸಮಗೊಳಿಸಿದಾಗ ಮುಸ್ಸೊಲಿನಿಯ ಪುಟಗೋಸಿ ರಾಜ್ಯವೂ ನಿರ್ನಾಮವಾಯಿತು. ಮುಸ್ಸೊಲಿನಿ ತಾನು 'ಇಟ್ಟುಕೊಂಡಿದ್ದ' ಹೆಂಗಸು ಕ್ಲಾರಾ ಪೆಟಾಸ್ಸಿ ಎಂಬುವವಳೊಂದಿಗೆ ಸ್ವಿಜರ್ಲೆಂಡ್‌ಗೆ ಪಲಾಯನಗೈಯುವವನಿದ್ದನು. ಅವತ್ತು 28 ಏಪ್ರಿಲ್ 1945. ಕೊಮೊ ಸರೋವರದ ಬಳಿ ಮುಸ್ಸೊಲಿನಿ, ಕ್ಲಾರಾ ಪೆಟಾಸ್ಸಿ ಮತ್ತು ಅವರೊಂದಿಗಿದ್ದ ಕೆಲವು ಫ್ಯಾಸಿಸ್ಟರನ್ನು ಇಟಲಿಯ ಗೆರಿಲ್ಲಾ ಯೋಧರ ಗುಂಪೊಂದು ಅಡ್ಡಗಟ್ಟಿತು. ಅವರನ್ನೆಲ್ಲ ವಾಹನದಿಂದ ಕೆಳಕ್ಕೆ ಇಳಿಸಿ ಒಂದು ಗೋಡೆಗೆ ಒರಗಿ ನಿಲ್ಲುವಂತೆ ಹೇಳಲಾಯಿತು. ಈಗಿಂದೀಗಲೇ ಗುಂಡಿಕ್ಕಿ ಅವರ ಕೊಲೆ ಆಗಲಿದೆಯೆಂದು ತಿಳಿಸಲಾಯಿತು. ಮುಸ್ಸೊಲಿನಿಯನ್ನು ತಬ್ಬಿಕೊಂಡ ಕ್ಲಾರಾ ಪೆಟಾಸ್ಸಿ ಅಳುತ್ತ 'ದಯವಿಟ್ಟು ಆತನನ್ನು ಸಾಯಿಸಬೇಡಿ!' ಎಂದು ಬೇಡಿದಳು. ಗೆರಿಲ್ಲಾಗಳು ಅದ್ಯಾವುದಕ್ಕೂ ಕಿವಿಗೊಡದೆ ಮೊದಲು ಅವಳನ್ನೇ ಗುಂಡಿಟ್ಟು ಕೊಂದರು. ಮುಸ್ಸೊಲಿನಿ ಅಂಗಿ ಬಿಚ್ಚಿ ತೆರೆದೆದೆಗೆ ಗುಂಡಿಕ್ಕುವಂತೆ ಕೇಳಿಕೊಂಡನು. ಗೆರಿಲ್ಲಾಗಳು ಹಾಗೆಯೇ ಮಾಡಿದರು. ಉಳಿದ ಫ್ಯಾಸಿಸ್ಟ್‌ಗಳನ್ನೂ ಕೊಂದರು. ಶವಗಳನ್ನೆಲ್ಲ ವಾಹನದಲ್ಲಿ ಪೇರಿಸಿ ಮಿಲಾನ್ ನಗರದ ಪಿಯಾಜೆಲ್ ಲೊರೆಟೊ ಎಂಬಲ್ಲಿಗೆ ಒಯ್ದರು. ಕಾಲಿನಿಂದ ಒದ್ದು, ಅವುಗಳ ಮೇಲೆ ಉಚ್ಚೆ ಹೊಯ್ದು ವಿಕೃತಿ ಮೆರೆದರು. ಅಲ್ಲೇ ಹತ್ತಿರದ ಪೆಟ್ರೋಲ್ ಬಂಕ್‌ನ ಬಳಿ ಎತ್ತರದ ತೊಲೆಯೊಂದಕ್ಕೆ ಆ ಶವಗಳನ್ನು ತಲೆಕೆಳಗಾಗಿ ನೇತಾಡಿಸಿದರು. ಸಾರ್ವಜನಿಕರೂ ಸೇರಿ ಅವುಗಳ ಮೇಲೆ ಮನಬಂದಂತೆ ಉಗುಳಿ ತಮ್ಮ ಸೇಡನ್ನು ತೀರಿಸಿಕೊಂಡರು. ಮುಸ್ಸೊಲಿನಿ ನಿಜವಾಗಿಯೂ ಸತ್ತಿದ್ದಾನೆಂದು ದೃಢಪಡಿಸಿಕೊಂಡರು. ಇದಾದ ಎರಡು ದಿನಗಳ ಬಳಿಕ ಜರ್ಮನಿಯ ಬರ್ಲಿನ್‌ನಲ್ಲಿ ಅಡಾಲ್ಫ್ ಹಿಟ್ಲರ್ ತನ್ನ ಪತ್ನಿಯನ್ನು ಗುಂಡಿಕ್ಕಿ ಕೊಂದು ತಾನು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡನು. ತನ್ನ ಆದರ್ಶನೆನಿಸಿದ್ದ ಮುಸ್ಸೊಲಿನಿಗಾದ ದಾರುಣ ಅವಸ್ಥೆ ತನಗಾಗದಿರಲಿ ಎಂಬ ಕಾರಣಕ್ಕೆ ಹಿಟ್ಲರ್ ಹಾಗೆ ಮಾಡಿದ್ದನು. ಯುರೋಪ್‌ನಲ್ಲಿ ಯುದ್ಧ ಕೊನೆಗೊಂಡಿತು.

ಕಥೆ ಅಲ್ಲಿಗೇ ಮುಗಿಯುವುದಿಲ್ಲ. 1926ರಲ್ಲಿ ಬಂಧನಕ್ಕೊಳಗಾಗುವ ಮುನ್ನ ಇಡಾ ಡೆಲ್ಸರ್ ಒಂದಿಷ್ಟು ಕಾಗದಪತ್ರಗಳನ್ನು ತನ್ನ ಸೋದರಿಗೆ ಕೊಟ್ಟಿದ್ದಳು. ಅದರಲ್ಲಿ ಮುಸ್ಸೊಲಿನಿ ಇಡಾಗೆ ಬರೆದಿದ್ದ ಪ್ರೇಮಪತ್ರಗಳೂ ಇದ್ದುವು. ಆ ಸೋದರಿಯಾದರೋ ಅವುಗಳನ್ನು ಒಂದು ಪಕ್ಷಿರೂಪದ ಚೀಲದಲ್ಲಿ, ಮತ್ತೊಂದಿಷ್ಟನ್ನು ಒಂದು ಪಾಳುಬಾವಿಯಲ್ಲಿ ಅಡಗಿಸಿಟ್ಟಿದ್ದಳು. ಅವಳ ನಂತರ ಅವಳ ಮಗಳಿಗೆ ಅವು ವರ್ಗಾವಣೆಯಾಗಿ ಬಂದಿದ್ದವು. 2001ರಲ್ಲಿ ಮಾರ್ಕೊ ಝೆನಿ ಎಂಬ ಪತ್ರಕರ್ತನೊಬ್ಬ ಇಡಾ ಡೆಲ್ಸರ್‌ಳ ಸೋದರಿಯ ಮಗಳನ್ನು, 88 ವರ್ಷಗಳ ಹಣ್ಣುಹಣ್ಣು ಮುದುಕಿಯನ್ನು, ಭೇಟಿಯಾದನು. ಆಕೆ ಕಾಗದಪತ್ರಗಳಿದ್ದ ಆ ಪಕ್ಷಿಚೀಲವನ್ನು ಮಾರ್ಕೊ ಝೆನಿಗೆ ಹಸ್ತಾಂತರಿಸಿದಳು. ಮುಸ್ಸೊಲಿನಿಯ ಪ್ರೇಮಪತ್ರಗಳಷ್ಟೇ ಅಲ್ಲದೇ, ಆತನ ಏಜೆಂಟರು ನಾಶಪಡಿಸಲಾಗದಿದ್ದ ಕೆಲವು ದಾಖಲೆಪತ್ರಗಳೂ ಅದರಲ್ಲಿ ಸಿಕ್ಕಿದವು. ಇಡಾ ಡೆಲ್ಸರ್ ಮತ್ತು ಜೂನಿಯರ್ ಮುಸ್ಸೊಲಿನಿಗೆ ಹಿರಿಯ ಮುಸ್ಸೊಲಿನಿ ಯಾವ ನಮೂನೆಯಲ್ಲಿ ಚಿತ್ರಹಿಂಸೆ ನೀಡಿದ್ದನೆಂಬುದಕ್ಕೆ ಆ ದಾಖಲೆಪತ್ರಗಳಲ್ಲಿ ಸುಳಿವು ಮತ್ತು ಸಾಕ್ಷಿಗಳಿದ್ದವು. ಅದಾದ ಮೇಲೆ ಇಡಾ ಡೆಲ್ಸರ್ ಮತ್ತು ಬೆನಿಟೊ ಅಲ್ಬಿನೊ ಮುಸ್ಸೊಲಿನಿಯ ಬದುಕು-ಬವಣೆಗಳು ಅನೇಕ ಲೇಖನಗಳಿಗೆ, ಪುಸ್ತಕಗಳಿಗೆ, ಟೆಲಿವಿಷನ್ ಸಾಕ್ಷ್ಯಚಿತ್ರಗಳಿಗೆ, ಒಂದು ಚಲನಚಿತ್ರಕ್ಕೂ ವಸ್ತುವಾದುವು. ಮುಸ್ಸೊಲಿನಿಯ ಎರಡನೆಯ ಹೆಂಡತಿ ರಚೆಲ್ ಗಿಯ್ಡಿ ಏನಾದಳು? ಆಕೆ ಪ್ರಪಂಚಯುದ್ಧಗಳೆರಡರ ಬಳಿಕವೂ ಬದುಕುಳಿದಿದ್ದಳು. 1960ರಲ್ಲಿ ಇಟಲಿಯ ಪ್ರೆಡಾಪಿಯೊ ಎಂಬಲ್ಲಿ ಒಂದು ಪಾಸ್ತಾ ರೆಸ್ಟೋರೆಂಟ್ ತೆರೆದಿದ್ದಳಂತೆ. 1979ರಲ್ಲಿ ಆಕೆಯ ನಿಧನದವರೆಗೂ ಅದು ಪ್ರವಾಸಿಗರ ಮತ್ತು ಸ್ಥಳೀಯರ ಮೆಚ್ಚುಗೆಗೆ ಪಾತ್ರವಾಗಿತ್ತಂತೆ.

ನಮಗೆ ಪ್ರೌಢಶಾಲೆಯಲ್ಲಿ ಒಂಬತ್ತನೆಯ ತರಗತಿಯ ಸಮಾಜಪರಿಚಯ ಪಠ್ಯಪುಸ್ತಕದಲ್ಲಿ ಯುರೋಪ್‌ನ ಚರಿತ್ರೆ ಮತ್ತು ದಂಗೆಗಳ ಬಗೆಗೆ ಇದ್ದ ಪಾಠದಲ್ಲಿ 'ಮುಸ್ಸೊಲಿನಿಯನ್ನು ಅವನ ಜನರೇ ಹಿಡಿದು ಕೊಂದರು' ಎಂಬ ವಾಕ್ಯ ನನಗೆ ಆಗಾಗ ನೆನಪಾಗುವುದಿದೆ. ಯಾವಾಗಾದರೂ ಒಮ್ಮೆ 'ತಿಳಿರುತೋರಣ'ದಲ್ಲಿ ಮುಸ್ಸೊಲಿನಿಯ ಕಥೆಯನ್ನು ಬರೆಯಬೇಕು ಎಂದುಕೊಂಡಿದ್ದೂ ಇದೆ. ಮೊನ್ನೆ ಇಲ್ಲಿಯ ಗ್ರಂಥಾಲಯದಿಂದ ಎರವಲು ತಂದಿದ್ದ ಪುಸ್ತಕವೊಂದರಲ್ಲಿ ಇಡಾ ಡೆಲ್ಸರ್ ಮತ್ತು ಜೂನಿಯರ್ ಮುಸ್ಸೊಲಿನಿಯ ಕರುಣಾಜನಕ ಕಥೆ ಓದಲಿಕ್ಕೆ ಸಿಕ್ಕಿತು. ಅದನ್ನೇ ಮುಖ್ಯ ಆಧಾರವಾಗಿಟ್ಟುಕೊಂಡು, ಸರ್ವಾಧಿಕಾರಿಯೊಬ್ಬನ ಕ್ರೌರ್ಯ ಮತ್ತು ಅವನ ದಾರುಣ ಅಂತ್ಯಕ್ಕೆ ಕನ್ನಡಿಯೆಂಬಂತೆ ಇಲ್ಲಿ ಕನ್ನಡೀಕರಿಸಿದ್ದೇನೆ. 'ಮುಸ್ಸೊಲಿನಿಯನ್ನು ಅವನ ಜನರೇ ಹಿಡಿದು ಕೊಂದರು' ವಿವರಣೆಯ ಪಕ್ಕದಲ್ಲೇ ಆ ಪುಸ್ತಕದಲ್ಲಿ ಮುಸ್ಸೊಲಿನಿ, ಕ್ಲಾರಾ ಪೆಟಾಸ್ಸಿ ಮತ್ತು ಇನ್ನೂ ಮೂವರ ಶವಗಳನ್ನು ತಲೆಕೆಳಗಾಗಿ ನೇತಾಡಿಸಿಟ್ಟ ಚಿತ್ರವನ್ನು ನೋಡಿದಾಗ ಮಾತ್ರ ನನಗೊಮ್ಮೆ ಮೈ ಝುಮ್ಮೆಂದಿತು!

ಕನಕದಾಸರ ರಾಮ (ಧಾನ್ಯ) ಚರಿತೆ: ಸಾರ ಸಂಗ್ರಹ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಮಸೆದುದಿತ್ತಂಡಕ್ಕೆ ಮತ್ಸರಪಿಸುಣ ಬಲರತಿ ನಿಷ್ಠುರರು ವಾದಿಸಲು ಕಂಡನು ನೃಪತಿ ಮನದಲಿ ನೋಡಿ ನಸುನಗುತ ಹಿಸುಣರಿ ವದಿರ ಮತ್ಸರವ ಮಾಣಿಸುವ ಹದನೇನೆನುತ ಯೋಚಿಸಿದ ಸುರಮುನಿಪರ ನೋಡೆ ಗೌತಮ ಮುನಿಪನಿಂತೆಂದ''- ಹೀಗೆ, ಭತ್ತ ಹಾಗೂ ರಾಗಿಯ ನಡುವೆ ತೀವ್ರವಾದ ವಾಗ್ವಾದ ನಡೆಯುತ್ತಿರುವುದನ್ನು ಕಂಡು ರಾಮನು ಇವರಿಬ್ಬರ ನಡುವಿನ ಮತ್ಸರವನ್ನು ಮಾಣಿಸುವ ಬಗೆ ಹೇಗೆ ಎಂದು ಯೋಚಿಸಿ, ''ಪರಮ ಧಾನ್ಯದೊಳಿಬ್ಬರೇ ಇವರಿರಲಿ ಸೆರೆಯೊಳಗಾರು ತಿಂಗಳು ಹಿರಿದು-ಕಿರಿದೆಂಬಿವರ ಪೌರುಷವರಿಯ ಬಹುದಿನ್ನು ಪುರಕೆ ಗಮನಿಸಿ ನಾವು ನಿಮ್ಮನು ಕರೆಸುವೆವು ಕೇಳೆನುತಯೋಧ್ಯಾ ಪುರಿಗೆ ಪಯಣವ ಮಾಡಹೇಳಿದನಾ ವಿಭೀಷಣಗೆ''.

''ಅರಸರಾದ ನಮಗೆ ಈ ನ್ಯಾಯವನ್ನು ನಿರ್ಣಯಿಸುವುದು ಬಹಳ ಕಷ್ಟದ ಕೆಲಸವಾಗಿದೆ. ಆದ್ದರಿಂದ, ಹರಿಹರ ಬ್ರಹ್ಮರನ್ನೇ ಅಯೋಧ್ಯೆಗೆ ಕರೆಸುತ್ತೇವೆ. ಅವರೇ ಈ ಸಮಸ್ಯೆಯನ್ನು ಬಗೆಹರಿಸಲಿ. ಇಲ್ಲಿರುವ ಧಾನ್ಯಗಳ ಪೈಕಿ, ಭತ್ತ ಹಾಗೂ ನರೆದಲೆಗಗಳು ಇನ್ನು ಆರು ತಿಂಗಳವರೆಗೂ ಸೆರೆಯೊಳಗಿರಲಿ. ಆಮೇಲೆ ಇವರನ್ನು ಅಯೋಧ್ಯೆಗೆ ಕರೆಸಿ ಇವರಿಬ್ಬರಲ್ಲಿ ಹೆಚ್ಚು ಯಾರು ಕಡಿಮೆ ಯಾರು ಎಂದು ತೀರ್ಮಾನಿಸೋಣ, ಇನ್ನು ಅಯೋಧ್ಯೆಗೆ ಹೊರಡೋಣ'' ಎಂದು ಶ್ರೀರಾಮ ಆಜ್ಞಾಪಿಸುತ್ತಾನೆ. ಅಂತೆಯೇ, ದಾನವ ಹಾಗೂ ವಾನರ ಯೂಥದೊಡನೆ ರಾಮ ಲಕ್ಷ್ಮಣಾದಿಗಳು ಅಯೋಧ್ಯೆಯೆಡೆಗೆ ಪ್ರಯಾಣಿಸುತ್ತಾರೆ ಎನ್ನುವಲ್ಲಿಗೆ, ರಾಗಿ ಮತ್ತು ಭತ್ತದ ನಡುವಿನ ಸಂಘರ್ಷಕ್ಕೆ ತಾತ್ಕಾಲಿಕ ವಿರಾಮವಾದಂತಾಗುತ್ತದೆ.

ಮುಂದೆ, ಅಲ್ಲಿಂದ ಹೊರಟ ಶ್ರೀರಾಮನ ಪರಿವಾರ, ದಾರಿಯ ಮಧ್ಯದಲ್ಲಿ ಅನೇಕ ಮುನಿಗಳ ದರ್ಶನಾಶೀರ್ವಾದಗಳನ್ನು ಪಡೆಯುತ್ತಾ, ಭಾರದ್ವಾಜ ಮುನಿಯ ಆಶ್ರಮವಿರುವ ಪ್ರದೇಶವನ್ನು ತಲುಪುತ್ತದೆ ('ಉರಗಮಾಲಿ, ಮತಂಗ, ಗಾರ್ಗ್ಯಾಂಗಿರಸ, ಗಾಲವ, ಕಣ್ವ, ಜಯಮುನಿ ಪರಶುರಾಮ, ಪರಾಶ, ಕೌಶಿಕ, ದಾಲ್ಭ್ಯ ಮೊದಲಾದ ವರಮುನಿಗಳೊಡನೈದಿ ಬಂದನು ಭರದಿ ಭಾರದ್ವಾಜ ಮುನಿ ರಘು ವರನ ಕಾಣಿಸಿಕೊಂಡು ಹರಸಿದರತುಳ ವಿಭವದಲಿ'). ಭಾರದ್ವಾಜ ಮುನಿಗಳ ಆಶ್ರಮಕ್ಕೆ ಬಂದ ಶ್ರೀರಾಮನು ಅವರಿಗೆ ನಮಿಸಿ, ನಿಮ್ಮ ಅಗ್ನಿಹೋತ್ರವೇ ಮುಂತಾದ ನಿತ್ಯ-ನೈಮಿತ್ತಿಕ ಕರ್ಮಗಳು, ಜಪ-ತಪಗಳು ಸುಸೂತ್ರವಾಗಿ ನಡೆಯುತ್ತಿವೆಯೇ? ಕ್ರೂರ ದಾನವರಿಂದ ಏನೂ ದುರ್ಘಟನೆಗಳು ಸಂಭವಿಸಲಿಲ್ಲ ತಾನೆ? ಎನ್ನುತ್ತಾ ಅವರ ಕುಶಲೋಪರಿಗಯ್ಯುತ್ತಾನೆ. ಹೀಗೆ ಮಾರ್ಗ ಮಧ್ಯದಲ್ಲಿ ಋಷಿಮುನಿಗಳನ್ನು ಸಂದರ್ಶಿಸುತ್ತಾ ಸಾಗುವ ಶ್ರೀರಾಮನ ಪರಿವಾರದ ಅಯೋಧ್ಯಾಪುರದವರೆಗಿನ ಪ್ರಯಾಣವನ್ನು ಬಹು ಸುಂದರವಾಗಿ ದಾಸರು ವರ್ಣಿಸುತ್ತಾ ಸಾಗುತ್ತಾರೆ.

ಶಾಂಡಿಲ್ಯ ಮುನಿಯು ಧರ್ಮರಾಯನಿಗೆ ಹೇಳುತ್ತಿದ್ದ ಕಥೆಯನ್ನು ಮುಂದುವರಿಸುತ್ತಾನೆ. ಸೀತಾ-ರಾಮ-ಲಕ್ಷ್ಮಣರು ಅಯೋಧ್ಯೆಯನ್ನು ಪ್ರವೇಶಿಸಿದ ಮೇಲೆ, ರಥದಿಂದಿಳಿದು ಕೌಸಲ್ಯೆ-ಸುಮಿತ್ರೆ-ಕೈಕೆಯರ ಕಾಲಿಗೆ ನಮಸ್ಕರಿಸಿದರು. ಅವರಾದರೋ ಹೋಗಿದ್ದ ಪ್ರಾಣವು ಮರಳಿ ಬಂದಿತೆಂಬ ಸಂತಸದಲ್ಲಿ ಮಕ್ಕಳನ್ನು ಹರಸಿ ತಬ್ಬಿದರು. ಭರತ-ಶತ್ರುಘ್ನರು ರಾಮನಿಗೆ ನಮಿಸಿದರು. ಲಕ್ಷ್ಮಣನು ಭರತನಿಗೆ ನಮಿಸಿ ಶತ್ರುಘ್ನನನ್ನು ಸಂತೈಸಿದನು. ಸುಗ್ರೀವ-ಜಾಂಬವಂತ ಮುಂತಾದವರೆಲ್ಲರೂ ರಾಜಮಾತೆಯರಿಗೆ ನಮಿಸಿದರು. ದಶರಥನ ಮಡದಿಯರು ಸೀತೆಯನ್ನು ಕರೆದು ಪ್ರೀತಿಯಿಂದ ತಕ್ಕೈಸಿ ''ಬನದೊಳಗೆ ಬಲುನೊಂದಲಾ ಮಾನಿನಿಯೆ ಬಾರೌ ತಾಯೆ ಬಾರೆಂದೆನುತ ಕಂಬನಿದೊಡೆದು ಲಾಲಿಸಿದರು ಮಹಾಸತಿಯ''. ಭರತನು ಸೀತಾರಾಮ ಲಕ್ಷ್ಮಣಾದಿಯಾಗಿ ಎಲ್ಲರಿಗೂ ಮಣಿಭೂಷಣಾದಿಗಳನ್ನೂ, ರೇಷಿಮೆಯ ವಸ್ತ್ರಗಳನ್ನೂ ಕೊಟ್ಟು ಉಪಚರಿಸಿದನು. ವಿಭೀಷಣಾದಿಗಳಿಗೆ ಯುಕ್ತವಾದ ಕಾಣಿಕೆಗಳನ್ನು ಕೊಟ್ಟು ಸತ್ಕರಿಸಿದನು. ಅಲ್ಲಿಂದ ರಾಮನು ಎಲ್ಲರೊಡಗೂಡಿ ಅಯೋಧ್ಯೆಯನ್ನು ತಲುಪಿ, ಪುರಜನರು ಕೊಟ್ಟ ಕಾಣಿಕೆಗಳನ್ನೆಲ್ಲ ಸ್ವೀಕರಿಸುತ್ತಾ ಅರಮನೆಯನ್ನು ಪ್ರವೇಶಮಾಡಿದ. ಮರುದಿನ, ಮಂಗಲ ಸ್ನಾನಾದಿಗಳನ್ನು ಮುಗಿಸಿ, ರಾಮನು ತನ್ನ ತಮ್ಮಂದಿರೊಡಗೂಡಿ ಓಲಗಕ್ಕೆ ನಡೆತಂದನು. ಆಗ ಮಂತ್ರಿ ಸುಮಂತ್ರನು ಅಲ್ಲಿದ್ದ ಕುಲಗುರುವಾದ ವಸಿಷ್ಠರಿಗೆ ನಮಿಸಿ, ''ರಾಮನೃಪಾಲನಿಗೆ ರಾಜ್ಯಾಭಿಷೇಕವನ್ನು ನೆರವೇರಿಸಬಹುದಲ್ಲವೇ?'' ಎಂದು ಅನುಮತಿ ಕೇಳಲು, ವಸಿಷ್ಠರು ಅದಕ್ಕೆ ತಮ್ಮ ಸಮ್ಮತಿ ಸೂಚಿಸುತ್ತಾರೆ. ಸುಮಂತ್ರನು ಸಂತಸಗೊಂಡು ರಾಮ ಪಟ್ಟಾಭಿಷೇಕಕ್ಕೆ ಮಾಡಬೇಕಾದ ಸಿದ್ಧತೆಗಳಲ್ಲಿ ತೊಡಗಿಕೊಳ್ಳುತ್ತಾನೆ. ಸಾಮಂತ ಅರಸುಗಳನ್ನೆಲ್ಲ ಆಮಂತ್ರಿಸಲು ಓಲೆಗಳನ್ನು ಬರೆಸಿ ಕಳುಹಿಸುತ್ತಾನೆ. ರಾಮ ಪಟ್ಟಾಭಿಷೇಕದ ವಿಷಯವನ್ನು ತಿಳಿದು ಅಯೋಧ್ಯೆಯು ನವ ವಧುವಿನಂತೆ ಸಿಂಗಾರಗೊಂಡಿತು.

ವಿವಿಧ ದೇಶಗಳಿಂದ ಜನರು, ಪಂಡಿತರು, ಕವಿಗಳು, ಗಾಯಕ, ನರ್ತಕರು, ದೈವಜ್ಞರು ಅಯೋಧ್ಯೆಗೆ ಬಂದು ಸೇರಿದರು. ಸನಕ ಸನಂದಾದಿ ತಪಸ್ವಿಗಳು ಅಯೋಧ್ಯೆಗೆ ದಯಮಾಡಿಸಿದರು. ಅತ್ರಿ, ಭಾರದ್ವಾಜ, ವಿಶ್ವಾಮಿತ್ರ, ಗೌತಮ ವಾಮದೇವಾದಿ ಮಹಾಮುನಿಗಳೂ ಬಂದರು. ಚೋಳ, ಗುರ್ಜರ, ದ್ರವಿಡ, ವಂಗ, ಸಿಂಧು, ನೇಪಾಳ, ವಿದರ್ಭ, ಮಲೆಯಾಳ, ಆಂಧ್ರ, ಮರಾಠ, ಕರ್ಣಾಟ, ಕುಂತಳ ಹೀಗೆ ಹಲವಾರು ದೇಶದ ಅರಸರು ಅಯೋಧ್ಯೆಗೆ ಆಗಮಿಸಿದರು. ಹೀಗೆ ಎಲ್ಲ ದಿಕ್ಕುಗಳಿಂದಲೂ ಮುಖ್ಯಜನರೆಲ್ಲರೂ ಬಂದು ಕೂಡಿದರು. ಪಟ್ಟಾಭಿಷೇಕ ಮಹೋತ್ಸವದ ದಿನವೂ ಬಂದೇ ಬಿಟ್ಟಿತು. ಸೀತಾದೇವಿಯ ಸಹಿತ ಶ್ರೀರಾಮನು ಸಿಂಹಾಸನದಲ್ಲಿ ಕುಳಿತು ಶೋಭಿಸುತ್ತಿರುವಾಗ, ಅನುಜ ಭರತನು ಛತ್ರವನ್ನು ಹಿಡಿದಿರುತ್ತಾನೆ, ಲಕ್ಷ್ಮಣನು ಚಾಮರವನ್ನು ಬೀಸುತ್ತಿದ್ದಾನೆ, ಶತೃಘ್ನನು ಚಿಮ್ಮಲುವನ್ನು (ಕೊಂಬಿನ ಗಿಂಡಿಯನ್ನು) ಹಿಡಿದಿರಲು, ಹನುಮಂತನು ಶ್ರೀರಾಮನ ಪಾದವನ್ನು ಸೇವಿಸುತ್ತಿದ್ದನಂತೆ. ಮುಂದೆ, ಸುಮುಹೂರ್ತ ಬಂದೊಡನೆ ಅಲ್ಲಿ ಸೇರಿದ್ದ ಮುನೀಶ್ವರರೆಲ್ಲರ ಸಮಕ್ಷಮದಲ್ಲಿ ಶ್ರೀರಾಮನಿಗೆ ಪಟ್ಟಾಭಿಷಿಂಚನವಾಯಿತು.

ಭಾಗ 3

ಲಂಕೆಯಿಂದ ಹೊರಟು ಮಧ್ಯದಲ್ಲಿ ಮುನಿಗಳ ಆಶ್ರಮದಲ್ಲಿ ಆತಿಥ್ಯ ಸ್ವೀಕರಿಸಿ, ನೆಲ್ಲು ಮತ್ತು ರಾಗಿಗಳ ಜಗಳವನ್ನು ಪರಿಹರಿಸಲು, ಭರತನಿಗೆ ವಚನವಿತ್ತ ಅವಧಿಯೊಳಗೆ ಅಯೋಧ್ಯೆಯನ್ನು ತಲುಪಿ, ಋಷಿಮುನಿಗಳು ಸಾಮಂತರು ಮತ್ತು ಅನ್ಯದೇಶದ ರಾಜರುಗಳ ಸಮ್ಮುಖದಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕವಾಗುವಲ್ಲಿಯವರೆಗಿನ ವೃತ್ತಾಂತವನ್ನು ಕನಕದಾಸರು ಬಹಳ ಸಂಕ್ಷಿಪ್ತವಾಗಿ, ಸುಂದರವಾದ ಭಾಮಿನಿ ಷಟ್ಪದಿಯ ಪದ್ಯಗಳಲ್ಲಿ ವರ್ಣಿಸವಲ್ಲಿಯವರೆಗೆ ಸುಮಾರು ರಾಮಧಾನ್ಯ ಚರಿತ್ರೆಯ 90 ಪದ್ಯಗಳು ಮುಗಿದಿರುತ್ತವೆ. ಪಟ್ಟಾಭಿಷೇಕದ ಸಂದರ್ಭವನ್ನಂತೂ ಕಣ್ಣಿಗೆ ಕಟ್ಟುವ ಹಾಗೆ ಯಾರ್‍ಯಾರು ಎಲ್ಲೆಲ್ಲಿ ನಿಂತಿದ್ದರು, ಯಾವಯಾವ ವಾದ್ಯಗಳು ಮೊಳಗಿದವು ಎನ್ನುವಲ್ಲಿಯವರೆಗೆ ವಿಶದವಾಗಿ ದಾಸರು ಬಿಂಬಿಸಿದ್ದಾರೆ.

''ನರೆದಲೆಗ-ವ್ರಿಹಿಗರನ್ನು ಆರು ತಿಂಗಳು ಸೆರೆಯಲ್ಲಿ ಇಡುವಂತೆ ಆಜ್ಞಾಪಿಸಿದ್ದೆವು, ಈಗ ನೋಡಿದರೆ ಏಳು ತಿಂಗಳಾಗಿಬಿಟ್ಟಿವೆ, ಹಾಗಾಗಿ ಇನ್ನೂ ತಡಮಾಡುವುದು ಸರಿಯಲ್ಲ, ಕೂಡಲೇ ಅಯೋಧ್ಯೆಯ ಸಭೆಗೆ ಕರೆತನ್ನಿ'' ಎಂದು ಪಟ್ಟಾಭಿಷಿಕ್ತನಾದ ರಾಮನು ಅಪ್ಪಣೆ ಕೊಡುತ್ತಾನೆ. ಹನುಮಂತನು ಗೌತಮ ಮಹರ್ಷಿಗಳ ಆಶ್ರಮಕ್ಕೆ ಬಂದು, ನರೆದಲೆಗ ಹಾಗೂ ವ್ರಿಹಿಗರನ್ನು ಸೆರೆಮನೆಯಿಂದ ಬಿಡಿಸಿ ತಮ್ಮೊಡನೆ ಕರೆದುಕೊಂಡು ಕೂಡಲೆ ಅಯೋಧ್ಯೆಗೆ ಬರಬೇಕಾಗಿ ಬಿನ್ನವಿಸಿದನು. ಅದರಂತೆ ಗೌತಮ ಮಹರ್ಷಿಗಳು, ತಡಮಾಡದೇ ನರೆದಲೆಗ-ವ್ರಿಹಿಗರನ್ನೊಡಗೊಂಡು ಅಯೋಧ್ಯೆಗೆ ಹೊರಟುಬಂದರು. ಅಯೋಧ್ಯೆಗೆ ದಯಮಾಡಿಸಿದ ಗೌತಮ ಮಹರ್ಷಿಗಳನ್ನು ರಾಮನು ಪ್ರೀತ್ಯಾದರಗಳಿಂದ ಸ್ವಾಗತಿಸಿ ಸತ್ಕರಿಸುತ್ತಾನೆ. ನಂತರದಲ್ಲಿ, ರಾಮನ ಅಪೇಕ್ಷೆಯಂತೆ ವಸುಗಳು, ಅಮರರು, ಭುಜಂಗಾಮರರು, ಅಸುರ, ಕಿನ್ನರ, ಯಕ್ಷ, ರಾಕ್ಷಸ, ಶಶಿ-ರವಿಗಳು, ಆದಿತ್ಯ, ವಿದ್ಯಾಧರರು, ಗುಹ್ಯಕರು, ವಸುಧೆಯಮರರು (ಬ್ರಾಹ್ಮಣರು), ಕ್ಷತ್ರಿಯರು, ಜೋಯಿಸರು, ವೈಶ್ಯ, ಚತುರ್ಥರು, ಉನ್ನತ ಕುಶಲ ವಿದ್ಯಾಧಿಕರು ಎಲ್ಲರೂ ನ್ಯಾಯ ನಿರ್ಣಯವಾಗುವ ಶ್ರೀರಾಮನ ಸಭೆಗೆ ಆಗಮಿಸುತ್ತಾರೆ. ಸಭೆಯೊಳಕ್ಕೆ ನರೆದಲೆಗ-ವ್ರಿಹಿಗರನ್ನು ಕರೆತರುತ್ತಿದ್ದಂತೆ, ನರೆದಲೆಗನು ನೇರವಾಗಿ ರಾಮನನ್ನು ಕುರಿತು ''ಅಯ್ಯಾ, ರಘುವರನೇ, ನಮ್ಮಿಬ್ಬರ ನಡುವಿನ ವ್ಯಾಜ್ಯ ಬಗೆಹರಿಸಲು ನೀವು ಯಾವ ನ್ಯಾಯವನ್ನು ತಿಳಿಸಲಿದ್ದೀರಿ?'' ಎಂದು ಕುತೂಹಲದಿಂದ ಕೇಳುತ್ತಾನೆ. ಅಲ್ಲಿಯ ಘನ ಸಭೆಯೊಳಿದ್ದ ದೇವತೆಗಳನ್ನೆಲ್ಲಾ ನೋಡಿ ಶ್ರೀರಾಮ ಹೀಗೆ ಹೇಳುತ್ತಾನೆ. ''ಆರು ನುಡಿಯರೆ! ನೀವು ಹಿರಿಯರು, ಮೀರಿಸುವರಾರಿವರೊಳಗೆ ಗುಣಸಾರನ್ ಆವನು ಪೇಳ್'' ಎನಲು, ''ಜಂಭಾರಿ ನಸುನಗುತ ಸಾರಹೃದಯನು ನರೆದಲೆಗ; ನಿಸ್ಸಾರನೀ ವ್ರಿಹಿ'' ಎಂದು ಸತ್ವವಿಹೀನನಾದ ಭತ್ತದ ಮುಂದೆ ಹೃದಯದಲ್ಲಿ ಸಾರ ಸತ್ವವನ್ನು ಹೊಂದಿದ ನರೆದಲೆಗನೇ ಶ್ರೇಷ್ಠ ಎಂದು ದೇವೇಂದ್ರ ಘೋಷಣೆ ಮಾಡುವಾಗ, ''ಅಹುದಹುದು, ಸುರಪನ ಮಾತು ನಿಶ್ಚಯವಹುದು; ನರೆದಲೆಗನೆ ಸಮರ್ಥನು, ಬಹಳ ಬಲಯುತ. ಸೆರೆಗೆ ತಳ್ಳಲು ಕಾಂತಿಗೆಡಲಿಲ್ಲ. ಸಹಜವಿದು. ಪರಪಕ್ಷವಾದಡೆ ವ್ರಿಹಿಗ ಕರಗಿ ಕಂದಿದನು ಸೆರೆಯಲಿ. ವಿಹಿತವಿದು ಕೇಳ್'' ಎಂದು, ದೇವೇಂದ್ರನು ನೀಡಿದ ''ಸಾರಹೃದಯನು ನರೆದಲೆಗ; ನಿಸ್ಸಾರನೀ ವ್ರಿಹಿ'' ಎಂಬ ಗುಣ ಭೂಯಿಷ್ಠವಾದ ನಿರ್ಣಯಕ್ಕೆ, ದೇವರ್ಷಿ ನಾರದರು ತಮ್ಮ ಒಪ್ಪಿಗೆಯ ಮುದ್ರೆಯನ್ನೊತ್ತಿದರು. ಮುಂದುವರಿದು, ''ಎಲ್ಲ ನವಧಾನ್ಯದಲಿ



ಈತನೆ ಬಲ್ಲಿದನು, ಹುಸಿಯಲ್ಲ. ಬಡವರ-ಬಲ್ಲಿದರನಾರೈದು ಸಲಹುವನ್ ಇವಗೆ ಸರಿಯುಂಟೆ? ನೆಲ್ಲಿನಲಿ ಗುಣವೇನು, ಭಾಗ್ಯದಿ ಬಲ್ಲಿದರ ಪತಿಕರಿಸುವನು. ಅವನಲ್ಲಿ ಸಾರವ ಕಾಣೆ'' ಎಂದು ಕಪಿಲ ಮುನಿಯು ಧ್ವನಿಗೂಡಿಸಿದರು. ಹೀಗೆ, ದೇವೇಂದ್ರನೂ, ಋಷಿಗಳೂ ಧಾನ್ಯಗಳ ಪೈಕಿ ನರೆದಲೆಗನೇ ಉತ್ತಮನೆಂಬುದನ್ನು ಒಪ್ಪಿ ನುಡಿದಾಯಿತು. ನಿರ್ಣಯವನ್ನು ಚಕ್ರವರ್ತಿಯಾಗಿದ್ದ ಶ್ರೀರಾಮಚಂದ್ರ ಮಾಡುವುದಿಲ್ಲ, ದೇವತೆಗಳು ಮುನಿಗಳು ಹಾಗು ಸಮಾಜದ ಇತರ ಗಣ್ಯರುಗಳ ಸಾಮೂಹಿಕ ನಿರ್ಣಯಕ್ಕೆ ತನ್ನ ಮೆಚ್ಚುಗೆಯನ್ನು ಸೂಚಿಸುತ್ತಾನೆ ಅಷ್ಟೇ! ರಾಜಧರ್ಮವನ್ನು ಪಾಲಿಸುವ ಶ್ರೀರಾಮನ ನ್ಯಾಯ ನಿರ್ಣಯದ ಪರಿ ಹೇಗಿರುತ್ತಿತ್ತು ಎನ್ನುವುದನ್ನು ಕನಕದಾಸರು ಸದರಿ ರಾಮಚರಿತೆಯಲ್ಲಿ ವಿಶೇಷವಾಗಿ ತೋರಿಸಿದ್ದಾರೆ.

''ಸುರಮುನಿಗಳಿಂತೆನಲು, ಭೂಸುರ ವರರು, ಸಂತೋಷಿಸಲು ಸಭಿಕರು 'ನರೆದಲೆಗ ನೀ ಬಾರೆನುತ ರಾಮನೃಪಾಲ ಮೆಚ್ಚಿ ಕರೆದು ಕೊಟ್ಟನು ತನ್ನ ನಾಮವ ಧರೆಗೆ ರಾಘವನೆಂಬ ಪೆಸರಾ (ರಾಘವ -- ರಾಗಿ) ಯ್ತಿರದೆ ವ್ರಿಹಿ ನಾಚಿದನು ಸಭೆಯಲಿ ಶಿರವ ಬಾಗಿಸಿದ''- ಹೀಗೆ ಸುರಮುನಿಗಳು ನಿರ್ಣಯ ನೀಡಿದಮೇಲೆ, ಸಂತೋಷಗೊಂಡ ಶ್ರೀರಾಮನು, ''ಎಲೈ ನರೆದಲೆಗ, ಬಾರಯ್ಯ ಇಲ್ಲಿ'' ಎನ್ನುತ್ತಾ ತನ್ನ ಹತ್ತಿರ ಕರೆಸಿಕೊಂಡು ಮೆಚ್ಚಿ ಅವನಿಗೆ ತನ್ನ ಹೆಸರುಗಳಲ್ಲೊಂದಾದ 'ರಾಘವ' ಎನ್ನುವ ಅಭಿದಾನವನ್ನು ಮೆಚ್ಚಿ ತುಂಬಿದ ಸಭೆಯಲ್ಲಿ ಕೊಡಮಾಡಿದ. ಇದನ್ನೆಲ್ಲ ನೋಡುತ್ತಿದ್ದ ಭತ್ತ, ನಾಚಿಕೆಯಿಂದ ತಲೆತಗ್ಗಿಸಿತು ಎನ್ನುವಲ್ಲಿಗೆ ವಿವಾದಕ್ಕೊಂದು ಶಾಶ್ವತ ಪರಿಹಾರ ದೊರೆತಂತಾಯಿತು. ''ಹರುಷ ತೋರಿದ ಮನದಿ ನಲಿವುತ ನರೆದಲೆಗನೈತಂದು ರಾಮನ ಸಿರಿಚರಣಕೆ ಅಭಿನಮಿಸೆ, ದೇವಾಸುರರು ಕೊಂಡಾಡೆ, ಹರಸಿ ಮುತ್ತಿನ ಸೇಸೆಯನು ಭೂಸುರರು ಮಂತ್ರಾಕ್ಷತೆಯನಿತ್ತು ಉಪಚರಿಸಿದರು ರಾಗಿಯನು''. ಶ್ರೀರಾಮನ ಹೆಸರನ್ನು ಪಡೆದು ರಾಗಿಯಾದ ನರೆದಲೆಗೆವು ರಾಮನ ಶ್ರೀಚರಣಗಳಿಗೆ ನಮಸ್ಕರಿಸಿ ಸಭೆಯಲ್ಲಿ ಎಲ್ಲರ ಮೆಚ್ಚುಗೆ, ಗೌರವ, ಆಶೀರ್ವಾದಗಳಿಗೆ ಪಾತ್ರವಾಗುತ್ತದೆ. ಆಗ, ಅಲ್ಲಿದ್ದ ದೇವತೆಗಳೆಲ್ಲಾ ಕೊಂಡಾಡಿದರು ಮತ್ತು ಅಲ್ಲಿದ್ದ ಬ್ರಾಹ್ಮಣರು, ರಾಗಿಯ ತಲೆಯ ಮೇಲೆ (ಭತ್ತ) ಅಕ್ಕಿಯಿಂದಾಗುವ ಮಂತ್ರಾಕ್ಷತಾರೋಪಮಾಡಿ ಉಪಚರಿಸಿದರು ಎಂದು ಬರೆಯುವ ಮೂಲಕ, ದಾಸರು ಭತ್ತದ ಸ್ಥಾನವನ್ನು ಕುಂದಿಸದೇ, ರಾಗಿಯ ಸ್ಥಾನವನ್ನು ಎತ್ತರಿಸುವ ಚಾಣಾಕ್ಷತೆಯನ್ನು ತೋರಿಸುತ್ತಾರೆ,

ಹೀಗೆ ಸಭೆಯಲ್ಲಿ ರಾಗಿಯು ಎಲ್ಲರಿಂದ ಪ್ರಶಂಸೆ ಪಡೆದುದನ್ನು ಕಂಡು ತನಗಾದ ಅವಮಾನವನ್ನು ನೆನೆಯುತ್ತ ಚಿಂತೆಗೊಳಗಾಗಿ ನಿಂತಿದ್ದ ವ್ರಿಹಿಗನನ್ನು, ರಾಮನು ಕರೆದು ಪ್ರೇಮದಿಂದ ಮಾತನಾಡಿಸಿ ಸಾಂತ್ವನ ಹೇಳುವ ಸಂದರ್ಭ ಬಹಳ ಮಾರ್ಮಿಕವಾಗಿ ಮೂಡಿಬಂದಿದೆ. ಈ ಸಾಂತ್ವನಪ್ರದಾನದ ಪ್ರಸಂಗವೇನಿದೆ, ಅದು ಕನಕದಾಸರ ಹೃದಯವನ್ನೂ ಹಾಗೂ ಶ್ರೀರಾಮನ ಹೃದಯವನ್ನೂ ಒಟ್ಟಿಗೆ ನಮಗೆ ತೋರ್ಪಡಿಸುತ್ತದೆ.

''ಅಯ್ಯಾ ವ್ರಿಹಿಗ, ಏಕೆ ಕೊರಗುತ್ತೀಯೆ. ನಾವು ಭೂಮಿಯಲ್ಲಿ ನರೆದಲೆಗನೇ ಉತ್ತಮನೆಂದು ಹೇಳಿದ್ದನ್ನು ಕೇಳಿ ಬೇಸರವಾಯಿತೇ? ಈತನು ಕ್ಷಾಮಕಾಲದಲ್ಲೂ ಜನರನ್ನು ಕರುಣೆಯಿಂದ ಕಾಯುತ್ತಾನಾದ್ದರಿಂದ, ಅವನನ್ನು ಪುರಸ್ಕರಿಸಿದೆವು, ಅಷ್ಟೇ ಹೊರತು ನಿನ್ನನ್ನು ಹೀಗಳೆಯುವುದು ನಮ್ಮ ಉದ್ದೇಶವಲ್ಲ''- 'ನಮ್ಮೆಡೆಗೆ ನೀನು ಸುರಧೇನುವಿನ ಸಮ. ನಿನ್ನ ಚಿತ್ತದಿ ಹಾನಿದೋರಲದೇಕೆ, ಬಿಡುಬಿಡು ಚಿಂತೆಯಾಕೆಂದ'. ಅಲ್ಲಿಗೇ ನಿಲ್ಲಿಸದೇ, ಅಕ್ಕಿಯ ಗುಣಗಳನ್ನು ರಾಮ ಎತ್ತಿ ಹೇಳುತ್ತಾನೆ. ''ದೇವರಿಗೆ ಪರಮಾನ್ನ ನೀ ಮನುಜಾವಳಿಗೆ ಪಕ್ವಾನ್ನವೀತನು ನೀವು ಧರೆಯೊಳಗಿಬ್ಬರತಿ ಹಿತದಲಿ ನೀವಿಹುದು. ನಾವು ಕೊಟ್ಟೆವು ವರವ, ಸಲ್ಲುವುದಾವ ಕಾಲದಲಿನ್ನು ನೀವೇ ಪಾವನರು ಸುಖಿಯೆಂದುಪಚರಿಸಿದನು ನೃಪತಿ''. ರಾಗಿಯು ಮನುಷ್ಯರಿಗೆ ಪಕ್ವಾನ್ನವಾದರೆ ನೀನು ದೇವತೆಗಳಿಗೆ ನಿವೇದಿಸುವ ಪರಮಾನ್ನಕ್ಕೆ ಕಾರಣನಿದ್ದೀಯೆ. ಹೀಗಾಗಿ, ಇಬ್ಬರೂ ಹಿತದಿಂದ ಸುಖದಿಂದ ಬಾಳಿರಿ ಎನ್ನುವ ವರವನ್ನಿತ್ತು ವ್ರಿಹಿಗನನ್ನು ಸಂತೈಸಿ, ಇತರ ಧಾನ್ಯಗಳನ್ನೂ ಹರಸಿ ರಾಮನು ಎಲ್ಲ ಧಾನ್ಯಗಳನ್ನೂ, ಪಟ್ಟಾಭಿಷೇಕಕ್ಕೆ ಸೇರಿದ್ದ ಸೇರಿದ್ದ ವಾನರ, ಸುರಾಸುರರುಗಳ ತಂಡವನ್ನು, ಆನೆ ಕುದುರೆ ಉತ್ತಮ ವಸ್ತ್ರಗಳು ಮುಂತಾದ ಸುವಸ್ತುಗಳನ್ನು ಉಡುಗೊರೆಯಾಗಿತ್ತು ಕಳುಹಿಸಿಕೊಟ್ಟ ಎಂಬಲ್ಲಿಗೆ ಕನಕದಾಸರ ರಾಮಧಾನ್ಯ ಚರಿತೆಯು ಸುಖಾಂತ್ಯವನ್ನೇ ಕಾಣುತ್ತದೆ. ಮುಂದೆ, ಗುರುಗಳಾದ ವಸಿಷ್ಠರ ಮಾರ್ಗದರ್ಶನದಲ್ಲಿ ತಮ್ಮಂದಿರುಗಳ ಸಹಿತ ಅತ್ಯಂತ ವೈಭವದಿಂದ ಆದಿ ಕೇಶವರಾಯನು ಸಾಮ್ರಾಜ್ಯವನ್ನು ಆಳಿದ ಎಂದು ಶಾಂಡಿಲ್ಯರು ಧರ್ಮರಾಜನಿಗೆ ಹೇಳಿ, ''ಅರಸ ನೀ ಮನವೊಲಿದು ಕೇಳದ ಚರಿತೆ ತಾನೊಂದಿಲ್ಲ ಲೋಕದಿ, ಪರಮ ಪುಣ್ಯದ ರಾಮ ಕಥೆಯಿದ ಕೇಳ್ದ ನೀನಿಂದು ಕೊರತೆಯುಂಟೆ ಇಷ್ಟಭೋಗವ ಹರಿ ಕೊಡುವ ನಿಮಗಿನ್ನು ಯೆನುತುಪಚರಿಸಿ ಕಳುಹಿಸಿಕೊಂಡು ಮುನಿ ಹೊರವಂಟನಾಶ್ರಮಕೆ''. ''ಧರ್ಮರಾಜ, ಲೋಕದಲ್ಲಿ ನೀನು ಕೇಳಿರದ ಕಥೆಯೇ ಇರಲಿಕ್ಕಿಲ್ಲ, ಆದರೆ ಇಂದು ನೀನು ಪುಣ್ಯತಮವಾದ ರಾಮ ಕಥೆಯನ್ನು ಕೇಳಿದ ಹಾಗಾಯಿತು, ಇನ್ನುಮೇಲೆ ನಿನಗೆ ಯಾವುದಕ್ಕೂ ಕೊರತೆಯುಂಟಾಗದು, ನಿಮಗೆ ಇಷ್ಟಭೋಗಗಳನ್ನು ಶ್ರೀಹರಿಯು ಕೊಡುತ್ತಾನೆ'' ಎಂದು ಅಶೀರ್ವಾದ ಮಾಡಿ ಧರ್ಮರಾಜನಿಂದ ಬೀಳ್ಕೊಟ್ಟ ಶಾಂಡಿಲ್ಯರು ತಮ್ಮ ಆಶ್ರಮಕ್ಕೆ ತೆರಳಿದರು.

''ಗುರು ವಸಿಷ್ಠನ ಮತದಿ ತಮ್ಮಂದಿರು ಸಹಿತ ಸಾಮ್ರಾಜ್ಯವಾಳಿದ ವರದನಗಪತಿಯಾದಿ ಕೇಶವರಾಯ ವಿಭವದಲಿ'' ಎಂದು, ರಾಮನಿಗೂ ತಮ್ಮ ಆರಾಧ್ಯನಾದ ಆದಿಕೇಶವನಿಗೂ ಅಭೇದವನ್ನು ಹೇಳುವ ಪದ್ಯ ಮತ್ತು ''ಶರಧಿಶಯನ ಮುಕುಂದ ಸಚರಾಚರಭರಿತ ನಿರ್ಗುಣ ನಿರಾಮಯ ಸುರ ನರೋರಗವಂದ್ಯ ವರಪುರದಾದಿಕೇಶವನ ಚರಣದಂಕಿತಮಾಗಿ ಪೇಳಿದ ಪರಮಧಾನ್ಯದ ಚರಿತೆ ಸಂತತ ಧರೆಯೊಳಿಂತೊಪ್ಪಿಹುದು ಆಚಂದ್ರಾರ್ಕ ಪರಿಯಂತ'' ಎನ್ನುವ ಶ್ರೀಮಂಗಳ ಪದ್ಯದೊಂದಿಗೆ, ಕನಕದಾಸರು ಶ್ರೀರಾಮಾಯಣದೊಳಗೆ ಅಳವಡಿಸಿದ ರಾಘವ ಧಾನ್ಯದ ಈ ವಿಶಿಷ್ಟ ಚರಿತ್ರೆಗೆ ವಿರಾಮ ಹೇಳುತ್ತಾರೆ. ಈ ಅಂಕಣದ ಕೊನೆಯ ಭಾಗವಾಗಿ, ಮುಂದಿನವಾರ ಈ ಚರಿತ್ರೆಯನ್ನು ಸ್ವಲ್ಪ ವಿಮರ್ಶೆ ಮಾಡೋಣ.

(ಮುಂದುವರಿಯುವುದು)

ಮುಂಚೂಣಿಯಲ್ಲಿ ಮೆರೆಯುತ್ತಲೇ ಮುಕ್ಕುತ್ತಿತ್ತಾ ಮಾರ್ಜಾಲ?!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಸದಾಶಯದೊಂದಿಗೆ ಶುರುಮಾಡಲಾಗಿದ್ದ ಸಮಾಜ ಸೇವಾ ಸಂಸ್ಥೆಯ ಆವರಣವು ಕಳೆಗುಂದಿದೆ, ನಕಾರಾತ್ಮಕ ಛಾಯೆ ತಾಂಡವವಾಡುತ್ತಿದೆ ಎಂಬ ಅಹವಾಲು ಹೊತ್ತು ಅವಧೂತರ ಬಳಿಗೆ ಬರುವ ಸಂಸ್ಥೆಯ ಮ್ಯಾನೇಜರ್, ಇದಕ್ಕೆ ಪರಿಹಾರೋಪಾಯವನ್ನು ಸೂಚಿಸುವಂತೆ ಅವಧೂತರಲ್ಲಿ ಕೋರಿಕೊಳ್ಳುತ್ತಾರೆ. ಸಂಸ್ಥೆಯ ಆವರಣದಲ್ಲಿ ಸೇರಿಕೊಂಡಿರುವ ಒಂದು 'ಕಳ್ಳ'ಬೆಕ್ಕನ್ನು ಅಲ್ಲಿಂದ ಜಾಗ ಖಾಲಿಮಾಡಿಸಿದರೆ ಸಮಸ್ಯೆ ಪರಿಹಾರವಾಗುತ್ತದೆ ಎಂದು ಅವಧೂತರು ಸೂಚಿಸುತ್ತಾರೆ. ಅಂತೆಯೇ ಸದರಿ ಕಳ್ಳಬೆಕ್ಕನ್ನು ಹುಡುಕಲು ಹರಸಾಹಸಪಟ್ಟರೂ ಸಿಗದೆ ವಿಫಲರಾದ ಮ್ಯಾನೇಜರ್, ಮತ್ತೊಮ್ಮೆ ಅವಧೂತರಲ್ಲಿಗೆ ಬಂದು ನಡೆದುದನ್ನು ಹೇಳುತ್ತಾರೆ. ಆಗ ಅವಧೂತರು, ನಕಾರಾತ್ಮಕ ಶಕ್ತಿಯ ನಿವಾರಣಾ ಉಪಕ್ರಮದ ಒಂದು ಭಾಗವಾಗಿ ಶಿವರಾತ್ರಿಯಂದು ಸಂಸ್ಥೆಯ ಆವರಣದಲ್ಲಿ ಅಖಂಡ ಶಿವಭಜನೆ ಮಾಡಿಸುತ್ತಾರೆ. ಜತೆಗೆ, ಸಂಸ್ಥೆಯ ಶ್ರೇಯೋಭಿವೃದ್ಧಿಗೆ ಪ್ರಾರ್ಥಿಸಲೆಂದು ಹಾಗೂ ಉನ್ನತ ಅಧ್ಯಯನಕ್ಕೆಂದು ಅಲ್ಲಿನ ಮಠದ ಸ್ವಾಮೀಜಿಯನ್ನು ವಾರಾಣಸಿಗೆ ತೆರಳುವಂತೆ ಸೂಚಿಸಿ, ''ಸಂಸ್ಥೆಯ ಆವರಣದಲ್ಲಿ ದಿವ್ಯತೆ ತುಂಬಿಕೊಳ್ಳಲಿದೆ'' ಎಂದು ಮ್ಯಾನೇಜರ್‌ಗೆ ಅಭಯವಿತ್ತು ಅಲ್ಲಿಂದ ಹೊರಡುತ್ತಾರೆ. ಸಮಸ್ಯೆಯ ಪರಿಹಾರದ ಮಾರ್ಗೋಪಾಯವನ್ನು ತೋರಿದ್ದಕ್ಕೆ ಅಲ್ಲಿನ ವಿದ್ಯಾರ್ಥಿನಿಲಯದ ನಿವಾಸಿಯಾಗಿದ್ದ 14ರ ಹುಡುಗಿಯೊಬ್ಬಳು ಅವಧೂತರಿಗೆ ಕೃತಜ್ಞತೆ ಸಲ್ಲಿಸಿ ನಮಸ್ಕರಿಸುತ್ತಾಳೆ. ಮುಂದಕ್ಕೆ ಓದಿ...

•••

ಕಾರಿನ ಬಳಿ ಬಂದು ಮತ್ತೊಮ್ಮೆ ನಮಸ್ಕರಿಸಿದ ಆ ಹುಡುಗಿಯ ಕಂಗಳಲ್ಲಿ ತುಂಬಿದ್ದ ಅಬೋಧ ಭಾಷೆ ಮತ್ತು ಭಾವವನ್ನು ಗ್ರಹಿಸಿ ನಸುನಕ್ಕ ಅವಧೂತರು ಮತ್ತೊಮ್ಮೆ ಹಸ್ತದಲ್ಲಿ ಅಭಯಮುದ್ರೆ ತೋರಿಸಿ, ''ಇನ್ನೇನೂ ಚಿಂತೆಯಿಲ್ಲ, ಚೆನ್ನಾಗಿ ಓದಿ ಈ ಸಂಸ್ಥೆಗೂ, ನಿಮ್ಮ ಹೆತ್ತವರಿಗೂ ಹೆಸರು ತರಬೇಕು.. ಆಯ್ತಾ ತಾಯೀ?!'' ಎಂದರು ಆಪ್ಯಾಯತೆಯಿಂದ. ''ನೀವು ಹೇಳಿದ ಹಾಗೇ ಮಾಡ್ತೀನಿ ಬುದ್ಧೀ'' ಎಂದು ನಿಧಾನಗತಿಯಲ್ಲಿ ಉಲಿದಳು ಆ ಹುಡುಗಿ. ಅವಳು ಹಾಗೆ ಹೇಳಿದ್ದನ್ನು ಮೊದಲ ಬಾರಿಗೆ ಕೇಳಿಸಿಕೊಂಡವರು, 'ಈ ಹುಡುಗಿ ಈಗಷ್ಟೇ ಮಾತು ಕಲಿತಿರಬೇಕು, ಅಥವಾ ಈಕೆಯ ದನಿ ಇದುವರೆಗೂ ದಮನಿತವಾಗಿದ್ದಿರಬೇಕು' ಎಂದು ಭಾವಿಸುವಂತಿತ್ತು. ಆಕೆಯ ವಿನಯಭರಿತ ನುಡಿಗೆ ಮೆಚ್ಚುಗೆ ಎಂಬಂತೆ ಅವಧೂತರು ತಮ್ಮ ಜೋಳಿಗೆಯಿಂದ ಒಂದು ಮುಷ್ಟಿ ಒಣದ್ರಾಕ್ಷಿಯನ್ನು ತೆಗೆದು ಆಕೆಯ ಕೈಗೆ ಹಾಕಿ, ''ಒಳ್ಳೇದಾಗ್ಲಿ ತಾಯೀ...'' ಎಂದು ಮತ್ತೊಮ್ಮೆ ಹರಸಿದರು. ಸಂಸ್ಥೆಯ ಆವರಣದಿಂದ ಕಾರು ಹೊರಟಿತು. ಅದು ತನ್ನ ಕಣ್ಣ ನೋಟದ ವ್ಯಾಪ್ತಿಯಿಂದ ಮಸುಕಾಗುವವರೆಗೂ ಆ ಹುಡುಗಿ ಕಾರಿನತ್ತಲೇ ನೋಡುತ್ತಾ ಕೈಬೀಸುತ್ತಲೇ ಇದ್ದಳು. ಕಿಟಕಿ ಪಕ್ಕ ಕೂತಿದ್ದ ಅವಧೂತರು ಅದಕ್ಕೆ ಪ್ರತಿಯಾಗಿ ಹಸನ್ಮುಖಿಯಾಗಿ ಅಭಯಮುದ್ರೆಯನ್ನು ತೋರಿಸುತ್ತಲೇ ಇದ್ದರು...

ಕಾರು ಪಟ್ಟಣದ ಹೊರವಲಯ ಪ್ರವೇಶಿಸುವವರೆಗೂ ಅದರೊಳಗೆ ಮೌನಸಾಮ್ರಾಜ್ಯ. ಅದನ್ನು ಮುರಿಯುವವರಂತೆ ಮಾತಿಗಿಳಿದ ಅವಧೂತರು ಶಿಷ್ಯರೊಬ್ಬರ ಕಡೆಗೆ ತಿರುಗಿ, ''ಸಂಸ್ಥೆಯವರಿಂದ ಬೀಳ್ಕೊಂಡು ಕಾರು ಹತ್ತಿದಾಗ ನೀವು ಏನೋ ಕೇಳಿದ ಹಾಗಿತ್ತಲ್ಲಾ ರಾಯರೇ? ಏನದು...?'' ಎಂದರು ತಮ್ಮ ಎಂದಿನ ಹಾಸ್ಯಭರಿತ ದನಿಯಲ್ಲಿ.

ಅಷ್ಟು ಹೊತ್ತಿಗೆ, ಅವಧೂತರ ನಿಗೂಢ ನಡೆಯಿಂದಾಗಿ ಅಯೋಮಯಗೊಂಡಿದ್ದ ಆ ಶಿಷ್ಯರು ಇದ್ದಬದ್ದ ಧೈರ್ಯವನ್ನೆಲ್ಲಾ ಒಗ್ಗೂಡಿಸಿ, ''ಗುರುಗಳೇ, ಚಂಚಲಮನಸ್ಸು ಎಂಬ 'ಕಳ್ಳ'ಬೆಕ್ಕನ್ನು ಸಂಸ್ಥೆಯಿಂದ ಓಡಿಸಿ, ದೈವ ಸ್ಮರಣೆಗೆ ಒಗ್ಗೊಡುವ 'ಸ್ಥಾಯಿ' ಮನಸ್ಸನ್ನು ಗಟ್ಟಿಯಾಗಿ ಅಪ್ಪಿದರೆ ಸಂಸ್ಥೆಯ ವಾತಾವರಣ ತಾನಾಗೇ ಶುದ್ಧಿಯಾಗುತ್ತೆ ಅಂತ ಆ ಮ್ಯಾನೇಜರ್‌ರಿಗೆ, ಅವರು ಒಂದು ತಿಂಗಳ ಹಿಂದೆ ಬಂದಾಗಲೇ ನೀವು ಸಲಹೆ ನೀಡಬಹುದಿತ್ತು. ಹೀಗೆ ನೇರವಾಗಿ ಹೇಳಿದ್ದಿದ್ದರೆ ಅವರು ಹಾಗೇ ಮಾಡ್ತಾ ಇದ್ರೋ ಏನೋ? ಅದನ್ನು ಬಿಟ್ಟು, 'ಕಳ್ಳಬೆಕ್ಕನ್ನು ಹುಡುಕಿ' ಅಂತ ಒಗಟಾಗಿ ಹೇಳಿದ್ದೇಕೆ?'' ಎಂದು ತಮ್ಮ ಪ್ರಶ್ನೆಯನ್ನು ಪುನರಾವರ್ತಿಸಿದರು.

ಭಾಗ 2

ಆಗ ಅವಧೂತರು, ''ಅಯ್ಯಾ, 'ಧರ್ಮಸೂಕ್ಷ್ಮ' ಅಂತ ಇರುತ್ತೆ. ಅದನ್ನು ನಾವು ಗಮನದಲ್ಲಿ ಇಟ್ಟುಕೊಂಡಿರಬೇಕು. ಕೆಲ ವಿಷಯಗಳನ್ನು ಹಾಗೆಲ್ಲ ಬಹಿರಂಗವಾಗಿ ಹೇಳಲಾಗದು. ನೀವೆಲ್ಲಾ ನನ್ನಲ್ಲಿ ಶ್ರದ್ಧಾಭಕ್ತಿ ಇಟ್ಟಿರುವವರು, ಈ ಸೂಕ್ಷ್ಮವನ್ನು ಬಯಲುಮಾಡುವುದಿಲ್ಲ ಎಂಬ ವಿಶ್ವಾಸವಿರುವುದರಿಂದಲೇ ಆ ಒಗಟನ್ನು ಹೇಳ್ತೀನಿ ಕೇಳಿ. ಮ್ಯಾನೇಜರ್ ಕಳೆದ ತಿಂಗಳು ಬಂದು ಸಮಸ್ಯೆ ಹೇಳಿಕೊಂಡಾಗಲೇ, ಅದಕ್ಕೆ ಕಾರಣವೇನು ಎಂಬುದರ ಚಿತ್ರಣ ನಮ್ಮ ಕಣ್ಣೆದುರು ಮೂಡಿತ್ತು. ಆದರೆ ಅದನ್ನು ಎಲ್ಲರೆದುರು ಆ ಮ್ಯಾನೇಜರ್‌ರಿಗೆ ಹೇಳುವಂತಿರಲಿಲ್ಲ. ಹೀಗಾಗಿ, 'ಸಂಸ್ಥೆಯ ಆವರಣದಲ್ಲಿರುವ ಕಳ್ಳಬೆಕ್ಕನ್ನು ಓಡಿಸಿದರೆ ಸಮಸ್ಯೆ ಪರಿಹಾರವಾಗುತ್ತೆ' ಅಂತ ಸೂಚ್ಯವಾಗಿ ಹೇಳಿದ್ದೆ. ಆದರೆ ಅವರು ಸಂಸ್ಥೆಗೆ ಮರಳಿ ಅಂಥ ಬೆಕ್ಕನ್ನು ಹುಡುಕಹೊರಟರೇ ವಿನಾ ಆ ನಿಗೂಢಮಾತನ್ನು ವಿಶ್ಲೇಷಿಸಲು ಯತ್ನಿಸಲಿಲ್ಲ. ಸಂಸ್ಥೆಯ ಆವರಣದಲ್ಲಿ ವಿವಿಧ ಕಾರಣಗಳಿಗೆ ಆಶ್ರಯ ಪಡೆದಿರುವವರನ್ನು ಈ ಕುರಿತು ವಿಚಾರಿಸಿದ್ದರೆ ಆ 'ಕಳ್ಳಬೆಕ್ಕು' ಯಾವುದೆಂದು ಗೊತ್ತಾಗಿಬಿಡುತ್ತಿತ್ತು...'' ಎಂದು ಹೇಳುವ ಮೂಲಕ ನಿಗೂಢತೆಯ ಸಂಪುಟಕ್ಕೆ ಮತ್ತೊಂದು ಅಧ್ಯಾಯವನ್ನು ಸೇರಿಸಿಬಿಟ್ಟರು!!

ಅದೇ ಅವಧೂತರ ವೈಖರಿ. ಅವರು ಯಾವ ವಿಷಯವನ್ನೂ 'ಸುಲಭಕ್ಕೆ ಬಿಟ್ಟುಕೊಡುವವರಲ್ಲ', ತಮ್ಮನ್ನು ಉತ್ಕಟವಾಗಿ ನೆಚ್ಚಿದವರನ್ನೂ 'ಸುಲಭಕ್ಕೆ ಬಿಟ್ಟುಕೊಡುವವರಲ್ಲ'..! ಆದರೆ, ಅವರ ಜತೆ ಪಯಣಿಸುತ್ತಿದ್ದ ಶಿಷ್ಯಗಣದ ಪಾಲಿಗೆ ಅದು 'ಧರ್ಮಸೂಕ್ಷ್ಮ'ದ ಲೇಪವಿರುವ ಪ್ರಸಂಗವಾಗದೆ, ನಿಗೂಢಸುಳಿಯೊಳಗೆ ಮತ್ತಷ್ಟು ಎಳೆದುಕೊಳ್ಳುವ 'ಪತ್ತೇದಾರಿ ಪ್ರಸಂಗ' ಆಗಿಬಿಟ್ಟಿತ್ತು! ಅವಧೂತರು ಹೀಗೆ ಲೋಕಾಭಿರಾಮವಾಗಿ ಹರಟುತ್ತಿರುವಾಗಲೇ ಆ ನಿಗೂಢತೆಗೆ ನಿರ್ಣಾಯಕ ಅಂತ್ಯ ಹಾಡಬೇಕು ಎಂದು ಭಾವಿಸಿದ ಆ ಶಿಷ್ಯರು, ''ಗುರುಗಳೇ, 'ವಿದ್ಯೆಯಾಗಲೀ, ಹಣವಾಗಲೀ, ಕಾರ್ಯಕೌಶಲವಾಗಲೀ ಒಂದೇ ಗುಕ್ಕಿಗೆ ದಕ್ಕಿಬಿಡುವುದಿಲ್ಲ, ಅದಕ್ಕೆ ಸಾಕಷ್ಟು ಚಪ್ಪಲಿ ಸವೆಸಬೇಕು, ಬೆವರು ಸುರಿಸಬೇಕು ಕಣ್ರಯ್ಯಾ' ಅಂತ ನೀವು ಹೇಳೋದನ್ನ ಕೇಳಿದ್ದೇವೆ. ಆದರೆ, ಈ ಸಂಸ್ಥೆಗೆ ಸಂಬಂಧಿಸಿ ಕಳೆದ ಒಂದು ತಿಂಗಳಿಂದ ನೀವಾಡುತ್ತಿರುವ 'ಲೀಲಾ-ವಿನೋದ'ಗಳಿಗೆ ಏನೋ ಕಾರಣ ಇದ್ದೇ ಇರುತ್ತೇ ಅನ್ನೋದು ಇಷ್ಟು ದಿನ ನಿಮ್ಮೊಂದಿಗೆ ಪಳಗಿರುವ ನಮಗೆ ಅಷ್ಟಿಷ್ಟಾದರೂ ಗೊತ್ತಾಗಿರೋ ಸೂಕ್ಷ್ಮ. ಗುರುಗಳೇ, ಸಂಸ್ಥೆಯ ಆವರಣದಲ್ಲಿರೋ ಆ 'ಕಳ್ಳಬೆಕ್ಕು' ಯಾವುದು? ಅದು ಸಿಕ್ಕಿ ಬೀಳುತ್ತಾ? ಪಶ್ಚಾತ್ತಾಪಪಟ್ಟು ನಿಮ್ಮ ಪಾದಕ್ಕೆರಗಿ ಕಣ್ಣೀರುಗರೆದು, ಕ್ಷಮಿಸುವಂತೆ ಕೋರುತ್ತಾ? ಈ ಕಥೆ ಮುಂದೆ ಸಾಗುವ ಪರಿಯೇನು?'' ಎಂದೆಲ್ಲಾ ಸರಣಿ ಪ್ರಶ್ನೆಯನ್ನೇ ಕೇಳಿಬಿಟ್ಟರು.

ತಮ್ಮ ಅನುಯಾಯಿಗಳು/ಶಿಷ್ಯರು ಹೀಗೆ ಬಿಡುಬೀಸಾಗಿ ಮಾತಾಡುವುದನ್ನು ಕೆಲ ಧರ್ಮಗುರುಗಳು, ಸ್ವಾಮೀಜಿಗಳು ಸಾಮಾನ್ಯವಾಗಿ ಸಹಿಸುವುದಿಲ್ಲ; ಅವರ ವಲಯದಲ್ಲಿ ಒಂದು 'ಅಘೋಷಿತ' ಗಂಭೀರ ವಾತಾವರಣವೇ ಕೆನೆಗಟ್ಟಿರುತ್ತದೆ. ಆದರೆ ಅವಧೂತರು ಹಾಗಲ್ಲ, ಅವರು ಲೋಕವಿಹಾರಿ, ಮನೋವಿಹಾರಿ. ಇಂಥ ಯಾವ ಕಟ್ಟುಪಾಡುಗಳಿಲ್ಲದ, ಯಾರಿಗೂ ಇಂಥ ಕಟ್ಟುಪಾಡು ವಿಧಿಸದ ಸೀದಾ-ಸಾದಾ 'ಸಾಧಕರು' ಅವರು. ಹಾಗಂತ, 'ಸ್ವಾತಂತ್ರ್ಯ'ದ ಹೆಸರಿನಲ್ಲಿ 'ಸ್ವೇಚ್ಛೆ'ಗೆ ಅವರು ಅವಕಾಶ ನೀಡುತ್ತಿರಲಿಲ್ಲ. ಅಂತೆಯೇ, ಶಿಷ್ಯರಿಂದ ಕಾಲಾನುಕಾಲಕ್ಕೆ ಇಂಥ ಜಿಜ್ಞಾಸೆಗಳು, ಸಂದೇಹಗಳು ಹೊಮ್ಮುವುದಕ್ಕೆ ಅವರು ಅನುವುಮಾಡಿಕೊಡುತ್ತಿದ್ದರು. ಲೋಕಾಭಿರಾಮದ ಮಾತುಗಾರಿಕೆಯ ನೆಲೆಯಲ್ಲೇ ಅವಕ್ಕೆ ಉತ್ತರವನ್ನೂ ನೀಡಿ, ಗೊಂದಲವನ್ನು ಪರಿಹರಿಸುತ್ತಿದ್ದರು. ಅಂತೆಯೇ ಸಂಸ್ಥೆಯಲ್ಲಿನ ಬೆಳವಣಿಗೆಗೆ ಸಂಬಂಧಿಸಿ ತಮ್ಮ ಶಿಷ್ಯರು ಕೇಳಿದ ಸರಣಿ ಪ್ರಶ್ನೆಗೆ ಉತ್ತರಿಸಲು ಅವರು ಉದ್ಯುಕ್ತರಾಗುತ್ತಿದ್ದಂತೆಯೇ, ಮತ್ತೊಬ್ಬ ಶಿಷ್ಯರ ಮೊಬೈಲ್ ಫೋನು ರಿಂಗಣಿಸಿತು. ಗುರುಗಳ ಜತೆಗಿನ ಮಾತುಕತೆಯಲ್ಲಿ 'ರಹಸ್ಯದ ಉತ್ಖನನ'ಕ್ಕೆ ಇನ್ನೇನು ಸಜ್ಜಾಗಿರುವಾಗ ಹೀಗೆ ಬಂದ ಕರೆಯನ್ನು ಸ್ವೀಕರಿಸುವುದೋ ಬಿಡುವುದೋ ಎಂಬ ಗೊಂದಲದಲ್ಲಿ ಶಿಷ್ಯರು ಹೊಯ್ದಾಡುತ್ತಿದ್ದಾಗ ಅವಧೂತರೇ, ''ಕರೆ ಸ್ವೀಕರಿಸಿ ಸ್ವಾಮೀ...'' ಎನ್ನುತ್ತಾ ನಿಗೂಢ ನಗೆ ನಕ್ಕರು.

ಶಿಷ್ಯರು ಕರೆ ಸ್ವೀಕರಿಸುತ್ತಿದ್ದಂತೆ ಆ ಕಡೆಯಿಂದ, ''ಸಮಾಜ ಸೇವಾ ಸಂಸ್ಥೆಯ ಮ್ಯಾನೇಜರ್ ಮಾತಾಡ್ತಾ ಇದ್ದೀನಿ. ಅವಧೂತರಿಗೆ ಸ್ವಲ್ಪ ಫೋನ್ ಕೊಡ್ತೀರಾ?'' ಎಂದು ಕೇಳಿದರು ಆರ್ತರಾಗಿ. 'ಒಂದು ನಿಮಿಷ' ಎಂದ ಶಿಷ್ಯರು ಮೆಲುದನಿಯಲ್ಲಿ, ''ಗುರುಗಳೇ, ಮ್ಯಾನೇಜರ್'' ಎಂದರು. 'ಸ್ಪೀಕರ್ ಆನ್ ಮಾಡಿ'' ಎಂದ ಅವಧೂತರು, ''ಹೇಳಿ ರಾಯರೇ, ಏನು ಸಮಾಚಾರಾ...?'' ಎಂದು ಪ್ರಶ್ನಿಸಿದರು ಮತ್ತದೇ ಕಿಲಾಡಿತನದ ದನಿಯಲ್ಲಿ.

ಅತ್ತ ಕಡೆಯಿಂದ ಮ್ಯಾನೇಜರ್ ಬಿಕ್ಕಳಿಸಿ ಅಳುತ್ತಾ, ''ಸಂಸ್ಥೆಯ ಆವರಣದಲ್ಲಿರೋ ಕಳ್ಳಬೆಕ್ಕನ್ನ ಹುಡುಕಿ ಹೊರಹಾಕಿ ಎಂದು ನೀವು ಹೇಳಿದಾಗ, ನನಗೆ ಮೊದಲು ಅರ್ಥವಾಗಲಿಲ್ಲ ಬುದ್ಧೀ. ನನ್ನ ತಪ್ಪು ಏನೆಂದು ಈಗ ಗೊತ್ತಾಯಿತು. ಹೊಟ್ಟೆಗೆ ಹಾಕ್ಕೊಳ್ಳಿ. ಇನ್ನು ಮೇಲೆ ಇಂಥ ತಪ್ಪು ನಮ್ಮ ಕಡೆಯಿಂದ ಆಗೋಲ್ಲ ಬುದ್ಧೀ. ಕರುಣೆ ತೋರಿ ನನ್ನಪ್ಪಾ...'' ಎಂದು ಅಲವತ್ತುಕೊಳ್ಳತೊಡಗಿದರು. ಈ ಮಾತಿಗೆ ''ಆಯ್ತು, ಆಯ್ತು'' ಎಂದಷ್ಟೇ ಹೇಳಿದ ಅವಧೂತರು, ಕರೆಯನ್ನು ತುಂಡರಿಸುವಂತೆ ಶಿಷ್ಯರಿಗೆ ಸೂಚಿಸಿದರು.

ಕೆಲವೇ ಹೊತ್ತಿನ ಮುಂಚೆ, 'ಸಂಸ್ಥೆಯೊಳಗಿನ ಕಳ್ಳಬೆಕ್ಕು ಯಾರು?' ಎಂಬ ವಿಷಯದಲ್ಲಿನ 'ಪತ್ತೇದಾರಿ ರಹಸ್ಯ'ವನ್ನು ಕೇಳಲು ತವಕಿಸುತ್ತಿದ್ದ ಶಿಷ್ಯರೆಲ್ಲರೂ ಅಪ್ರತಿಭರಾಗಿದ್ದರು! ಕಾರಿನೊಳಗೆ ಮತ್ತೊಮ್ಮೆ ಮೌನಸಾಮ್ರಾಜ್ಯ... ಹಾಗೇ ಕಿಟಕಿಯಿಂದಾಚೆ ಒಮ್ಮೆ ಕಣ್ಣು ಹಾಯಿಸಿದ ಅವಧೂತರಿಗೆ ರಸ್ತೆಬದಿಯಲ್ಲಿನ ಮರಗಳು ಹಿಂದಿದಕ್ಕೆ ಓಡುತ್ತಿರುವುದು ಕಾಣಿಸಿತು. ಅಂತೆಯೇ ಅವರ ಮನಸ್ಸೂ 'ಫ್ಲ್ಯಾಷ್‌ಬ್ಯಾಕ್'ಗೆ ತೆರಳಿತು...!

(ಮುಂದುವರಿಯುವುದು)

ಸಾಲಗಾರ ಮಲ್ಯಗೆ ಸಿಗುತ್ತಿರುವ ಸವಲತ್ತು-ಮಲ್ಯವರ್ಧಿತ ಸೇವೆ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ರಾಜ್ಯ ಸರಕಾರವು ಚಲನಚಿತ್ರ ಪ್ರಶಸ್ತಿಗಳ ವಿಷಯದಲ್ಲಿ ಕನ್ನಡ ಚಿತ್ರರಂಗದ ಕಲಾತ್ಮಕ ಚಿತ್ರಗಳ ಪಾಲಿಗೆ ವರದಾನವಾಗುವಂಥ ಯೋಜನೆಯೊಂದನ್ನು ಜಾರಿಗೆ ತರಬೇಕಿದೆ. ಸಾಮಾನ್ಯವಾಗಿ ಕೆಲವು ಕಲಾತ್ಮಕ ಚಿತ್ರಗಳು ಮತ್ತು ಎನ್ ಆರ್ ಐ ಕಾಂಟ್ಯಾಕ್ಟ್ ಇರುವ ಸಿನಿಮಾ ಮೇಕರ್‌ಗಳ ಚಿತ್ರಗಳು ಮೊದಲು ವಿದೇಶದಲ್ಲೋ ಅಥವಾ ಚಿತ್ರೋತ್ಸವದಲ್ಲೋ ಪ್ರದರ್ಶನ ಕಂಡು ನಂತರ ಕರ್ನಾಟಕದ ಚಿತ್ರಮಂದಿರಗಳಲ್ಲಿ ಬಿಡುಗಡೆಯಾ ಗುತ್ತವೆ. ಈ ಸಿನಿಮಾ ಮೇಕರ್‌ಗಳು ಕೆಲವು ಚಿತ್ರೋತ್ಸವಗಳಲ್ಲಿ ಅವಾರ್ಡ್ ತೆಗೆದುಕೊಂಡು 'ನಮ್ಮದು ಒಳ್ಳೆಯ ಸಿನಿಮಾ' ಅಂತ ಮೊದಲೇ ಸೀಲು ಒತ್ತಿಸಿಕೊಂಡು ಚಿತ್ರಮಂದಿರಕ್ಕೆ ಬರುತ್ತಾರೆ. ಇಂಥ ನಡೆಗಳು, ಸಿನಿಮಾ ಪ್ರೇಕ್ಷಕರು ಮತ್ತು ವಿಮರ್ಶಕರು ಆ ಸಿನಿಮಾ ಚೆನ್ನಾಗಿಲ್ಲ ಎಂದು ಹೇಳಲು ಹಿಂಜರಿಯುವಂತೆ ಒತ್ತಾಯಿಸುತ್ತವೆ. ಇನ್ನು 'ವಿದೇಶಿ ಪ್ರೇಕ್ಷಕರಿಗೆ ಇಷ್ಟವಾದ ಚಿತ್ರ' ಎಂದು ಅಲ್ಲಿನವರ ಅಭಿಪ್ರಾಯಗಳನ್ನು ಯುಟ್ಯೂಬ್‌ನಲ್ಲಿ, ಸಾಮಾಜಿಕ ತಾಣಗಳಲ್ಲಿ ಕೆಲವೊಂದು ಎಲೆಗಳಿಂದ ಶೃಂಗಾರ ಮಾಡಿದ ಜಾಹೀರಾತುಗಳನ್ನು ರಿಲೀಸ್ ಮಾಡಲಾಗುತ್ತದೆ. ಇಲ್ಲಿ ಸಿನಿಮಾ ಬಿಡುಗಡೆ ಮಾಡುವ ಬುದ್ಧಿವಂತ ನಿರ್ದೇಶಕರ ಸಿನಿಮಾಗಳೂ ಈ ಟೆಕ್ನಿಕ್‌ಗೆ ಹೊರತಾಗಿಲ್ಲ. ಹಾಗಾಗಿ ಇಂಥ ಚಿತ್ರಗಳು ನಮ್ಮಲ್ಲಿಯೂ 100 ದಿನ ಓಡಬೇಕು. ಇಲ್ಲದಿದ್ದರೆ ಪಾಪ ಆ ಸಿನಿಮಾಗಳ ಮರ್ಯಾದೆ ಹೋಗುತ್ತಲ್ಲ. ಹಾಗಾಗಿ, ಜನ ಬರಲಿ, ಬರದೇ ಇರಲಿ ಇಂಥ ಚಿತ್ರಗಳನ್ನು 100 ದಿನ ಓಡಿಸಬೇಕು ಎಂದು ಈ ನಿಟ್ಟಿನಲ್ಲಿ ಕಟ್ಟುನಿಟ್ಟಾಗಿ ರಾಜ್ಯದ ಚಿತ್ರಮಂದಿರಗಳಿಗೆ ಸರಕಾರ ಆದೇಶ ಹೊರಡಿಸಬೇಕಿದೆ.

ಲೂಸ್ ಟಾಕ್

ಔಟ್ ಆಫ್ ಔಟ್ ತೆಗೆದ ಟಾಪರ್ ವಿದ್ಯಾರ್ಥಿ

- **ಅಲ್ಲಪ್ಪಾ, ಇರೋ 625ರಲ್ಲಿ ಒಂದೂ ಬಿಡದೇ ಅಷ್ಟೂ ಅಂಕ ತಗೊಂಡ್ರೆ, ಹೆಂಗೆ?**
- ಊಟ ಮಾಡಿದ ಮೇಲೆ ತಟ್ಟೆಯಲ್ಲಿ ಒಂದು ಅಗುಳೂ ಉಳಿಸಬಾರದಂತೆ ಅಂತ ದೊಡ್ಡೋರು ಹೇಳಿದಾರಲ್ವಾ?
- **ಓಹೋ ಅದೂ ಸರೀನೇ, ನ್ಯೂಸ್ ಪೇಪರ್‌ಗಳಲ್ಲೆಲ್ಲಾ ನಿನ್ನ ಆ್ಯನ್ಸರ್ ಪೇಪರ್‌ದೇ ಸುದ್ದಿ. ನಿನ್ ಬಗ್ಗೆ ಎಲ್ಲ ಪೇಪರ್‌ಲೂ ಆರ್ಟಿಕಲ್ಸ್ ಬಂದಿತ್ತು. ಓದಿದ್ಯಾ?**
- ಇಲ್ಲಾರೀ.... ಪೇಪರ್ ಓದ್ತಾ ಕೂತ್ರೆ ಎಕ್ಸಾಮ್ ಪೇಪರ್ ಬರೆಯೋಕಾಗುತ್ತಾ? ನಾನು ಬರೀ ಟೆಕ್ಸ್ ಬುಕ್ ಮಾತ್ರ ಓದೋದು.
- **ಎಕ್ಸಾಮ್‌ನಲ್ಲಿ ಎಲ್ಲ ಪ್ರಶ್ನೆಗೂ ಉತ್ತರ ಕೊಟ್ಟು ಇಲ್ಲಿ ಮಾತ್ರ ನನ್ನ ಪ್ರಶ್ನೆಗಳಿಗೆ ಪ್ರಶ್ನೆನೇ ಕೇಳಿದೀಯಲ್ಲ?**
- ಏನ್ ಮಾಡೋದು, ಇರೋ ಬರೋ ಉತ್ತರಗಳನ್ನೆಲ್ಲಾ ಅಲ್ಲೇ ಬರೆದುಬಿಟ್ಟಿದ್ದೀನಲ್ಲಾ?
- **ಸರಿ, 'ಔಟ್ ಆಫ್ ಔಟ್' ತೆಗೆದಿದ್ದೀಯಲ್ಲಾ, ಕ್ವೆಶ್ಚನ್ ಪೇಪರ್ ಔಟ್ ಆದ್ರೂ ಇಷ್ಟೊಂದು ಮಾರ್ಕ್ ತೆಗೆಯೋಕಾಗಲ್ಲ ನಮ್ಮಂಥೋರಿಗೆ. ಏನಾಗಬೇಕು ಅಂತಿದೀಯಾ?**
- ಮುಂದೆ ಕ್ರಿಕೆಟ್‌ನಲ್ಲಿ ಬೌಲರ್ ಆಗಬೇಕು ಅಂತಿದ್ದೀನಿ, 'ಹೌ ವಾಸ್ ದಟ್' ಅಂತ ಅಪೀಲ್ ಮಾಡಿದಾಗ ಅಂಪೈರ್ 'ಔಟ್ ಆಫ್ ಔಟ್' ಅಂತ ಕೈಯೆತ್ತೋದನ್ನ ನೋಡಬೇಕು ಅಂತ ಆಸೆ
- **ಸರಿ, ಒಟ್ಟಾರೆ ನಿನ್ನ ಈ ಸಾಧನೆಯನ್ನ ಒಂದು ಸಾಲಿನಲ್ಲಿ ಏನಂತ ವಿವರಿಸ್ತೀಯಾ?**
- 'ಉತ್ತರ' ಕುಮಾರನ ಪೌರುಷ

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ನೀನು ರೊಮ್ಯಾಂಟಿಕ್ ಆಗಬೇಕು ಮಗಾ ಅಂತ ಡಾಕ್ಟರ್ ಸೋಮು ಯಾವಾಗಲೂ ಗೆಳೆಯ ಖೇಮುಗೆ ಹೇಳ್ತಾ ಇದ್ದ. ಆದರೆ ರೊಮ್ಯಾಂಟಿಕ್ ಆಗಿ ಬಿಹೇವ್ ಮಾಡುವುದು ಖೇಮು ಜಾಯಮಾನಕ್ಕೆ ಬರುತ್ತಲೇ ಇರಲಿಲ್ಲ. ಅದಕ್ಕೆ ''ನನ್ನ ಡಾಕ್ಟರ್ ಶಾಪ್‌ಗೆ ಬರೀ ಹುಡುಗೀರು ಬರ್ತಾರೆ, ಅಲ್ಲಿಗೆ ಬಾ ನೀನು, ಸರಿ ಹೋಗ್ತೀಯಾ'' ಅಂದ ಡಾಕ್ಟರ್ ಸೋಮು. ಸರಿ ಅಂತ ಖೇಮು ದಿನಾ ಸೋಮುವಿನ ಕ್ಲಿನಿಕ್‌ಗೆ ಹೋಗತೊಡಗಿದ. ದಿನವೂ ಸುಂದರಿಯರನ್ನು ನೋಡಿ ಕಣ್ತುಂಬಿಕೊಳ್ಳುತ್ತಿದ್ದ. ಒಂದಷ್ಟು ದಿನಗಳು ಕಳೆದ ಮೇಲೆ ''ಬರೀ ನೋಡಿದ್ದು ಸಾಕು, ಇನ್ನು ಮುಂದೆ ಏನಾದರೂ ಮುಂದುವರಿಯಬೇಕು'' ಎಂದು ಹೇಳಿದ ಸೋಮು ಕ್ಲಿನಿಕ್‌ಗೆ ಪೇಷೆಂಟ್ ಬಂದಾಗ ಯಾವ ಕಾಯಿಲೆಗೆ ಯಾವ ಔಷಧಿ ಕೊಡಬೇಕು ಎಂದೆಲ್ಲಾ ಹೇಳಿಕೊಟ್ಟು ಒಂದು ದಿನ ಖೇಮುವನ್ನೇ ಡಾಕ್ಟರ್ ಆಗಿಸಿ ತಾನು ಹೊರಟು ಹೋದ. ಸಂಜೆಯ ವೇಳೆಗೆ ಸೋಮು ವಾಪಸ್ ಬಂದ. ಅವನ ಮುಂದೆ ಒಂದು ಸುಂದರವಾದ ಹುಡುಗಿ ಕಣ್ಣುಜ್ಜಿಕೊಳ್ಳುತ್ತಾ ಹೊರಗೆ ಹೋದಳು. ''ಓಹೋ ನಮ್ಮ ಖೇಮು ಏನೋ ಮಾಡಿದಾನೆ'' ಅಂತ ಸೋಮುಗೆ ಮನದಟ್ಟಾಯಿತು. ಸೀದಾ ಡಮ್ಮಿ ಡಾಕ್ಟರ್ ಖೇಮುವಿನ ರೂಮಿಗೆ ಹೋದ. ಬೆಳಗ್ಗೆಯಿಂದ ಏನೇನಾಯ್ತು ಅಂತ ವಿಚಾರಿಸಿದ. ''ಬೆಳಗ್ಗೆ ಒಂದು ಹುಡುಗಿ ತಲೆನೋವು ಅಂತ ಬಂದಿದ್ಲು, ಅವಳಿಗೆ ಸಾರಿಡಾನ್ ಕೊಟ್ಟೆ'' ಅಂದ ಖೇಮು, ಸರಿ ಅಂದ ಸೋಮು. ''ಇನ್ನೊಬ್ಬಳು ಜ್ವರ ಅಂತ ಬಂದಿದ್ಲು ಅವಳಿಗೆ ಪ್ಯಾರಾಸಿಟಮಾಲ್ ಮಾತ್ರೆ ಕೊಟ್ಟೆ'' ಅಂದ ಖೇಮು, ಸರಿ ಅಂದ ಸೋಮು. ''ಇನ್ನೊಬ್ಬಳು ಮೈ ಕೈ ನೋವು ಅಂತ ಬಂದಿದ್ಲು ಅವಳಿಗೆ ಬ್ರೂಫಿನ್ ಕೊಟ್ಟೆ'' ಅಂದ ಖೇಮು. ''ಅದ್ಸರಿ ಈಗ ಒಂದು ಹುಡುಗಿ ಹೋದಳಲ್ಲ, ಅವಳಿಗೆ ಏನು ಸಮಸ್ಯೆ ಇತ್ತು?'' ಅಂದ ಸೋಮು. ಅದಕ್ಕೆ ಖೇಮು ಹೇಳಿದ- ''ಅವಳಾ? ಆ ಹುಡುಗಿ ಒಳಗೆ ಬಂದವಳೇ ನನ್ನನ್ನು ನೋಡಿ, 'ಡಾಕ್ಟರ್ ಕನ್ನಡಿಯಲ್ಲಿ ನನ್ನನ್ನು ನಾನು ನೋಡಿಕೊಂಡಾಗಲೆಲ್ಲಾ ನನ್ನಂಥ ಬ್ಯೂಟಿಫುಲ್ ಹುಡುಗಿ ಈ ಪ್ರಪಂಚದಲ್ಲೇ ಇಲ್ಲ ಅನ್ಸುತ್ತೆ. ನಿಮಗೂ ಹಾಗೇ ಅನ್ಸುತ್ತಾ?' ಅಂತ ರೊಮ್ಯಾಂಟಿಕ್ ಆಗಿ ನನ್ನ ಹತ್ತಿರ ಬಂದು ಹೇಳಿದಳು''. ಸೋಮು ಕುತೂಹಲದಿಂದ ''ಅವಳಿಗೆ ಏನು ಮಾಡಿದೆ''? ಅಂತ ಕೇಳಿದ. ಅದಕ್ಕೆ ಖೇಮು ಕೂಲಾಗಿ ಹೇಳಿದ ''ಅವಳ ಕಣ್ಣಿಗೆ ಐ ಡ್ರಾಪ್ಸ್ ಹಾಕಿದೆ''.

ಲೈನ್‌ಮ್ಯಾನ್

- **ಪ್ರತಿ ಬಾರಿ ಸಿನಿಮಾ ಪ್ರಶಸ್ತಿ ಬಂದಾಗಲೂ ಲಾಬಿ ನಡೆದಿದೆಯಾ ಅಂತ ಅನುಮಾನ ಬರುತ್ತೆ. ಆ ಥರ ಅನುಮಾನ ಹುಟ್ಟಿಸುವಂತೆ ಪ್ರಶಸ್ತಿ ಪಡೆದಿರುವ ಚಿತ್ರ ಯಾವುದು?**
- 'ಮಾರಿ' 'ಕೊಂಡವರು'
- **ಕುರುಡನ ಪಾತ್ರದಲ್ಲಿ ನಟನೊಬ್ಬನ ಅಭಿನಯ ಕಂಡು ಅಭಿಮಾನಿಯಾದವರು**
- 'ಅಂಧಾ'ಭಿಮಾನಿಗಳು
- **'ಕಾನೂನನ್ನು' ದುರ್ಬಳಕೆ ಮಾಡಿಕೊಳ್ಳುವ ಕಥೆ ಇರುವ ಚಿತ್ರಕ್ಕೆ ಪ್ರಶಸ್ತಿ ಬಂದರೆ ಅದು**
- 'ಲಾ'ಬಿ
- **ಐಪಿಎಲ್ ಪ್ರಿಯರ ಫಿಲಾಸಫಿ**
- ಲೈಫು ಒಮ್ಮೆ ರಾಹುಲ್ ದ್ರಾವಿಡ್ ಥರ, ಇನ್ನೊಮ್ಮೆ ಆಶಿಶ್ ನೆಹ್ರಾ ಥರ. ಕೂತ್ರೆ ವೀಲ್‌ಚೇರಲ್ಲೇ ಇರುತ್ತೆ, ಇಲ್ಲಾಂದ್ರೆ ಒಂದ್ ಕಡೆ ಕೂರದೆ ಸುಮ್ನೆ ಓಡಾಡ್ತಾನೇ ಇರುತ್ತೆ.
- **ಕವನ ವಿಮರ್ಶೆ**
- **'ಏ ಹುಡುಗೀ, ಕನ್ನಡಿಗೆ ನಿನ್ನೀ ಸೌಂದರ್ಯವನ್ನು ಸೆರೆಹಿಡಿಯಲು ಸಾಧ್ಯವೇ'**
- ಈ ಹಾಡಿನಲ್ಲಿ ಕವಿ, ಹುಡುಗಿ ಎಷ್ಟು ದಪ್ಪ ಇದ್ದಾಳೆ ಅಂತ ಹೇಳೋಕೆ ಟ್ರೈ ಮಾಡ್ತಾ ಇದ್ದಾನೆ.
- **ಗರ್ಭಿಣಿ ಹೆಂಗಸಿಗೆ ಮನೆಯಲ್ಲೇ ಮಗು ಹುಟ್ಟಿದರೆ, ಅದು**
- ಹೋಮ್ ಡೆಲಿವರಿ
- **ಅಷ್ಟೊಂದು ಸಾಲ ಮಾಡಿಕೊಂಡು ವಿದೇಶದಲ್ಲಿರುವ ವಿಜಯ್ ಮಲ್ಯ ಅವರಿಗೆ ಸಿಗುತ್ತಿರುವ ಐಷಾರಾಮಿ ಸೌಲಭ್ಯ**
- 'ಮಲ್ಯ'ವರ್ಧಿತ ಸೇವೆ
- **ಆರ್ಟ್ ಸಿನಿಮಾಗಳಿಗೂ ಕಮರ್ಷಿಯಲ್ ವ್ಯಾಲ್ಯೂ ಇದೆ. ಹೇಗೆ?**
- ಪ್ರಶಸ್ತಿಯ ಜತೆಗೆ, ಹಣ, ಸೈಟು ಸಿಗುತ್ತಲ್ಲ.
- **ಪೊಲೀಸ್ ಕ್ವಾಟ್ರಸ್‌ಗಳನ್ನ ಏನಂತ ಕರೀಬಹುದು?**
- ಪೊಲೀಸ್ 'ಬೆಲ್ಟ್'
- **ಅಪರಾಧ ಮಾಡಿದವರನ್ನು ಗಲ್ಲಿಗೇರಿಸುವ ಪ್ರಕ್ರಿಯೆಗೊಂದು ಡೀಸೆಂಟ್ ಹೆಸರು**
- 'ಉರುಳು'ಸೇವೆ

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 20

ಸಮಾಚಾರ ಸಣ್ಣದಲ್ಲ

'ಎಕ್ಸ್' ಸೇವೆಯಲ್ಲಿ ದೇಶಾದ್ಯಂತ ವ್ಯತ್ಯಯ

ದೆಹಲಿ: ಖ್ಯಾತ ಮೈಕ್ರೋ ಬ್ಲಾಗಿಂಗ್ ತಾಣ ಎಕ್ಸ್‌ನಲ್ಲಿ ಶನಿವಾರ ದೇಶಾದ್ಯಂತ ಸೇವೆಗಳಲ್ಲಿ ವ್ಯತ್ಯವಾಗಿದ್ದು, ಸಾವಿರಾರು ಬಳಕೆದಾರರು ಈ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅನೇಕ ಬಳಕೆದಾರರು ಸೈಟ್ ಅನ್ನು ಪ್ರವೇಶಿಸುವಲ್ಲಿನ ಸಮಸ್ಯೆ ಗಳನ ಬಗ್ಗೆ ಅಸಮಾಧಾನದ ವರದಿಯನ್ನು ವ್ಯಕ್ತಪಡಿಸಿದ್ದಾರೆ. ಟ್ರ್ಯಾಕಿಂಗ್ ಸೇವೆ ಡೌನ್ ಡೆಕ್ಟರ್ ನಿಲುಗಡೆಯ ಉತ್ತುಂಗದಲ್ಲಿ 2,100 ಕ್ಕೂ ಹೆಚ್ಚು ಸಮಸ್ಯೆಗಳ ವರದಿಗಳನ್ನು ದಾಖಲಿಸಿದೆ. ಬಳಕೆದಾ ರರು ಸೈನ್ ಇನ್ ಮಾಡುವುದು ಮತ್ತು ನೇರ ಸಂದೇಶಗಳನ್ನು ಸ್ವೀಕರಿಸದಿರುವುದು ಸೇರಿದಂತೆ ವಿವಿಧ ಸಮಸ್ಯೆಗಳನ್ನು ಎದುರಿಸಿದರು ಎನ್ನಲಾಗಿದೆ. ಡೆಸ್ಕ್‌ಟಾಪ್ ಮತ್ತು ಮೊಬೈಲ್ ಸಾಧನಗಳಲ್ಲಿ ಪ್ಲಾಟ್‌ಫಾರ್ಮ್ ಅನ್ನು ಬಳಸಲು ಪ್ರಯತ್ನಿಸುತ್ತಿರುವ ಅನೇಕ ಬಳಕೆದಾರರಿಗೆ ಈ ಸಮಸ್ಯೆ ಅನಾನುಕೂಲತೆಯನ್ನು ಸೃಷ್ಟಿ ಮಾಡಿತು. ಆದರೆ ಈ ಬಗ್ಗೆ ಎಕ್ಸ್ ಯಾವುದೇ ಅಧಿಕೃತ ಸ್ಪಷ್ಟನೆ ನೀಡಿಲ್ಲ. ಹಲವಾರು ಸಾಮಾಜಿಕ ಮಾಧ್ಯಮ ಬಳಕೆದಾರರು ಬ್ರೋಕನ್ ಲಿಂಕ್ ಸಮಸ್ಯೆಗಳನ್ನು ಎದುರಿಸಿದ್ದಾರೆ.

ಬಾಲಿವುಡ್ ನಟ ಮುಕುಲ್ ದೇವ್ ನಿಧನ

ಮುಂಬೈ: ಖ್ಯಾತ ಬಾಲಿವುಡ್ ನಟ ರಾಹುಲ್ ದೇವ್ ಅವರ ಸಹೋದರ ಮುಕುಲ್ ದೇವ್ ನಿಧನರಾಗಿದ್ದು ಅವರಿಗೆ 54 ವರ್ಷ ವಯಸ್ಸಾಗಿತ್ತು.



ಶುಕ್ರವಾರ ರಾತ್ರಿ ಅವರು ನಿಧನರಾಗಿದ್ದು, ಅವರ ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ. ಮುಕುಲ್ ದೇವ್ ಅವರ ಸ್ನೇಹಿತೆ ನಟಿ ದೀಪ್ತಿಕಾ ನಾಗ್ಪಾಲ್ ಸಾಮಾಜಿಕ ಮಾಧ್ಯಮದ ಮೂಲಕ ಈ ಸುದ್ದಿಯನ್ನು ದೃಢಪಡಿಸಿದ್ದಾರೆ. ಬಾಲಿವುಡ್, ಟಾಲಿವುಡ್, ಕಾಲಿವುಡ್, ಬೆಂಗಾಲಿ, ಮಲಯಾಳಿ ಸೇರಿದಂತೆ ಹಲವು ಭಾಷಾ ಸಿನಿಮಾಗಳಲ್ಲಿ ನಟಿಸಿದ್ದ ನಟ ಮುಕುಲ್ ದೇವ್, ಹಿಂದಿಯ ಸನ್ ಆಫ್ ಸರ್ದಾರ್ ಚಿತ್ರದ ಮೂಲಕ ಖ್ಯಾತಿಗಳಿಸಿದ್ದರು. ಬಾಲಿವುಡ್‌ನಲ್ಲಿ ಜೈ ಹೋ ಸೇರಿದಂತೆ ಹತ್ತಾರು ಸಿನಿಮಾಗಳಲ್ಲಿ ನಟಿಸಿದ್ದ ಮುಕುಲ್ ದೇವ್, ಕನ್ನಡದ ರಜನಿ, ನಾಗರಹಾವು, ಚಿತ್ರದಲ್ಲೂ ಅಭಿನಯಿಸಿದ್ದರು. ದೆಹಲಿಯಲ್ಲಿ ಪಂಜಾಬಿ ಕುಟುಂಬದಲ್ಲಿ ಹಿನ್ನೆಲೆಯ ಜಲಂಧರ್ ಬಳಿಯ ಹಳ್ಳಿಯಲ್ಲಿ ಜನಿಸಿದ್ದರು. ಅವರ ತಂದೆ ಹರಿ ದೇವ್, ಸಹಾಯಕ ಪೊಲೀಸ್ ಆಯುಕ್ತರಾಗಿ ಸೇವೆ ಸಲ್ಲಿಸಿದ್ದರು.

ಅಂತಾರಾಜ್ಯ ಸುಲಿಗೆ: ಉಲ್ಫಾ ಉಗ್ರನ ಬಂಧನ

ದಿಬ್ರುಗಢ: ನಿಷೇಧಿತ ಉಲ್ಫಾ (ಐ)ನ ಪ್ರಮುಖ ನಾಯಕ ರೂಪಮ್ ಅಸೋಮ್ ಅವರನ್ನು ಅಸ್ಸಾಂ-ಅರುಣಾಚಲ ಪ್ರದೇಶ ಗಡಿಯ ಬಳಿಯ ಅರಣ್ಯ ಪ್ರದೇಶದಿಂದ ಬಂಧಿಸಲಾಗಿದೆ. ಅಸ್ಸಾಂನ ಕೆಲವು ಭಾಗಗಳಲ್ಲಿ ನಿಷೇಧಿತ ಸಂಘಟನೆಯ ಮೂಲಕ ಸುಲಿಗೆ ದಂಧೆಯನ್ನು ನಡೆಸುತ್ತಿದ್ದ ಎಂದು ಹೇಳಲಾದ ರೂಪಮ್ 2018ರಲ್ಲಿ ಬೋರ್ಡುಮ್ಸಾ ಪೊಲೀಸ್ ಠಾಣೆಯ ಅಧಿಕಾರಿ ಹತ್ಯೆಯ ಆರೋಪಿ ಎಂದು ಗುರುತಿಸಲಾಗಿದೆ. ರೂಪಮ್ ಮತ್ತು ತಂಡವು ಅಂತರರಾಜ್ಯ ಗಡಿಯಲ್ಲಿ ಅಡಗಿಕೊಂಡು ಸುಲಿಗೆ ಚಟುವಟಿಕೆ ಗಳನ್ನು ನಡೆಸುತ್ತಿತ್ತು. ಗುಂಪಿನ ಇತರ ಸದಸ್ಯರನ್ನು ಬಂಧಿಸಲು ಶೋಧ ಕಾರ್ಯಾಚರಣೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಬ್ಬ ನಕ್ಸಲ್ ನಾಯಕನ ಹತ್ಯೆ

ರಾಂಚಿ: ಮಾವೋವಾದಿ ನಕ್ಸಲೀಯರ ವಿರುದ್ಧ ಮತ್ತಷ್ಟು ಕಾರ್ಯಾಚರಣೆಯನ್ನು ಮುಂದುವರಿಸಿರುವ ಭದ್ರತಾ ಪಡೆಗಳು

ಜಾರ್ಖಂಡ್‌ನಲ್ಲಿ ಮತ್ತೊಬ್ಬ ಪ್ರಮುಖ ನಕಲ್ ನಾಯಕನನ್ನು ಹತ್ಯೆ ಮಾಡಲಾಗಿದೆ. ದಂಗೆಕೋರ ಮಾವೋವಾದಿ ಸಂಘಟನೆಯ ಜಾರ್ಖಂಡ್ ಜನ ಮುಕ್ತಿ ಪರಿಷತ್ತಿನ ನಾಯಕನಾಗಿದ್ದ ಪಪ್ಪು ಲೋಹರಾನನ್ನು ಶನಿವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಹೊಡೆದುರುಳಿಸಿವೆ. ಈತನ ಸುಳಿವು ನೀಡಿದವರಿಗೆ 10 ಲಕ್ಷ ರುಪಾಯಿ ಬಹುಮಾನ ಘೋಷಣೆ ಮಾಡಲಾಗಿತ್ತು. ಜತೆಗೆ 5 ಲಕ್ಷ ರುಪಾಯಿ ಬಹುಮಾನ ಘೋಷಿಸಲಾಗಿದ್ದ ಅವನ ಸಹಾಯಕ ಪ್ರಭಾತ್ ಗಂಜು ಸಹಾ ಹತನಾಗಿದ್ದಾನೆ. ಗಾಯಗೊಂಡಿದ್ದ ಗುಂಪಿನ ಮತ್ತೊಬ್ಬ ಸದಸ್ಯನನ್ನು ಬಂಧಿ ಸಲಾಗಿದ್ದು, ಆತನಿಂದ ಕೆಲವು ಸ್ಫೋಟಕ ವಸ್ತು ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

{ ಸುಪ್ರಿಯಾ ಸುಳೆ } ಎನ್‌ಸಿಪಿ(ಎಸ್‌ಪಿ) ನಾಯಕಿ

ಆಪರೇಷನ್ ಸಿಂದೂರ ಕುರಿತ ವಿಚಾರದಲ್ಲಿ ರಾಜಕೀಯವನ್ನು ಎಳೆದುತರಲು ಆಸ್ಪದವಿಲ್ಲ. ಇದು ರಾಜಕೀಯದ ವಿಚಾರವಲ್ಲ, ದೇಶದ ವಿಚಾರ. ಸರಕಾರದ ಬಳಿ ಕೇಳಲು ನಮ್ಮೆಲ್ಲರಿಗೂ ಕೆಲವು ಪ್ರಶ್ನೆಗಳಿವೆ. ಆದರೆ, ಇದು ಸರಕಾರದ ಜತೆ ನಿಲ್ಲಬೇಕಾದ ಸಮಯ. ಅಧಿಕಾರದಲ್ಲಿ ಯಾರೇ ಇರಲಿ, ದೇಶ ಮೊದಲು, ರಾಜ್ಯ ನಂತರ, ಪಕ್ಷ ಆ ನಂತರ ಎಂಬುದೇ ನಮ್ಮ ನೀತಿ.

ನೀತಿ ಆಯೋಗದ 10ನೇ ಆಡಳಿತ ಮಂಡಳಿ ಸಭೆಯಲ್ಲಿ ಪ್ರಧಾನಿ ಮೋದಿ ಸಲಹೆ

ತಂಡವಾಗಿ ಕೆಲಸ ಮಾಡೋಣ

ದೆಹಲಿ: ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರ ಟೀಮ್ ಇಂಡಿಯಾದಂತೆ ಒಟ್ಟಾಗಿ ಕೆಲಸ ಮಾಡಿದರೆ, ಯಾವುದೇ ಗುರಿ ಸಾಧಿಸಬಹುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ದೆಹಲಿಯಲ್ಲಿ ಶನಿವಾರ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ನೀತಿ ಆಯೋಗದ 10ನೇ ಆಡಳಿತ ಮಂಡಳಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ನಾವು ಅಭಿವೃದ್ಧಿಯ ವೇಗವನ್ನು ಹೆಚ್ಚಿಸಬೇಕು. ಕೇಂದ್ರ ಮತ್ತು ಎಲ್ಲಾ ರಾಜ್ಯಗಳು ಒಟ್ಟಾಗಿ ಟೀಮ್ ಇಂಡಿಯಾದಂತೆ ಕೆಲಸ ಮಾಡಿದರೆ, ಯಾವುದೇ ಗುರಿ ಸಾಧಿಸಬಹುದು ಎಂದು ಪ್ರಧಾನಿ ಹೇಳಿದ್ದಾರೆ.

ಮುಖ್ಯಮಂತ್ರಿಗಳು, ಲೆಫ್ಟಿನೆಂಟ್ ಗವರ್ನರ್‌ಗಳು ಮತ್ತು ಕೇಂದ್ರ ಸಚಿವರು ಒಳಗೊಂಡಿರುವ ನೀತಿ ಆಯೋಗದ ಪ್ರಮುಖ ಸಮಿತಿ ಸಭೆಯಲ್ಲಿ ಕರ್ನಾಟಕ, ಪಶ್ಚಿಮ ಬಂಗಾಳ, ಕೇರಳ ಮತ್ತು ಪುದುಚೇರಿ ಹೊರತುಪಡಿಸಿ ಉಳಿದ ರಾಜ್ಯಗಳ ಮುಖ್ಯಮಂತ್ರಿಗಳು, ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು ಮತ್ತು ಹಲವು ಕೇಂದ್ರ ಸಚಿವರು ಭಾಗಿಯಾಗಿದ್ದರು. ಸಭೆಯಲ್ಲಿ ಮಾತನಾಡಿದ ಪ್ರಧಾನಿ ವಿಕಸಿತ ಭಾರತ ಪ್ರತಿಯೊಬ್ಬ ಭಾರತೀಯನ ಗುರಿಯಾಗಿದೆ. ಪ್ರತಿಯೊಂದು ರಾಜ್ಯವೂ ವಿಕಸಿತ ಆದರೆ, ಭಾರತ ವಿಕಾಸ ಆಗುತ್ತದೆ. ಇದು 140 ಕೋಟಿ ನಾಗರಿಕರ ಆಶಯವಾಗಿದೆ ಎಂದು ಹೇಳಿದರು. ರಾಜ್ಯಗಳು ಪ್ರವಾಸೋದ್ಯಮ ಅಭಿವೃದ್ಧಿಯತ್ತ ಗಮನ ಹರಿಸಬೇಕು. ರಾಜ್ಯಗಳು ಜಾಗತಿಕ ಗುಣಮಟ್ಟಕ್ಕೆ ಅನುಗುಣವಾಗಿ ಕನಿಷ್ಠ ಒಂದು ಪ್ರವಾಸಿ ತಾಣವನ್ನು ಅಭಿವೃದ್ಧಿಪಡಿಸಬೇಕು. ಎಲ್ಲಾ ಸೌಲಭ್ಯಗಳು ಮತ್ತು ಮೂಲಸೌಕರ್ಯಗಳನ್ನು ಒದಗಿಸಬೇಕು. ಒಂದು ರಾಜ್ಯ: ಒಂದು ಜಾಗತಿಕ ತಾಣ. ಇದು ನೆರೆಯ ನಗರಗಳ ಅಭಿವೃದ್ಧಿಗೆ ಕಾರಣವಾಗುತ್ತದೆ ಎಂದು ಪ್ರಧಾನಿ ಪ್ರತಿಪಾದಿಸಿದರು.

ಸಿದ್ದು ಸೇರಿ ನಾಲ್ವರು ನೀತಿ ಸಭೆಗೆ ಗೈರು

ಹೊಸದಿಲ್ಲಿ: ನೀತಿ ಆಯೋಗದ 10ನೇ ಆಡಳಿತ ಮಂಡಳಿಯ ಸಭೆಗೆ ವಿರೋಧ ಪಕ್ಷಗಳ ಆಡಳಿತವಿರುವ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಗೈರಾಗಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನಲ್ಲಿ ಪೂರ್ವ ನಿಗದಿತ ಕಾರ್ಯಕ್ರಮ ಇರುವುದರಿಂದ ಸಭೆಗೆ ಬರಲು ಸಾಧ್ಯವಿಲ್ಲ ಎಂದು ಮುಂಚಿತವಾಗಿ ತಿಳಿಸಿದ್ದರು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಪುದುಚೇರಿಯ ಮುಖ್ಯಮಂತ್ರಿ ಎನ್. ರಂಗಸ್ವಾಮಿ ಅವರು ಸಭೆಗೆ ಬಂದಿರಲಿಲ್ಲ.

ಶೇ.50 ತೆರಿಗೆ ಪಾಲಿಗೆ ಸ್ಟಾಲಿನ್ ಒತ್ತಾಯ

ಕೇಂದ್ರದ ತೆರಿಗೆಯಲ್ಲಿ ರಾಜ್ಯದ ಪಾಲನ್ನು ಶೇ.50 ರಷ್ಟು ಹೆಚ್ಚಿಸುವಂತೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೀತಿ ಆಯೋಗದ ಸಭೆಯಲ್ಲಿ ಒತ್ತಾಯಿಸಿದರು. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ನಲ್ಲಿ ಪೋಸ್ಟ್ ಮಾಡಿರುವ ಸ್ಟಾಲಿನ್, ಕೇಂದ್ರದ ತೆರಿಗೆಯಲ್ಲಿ ರಾಜ್ಯದ ಶೇ. 50 ರಷ್ಟು ನ್ಯಾಯಯುತ ಪಾಲನ್ನು ಕೇಳಿದ್ದೇವೆ. ಪ್ರಸ್ತುತ ನೀಡಲಾಗಿರುವ ಶೇ. 41ರಷ್ಟು ಅನುದಾನ ಭರವಸೆಯಲ್ಲಿ ಶೇ. 33.16 ರಷ್ಟು ಪಡೆಯುತ್ತಿದ್ದೇವೆ ಎಂದು ತಿಳಿಸಿದ್ದಾರೆ. ತಮಿಳುನಾಡು ದೇಶದಲ್ಲಿ ಹೆಚ್ಚು ನಗರೀಕರಣಗೊಂಡ ರಾಜ್ಯವಾಗಿರುವುದರಿಂದ ಅಮೃತ್ 2.0 ಯೋಜನೆಯಂತೆ ಸಮರ್ಪಿತ ನಗರ ಪರಿವರ್ತನೆ ಮಿಷನ್ ಅಗತ್ಯವನ್ನು ಒತ್ತಿ ಹೇಳಿದ್ದೇನೆ. ಕಾವೇರಿ, ವೈಗೈ ಮತ್ತು ತಾಮಿರಬರಣಿ ನದಿಗಳಿಗೆ ಕ್ಲೀನ್ ಗಂಗಾ ಮಾದರಿಯ ಯೋಜನೆ ಜಾರಿಗೆ ಒತ್ತಾಯಿಸಿರುವುದಾಗಿ ಸ್ಟಾಲಿನ್ ಹೇಳಿದ್ದಾರೆ.

ಯುರೋಪ್ ರಾಷ್ಟ್ರಗಳಿಗೆ ಕುಟುಕಿದ ಜೈಶಂಕರ್

ಪಾಶ್ಚಾತ್ಯ ದೇಶಗಳಿಂದಲೇ ಪಾಕ್ ಉಗ್ರವಾದ ಪೋಷಣೆ

ದೆಹಲಿ: ಭಯೋತ್ಪಾದನೆ ಬಗ್ಗೆ ಈಗ ಕಳವಳ ವ್ಯಕ್ತಪಡಿಸುತ್ತಿರುವ ಪಾಶ್ಚಾತ್ಯ ದೇಶಗಳು ಕಳೆದ ಹಲವು ದಶಕಗಳಿಂದ ಆ ದೇಶದ ಮಿಲಿಟರಿ ಆಡಳಿತಗಾರರೊಂದಿಗೆ ಆಪ್ತ ಮೈತ್ರಿ ಹೊಂದಿದ್ದಕ್ಕಾಗಿ ಅಮೆರಿಕ ಸೇರಿದಂತೆ ಪಾಶ್ಚಿಮಾತ್ಯ ದೇಶಗಳನ್ನು, ವಿಶೇಷವಾಗಿ ಯುರೋಪಿಯನ್ ಶಕ್ತಿಗಳನ್ನು ವಿದೇಶಾಂಗ ಸಚಿವ ಜೈಶಂಕರ್ ಬಹಿರಂಗವಾಗಿ ಟೀಕಿಸಿದ್ದಾರೆ.

ಪಾಕ್ ಜತೆ ಕದನ ವಿರಾಮದ ಬಳಿಕ ನೆದರ್ಲೆಂಡ್ಸ್, ಡೆನ್ಮಾರ್ಕ್ ಮತ್ತು ಜರ್ಮನಿಗೆ ಭೇಟಿ ನೀಡಿರುವ ಜೈಶಂಕರ್, ಬರ್ಲಿನ್‌ನಲ್ಲಿ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡುತ್ತಾ ಪಾಶ್ಚಾತ್ಯ ದೇಶಗಳ ಪರಾಂಪರಾಗತ ನಿಲುವನ್ನು ತರಾಟೆಗೆ ತೆಗೆದುಕೊಂಡರು.

ಪಾಶ್ಚಿಮಾತ್ಯ ದೇಶಗಳು ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವವನ್ನು ಇಷ್ಟೊಂದು ದುರ್ಬಲಗೊಳಿಸಿದಷ್ಟು ಬೇರೆ ಯಾವುದೇ ದೇಶ ಮಾಡಿಲ್ಲ. ಗಡಿಯಾಚೆಗಿನ ಭಯೋತ್ಪಾದನೆ ಮತ್ತು ನಾಗರಿಕ ಪ್ರಜಾಪ್ರಭುತ್ವದ ದಮನದಲ್ಲಿ ಪಾಕಿಸ್ತಾನದ ಮಿಲಿಟರಿ ಸ್ಥಾಪನೆಯ ಪಾತ್ರವನ್ನು ಭಾರತ ನಿರಂತರವಾಗಿ ಎತ್ತಿ ತೋರಿಸಿದೆ. ಆದರೆ ನೀವು ಮಿಲಿಟರಿ ಸರಕಾರವನ್ನು ಬೆಂಬಲಿಸುತ್ತಲೇ ಬಂದಿರಿ. ನೀವು ಈಗ ತಿಳಿದ ಸತ್ಯವನ್ನು ನಾವು ಬಹಳ ಸಮಯದಿಂದ ತಿಳಿದಿದ್ದೇವೆ. ಅದನ್ನು ಎದುರಿಸುತ್ತಿದ್ದೇವೆ ಎಂದ ಅವರು ಪಾಕ್‌ನ ಉಗ್ರವಾದವನ್ನು ಬಿಚ್ಚಿಟ್ಟರು.

ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಜರ್ಮನಿಯ ಸಹಕಾರಕ್ಕೆ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಅವರಿಗೆ ಧನ್ಯವಾದ ಸಲ್ಲಿಸಿದ ಅವರು, ಭಯೋತ್ಪಾದನೆಯಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕು ಪ್ರತಿ ದೇಶಕ್ಕೂ ಇದೆ ಎಂಬ ಜರ್ಮನಿ ವಾದವನ್ನು ನಾವು ಗೌರವಿಸುತ್ತೇವೆ ಎಂದರು.

ಭಾರತಕ್ಕೆ ರಷ್ಯಾ, ಜಪಾನ್, ಬಹರೇನ್ ಬೆಂಬಲ

ದೆಹಲಿ: ಗಡಿಯಾಚೆಗಿನ ಭಯೋತ್ಪಾದನೆ ವಿರುದ್ಧದ ನಿಲುವನ್ನು ವಿವರಿಸಲು ರಷ್ಯಾ, ಜಪಾನ್, ಯುಎಇ ಸೇರಿ ಹಲವು ದೇಶಗಳಿಗೆ ತೆರಳಿರುವ ಭಾರತದ ನಿಯೋಗಗಳಿಂದ ಅಲ್ಲಿನ ಸರಕಾರಗಳಿಂದ ಉತ್ತಮ ಪ್ರತಿಕ್ರಿಯೆ ಲಭಿಸಿದೆ. ಡಿಎಂಕೆ ಸಂಸದೆ ಕನಿಮೋಳಿ, ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ ಸೇರಿದಂತೆ ರಷ್ಯಾಕ್ಕೆ ಭೇಟಿ ಕೊಟ್ಟ ಭಾರತೀಯ ನಿಯೋಗ ಅಲ್ಲಿನ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ಪಾಕಿಸ್ತಾನದ ಉಗ್ರವಾದ ಪೋಷಣೆಯ ಬಗ್ಗೆ ಮಾಹಿತಿ ನೀಡಿದರು. ಇದೇ ವೇಳೆ ವೇಳೆ ಹಿರಿಯ ಬಿಜೆಪಿ ನಾಯಕ ಬೈಜಯಂತ್ ಜಯ ಪಾಂಡಾ, ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ನೇತೃತ್ವದ ನಿಯೋಗ ಬಹರೇನ್ ಭೇಟಿ ನೀಡಿದ್ದು, ಪಾಕಿಸ್ತಾನ ಪ್ರೇರಿತ ಭಯೋತ್ಪಾದನೆ ಬಗ್ಗೆ ಅಲ್ಲಿನ ರಾಜಮನೆತನದ ಅಧಿಕಾರಿಗಳ ಜತೆ ಮಾಹಿತಿ ಹಂಚಿಕೊಂಡಿದೆ. ಈ ತಂಡ ಬಹರೇನ್ ಬಳಿಕ ಕುವೈತ್, ಸೌದಿ ಅರೇಬಿಯಾ, ಅಲ್ಜೀರಿಯಾಕ್ಕೆ ಭೇಟಿ ನೀಡಲಿದೆ. ಸಂಸದರಾದ ಶಶಿ ತರೂರ್, ತೇಜಸ್ವಿ ಸೂರ್ಯ ಅವರ ತಂಡ ಅಮೆರಿಕಕ್ಕೆ ತೆರಳಿದೆ.

ಪಾಕ್ ಪ್ರಾಯೋಜಿತ ಭಯೋತ್ಪಾದನೆಗೆ 4 ದಶಕದಲ್ಲಿ 20,000 ಭಾರತೀಯರು ಬಲಿ

ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನ ವಿರುದ್ಧ ಭಾರತ ಗುಡುಗು

ದೆಹಲಿ: ಕಳೆದ 4 ದಶಕದಲ್ಲಿ ಉಗ್ರರ ದಾಳಿಯಲ್ಲಿ 20,000ಕ್ಕೂ ಹೆಚ್ಚು ಭಾರತೀಯರು ಸಾವನ್ನಪ್ಪಿದ್ದಾರೆ ಎಂದು ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನ ವಿರುದ್ಧ ಭಾರತ ಗುಡುಗಿದೆ.

ಕಳೆದ ತಿಂಗಳು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಅಮಾನತುಗೊಂಡ ಸಿಂಧೂ ಜಲ ಒಪ್ಪಂದದ ಕುರಿತು ಪಾಕಿಸ್ತಾನ ತಪ್ಪು ಮಾಹಿತಿ ನೀಡುತ್ತಿದೆ ಎಂದು ಭಾರತ ಶನಿವಾರ ಟೀಕಿಸಿದೆ. ಭಯೋತ್ಪಾದನೆಯ ಜಾಗತಿಕ ಕೇಂದ್ರವಾಗಿರುವ ಪಾಕಿಸ್ತಾನವು ಗಡಿಯಾ ಚೆಗಿನ ಭಯೋತ್ಪಾದನೆಗೆ ತನ್ನ ಬೆಂಬಲವನ್ನು ನಿಲ್ಲಿಸುವವರೆಗೆ 65 ವರ್ಷಗಳಷ್ಟು ಹಳೆಯದಾದ ಒಪ್ಪಂದವು ಸ್ಥಗಿತಗೊಳ್ಳುತ್ತದೆ ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಖಾಯಂ ಪ್ರತಿನಿಧಿ ಪರ್ವತನೇನಿ ಹರೀಶ್ ಸ್ಪಷ್ಟಪಡಿಸಿದ್ದಾರೆ.

ಪಾಕಿಸ್ತಾನಿ ಪ್ರತಿನಿಧಿಯು ವಿಶ್ವಸಂಸ್ಥೆಯಲ್ಲಿ ಒಪ್ಪಂದದ ವಿಷಯವನ್ನು ಪ್ರಸ್ತಾಪಿಸಿ, ನೀರು ಜೀವನ, ಯುದ್ಧದ ಆಯುಧವಲ್ಲ ಎಂದು ಹೇಳಿತು. ಇದಕ್ಕೆ ಭಾರತದ ಪ್ರತಿನಿಧಿ ತಕ್ಕ ಪ್ರತ್ಯುತ್ತರ ನೀಡಿದ್ದಾರೆ. ನದಿ ತೀರದ ಮೇಲ್ಭಾಗದ ರಾಜ್ಯವಾಗಿ ಭಾರತ ಯಾವಾಗಲೂ ಜವಾಬ್ದಾರಿಯುತ ರೀತಿಯಲ್ಲಿ ವರ್ತಿಸಿದೆ ಎಂದು ಹರೀಶ್ ತಿಳಿಸಿದ್ದಾರೆ. ಭಾರತವು 65 ವರ್ಷಗಳ ಹಿಂದೆ ಉತ್ತಮ ನಂಬಿಕೆಯಿಂದ ಸಿಂಧೂ ಜಲ ಒಪ್ಪಂದವನ್ನು ಮಾಡಿಕೊಂಡಿತು. ಆರೂವರೆ ದಶಕಗಳಲ್ಲಿ ಪಾಕಿಸ್ತಾನವು ಭಾರತದ ಮೇಲೆ ಮೂರು ಯುದ್ಧಗಳು ಮತ್ತು ಸಾವಿರಾರು ಭಯೋತ್ಪಾದಕ ದಾಳಿಗಳನ್ನು ನಡೆಸುವ ಮೂಲಕ ಆ ಒಪ್ಪಂದದ ಮಹತ್ವವನ್ನು ಉಲ್ಲಂಘಿಸಿದೆ ಎಂದೂ ಟೀಕಿಸಿದ್ದಾರೆ. ಈ ಅವಧಿಯಲ್ಲಿ ಭಾರತವು ಅಸಾಧಾರಣ ತಾಳ್ಮೆ ಮತ್ತು ಔದಾರ್ಯ ತೋರಿಸಿದೆ. ಭಾರತದಲ್ಲಿ ಪಾಕಿಸ್ತಾನ ಪ್ರಾಯೋಜಿತ ಗಡಿಯಾಚೆಗಿನ ಭಯೋತ್ಪಾದನೆಯು ನಾಗರಿಕರ ಜೀವನ, ಧಾರ್ಮಿಕ ಸಾಮರಸ್ಯ ಮತ್ತು ಆರ್ಥಿಕ ಸಮೃದ್ಧಿಯನ್ನು ಒತ್ತೆಯಾಳಾಗಿ ಇರಿಸಲು ಪ್ರಯತ್ನಿಸುತ್ತದೆ ಎಂದು ಹರೀಶ್ ಗುಡುಗಿದ್ದಾರೆ.

ಜೂನ್ 23ರ ತನಕ ಪಾಕ್ ವಿಮಾನಗಳಿಗೆ, ಫೈಟರ್ ಜೆಟ್‌ಗಳಿಗೆ ಭಾರತದ ವಾಯುಮಾರ್ಗ ಬಂದ್

ವಿಮಾನಗಳಿಗೆ ನಿರ್ಬಂಧ ವಿಸ್ತರಣೆ

ದೆಹಲಿ: ಹವಾಮಾನ ಪ್ರತಿಕೂಲ ಪರಿಸ್ಥಿತಿಯಿಂದ ಅಪಾಯ ಪರಿಸ್ಥಿತಿ ಎದುರಿಸಿದ್ದ ಭಾರತದ ಇಂಡಿಗೋ ನಾಗರಿಕ ವಿಮಾನಕ್ಕೆ ತನ್ನ ವಾಯುಯಾನ ಪ್ರದೇಶ ಬಳಸಲು ಅನುಮತಿ ನಿರಾಕರಿಸಿದ ಪಾಕಿಸ್ತಾನಕ್ಕೆ ತಿರುಗೇಟು ನೀಡಿರುವ ಭಾರತ, ಶುಕ್ರವಾರ ಪಾಕಿಸ್ತಾನದ ವಿಮಾನಗಳ ಮೇಲಿನ ವಾಯುಪ್ರದೇಶ ನಿಷೇಧವನ್ನು 1 ತಿಂಗಳ ವರೆಗೆ, ಅಂದರೆ ಜೂನ್ 23ರವರೆಗೆ ವಿಸ್ತರಿಸಿದೆ.

ಕಳೆದ ತಿಂಗಳು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ಬಳಿಕ ನಾಗರಿಕ ವಿಮಾನಯಾನ ಸಚಿವಾಲಯವು ಪಾಕಿಸ್ತಾನದ ಯಾವುದೇ ವಿಮಾನಗಳು ಭಾರತದ ವಾಯುಪ್ರದೇಶಕ್ಕೆ ಪ್ರವೇಶಿಸುವುದನ್ನು ನಿಷೇಧಿಸಿತ್ತು.

ಇದೇ ವೇಳೆ ಪಾಕಿಸ್ತಾನವೂ ಭಾರತದಲ್ಲಿ ನೋಂದಾಯಿತ ಅಥವಾ ಭಾರತೀಯರಿಂದ ನಿರ್ವಹಿಸಲ್ಪಡುವ ಎಲ್ಲಾ ವಿಮಾನಗಳಿಗೆ ತನ್ನ ವಾಯುಪ್ರದೇಶವನ್ನು ಜೂನ್ 24, 2025ರ ಬೆಳಗಿನವರೆಗೆ ಮುಚ್ಚುವ ನಿರ್ಧಾರ ಪ್ರಕಟಿಸಿದೆ. ಭಯೋತ್ಪಾದಕರ ದಾಳಿಯ ಮರು ದಿನ ಏಪ್ರಿಲ್ 23, 2025ರಂದು ಪಾಕಿಸ್ತಾನವು ಭಾರತೀಯ ವಿಮಾನಗಳಿಗೆ ತನ್ನ ವಾಯುಪ್ರದೇಶವನ್ನು ಮುಚ್ಚಿತ್ತು. ಈ ನಿಷೇಧವನ್ನು ಆರಂಭದಲ್ಲಿ ಕೇವಲ ಒಂದು ತಿಂಗಳವರೆಗೆ ವಿಧಿಸಲಾಗಿತ್ತು, ಅಂತಾರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ ನಿಯಮಗಳ ಪ್ರಕಾರ

ಯಾವುದೇ ದೇಶ ವಾಯುಪ್ರದೇಶ ನಿರ್ಬಂಧವನ್ನು ಒಂದು ತಿಂಗಳಿಗಿಂತ ಹೆಚ್ಚಿನ ಕಾಲಾವಧಿಗೆ ವಿಧಿಸಲಾಗದು.

ಒಂದು ವಾರದ ನಂತರ, ಭಾರತವು ಪ್ರತೀಕಾರವಾಗಿ ಪಾಕಿಸ್ತಾನದಲ್ಲಿ ನೋಂದಾಯಿತ, ನಿರ್ವಹಿಸಲ್ಪಡುವ ಅಥವಾ ಗುತ್ತಿಗೆಗೆ ತೆಗೆದುಕೊಂಡಿರುವ ವಾಣಿಜ್ಯ ವಿಮಾನ ಸಂಸ್ಥೆಗಳು ಮತ್ತು ಸೇನಾ ವಿಮಾನಗಳನ್ನು ಒಳಗೊಂಡಂತೆ ಎಲ್ಲಾ ವಿಮಾನಗಳಿಗೆ ತನ್ನ ವಾಯುಪ್ರದೇಶವನ್ನು ನಿಷೇಧಿಸುವ NOTAM ಜಾರಿಗೊಳಿಸಿತ್ತು.

ವಾಯುಪ್ರದೇಶವನ್ನು ಮುಚ್ಚುವ ಮೊದಲು, ಭಾರತವು ಸಿಂಧೂ ನದಿ ಒಪ್ಪಂದವನ್ನು ಸ್ಥಗಿತಗೊಳಿಸಿತು, ಪಾಕಿಸ್ತಾನವು ಗಡಿಯಾಚೆಗಿನ ಭಯೋತ್ಪಾದನೆಗೆ ಬೆಂಬಲವನ್ನು ಕೊನೆಗೊಳಿಸದ ಹೊರತು ಪುನರಾರಂಭ ಸಾಧ್ಯವಿಲ್ಲ ಎಂದು ಷರತ್ತು ವಿಧಿಸಿತು. ಭಾರತವು ಅಟ್ಟಾರಿ-ವಾಘಾ ಗಡಿಯ ಇಂಟಿಗ್ರೇಟೆಡ್ ಚೆಕ್ ಪೋಸ್ಟ್ ಅನ್ನು ಮುಚ್ಚಿತು. ಜೊತೆಗೆ, ಪಾಕಿಸ್ತಾನದ ನಾಗರಿಕರಿಗೆ ನೀಡಲಾದ ಎಲ್ಲಾ ವೀಸಾಗಳನ್ನು ರದ್ದುಗೊಳಿಸಲಾಗಿದೆ.

ಪಾಕ್ ಶೆಲ್ ದಾಳಿಗೆ ಒಳಗಾಗಿದ್ದ ಪೂಂಚ್ ಜಿಲ್ಲೆಯ ಧಾರ್ಮಿಕ ತಾಣ | ನಾಗರಿಕರೊಂದಿಗೂ ಮಾತುಕತೆ

ಗುರುದ್ವಾರಕ್ಕೆ ರಾಹುಲ್ ಭೇಟಿ

ಶ್ರೀನಗರ: ಪಾಕಿಸ್ತಾನದ ಶೆಲ್ ದಾಳಿಗೆ ಒಳಗಾಗಿದ್ದ ಪ್ರಮುಖ ಧಾರ್ಮಿಕ ಸ್ಥಳ ಪೂಂಚ್ ಜಿಲ್ಲೆಯ ಗುರುದ್ವಾರಕ್ಕೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶನಿವಾರ ಭೇಟಿ ನೀಡಿದ್ದಾರೆ.

ಭಾರತದ ಪ್ರಮುಖ ಧಾರ್ಮಿಕ ಸ್ಥಳವಾದ ಗುರುದ್ವಾರವನ್ನು ಟಾರ್ಗೆಟ್ ಮಾಡಿ ಪಾಕಿಸ್ತಾನ ಶೆಲ್ ದಾಳಿ ನಡೆಸಿತ್ತು. ಪೂಂಚ್‌ನಲ್ಲಿ ಪಾಕಿಸ್ತಾನಿ ದಾಳಿಗೆ ಒಳಗಾಗಿದ್ದ ದೇವಾಲಯ, ಗುರುದ್ವಾರ ಮತ್ತು ಮದರಸಾಗಳಿಗೆ ಶನಿವಾರ ಭೇಟಿ ನೀಡಿದ್ದೇನೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕರು ಎಕ್ಸ್‌ನಲ್ಲಿ ಬರೆದುಕೊಂಡು, ಆ ಪ್ರದೇಶಕ್ಕೆ ಭೇಟಿ ನೀಡಿದ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ಶನಿವಾರ ಬೆಳಿಗ್ಗೆ ಜಮ್ಮು ವಿಮಾನ ನಿಲ್ದಾಣಕ್ಕೆ ಬಂದು, ಹೆಲಿಕಾಪ್ಟರ್‌ನಲ್ಲಿ ಪೂಂಚ್‌ಗೆ ತೆರಳಿದರು. ಪಾಕಿಸ್ತಾನಿ ಶೆಲ್ ದಾಳಿಯಿಂದ ತೀವ್ರವಾಗಿ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ದುಃಖತಪ್ತ ಕುಟುಂಬಗಳನ್ನು ಅವರು ಭೇಟಿ ಮಾಡಿದರು. ಮೇ 7ರಂದು ಪೂಂಚ್ ಪಟ್ಟಣದಲ್ಲಿ ಪಾಕಿಸ್ತಾನಿ ಶೆಲ್ ದಾಳಿಯಲ್ಲಿ ತಮ್ಮ ಇಬ್ಬರು ಸ್ನೇಹಿತರಾದ ಜೈನ್ ಅಲಿ ಮತ್ತು ಉರ್ವಾ ಫಾತಿಮಾ ಅವರನ್ನು ಕಳೆದುಕೊಂಡ ಶಾಲಾ ವಿದ್ಯಾರ್ಥಿಗಳನ್ನು ಸಹ ಇದೇ ವೇಳೆ ಭೇಟಿಯಾದರು ಮೇ 7 ಮತ್ತು 10ರ ನಡುವೆ

ಪಾಕಿಸ್ತಾನದ ಶೆಲ್ ದಾಳಿಯಿಂದ ಅತಿ ಹೆಚ್ಚು ಹಾನಿಗೊಳಗಾದ ಪೂಂಚ್ ಜಿಲ್ಲೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಸೇರಿದಂತೆ ಹದಿಮೂರು ನಾಗರಿಕರು ಸಾವನ್ನಪ್ಪಿದ್ದರು.

ಏಪ್ರಿಲ್ 22ರಂದು ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ 26 ಜನರು ಸಾವನ್ನಪ್ಪಿದ ನಂತರ ರಾಹುಲ್ ಗಾಂಧಿಯವರು ಕೇಂದ್ರಾಡಳಿತ ಪ್ರದೇಶಕ್ಕೆ ಎರಡನೇ ಬಾರಿಗೆ ಭೇಟಿ ನೀಡಿದ್ದಾರೆ. ಇದಕ್ಕೂ ಮೊದಲು, ಏಪ್ರಿಲ್ 25ರಂದು ಶ್ರೀನಗರಕ್ಕೆ ಭೇಟಿ ನೀಡಿ ಭಯೋತ್ಪಾದಕ ದಾಳಿಯ ಸಮಯದಲ್ಲಿ ಗಾಯಗೊಂಡವರ ಆರೋಗ್ಯ ವಿಚಾರಿಸಿದ್ದರು.

ವಿಶ್ವಸುಂದರಿ ಸ್ಪರ್ಧೆಯಿಂದ ಮಾಗೀ ನಿರ್ಗಮನ

ವೇಶ್ಯೆಯಂತೆ ಕಾಣುತ್ತಿದ್ದಾರೆ ಎಂದು ದೂರಿದ ಇಂಗ್ಲೆಂಡ್ ಸ್ಪರ್ಧಿ

ಹೈದರಾಬಾದ್: ತೆಲಂಗಾಣದಲ್ಲಿ ನಡೆಯುತ್ತಿರುವ ವಿಶ್ವಸುಂದರಿ ಸ್ಪರ್ಧೆಯ ಕಣದಿಂದ ಸ್ಪರ್ಧಿಯೊಬ್ಬರು ಹಿಂದೆ ಸರಿಯುವ ಮೂಲಕ ಹೊಸ ವಿವಾದ ಸೃಷ್ಟಿಯಾಗಿದೆ.

'ನಾನು ವೇಶ್ಯೆ ಎಂದು ಭಾವಿಸುವ ರೀತಿ' ವರ್ತಿಸಿದ್ದಾರೆ ಎಂದು ಆರೋಪಿಸಿ ಮಿಸ್ ಇಂಗ್ಲೆಂಡ್ 2024ರ ವಿಜೇತೆ ಮಿಲಾ ಮಾಗೀ ಅವರು ವಿಶ್ವ ಸುಂದರಿ ಸ್ಪರ್ಧೆಯಿಂದ ಹೊರನಡೆದಿದ್ದಾರೆ. ಮೇ 7ರಂದು ಹೈದರಾಬಾದ್‌ಗೆ ಬಂದಿದ್ದ ಅವರು ಇಂಗ್ಲೆಂಡ್‌ಗೆ ಮರಳಿದ್ದಾರೆ. ಬ್ರಿಟನ್‌ಗೆ ಮರಳಿದ ಬಳಿಕ ನಿಯತಕಾಲಿ ಕೆಯೊಂದಕ್ಕೆ ಸಂದರ್ಶನ ನೀಡಿರುವ ಮಿಲಾ, 'ಸ್ಪರ್ಧೆಯ ವಾತಾವರಣದಿಂದ ನನಗೆ ನಿರಾಸೆಯಾಗಿದೆ. ಆತಿಥ್ಯದ ಕೊರತೆ ಮತ್ತು ಸ್ಪರ್ಧಿಗಳಿಗೆ ಗೌರವ ತೋರಿಲ್ಲ. ಅವರು ನಮ್ಮನ್ನು ಮನರಂಜನೆಗಾಗಿ ಬಳಸಿಕೊಳ್ಳು ತ್ತಿದ್ದರು. ನನಗೆ ವೇಶ್ಯೆಯಂತೆ ಭಾಸವಾಯಿತು' ಎಂದು ಮಿಲಾ ಆರೋಪಿಸಿದ್ದಾರೆ. ಮಿಲಾ ಆರೋಪ ಗಳನ್ನು ನಿರಾಕರಿಸಿರುವ ಸ್ಪರ್ಧೆಯ ಆಯೋಜಕರು, ಅನಾರೋಗ್ಯಕ್ಕೆ ತುತ್ತಾದ ತಾಯಿಯನ್ನು ನೋಡಲು ಮಿಲಾ ಮಾಗೀ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ ಎಂದು ಹೇಳಿದ್ದರು.

ಬದಲಿ ಸ್ಪರ್ಧಿ ಕಣಕ್ಕೆ

ವಿಶ್ವಸುಂದರಿ ಸ್ಪರ್ಧೆಯಿಂದ ಮಿಸ್ ಇಂಗ್ಲೆಂಡ್ ಮಿಲ್ಲಾ ಮ್ಯಾಗೀ ಸ್ಪರ್ಧೆಯಿಂದ ಹಿಂದೆ ಸರಿಯುತ್ತಿದ್ದಂತೆ ಮಿಸ್ ಇಂಗ್ಲೆಂಡ್‌ನ ಮೊದಲ ರನ್ನರ್ ಅಪ್ ಚಾರ್ಲಟ್ ಗ್ರಾಂಟ್ ಅವರು ಕಣಕ್ಕಿಳಿದು ತಮ್ಮ ದೇಶವನ್ನು ಪ್ರತಿನಿಧಿಸುತ್ತಿದ್ದಾರೆ. ಮ್ಯಾಗೀ ನಿರ್ಗಮನ ಘೋಷಣೆಯಾಗುತ್ತಿದ್ದಂತೆ ಭಾರತಕ್ಕೆ ಬಂದಿಳಿದ ಗ್ರಾಂಟ್ ಅವರನ್ನು ಹೈದರಾಬಾದ್‌ನಲ್ಲಿ ಆದರದಿಂದ ಬರಮಾಡಿಕೊಳ್ಳಲಾಯಿತು. ವಿಶ್ವ ಸುಂದರಿ ಸ್ಪರ್ಧೆಯು ಹೈದರಾಬಾದ್‌ನಲ್ಲಿ ಮೇ 10ರಿಂದ ಆರಂಭಗೊಂಡಿದೆ. ಮೇ 31ರಂದು ಅಂತಿಮ ಸುತ್ತು ನಡೆಯಲಿದ್ದು, ಯಾರ ಮುಡಿಗೆ ವಿಶ್ವ ಸುಂದರಿ ಕಿರೀಟ ಎಂಬುದು ಘೋಷಣೆಯಾಗಲಿದೆ.

ಕೊಲಿಜಿಯಂನಲ್ಲಿ ನ್ಯಾ.ಬಿ.ವಿ.ನಾಗರತ್ನಗೆ ಸ್ಥಾನ

ದೆಹಲಿ: ಸುಪ್ರೀಂಕೋರ್ಟ್‌ನ ಏಕೈಕ ಮಹಿಳಾ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಕೊಲಿಜಿಯಂನ ಸದಸ್ಯರಾಗಿದ್ದಾರೆ. ನ್ಯಾಯಮೂರ್ತಿ ಅಭಯ್ ಓಕಾ ನಿವೃತ್ತರಾದ ನಂತರ ಶನಿವಾರ ನಾಗರತ್ನ ಅವರು ಕೊಲಿಜಿಯಂನ ಭಾಗವಾದರು.

ಬಿ.ವಿ.ನಾಗರತ್ನ ಅವರು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಆಗುವ ಸರದಿಯಲ್ಲಿದ್ದಾರೆ. 2027ರ ಸೆಪ್ಟೆಂಬರ್ 23ರಂದು ದೇಶದ ಮೊದಲ ಮಹಿಳಾ ಸಿಜೆಐ ಆಗಿ ಬಿ.ವಿ.ನಾಗ 'ರತ್ನ ಅವರ ಕಾರ್ಯಭಾರ ಆರಂಭವಾಗಲಿದೆ. ಅವರ ಸೇವಾವಧಿ 2027ರ ಅಕ್ಟೋಬರ್ 29ರಂದು ಕೊನೆಗೊಳ್ಳಲಿದೆ. ಕೊಲಿಜಿಯಂ ನಲ್ಲಿ ಸಿಜೆಐ ಬಿ.ಆರ್. ಗವಾಯಿ, ನ್ಯಾಯ ಮೂರ್ತಿ ಸೂರ್ಯಕಾಂತ್, ನ್ಯಾಯ ಮೂರ್ತಿ ವಿಕ್ರಮ್ ನಾಥ್, ನ್ಯಾಯಮೂರ್ತಿ ಜೆ.ಕೆ.ಮಾಹೇಶ್ವರಿ ಮತ್ತು ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಇದ್ದಾರೆ. ಹಿರಿಯ ನ್ಯಾಯಮೂರ್ತಿಗಳ ಮಂಡಳಿಯು ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ನ ನ್ಯಾಯಮೂರ್ತಿಗಳ ನೇಮಕಾತಿಗೆ ಹೆಸರುಗಳನ್ನು ಆಯ್ಕೆ ಮಾಡಿ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಲಿದೆ. ನ್ಯಾಯಮೂರ್ತಿಗಳ ವರ್ಗಾವಣೆಯನ್ನೂ ನಿರ್ಧರಿಸಲಿದೆ. ನ್ಯಾಯಮೂರ್ತಿ ಅಭಯ್ ಓಕಾ ಅವರ ನಿವೃತ್ತಿಯಿಂದಾಗಿ ಸುಪ್ರೀಂಕೋರ್ಟ್‌ನಲ್ಲಿ ಮೂವರು ನ್ಯಾಯಮೂರ್ತಿಗಳ ಸ್ಥಾನ ಖಾಲಿ ಇರಲಿದೆ.

ಮಂಡ್ಯ ಜಿಲ್ಲೆಯ ಪಾಂಡವಪುರದವರು

1962ರ ಅಕ್ಟೋಬರ್ 30ರಂದು ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಜನಿಸಿದ ಬಿ.ವಿ.ನಾಗರತ್ನ ಅವರು, ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಇ.ಎಸ್.ವೆಂಕಟರಾ ಮಯ್ಯ ಅವರ ಪುತ್ರಿ. 1984ರಲ್ಲಿ ದೆಹಲಿ ವಿಶ್ವವಿದ್ಯಾಲಯದ ಜೀಸಸ್ ಮತ್ತು ಮೇರಿ ಕಾಲೇಜಿನಲ್ಲಿ ಇತಿಹಾಸ ವಿಷಯದಲ್ಲಿ ಪದವಿ ಆನರ್ಸ್ ಪಡೆದಿದ್ದ ಬಿ.ವಿ.ನಾಗರತ್ನ ಅವರು, 1987ರಲ್ಲಿ ದೆಹಲಿ ವಿಶ್ವವಿದ್ಯಾಲಯದ ಕಾನೂನು ಕೇಂದ್ರದಲ್ಲೇ ಎಲ್‌ಎಲ್‌ಬಿ ಮುಗಿಸಿದರು. 2008ರ ಫೆಬ್ರವರಿ 18ರಂದು ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2010ರ ಫೆಬ್ರ ವರಿ 17ರಂದು ಕಾಯಂ ನ್ಯಾಯಮೂ ರ್ತಿಯಾದರು. 2021ರ ಆಗಸ್ಟ್ 31ರಂದು ಬಿ.ವಿ.ನಾಗರತ್ನ ಅವರಿಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಪದೋನ್ನತಿ ನೀಡಲಾಗಿತ್ತು.

ವಂಚನೆ ಆರೋಪಿ ಚಾಂದೋಕ್ ಭಾರತ ಪೊಲೀಸರಿಗೆ ಹಸ್ತಾಂತರ

ದೆಹಲಿ: ಅನೇಕ ಬ್ಯಾಂಕ್ ವಂಚನೆ ಪ್ರಕರಣಗಳಲ್ಲಿ ಬೇಕಾಗಿದ್ದ ಪ್ರಮುಖ ಆರೋಪಿ ಅಂಗದ್ ಚಾಂದೋಕ್‌ನನ್ನು ಅಮೆರಿಕದಿಂದ ಭಾರತಕ್ಕೆ ಗಡಿಪಾರು ಮಾಡಲಾಗಿದೆ. ಕ್ಯಾಲಿಫೋರ್ನಿಯಾದಲ್ಲಿ ವಾಸವಾಗಿದ್ದ 34 ವರ್ಷದ ಅಂಗದ್ ಸಿಂಗ್ ಚಾಂದೋಕ್ ಭಾರಿ ಪ್ರಮಾಣದ ಹಣ ವರ್ಗಾವಣೆ ಚಟುವಟಿಕೆಯನ್ನು ನಡೆಸುತ್ತಿದ್ದ ಆರೋಪದ ಮೇಲೆ ಅಮೆರಿಕದಲ್ಲಿ ಶಿಕ್ಷೆಗೊಳಗಾಗಿದ್ದ. 2022ರಲ್ಲಿ ಅಮೆರಿಕ ನ್ಯಾಯಾಲಯವು ಆತನಿಗೆ ಆರು ವರ್ಷಗಳ ಅವಧಿಯ ಜೈಲು ಶಿಕ್ಷೆ ವಿಧಿಸಿ ಆದೇಶಿಸಿತ್ತು. ಇದೀಗ ನಿರ್ದಿಷ್ಟ ನಿಯಮಾವಳಿಗಳನ್ನು ಪೂರ್ಣಗೊಳಿಸಿ ಆತನನ್ನು ಸಿಬಿಐ ಭಾರತಕ್ಕೆ ಕರೆತರುವಲ್ಲಿ ಯಶಸ್ವಿಯಾಗಿದೆ. ಚಾಂದೋಕ್ ಅಮೆರಿಕದ ಹಿರಿಯ ನಾಗರಿಕರನ್ನು ಗುರಿಯಾಗಿಸಿಕೊಂಡು ಅಂತಾರಾಷ್ಟ್ರೀಯ ತಂತ್ರಜ್ಞಾನದ ಬೆಂಬಲದಿಂದ ಅಕ್ರಮ ಹಣ ವರ್ಗಾವಣೆ ಕಾರ್ಯಾಚರಣೆಯನ್ನು ನಡೆಸುತ್ತಿದ್ದ. ಕ್ಯಾಲಿಫೋರ್ನಿಯಾದಲ್ಲಿ ದೀರ್ಘಕಾಲ ದಿಂದ ನಡೆಯುತ್ತಿದ್ದ ಹಣ ವರ್ಗಾವಣೆ ಜಾಲವನ್ನು ನಡೆಸುತ್ತಿದ್ದ ಎಂದು ಆರೋಪಿಸಲಾಗಿದೆ.

2025ರ ಜನವರಿ 20ರಂದು 5,88,107 ಪಾಲಿಸಿಗಳ ಮಾರಾಟ

ಎಲ್‌ಐಸಿ ಪಾಲಿಸಿ: ಗಿನ್ನಿಸ್ ದಾಖಲೆ

ದೆಹಲಿ: ಭಾರತೀಯ ಜೀವ ವಿಮಾ ನಿಗಮವು ಜನವರಿ ತಿಂಗಳಿನ ಒಂದೇ ದಿನದಲ್ಲಿ ಅತಿ ಹೆಚ್ಚು ಜೀವ ವಿಮಾ ಪಾಲಿಸಿಗಳನ್ನು ಮಾರಾಟ ಮಾಡಿ ಗಿನ್ನೆಸ್ ವಿಶ್ವ ದಾಖಲೆಗೆ ಭಾಜನವಾಗಿದೆ. 2025ರ ಜನವರಿ 20 ರಂದು ಭಾರತೀಯ ಜೀವ ವಿಮಾ ನಿಗಮದ ಏಜೆಂಟರು 5,88,107 ಪಾಲಿಸಿ ಗಳನ್ನು ಮಾರಾಟ ಮಾಡಿದ್ದು, ಇದು ಜಗತ್ತಿ ನಲ್ಲೇ ಅತಿ ದೊಡ್ಡ ದಾಖಲೆ ಎಂದು ಗಿನ್ನೆಸ್ ಸಂಸ್ಥೆ ಹೇಳಿದೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಪಾಲಿಸಿ ಮಾರಾಟ ಮಾಡಲು 4,52,839 ಏಜೆಂಟರು ಶ್ರಮ ಹಾಕಿದ್ದರು ಎಂದು ಅದು ತಿಳಿಸಿದೆ.

ಈ ದಾಖಲೆಯು 24 ಗಂಟೆಗಳಲ್ಲಿ ಜೀವ ವಿಮಾ ಕ್ಷೇತ್ರದಲ್ಲಿ ಹೊಸ ದಾಖಲೆಯಾಗಿದೆ. ಎಲ್‌ಐಸಿ ಕೂಡ ಈ ಸಾಧನೆಯ ಬಗ್ಗೆ ಖುಷಿ ಪಟ್ಟಿದೆ. ಈ ಕುರಿತಂತೆ ಪ್ರಕಟಣೆಯನ್ನು ಹೊರಡಿಸಿರುವ ಎಐಸಿ, ನಮ್ಮ ಏಜೆಂಟರ ಕಠಿಣ ಪರಿಶ್ರಮ ಮತ್ತು ಬದ್ಧತೆಯಿಂದ ಈ ಸಾಧನೆ ಸಾಧ್ಯವಾಗಿದೆ, ಇದು ನಮ್ಮ ಗ್ರಾಹಕರಿಗೆ ಆರ್ಥಿಕ ಭದ್ರತೆ ನೀಡುವಲ್ಲಿ ನಮ್ಮ ಸಂಸ್ಥೆ ಹೊಂದಿರುವ ಗುರಿಯನ್ನು ತೋರಿಸುತ್ತದೆ ಎಂದು ಹೇಳಿದೆ.

ರಷ್ಯಾ ದಾಳಿಗೆ ಕೈವ್ ತತ್ತರ

ಕೈವ್: ಉಕ್ರೇನ್‌ನ ರಾಜಧಾನಿ ಕೈವ್ ಶನಿವಾರ ಬೆಳಗ್ಗೆ ರಷ್ಯಾದ ಡ್ರೋನ್ ಮತ್ತು ಕ್ಷಿಪಣಿ ದಾಳಿಗೆ ಒಳಗಾಯಿತು. ನಗರದಾದ್ಯಂತ ಸ್ಫೋಟಗಳು ಮತ್ತು ಮೆಷಿನ್ ಗನ್ ಗುಂಡಿನ ಸದ್ದು ಕೇಳಿಬಂದಿತು. ಇದರಿಂದಾಗಿ ಅನೇಕ ಕೈವ್ ನಿವಾಸಿಗಳು ಭೂಗತ ಸುರಂಗಮಾರ್ಗ ನಿಲ್ದಾಣಗಳಲ್ಲಿ ಆಶ್ರಯ ಪಡೆಯಬೇಕಾಯಿತು. ಕಳೆದ ವಾರ ಇಸ್ತಾನ್‌ಬುಲ್‌ನಲ್ಲಿ ನಡೆದ ಸಭೆಯಲ್ಲಿ ಎರಡೂ ಕಡೆಯವರ ಸೈನಿಕರು ಮತ್ತು ನಾಗರಿಕರ ವಿನಿಮಯ ಒಪ್ಪಂದದ ಪ್ರಕಾರ, ಪ್ರಮುಖ ಕೈದಿಗಳ ವಿನಿಮಯವನ್ನು ಪ್ರಾರಂಭಿಸಿದ ಕೆಲವೇ ಗಂಟೆಗಳ ನಂತರ ರಾತ್ರಿಯ ರಷ್ಯಾದ ದಾಳಿ ಸಂಭವಿಸಿದೆ. ಮೂರು ವರ್ಷಗಳ ಹಳೆಯ ಯುದ್ಧದಲ್ಲಿ ಕದನ ವಿರಾಮವನ್ನು ತಲುಪಲು ವಿಫಲವಾದ ಪ್ರಯತ್ನಗಳಲ್ಲಿ ಈ ಒಪ್ಪಂದವು ಸಹಕಾರದ ಕ್ಷಣವಾಗಿತ್ತು. ತಡೆಹಿಡಿಯಲಾದ ಕ್ಷಿಪಣಿಗಳು ಮತ್ತು ಡ್ರೋನ್ ಗಳ ಅವಶೇಷಗಳು ಶನಿವಾರ ಬೆಳಗ್ಗೆ ಉಕ್ರೇನಿಯನ್ ರಾಜಧಾನಿಯ ಕನಿಷ್ಠ ನಾಲ್ಕು ನಗರ ಜಿಲ್ಲೆಗಳಲ್ಲಿ ಬಿದ್ದವು ಎಂದು ಕೈವ್ ಮಿಲಿಟರಿ ಆಡಳಿತದ ಕಾರ್ಯಕಾರಿ ಮುಖ್ಯಸ್ಥ ಟೈಮೂರ್ ಟ್ಕಾಚೆಂಕೊ ಟೆಲಿಗ್ರಾಮ್‌ನಲ್ಲಿ ಬರೆದಿದ್ದಾರೆ.

ಸಮಾಚಾರ ಸಣ್ಣದಲ್ಲ

ಜಮೀನು: ದೊಡ್ಡಪ್ಪನ ಇರಿದು ಕೊಂದ ಪಾಪಿ

ಗುಬ್ಬಿ: ಜಮೀನು ವ್ಯಾಜ್ಯಕ್ಕೆ ಸಂಬಂಧಿಸಿದಂತೆ ದೊಡ್ಡಪ್ಪ ಮತ್ತು ತಾಯಿ ನಡುವೆ ಜಗಳ ನಡೆದು ಜಗಳ ತಾರಕಕ್ಕೇರಿದ ಸಮಯದಲ್ಲಿ ಕುಪಿತಗೊಂಡ ಮಗ ಸ್ವಂತ ತಂದೆಯ ಅಣ್ಣ ದೊಡ್ಡಪ್ಪನಿಗೆ ಚಾಕು ಇರಿದು ಕೊಲೆಗೈದ ಧಾರುಣ ಘಟನೆ ಶನಿವಾರ ನಡೆದಿದೆ. ಗುಬ್ಬಿ ತಾಲೂಕಿನ ಸಿ.ಎಸ್.ಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕಳಕೊಪ್ಪ ಗ್ರಾಮದಲ್ಲಿ ಯುವಕ ಆಫ್ರೀದ್ (25) ತನ್ನ ತಂದೆಯ ಅಣ್ಣ ದೊಡ್ಡಪ್ಪ ಕರಿಂಸಾಬ್ (60) ಅವರನ್ನು ಕೊಲೆಗೈದ ಘಟನೆ ಇಡೀ ಗ್ರಾಮವನ್ನೇ ತಲ್ಲಣ ಗೊಳಿಸಿದೆ. ಆಫ್ರಿದ್ ತಾಯಿ ಬೇಬಿ ಜಾನ್ ಎಂಬುವರು ಕೊಲೆಯಾದ ಕರೀಮ್ ಸಾಬ್ ವ್ಯಕ್ತಿಗೆ ಸೇರಿದ ಜಮೀನಿನಲ್ಲಿ ಮೇಕೆ ಮೇಯಿಸುತ್ತಿದ್ದ ವೇಳೆ ಈ ಜಮೀನು ನನಗೆ ಸೇರಿದೆ. ಯಾಕೆ ಇಲ್ಲಿ ಮೇಕೆ ಮೇಯಿಸುತ್ತಿದ್ದೀಯಾ ಎಂದು ಕೇಳಲಾಗಿ ಬೇಬಿ ಜಾನ್ ಮತ್ತು ಮೃತ ವ್ಯಕ್ತಿಯ ನಡುವೆ ಜಗಳ ನಡೆದಿದ್ದು ಈ ವಿಚಾರವನ್ನು ಬೇಬಿ ಜಾನ್ ಮಗ ಅಫ್ರಿದ್ ಗೆ ಫೋನ್ ಮಾಡಿ ತಿಳಿಸಿದ ವೇಳೆ ಆಕ್ರೋಶಗೊಂಡ ಆಫ್ರಿದ್ ರಸ್ತೆಯಲ್ಲಿ ಬರುತ್ತಿದ್ದ ದೊಡ್ಡಪ್ಪ ಕರೀಂಸಾಬ್ ಅವರನ್ನು ಅಡ್ಡಗಟ್ಟಿ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ವೆಂಕಟ್, ಶಿರಾ ಡಿವೈಎಸ್ಪಿ ಶೇಖರ್, ಗುಬ್ಬಿ ವೃತ್ತ ನಿರೀಕ್ಷಕ ರಾಘವೇಂದ್ರ ರವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬೀದಿ ನಾಯಿ ದಾಳಿಗೆ ಬಾಲಕಿ ಸಾವು

ತಿಪಟೂರು: ತಾಲೂಕಿನ ಎನ್‌ಎಚ್ 206 ರಸ್ತೆಯಲ್ಲಿರುವ ಅಯ್ಯನಬಾವಿ ಗ್ರಾಮದ 6 ವರ್ಷದ ಬಾಲಕಿ ಮೇಲೆ ನಾಲ್ಕೈದು ಬೀದಿ ನಾಯಿಗಳ ಹಿಂಡು ಹಠಾತ್ ದಾಳಿ ನಡೆಸಿ ತಲೆ ಹಾಗೂ ಕರುಳು ಕಿತ್ತು ಬರುವಂತೆ ಕಚ್ಚಿದ ಘಟನೆ ಶನಿವಾರ ನಡೆದಿದೆ. ಬೀದಿನಾಯಿಗಳ ಹಿಂಡು ಮೊದಲು ಮಗುವಿನ ತಲೆ

ಭಾಗವನ್ನು ಕಿತ್ತು ನಂತರ ಹಾಗೂ ಹೊಟ್ಟೆಯ ಕರುಳು ಹೊರಬರುವಂತೆ ಕಿತ್ತು ತಿಂದು ಹಾಕಿವೆ. ಅಯ್ಯನಬಾವಿ ಗ್ರಾಮದ ನಿವಾಸಿ ಮಹಲಿಂಗಯ್ಯನವರ ಮಗಳು 6ವರ್ಷದ (1ನೆ ತರಗತಿ) ನವ್ಯ ಬೀದಿನಾಯಿಗಳ ದಾಳಿಗೊಳಗಾದ ಬಾಲಕಿ. ರಕ್ತದ ಮಡುವಿನಲ್ಲಿ ಚೀರಾಡುತ್ತಿದ್ದ ಮಗುವನ್ನ ಕಂಡ ಸಾರ್ವಜನಿಕರು ನಾಯಿಗಳ ಹಿಂಡನ್ನು ಗಲಾಟೆ ಮಾಡಿ ಓಡಿಸಿ ಕೂಡಲೆ ಮಗುವನ್ನ ತಿಪಟೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ' ಹೆಚ್ಚಿನ ಚಿಕಿತ್ಸೆಗೆ ಹಾಸನ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ದಾಖಲಿಸಿದರೂಚಿಕಿತ್ಸೆ ಫಲಕಾರಿಯಾಗದೆ ಬಾಲಕಿ ಮೃತಪಟ್ಟಿದ್ದಾಳೆ. ಕಳೆದ ವಾರದ ಹಿಂದೆ ಇದೇ ಗ್ರಾಮದ ಬೀದಿ ನಾಯಿಗಳ ಹಿಂಡು ಇಲ್ಲಿನ ಇಟಾಚಿ ಕುಮಾರಣ್ಣ ಎಂಬುವವರ 2 ಹಸುಗಳ ಮೇಲೂ ದಾಳಿ ನಡೆಸಿದ್ದವು. ನಂತರ ಅವುಗಳು ಸಾವನ್ನಪ್ಪಿದವು.

2014ರಲ್ಲಿ ಭೂಮಿ ಪೂಜೆ | 2025ಕ್ಕೆ ಲೋಕಾರ್ಪಣೆ | ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಸಜ್ಜು

ದಶಕದ ಬಳಿಕ ಕನ್ನಡ ಭವನ ಸಿದ್ಧ

ಚಿಕ್ಕಬಳ್ಳಾಪುರ: ಬರೋಬ್ಬರಿ 11 ವರ್ಷಗಳ ನಂತರ ಜಿಲ್ಲಾ ಕೇಂದ್ರದಲ್ಲಿ ನಿರ್ಮಾಣವಾಗಿರುವ ಕನ್ನಡ ಭವನ ಉದ್ಘಾಟನೆಗೆ ಸಿದ್ಧವಾಗಿದ್ದು ಮೇ 27 ರಂದು ಲೋಕಾರ್ಪಣೆಯ ಭಾಗ್ಯ ಕಾಣಲಿದೆ.ಇದೇ ವೇದಿಕೆಯಲ್ಲಿ 10ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವೂ ಥಳಕು ಹಾಕಿಕೊಂಡಿರುವುದು ಕನ್ನಡಿಗರು ಮತ್ತು ಸಾಹಿತ್ಯಾಸಕ್ತರ ಖುಷಿಯನ್ನು ಇಮ್ಮಡಿಗೊಳಿಸಿವೆ.

ಜಿಲ್ಲಾ ಕೇಂದ್ರದಲ್ಲಿ ಲಲಿತಕಲೆಗಳ ಪ್ರಸರಣಕ್ಕೆ ಒಂದು ಸುಸಜ್ಜಿತವಾದ ಕನ್ನಡ ಭವನ ಬೇಕು ಎನ್ನುವುದು ಮಾಜಿ ಸಂಸದ ಡಾ.ಎಂ.ವೀರಪ್ಪ ಮೊಯ್ಲಿ ಅವರ ಕನಸು. ಹೀಗಾಗಿ ಆಗಿನ ಸಂಸದ ಮೊಯ್ಲಿ ಮತ್ತು ಈಗಿನ ಸಂಸದ ಹಾಗೂ ಆಗಿನ ಶಾಸಕ ಡಾ.ಕೆ.ಸುಧಾಕರ್ ಅವಧಿಯಲ್ಲಿ ನಗರದ ಬಿಬಿ ರಸ್ತೆಯ ಬಸಪ್ಪನ ಛತ್ರ ಹಾಗೂ ಗರಡಿ ಮನೆ ಇದ್ದ ಜಾಗದ 2.4 ಎಕರೆ ವಿಸ್ತೀರ್ಣದಲ್ಲಿ ಭವನಕ್ಕೆ 16 ಆಗಸ್ಟ್ 2014 ರಲ್ಲಿ ಭೂಮಿ ಪೂಜೆ ನೆರವೇರಿಸಲಾಗಿತ್ತು.

ರವೀಂದ್ರ ಕಲಾಕ್ಷೇತ್ರದ ಮಾದರಿಯಲ್ಲಿ ಹೈಟೆಕ್ ಆಗಿ ಜಿಲ್ಲಾರಂಗಮಂದಿರ ನಿರ್ಮಾಣ ಆಗಬೇಕು ಎಂದು ಪ್ರಾರಂಭವಾದ ಕಾಮಗಾರಿ ರಾಜಕೀಯ ಏರಿಳಿತಗಳಿಗೆ ಸಾಕ್ಷಿಯಾಗಿ ಪೂರ್ಣ ಪ್ರಮಾಣದಲ್ಲಿ ಕಾಮಗಾರಿ ಮುಗಿಸಿ ಜನಬಳಕೆಗೆ ಬರುವಂತಾಗಲು ಬರೋಬ್ಬರಿ 11 ವರ್ಷಗಳೇ ಬೇಕಾಯಿತು.ಒಟ್ಟು ರೂ12.5 ಕೋಟಿ ವೆಚ್ಚದಲ್ಲಿ ಭವನ ಪೂರ್ಣಗೊಳಿಸಲು ಕಾಮಗಾರಿಗೆ ಚಾಲನೆ ನೀಡಿದರೂ ನೆನೆಗುದಿಗೆ ಬಿದ್ದ ಪರಿಣಾಮ ಬದಲಾದ ವಿನ್ಯಾಸ ಮತ್ತು ಬೆಲೆಯೇರಿಕೆ, ಜಿಎಸ್ಟಿ ಕಾರಣವಾಗಿ ಹೆಚ್ಚುವರಿಯಾಗಿ ಸುಮಾರು 9 ಕೋಟಿ ಅನುದಾವನ್ನು ಸರಕಾರದಿಂದ ಪಡೆಯಲಾಗಿದೆ ಎನ್ನಲಾಗಿದೆ.

ಹೀಗೆ ಲೋಕಾರ್ಪಣೆಗೆ ಸಜ್ಜುಗೊಂಡಿರುವ ನೂತನ ಕನ್ನಡ ಭವನ ಜಿಲ್ಲೆಯಲ್ಲಿ ಒಂದು ಹೊಸ ಮೈಲಿಗಲ್ಲಾಗಿ

11 ವರ್ಷಗಳ ನಂತರ ಉದ್ಘಾಟನೆಗೆ ಸಿದ್ದವಾದ ಕನ್ನಡ ಭವನ.

ಉಳಿಯಲಿದ್ದು, ಮುಂದಿನ ದಿನಗಳಲ್ಲಿ ಕನ್ನಡ ಕಲರವ ಅನುರಣಿಸಲಿದೆ.ವಿಶಾಲವಾದ ಬೃಹತ್ ವೇದಿಕೆ , ಒಂದು ಸಾವಿರ ಮಂದಿಗೆ ಕೂರಲು ಅನುವಾಗುವ ಸುಖಾಸೀನ ಆಸನಗಳ ವ್ಯವಸ್ಥೆ,ಹವಾನಿಯಂತ್ರಿತ ವ್ಯವಸ್ಥೆಯುಳ್ಳ ಆಧುನಿಕ ಕಟ್ಟಡ ವಿನ್ಯಾಸ, ಎಲ್‌ಇಡಿ ಪರದೆ, ಅತ್ಯುತ್ತಮವಾದ ಸೌಂಡ್ ಎಫೆಕ್ಟ್, ನೆರಳು ಬೆಳಕಿನ ವಿನ್ಯಾಸ, ಹೈಟೆಕ್ ಶೌಚಾಲಯ, ನೆಲಮಾಳಿಗೆಯಲ್ಲಿ ವಾನಹನ ನಿಲ್ದಾಣದ ವ್ಯವಸ್ಥೆ ಮಾಡಲಾಗಿದೆ.

ಕಳೆದ ಏಪ್ರಿಲ್ 23ರ ಅಮಾವಾಸ್ಯೆಯಂದು ಅಂತಿಮವಾಗಿ ಸುಸಜ್ಜಿತ ಭವನ ಉದ್ಘಾಟನೆಗೆ ಸಜ್ಜುಗೊಂಡಿತ್ತು. ಆದರೆ ಕ್ರೈಸ್ತ ಧರ್ಮಗುರು ಪೋಪ್ ಪ್ರಾನ್ಸಿಸ್ ನಿಧನದ ಶೋಕಾಚರಣೆ ನಿಮಿತ್ತ ಕನ್ನಡ ಭವನ ಲೋಕಾರ್ಪಣೆ ಮುಂದೂಡಲಾಗಿತ್ತು.

ಈಗ ಮತ್ತೆ ಮೇ 27ರ ಅಮಾವಾಸ್ಯೆಯೆಂದೇ ಮುಹೂರ್ತ ಫಿಕ್ಸ್ ಮಾಡಲಾಗಿದೆ. ಕಾರಣ ಪ್ರತಿ ಅಮಾವಾಸ್ಯೆಗೆ ಚುಂಚಶ್ರೀಗಳಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ವೀರಾಂಜನೇಯಸ್ವಾಮಿ ದೇವಾಲಯಕ್ಕೆ ಪೂಜೆಗೆ ಬರುತ್ತಾರೆ. ಅದೇ ದಿನ ಲೋಕಾರ್ಪಣೆ ಮಾಡಲು ಜಿಲ್ಲಾಡಳಿತ ಸಜ್ಜಾಗಿದೆ.

ಹೀಗಾಗಿ ಜಿಲ್ಲಾ ಉಸ್ತುವಾರಿ ಸಚಿವ,ಕನ್ನಡ ಮತ್ತು ಸಂಸ್ಕೃತಿ ಸಚಿವ, ಎರಡು ಜಿಲ್ಲೆಯ ಸಂಸದರು, ಶಾಸಕ ಪ್ರದೀಪ್ ಈಶ್ವರ್,ಹೆಚ್.ಎನ್.ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಹೆಚ್.ಶಿವಶಂಕರ್‌ರೆಡ್ಡಿ.ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಭಾಗಿಯಾಗಲಿದ್ದಾರೆ.

ಚಿಕ್ಕಬಳ್ಳಾಪುರ ನಗರವು ಕನ್ನಡ ಬಾವುಟಗಳಿಂದ ಕಂಗೊಳಿಸುತ್ತಿದೆ. ಉದ್ಘಾಟನೆಗೆ ಸಜ್ಜುಗೊಂಡಿದ್ದರೂ ಕಾಮಗಾರಿಗಳು ಇನ್ನೂ ನಡೆಯುತ್ತಿರುವುದು ನೋಡಿದರೆ ತರಾತುರಿಯಲ್ಲಿ ಭವನ ಲೋಕಾರ್ಪಣೆ ಮಾಡುತ್ತಿರುವಂತೆ ಕಾಣುತ್ತಿದೆ.ಏನೇ ಆಗಲಿ ಗಜಪ್ರಸವದಂತಾಗಿರುವ ಕನ್ನಡಭವನದ ಲೋಕಾರ್ಪಣೆ ಆಗುತ್ತಿದೆ ಎನ್ನುವುದೇ ದೊಡ್ಡ ಸಮಾಧಾನ.

ಕೊಡಗಿನಲ್ಲಿ ಭಾರೀ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯಾದ್ಯಂತ ಕಳೆದ ಎರಡು ದಿನಗಳಿಂದ ಗಾಳಿ ಸಹಿತ ವ್ಯಾಪಕ ಮಳೆಯಾಗುತ್ತಿದೆ. ಭಾರೀ ಗಾಳಿಗೆ ಮರ ಬಿದ್ದು ಕಾರ್ಮಿಕ ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ವಿರಾಜಪೇಟೆ ತಾಲೂಕಿನ ಆರ್ಜಿ ಗ್ರಾಮದಲ್ಲಿ ನಡೆದಿದೆ.

ಲೈನ್ ಮನೆಯಲ್ಲಿ ವಾಸವಿದ್ದ ಗಿರಿಜನ ಮಹಿಳೆ ಗೌರಿ (52)ಮೃತ ದುರ್ದೈವಿ. ಮನೆಯಿಂದ ಹೊರ ಬಂದಾಗ ಮರ ಬಿದ್ದು, ಮರದಡಿ ಸಿಲುಕಿಕೊಂಡು ಮೃತಪಟ್ಟಿದ್ದಾರೆ.

ತಲಕಾವೇರಿ: ಜೀವನದಿ ಕಾವೇರಿಯ ಉಗಮಸ್ಥಾನ ತಲಕಾವೇರಿ ಮತ್ತು ಭಾಗಮಂಡಲದಲ್ಲಿ ನಿರಂತರವಾಗಿ ಮಳೆಯಾಗುತ್ತಿದೆ. ಮುಂಗಾರು ಕೇರಳ ಪ್ರವೇಶಿಸುವ ಮೊದಲೇ ಗಡಿ ಜಿಲ್ಲೆ ಕೊಡಗಿನಲ್ಲಿ ಮಳೆಗಾಲದ ವಾತಾವರಣ ಮನೆ ಮಾಡಿದೆ. ಕಳೆದ 24 ಗಂಟೆಗಳಲ್ಲಿ ತಲಕಾವೇರಿ ಮತ್ತು ಭಾಗಮಂಡಲದಲ್ಲಿ ದಾಖಲೆಯ 4 ಇಂಚು ಮಳೆಯಾಗಿದೆ. ಮುಂದಿನ ದಿನಗಳಲ್ಲಿ ಮಳೆ ಹೆಚ್ಚಾಗುವ ಕುರಿತು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಜಿಲ್ಲಾ ವ್ಯಾಪಿ ರೆಡ್ ಅಲರ್ಟ್ ಘೋಷಿಸಲಾಗಿದೆ.

ಗ್ರಾಮೀಣ ಭಾಗದಲ್ಲಿ ಅತಿ ಹೆಚ್ಚು ಮಳೆಯಾಗುತ್ತಿದ್ದು, ಗಾಳಿಯಿಂದ ಮರ, ವಿದ್ಯುತ್ ಕಂಬಗಳು ನೆಲಕ್ಕುರುಳಿದ ಘಟನೆ ನಡೆದಿದೆ. ಹಲವು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದೆ. ಭಾಗಮಂಡಲದ ತ್ರಿವೇಣಿ ಸಂಗಮ ಮತ್ತು ಕಾವೇರಿ ಹರಿಯುವ ಪ್ರದೇಶದಲ್ಲಿ ನೀರಿನ ಮಟ್ಟ ಏರಿಕೆಯಾಗುತ್ತಿದೆ. ಜಿಲ್ಲೆಯ ಐದೂ ತಾಲ್ಲೂಕುಗಳಲ್ಲಿ ಉತ್ತಮ ಮಳೆಯಾಗುತ್ತಿದೆ. ರಸ್ತೆ, ಚರಂಡಿಗಳ ತುಂಬಾ ಮಳೆ ನೀರು ಹರಿಯುತ್ತಿದ್ದು, ವಿರಾಜಪೇಟೆಯ ತೋರ ಗ್ರಾಮದಲ್ಲಿ 10 ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಬಿದ್ದಿದ್ದು, ವಿದ್ಯುತ್ ಸಂಪರ್ಕ ಸಂಪೂರ್ಣವಾಗಿ ಸ್ಥಗಿತಗೊಂಡಿದೆ.

ಪ್ರವಾಸಿಗರಿಗೆ ಮಳೆ ಖುಷಿ

ಪ್ರಖ್ಯಾತ ಪ್ರವಾಸಿತಾಣಗಳಲ್ಲಿ ಜಡಿ ಮಳೆಯ ನಡುವೆ ಸಿಲುಕಿಕೊಂಡ ಪ್ರವಾಸಿಗರು ಪರದಾಡುವ ಪರಿಸ್ಥಿತಿಯಿದೆ. ಮಡಿಕೇರಿ ನಗರದ ರಾಜಾಸೀಟು ಉದ್ಯಾನದಲ್ಲಿ ಗಾಳಿ, ಮಳೆ, ಮಂಜಿನಲ್ಲೂ ಪ್ರವಾಸಿಗರು ದೊಡ್ಡ ಸಂಖ್ಯೆಯಲ್ಲಿದ್ದರು. ಛತ್ರಿ, ರೈನ್ ಕೋಟ್ ಗಳಿಗೆ ಎಲ್ಲಿಲ್ಲದ ಬೇಡಿಕೆ ಕಂಡು ಬಂತು.



ಕಡಿಮೆ ದರ, ಇಂದಿರಾ ಕ್ಯಾಂಟೀನ್ ಉಪಹಾರ

ಪಿರಿಯಾಪಟ್ಟಣ: ಬಡವರಿಗೆ ಆರೋಗ್ಯಕರ ಆಹಾರವನ್ನು ಒದಗಿಸುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದಿರಾ ಕ್ಯಾಂಟೀನ್ ಆರಂಭಿಸಿದ್ದಾರೆ ಎಂದು ತಾ.ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ತಿಳಿಸಿದರು.

ಪಟ್ಟಣದ ಬಸ್ ನಿಲ್ದಾಣದ ಬಳಿ ಬಿ.ಎಂ.ರಸ್ತೆಯಲ್ಲಿ ನಗರಾಭಿವೃದ್ಧಿ ಮತ್ತು ಪೌರಾಡಳಿತ ಇಲಾಖೆ ಹಾಗೂ ಪುರಸಭೆ ವತಿಯಿಂದ ನಿರ್ಮಾಣವಾಗಿರುವ ಇಂದಿರಾ ಕ್ಯಾಂಟೀನ್‌ನನ್ನು ಉದ್ಘಾಟಿಸಿ ಮಾತನಾಡಿದರು.

ಪಿರಿಯಾಪಟ್ಟಣ ಹಾಗೂ ಸುತ್ತಮುತ್ತಲಿನ ಬಡವರು, ಕಾರ್ಮಿಕರು, ರೈತರು, ಗ್ರಾಮೀಣ ಜನರು, ವಿದ್ಯಾರ್ಥಿಗಳು ಸೇರಿದಂತೆ ಎಲ್ಲ ವರ್ಗದ ಜನತೆ ಇಂದಿರಾ ಕ್ಯಾಂಟೀನ್ ಸೌಲಭ್ಯ ಪಡೆದುಕೊಳ್ಳಬೇಕು. ರಾಜ್ಯ ಹಸಿವು ಮುಕ್ತವಾಗಬೇಕು ಎಂಬುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶಯ. ಹಾಗಾಗಿ ಕಳೆದ 2013 ರಲ್ಲಿಯೇ ಇಂದಿರಾ ಕ್ಯಾಂಟೀನ್ ಆರಂಭಿಸಲಾಯಿತು. ಒಬ್ಬರು ಸೇವಿಸುವ ತಿಂಡಿಗೆ ಸರ್ಕಾರ 45 ರೂಗಳನ್ನು ಖರ್ಚು ಮಾಡುತ್ತಿದೆ. ಗ್ರಾಹಕರು ಕೇವಲ 5 ರು. ಗಳನ್ನು ನೀಡಿದರೆ ಸಾಕು. ಮಧ್ಯಾಹ್ನ ಹಾಗೂ ರಾತ್ರಿಯ ಊಟಕ್ಕೆ 55 ರು.ನೀಡುತ್ತದೆ. ಕೇವಲ 10 ರು. ಗಳನ್ನು ನೀಡಿ ಊಟ ಮಾಡಬಹುದು. ಇಂತಹ ಜನಕಲ್ಯಾಣ ಯೋಜನೆಗಳು ಕಾಂಗ್ರೆಸ್ ನೇತೃತ್ವದ ಸರ್ಕಾರದಿಂದ ಮಾತ್ರ ಸಾಧ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕ್ಯಾಂಟೀನ್ ನಡೆಸುವವರು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು.

ಸ್ವಚ್ಛತೆಯನ್ನು ಕಾಪಾಡದಿದ್ದರೆ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದ ಅವರು, ಶುಚಿ, ರುಚಿಯಾದ ಊಟವನ್ನು ಮಾತ್ರ ಇಲ್ಲಿನ ಜನತೆ ಇಷ್ಟಪಡುತ್ತಾರೆ ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಪುರಸಭಾ ಮುಖ್ಯಾಧಿಕಾರಿ ಕೊಟ್ಟುತ್ತೀರ ಮುತ್ತಪ್ಪ, ಅಧ್ಯಕ್ಷ ಪ್ರಕಾಶ್ ಸಿಂಗ್ ಉಪಸ್ಥಿತರಿದ್ದರು.

ಭರ್ತಿಯಾದ ಕದ್ರಾ ಜಲಾಶಯಕ್ಕೆ ಬಾಗಿನ

ಕಾರವಾರ: ಭಾರಿ ಮಳೆಯಿಂದ ಕದ್ರಾ ಜಲಾಶಯ ಭರ್ತಿಯಾಗಿದ್ದರಿಂದ ಎಂಸಿಎ ಅಧ್ಯಕ್ಷ ಸತೀಶ ಸೈಲ್ ಹಾಗೂ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಬಾಗೀನ ಅರ್ಪಿಸಿದರು.

ಈ ಬಾರಿ ಮೇ ತಿಂಗಳಿನಲ್ಲಿ ಜಲಾಶಯ ಭರ್ತಿಯಾಗಿ ಬಾಗೀನ ಅರ್ಪಿಸಿದ್ದು ವಿಶೇಷವಾಗಿದೆ. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ, ಉಪ ವಿಭಾಗಾಧಿಕಾರಿ ಕನಿಷ್ಕ, ತಾಲೂಕು ಗ್ಯಾರಂಟಿ ಸಮಿತಿಯ ಅಧ್ಯಕ್ಷ ರಾಜೇಂದ್ರ ರಾಣೆ, ಮಲ್ಲಾಪುರ ಗ್ರಾ.ಪಂ. ಅಧ್ಯಕ್ಷ ಉದಯ್ ಬಾಂದೇಕರ್, ಕದ್ರಾ ಗ್ರಾ.ಪಂ. ಅಧ್ಯಕ್ಷೆ ಹನುಮವ್ವ, ತಹಸೀಲ್ದಾರ್ ನಿಶ್ಚಲ್ ನರೋನಾ, ಕದ್ರಾ ಜಲಾಶಯ, ಕೈಗಾ, ಕೆ.ಪಿ.ಸಿಎಲ್ ಅಧಿಕಾರಿಗಳು ಇದ್ದರು.

ಕದ್ರಾ ಜಲಾಶಯಕ್ಕೆ ಎಂಸಿಎ ಅಧ್ಯಕ್ಷ ಸತೀಶ ಸೈಲ್ ಹಾಗೂ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಬಾಗೀನ ಅರ್ಪಿಸಿದರು.

ಜಲಾಶಯದ ಗರಿಷ್ಠ ಮಟ್ಟ 34.50 ಮೀ.

ಜಲಾಶಯದ ಗರಿಷ್ಠ ಮಟ್ಟ 34.50 ಮೀ., ಇಂದಿನ ಮಟ್ಟ 31.5 ಮೀ. ಕಳೆದ ವರ್ಷ ಮೇ 24 ರಂದು ಜಲಾಶಯದ ನೀರಿನ ಮಟ್ಟ 29.58 ಮೀ. ಇತ್ತು. ಒಳ ಹರಿವು 7939.00 ಕ್ಯೂಸೆಕ್, ಹೊರ ಹರಿವು 10453.0 ಕ್ಯೂಸೆಕ್, ಶುಕ್ರವಾರ ಬೆಳಗ್ಗೆ 8 ಗಂಟೆಯಿಂದ ನಂತರದ 24 ಗಂಟೆಗಳಲ್ಲಿ ಮಳೆಯ ಪ್ರಮಾಣ 104.5 ಮಿ.ಮೀ.

ಧ್ರುವಸರ್ಜಾಗೆ ನರ್ತನ್ ನಿರ್ದೇಶನ

ಧ್ರುವ ಸರ್ಜಾ, ಕೆಡಿ ಚಿತ್ರದ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದಾರೆ. ಬಹುತೇಕ ಶೂಟಿಂಗ್ ಮುಗಿಸಿರುವ ಕೆಡಿ ಹಾಡಿನ ಶೂಟಿಂಗ್‌ಗಾಗಿ ವಿದೇಶಕ್ಕೆ ಹಾರಿದೆ, ಸ್ವಿಟ್ಜರ್‌ಲ್ಯಾಂಡ್‌ನ

ಸುಂದರ ಪರಿಸರದಲ್ಲಿ ಹಾಡನ್ನು ಸೆರೆಹಿಡಿಯಲಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಆಗಸ್ಟ್ ಅಥವಾ ಸೆಪ್ಟೆಂಬರ್‌ನಲ್ಲಿ ಸಿನಿಮಾ ತೆರೆಗೆ ಬರಲಿದೆ. ಕೆಡಿ ಬಳಿಕ ಧ್ರುವ ಸರ್ಜಾ ಯಾವ ಸಿನಿಮಾದಲ್ಲಿ ನಟಿಸಬಹುದು ಎಂಬ ಕುತೂಹಲ ಅವರ ಅಭಿಮಾನಿಗಳಲ್ಲಿದೆ. ಅದಕ್ಕೆ ಈಗ ಉತ್ತರವೂ ಸಿಕ್ಕಿದೆ. ಮುಂದೆ ಧ್ರುವ ಸರ್ಜಾ, ನರ್ತನ್ ನಿರ್ದೇಶನದ ಹೊಸ ಸಿನಿಮಾದಲ್ಲಿ ನಟಿಸಲಿದ್ದಾರೆ ಎಂಬ ಮಾತುಗಳು ದಟ್ಟವಾಗಿ ಕೇಳಿಬರುತ್ತಿವೆ. ಈಗಾಗಲೇ ಮಫ್ತಿ, ಭೈರತಿ ರಣಗಲ್ ಸಿನಿಮಾಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿರುವ ನರ್ತನ್ ಈಗ ಹೊಸ ಕಥೆ ಹೆಣೆಯುವಲ್ಲಿ ಬ್ಯುಸಿಯಾಗಿದ್ದಾರೆ. ಮುಂದೆ ನರ್ತನ್ ಆ್ಯಕ್ಷನ್ ಸಿನಿಮಾವನ್ನು ನಿರ್ದೇಶನ ಮಾಡಲಿದ್ದಾರೆ. ಆ್ಯಕ್ಷನ್ ಸಿನಿಮಾ ಅಂದಾಕ್ಷಣ ಅದು ಧ್ರುವಸರ್ಜಾಗೆ ಹೇಳಿ ಮಾಡಿಸಿದಂತಿರುತ್ತದೆ. ಹಾಗಾಗಿ ನರ್ತನ್, ಚಿತ್ರದಲ್ಲಿ ಧ್ರುವ ನಟಿಸುವುದು ಬಹುತೇಕ ಖಚಿತವಾಗಿದೆ. ಸದ್ಯ ಧ್ರುವ ಸರ್ಜಾ ವಿದೇಶದಲ್ಲಿದ್ದು, ಅಲ್ಲಿಂದ ಮರಳಿಬಂದ ಬಳಿಕ ಹೊಸ ಚಿತ್ರದ ಬಗ್ಗೆ ಮಾಹಿತಿ ನೀಡಲಿದ್ದಾರೆ ಎನ್ನಲಾಗುತ್ತಿದೆ. ಇನ್ನು ಈ ಚಿತ್ರಕ್ಕೆ ಕೆವಿಎನ್ ಪ್ರೊಡಕ್ಷನ್ಸ್ ಬಂಡವಾಳ ಹೂಡುವ ನಿರೀಕ್ಷೆ ಇದೆ. ಅಂತು ಕನ್ನಡದಲ್ಲಿ ಮತ್ತೊಂದು ಹೈವೋಲ್ಟೇಜ್ ಸಿನಿಮಾ ಮೂಡಿಬರುವುದು ಖಚಿತವಾಗಿದೆ.

ತುಪ್ಪದ ಬೆಡಗಿಗೆ ಬರ್ತ್‌ಡೆ ಸಂಭ್ರಮ

ಸ್ಯಾಂಡಲ್‌ವುಡ್ ತುಪ್ಪದ ಬೆಡಗಿ ರಾಗಿಣಿ ದ್ವಿವೇದಿ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ರಾಗಿಣಿ ಅವರಿಗೆ ಚಿತ್ರರಂಗದ ಕಲಾವಿದರು, ಅಭಿಮಾನಿಗಳು ಶುಭಕೋರಿದ್ದಾರೆ. ತಮ್ಮ ಹುಟ್ಟುಹಬ್ಬದ ಪ್ರಯುಕ್ತ ರಾಗಿಣಿ ದ್ವಿವೇದಿ, ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿದಾರರಿಗೆ ದಿನಸಿ ವಿತರಿಸುವ ಮೂಲಕ ಗಮನಸೆಳೆದಿದ್ದಾರೆ. ಹೌದು, ನಟಿ ರಾಗಿಣಿ ದ್ವಿವೇದಿ ಸದ್ಯ ಸರ್ಕಾರಿ ನ್ಯಾಯಬೆಲೆ ಅಂಗಡಿ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಈ ಚಿತ್ರದಲ್ಲಿ ಹಳ್ಳಿಯ ಹುಡುಗಿಯ ಪಾತ್ರದಲ್ಲಿ ಕಾಣಿಸಿ ಕೊಳ್ಳುತ್ತಿದ್ದು, ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿನ ಲೋಪ ದೋಷಗಳನ್ನು ಎತ್ತಿ ಹಿಡಿಯುವ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

ಹಾಗಾಗಿ ತಮ್ಮ ಮುಂಬರುವ ಸಿನಿಮಾ ಮತ್ತು ಪಾತ್ರಕ್ಕೆ ತಕ್ಕಂತೆ ಸರ್ಕಾರಿ ನ್ಯಾಯಬೆಲೆ ಅಂಗಡಿಗೆ ಎಂಟ್ರಿಕೊಟ್ಟಿದ್ದು ಬೆಂಗಳೂರು ಗ್ರಾಮಾಂತರ ಪ್ರದೇಶದ ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ತಾವೇ ಖುದ್ದಾಗಿ ಪಡಿತರ ಚೀಟಿದಾರರಿಗೆ ದಿನಸಿ ಸಾಮಾನುಗಳನ್ನು ವಿತರಿಸುವ ಮೂಲಕ ಪಡಿತರ ವಿತರಣೆ ವ್ಯವಸ್ಥೆಯನ್ನು ತಿಳಿದುಕೊಂಡರು. ಜತೆಗೆ ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿದಾರರು ಮತ್ತು ವಿತರಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಇತ್ತೀಚೆಗೆ ಮುಹೂರ್ತ ಆಚರಿಸಿಕೊಂಡ ಸರ್ಕಾರಿ ನ್ಯಾಯಬೆಲೆ ಅಂಗಡಿ ಚಿತ್ರದ ಚಿತ್ರೀಕರಣ ಭರದಿಂದ ಸಾಗಿದೆ.

ಜಾವ ಏರಿದ ರಾಗಿಣಿ

ರಾಗಿಣಿ ಜಾವ ಚಿತ್ರದಲ್ಲಿಯೂ ನಟಿಸುತ್ತಿದ್ದಾರೆ. ನಟ ರಾಜವರ್ಧನ್ ಬರ್ನ್ ಸ್ವಲ್ಲೊ ಬ್ಯಾನರ್‌ನಲ್ಲಿ ನಿರ್ಮಾಣ ಮಾಡುತ್ತಿರುವ ಈ ಚಿತ್ರದ್ಲಲಿ ರಾಗಿಣಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ದೇವಚಕ್ರವರ್ತಿ ನಿರ್ದೇಶನದ ಚಿತ್ರ, ಇದಾಗಿದ್ದು ಸಿನಿಮಾದ ಫಸ್ಟ್ ಲುಕ್ ರಿಲೀಸ್ ಆಗಿದ್ದು ಸಖತ್ ಸದ್ದು ಮಾಡುತ್ತಿದೆ. ರಾಗಿಣಿ ಬರ್ತ್‌ಡೇ ಪ್ರಯುಕ್ತ ಜಾವ ಚಿತ್ರದಲ್ಲಿನ ಅವರ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಮಾಡಲಾಗಿದೆ. ದುರಂಕಾರಕ್ಕೆ ರಾಯಬಾರಿ ಎಂದು ಪೋಸ್ಟರ್‌ನಲ್ಲಿದೆ. ಇದನ್ನು ಗಮನಿಸಿದರೆ ತುಪ್ಪದ ಬೆಡಗಿ ಇಲ್ಲಿ ಜಂಬದ ಹುಡುಗಿಯಾಗಿ ಕಾಣಿಸಿಕೊಳ್ಳುತ್ತಿರುವುದ ಸ್ಪಷ್ಟವಾಗಿದೆ.

ಬಾಂಧವ್ಯ ಬೆಸೆವ ಗುಂಡ

ಈ ಹಿಂದೆ ನಾನು ಮತ್ತು ಗುಂಡ ಚಿತ್ರ ತೆರೆಗೆ ಬಂದಿತ್ತು. ಅದ್ಭುತ ಯಶಸ್ಸು ಕಂಡಿತ್ತು. ಈಗ ಅದೇ ಸೀಕ್ವೆಲ್ ಆಧರಿಸಿ ನಾನು ಮತ್ತು ಗುಂಡ 2 ತೆರೆಗೆ ಬರಲು ಸಿದ್ಧವಾಗಿದೆ. ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಎಮೋಷನ್ ನಲ್ಲಿ ಸಿನಿಪ್ರಿಯರನ್ನು ಸೆಳೆದಿದೆ. ಮೊದಲ ಭಾಗದಲ್ಲಿ ಶಿವರಾಜ್ ಕೆ ಆರ್ ಪೇಟೆ ಹಾಗೂ ಸಂಯುಕ್ತಾ ಹೊರನಾಡು ಅಭಿನಯಿಸಿದ್ದರು. ಈ ಭಾಗದಲ್ಲಿ ರಾಕೇಶ್ ಅಡಿಗ ಹಾಗೂ ರಚನಾ ಇಂದರ್ ಅಭಿನಯಿಸಿದ್ದಾರೆ. ಸದ್ಯ ಬಿಡುಗಡೆಯಾಗಿರುವ ಟ್ರೇಲರ್ ನಲ್ಲಿ ಹಲವು ವಿಚಾರಗಳು ಮಿಳತವಾಗಿವೆ. ಹಿಂದಿನ ಭಾಗದಲ್ಲಿ ಕಾಮಿಡಿ ಕೂಡ ಇತ್ತು. ಆದರೆ ಇಲ್ಲಿ ಎಮೋಷನ್ಸ್ ಗೆ ಹೆಚ್ಚಾಗಿ ಒತ್ತು ನೀಡಲಾಗಿದೆ.

ಪ್ರಾರ್ಥನೆ ಪ್ರಾಣಿಕವಾಗಿದ್ದರೆ ಬಯಸಿದ್ದು ಸಿಗುತ್ತದೆ ಎಂಬ ಡೈಲಾಗ್ ಮನಗೆಲ್ಲುತ್ತದೆ. ಅಂತೆಯೇ ಇಲ್ಲಿ ಗುಂಡ ಪ್ರಾಣವಾದರೆ ನಾಯಕ ದೇಹವಂತೆ , ಅಂದರೆ ಗುಂಡ ಮತ್ತು ನಾಯಕನ ನಡುವಿನ ಬಾಂಧವ್ಯ ಇಲ್ಲಿ ತಿಳಿಯುತ್ತದೆ.

ರಘು ಹಾಸನ್, ನಾನು ಮತ್ತು ಗುಂಡ 2 ಚಿತ್ರವನ್ನು ನಿರ್ದೇಶಿಸಿದ್ದಾರೆ. ಮಾತ್ರವಲ್ಲ ಪೊಯಮ್ ಪಿಕ್ಚರ್ಸ್ ನಲ್ಲಿ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಇಲ್ಲಿಯೂ ಗೋವಿಂದೇ ಗೌಡ ಕಮಾಲ್ ಮಾಡಲಿದ್ದಾರೆ. ಜಿಜಿ ಈ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನ ಪಾತ್ರದಲ್ಲಿ ಮಿಂಚಿದ್ದಾರೆ. ಸ್ನೇಕ್ ಶ್ಯಾಮ್ ಕೂಡ ಚಿತ್ರದಲ್ಲಿ ಕಾಣಿಸಿಕೊಂಡಿರುವುದು ವಿಶೇಷ. ನಾನು ಮತ್ತು ಗುಂಡ 2 ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಕನ್ನಡ ಸೇರಿದಂತೆ ಹಿಂದಿ, ತಮಿಳು, ತೆಲುಗು, ಮಲೆಯಾಳಂ ಭಾಷೆಯಲ್ಲಿಯೂ ತೆರೆಗೆ ಬರಲಿದೆ.

ಸೆಪ್ಟೆಂಬರ್ 21ಕ್ಕೆ ಮುಹೂರ್ತ

ಹಿಂದೆ ಹೈಡ್ ಅಂಡ್ ಸೀಕ್ ಕಿರು ಚಿತ್ರವನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದ ನಿರ್ದೇಶಕಿ ಕರೆನ್‌ಕ್ಷಿತಿ ಸುವರ್ಣ ಇದೀಗ ಸೆಪ್ಟೆಂಬರ್ 21 ಟೈಟಲ್‌ನಲ್ಲಿ ಬಾಲಿವುಡ್ ಸಿನಿಮಾ ನಿರ್ದೇಶಿಸುತ್ತಿದ್ದಾರೆ. ಆಲ್ಝೈಮರ್ ರೋಗಿ ಮತ್ತು ಆತನ ಆರೈಕೆ ಮಾಡುವ ನರ್ಸ್‌ವೊಬ್ಬಳ ನಡುವಿನ ಕಥೆಯನ್ನು ಹೊಂದಿರುವ ಈ ಚಿತ್ರದ ಮುಹೂರ್ತ ಸಮಾರಂಭ ಮಹಾಲಕ್ಷ್ಮಿ ಲೇಔಟ್‌ನ ಪಂಚಮುಖಿ ಗಣಪತಿ ದೇವಸ್ಥಾನದಲ್ಲಿ ನೆರವೇರಿತು.

ನಟ, ನಿರ್ದೇಶಕ ಇಂದ್ರಜಿತ್ ಲಂಕೇಶ್ ಚಿತ್ರದ ಮೊದಲ ಸನ್ನಿವೇಶಕ್ಕೆ ಆರಂಭ ಫಲಕ ತೋರಿ ಚಿತ್ರತಂಡಕ್ಕೆ ಶುಭಕೋರಿದರು. ಪ್ರಿಯಾಂಕಾ ಉಪೇಂದ್ರ, ಪ್ರವೀಣ್ ಕುಮಾರ್‌ಸಿಂಗ್ ಸಿಸೋಡಿಯಾ, ಜರೀನಾ ವಹಾಬ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಈ ಚಿತ್ರದ ಕಥೆ ಚೆನ್ನಾಗಿದೆ. ಖಿನ್ನತೆಯಿಂದ ಬಳಲುತ್ತಿರುವ ಹಾಗೂ ಸ್ಮರಣಾಶಕ್ತಿ ಕಳೆದುಕೊಂಡಿರುವ ಅರವತ್ತು ವರ್ಷ ವಯಸ್ಸಿನ ರೋಗಿಯ ಪಾತ್ರದಲ್ಲಿ ಅಭಿನಯಿಸುತ್ತಿದ್ದೇನೆ ಎಂದು ನಟ ಪ್ರವೀಣ್ ಸಿಂಗ್ ಸಿಸೋಡಿಯಾ ಹೇಳಿದರು. ಬೆಲ್ಜಿಯಂ ಮೂಲದ ನಿರ್ಮಾಣ ಸಂಸ್ಥೆ ಹಾಗೂ ಫಾಕ್ಸ್ ಆನ್ ಸ್ಟೇಜ್‌ನ ಫ್ರೆಡ್ರಿಕ್ ಡಿ ವೋಸ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ವಿನಯ್‌ಚಂದ್ರ ಸಂಗೀತ ನಿರ್ದೇಶನ, ಅನಿಲ್ ಕುಮಾರ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ಸದ್ಯದಲ್ಲೇ ಚಿತ್ರೀಕರಣ ಆರಂಭವಾಗಲಿದೆ ಬೆಂಗಳೂರು ಸುತ್ತಮುತ್ತ ಶೂಟಿಂಗ್ ನಡೆಯಲಿದೆ.

> **ಚಿತ್ರದಲ್ಲಿ ನಟಿಸುತ್ತಿರುವುದು ನನಗೆ ಬಹಳ ಖುಷಿಯಾಗಿದೆ. ಆಲ್ಝೈಮರ್ ರೋಗದಿಂದ ಬಳಲುತ್ತಿರುವ ರೋಗಿಯನ್ನು ಶುಶ್ರೂಷೆ ಮಾಡುವ ಕೇರ್ ಟೇಕರ್ ಪಾತ್ರವನ್ನು ನಿರ್ವಹಿಸಿಸುತ್ತಿದ್ದೇನೆ. ನಾನು ಕಮಲಾ ಎನ್ನುವ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಬಹುದಿನಗಳ ಬಳಿಕ ಬಾಲಿವುಡ್ ಸಿನಿಮಾದಲ್ಲಿ ನಟಿಸುತ್ತಿರುವುದು ಸಂತಸತಂದಿದೆ.**
>
> – ಪ್ರಿಯಾಂಕಾ ಉಪೇಂದ್ರ.

> **ನಾನು ಈ ಹಿಂದೆ ಹೈಡ್ ಅಂಡ್ ಸೀಕ್ ಅನ್ನುವ ಕಿರು ಚಿತ್ರವನ್ನು ನಿರ್ದೇಶಿಸಿದ್ದೆ. ಈ ಕಿರುಚಿತ್ರ ಜಾಗತಿಕ ಮಟ್ಟದಲ್ಲಿಯೂ ಗುರುತಿಸಿಕೊಂಡಿತ್ತು. ಈಗ ಸೆಪ್ಟೆಂಬರ್ 21 ಚಿತ್ರವನ್ನು ನಿರ್ದೇಶಿಸುತ್ತಿದ್ದೇನೆ. ಮಲೆಯಾಳಂ ಖ್ಯಾತ ಲೇಖಕ ಪಿ.ರಾಜಶೇಖರ್ ಈ ಕಥೆಯನ್ನು ಬರೆದಿದ್ದಾರೆ. ಆಲ್ಝೈಮರ್ ರೋಗದ ಸುತ್ತಲ್ಲಿನ ಕಥಾಹಂದರವನ್ನು ಈ ಚಿತ್ರ ಒಳಗೊಂಡಿದೆ.**
>
> –ಕರೆನ್‌ಕ್ಷಿತಿ ಸುವರ್ಣ ನಿರ್ದೇಶಕಿ

25.05.2025 ಭಾನುವಾರ
vishwavani.news
ವಿಶ್ವವಾಣಿ

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್ (Q)	13	09	04	18
ಪಂಜಾಬ್ (Q)	12	08	03	17
ಬೆಂಗಳೂರು (Q)	13	08	04	17
ಮುಂಬೈ (Q)	13	08	05	16
ಡೆಲ್ಲಿ	13	06	06	13
ಲಖನೌ	13	06	07	12
ಕೋಲ್ಕತ್ತಾ	13	05	06	12
ಹೈದರಾಬಾದ್	13	05	07	11
ರಾಜಸ್ಥಾನ್	14	04	10	08
ಚೆನ್ನೈ	13	03	10	06

ಇಂದಿನ ಪಂದ್ಯ

3.30 PM
ಗುಜರಾತ್ ಟೈಟನ್ಸ್ VS ಚೆನ್ನೈ ಸೂಪರ್ ಕಿಂಗ್ಸ್
ನರೇಂದ್ರ ಮೋದಿ ಸ್ಟೇಡಿಯಂ, ಅಹಮದಾಬಾದ್

ಇಂದಿನ ಪಂದ್ಯ

7.30 PM
ಸನ್‌ರೈಸರ್ಸ್ ಹೈದರಾಬಾದ್ VS ಕೋಲ್ಕತ್ತಾ ನೈಟ್‌ರೈಡರ್ಸ್
ಅರುಣ್ ಜೇಟ್ಲಿ ಸ್ಟೇಡಿಯಂ, ದೆಹಲಿ



ಸೈನಿಕರ ಕುಟುಂಬಗಳನ್ನು ಬೆಂಬಲಿಸೋಣ

'ನಾನು ನಮ್ಮ ದೇಶದ ಸಶಸ್ತ್ರ ಪಡೆಗಳ ಬಗ್ಗೆ ಹೆಮ್ಮೆಪಡುತ್ತೇನೆ. ನಮ್ಮ ಸೈನಿಕರು ದೇಶಕ್ಕಾಗಿ ಮಾಡಿದ ತ್ಯಾಗಕ್ಕೆ ಬೆಲೆ ಕಟ್ಟುವುದು ಅಸಾಧ್ಯ. ನಮ್ಮ ರಾಷ್ಟ್ರೀಯ ಭದ್ರತೆಯನ್ನು ರಕ್ಷಿಸುವ ಪ್ರಯತ್ನಗಳನ್ನು ಸದಾ ಬೆಂಬಲಿಸಬೇಕಾಗುತ್ತದೆ, ಹಾಗಾಗಿ ಸಶಸ್ತ್ರ ಪಡೆಗಳ ವೀರ ಯೋಧರ ಕುಟುಂಬಗಳಿಗೆ ನೆರವಾಗುವುದು ನನಗೆ ಗೌರವ ಮತ್ತು ಜವಾಬ್ದಾರಿ ಆಗಿದೆ. ಅದಕ್ಕಾಗಿ ಅಪರೇಷನ್ ಸಿಂಧೂರ ಉಪಕ್ರಮದಡಿಯಲ್ಲಿ ಸೈನಿಕರ ಪತ್ನಿಯರ ಕಲ್ಯಾಣ ಸಂಘಕ್ಕೆ ರು.1.10 ಕೋಟಿ ದೇಣಿಗೆ ನೀಡಿದ್ದೇನೆ, ಆ ಮೂಲಕ ಅವರ ಕುಟುಂಬಗಳನ್ನು ಬೆಂಬಲಿಸುವ ಪ್ರಯತ್ನ ಮಾಡಿದ್ದೇನೆ.

ಪ್ರೀತಿ ಜಿಂಟಾ, ಪಂಜಾಬ್ ಕಿಂಗ್ಸ್ ತಂಡದ ಸಹ ಮಾಲಕಿ

ಪಾಟೀದಾರ್, ಕಮಿನ್ಸ್‌ಗೆ ದಂಡ

ಲಖನೌ: ಇಲ್ಲಿನ ಏಕಾನಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದ ವೇಳೆ ನಿಧಾನಗತಿಯ ಓವರ್ ರೇಟ್ ಕಾಯ್ದುಕೊಂಡಿದ್ದಕ್ಕಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ನಾಯಕ ರಜತ್ ಪಾಟೀದಾರ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ನಾಯಕ ಪ್ಯಾಟ್ ಕಮ್ಮಿನ್ಸ್ ಅವರಿಗೆ ಭಾರಿ ದಂಡ ವಿಧಿಸಲಾಗಿದೆ. ಈ ಋತುವಿನಲ್ಲಿ ಆರ್‌ಸಿಬಿ ತಂಡದ ಎರಡನೇ ನಿಧಾನಗತಿಯ ಓವರ್ ರೇಟ್ ಅಪರಾಧವಾಗಿದ್ದರಿಂದ ಪಾಟಿದಾರ್‌ಗೆ 24 ಲಕ್ಷ ರು. ದಂಡ ವಿಧಿಸಲಾಯಿತು. ಸನ್‌ರೈಸರ್ಸ್ ಹೈದರಾಬಾದ್‌ನ ಮೊದಲ ಉಲ್ಲಂಘನೆಗಾಗಿ ಕಮ್ಮಿನ್ಸ್‌ಗೆ 15 ಲಕ್ಷ ರು.ದಂಡ ವಿಧಿಸಲಾಯಿತು. ಹೆಚ್ಚುವರಿಯಾಗಿ ಇಂಪ್ಯಾಕ್ಟ್ ಪ್ಲೇಯರ್ ಸೇರಿದಂತೆ ಎರಡೂ ತಂಡಗಳ ಇತರ ಎಲ್ಲಾ ಆಡುವ ಸದಸ್ಯರಿಗೆ ಪ್ರತ್ಯೇಕವಾಗಿ ಪಂದ್ಯ ಶುಲ್ಕದ 25 ಪ್ರತಿಶತ ದಂಡ ವಿಧಿಸಲಾಯಿತು.

ವಿಶ್ವ ಟೆಸ್ಟ್ ಫೈನಲ್ ಪಂದ್ಯ: ಅಂಪೈರ್‌ಗಳ ಪಟ್ಟಿ ಪ್ರಕಟ

ದುಬೈ: ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧದ ಐಸಿಸಿ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯಕ್ಕೆ ಐಸಿಸಿ ಅಂಪೈರ್‌ಗಳ ಪಟ್ಟಿಯನ್ನು ಪ್ರಕಟಿಸಿದೆ. ಭಾರತದ ಜಾವಗಲ್ ಶ್ರೀನಾಥ್ ಮತ್ತು ನಿತಿನ್ ಮೆನನ್ ಈ ಪಟ್ಟಿಯಲ್ಲಿ ಕಾಣಿಸಿಕೊಂಡಿದ್ದಾರೆ. ಶ್ರೀನಾಥ್ ಮ್ಯಾಚ್ ರೆಫ್ರಿಯಾಗಿ ಆಯ್ಕೆಯಾಗಿದ್ದಾರೆ, ಹಾಗೆಯೇ ನಿತಿನ್ ಮೆನನ್ 4ನೇ ಅಂಪೈರ್ ಆಗಿ ಕರ್ತವ್ಯ ನಿಭಾಯಿಸಲಿದ್ದಾರೆ. ಜೂನ್ 11ರಿಂದ 15ರ ತನಕ ಲಾರ್ಡ್ಸ್‌ನಲ್ಲಿ ಫೈನಲ್ ಪಂದ್ಯ ನಡೆಯಲಿದೆ. ಇಂಗ್ಲೆಂಡ್‌ನ ರಿಚರ್ಡ್ ಇಲ್ಲಿಂಗ್‌ವರ್ತ್ ಮತ್ತು ನ್ಯೂಜಿಲ್ಯಾಂಡ್‌ನ ಕ್ರಿಸ್ ಗಫಾನಿ ಫೀಲ್ಡ್ ಅಂಪಾಯರ್ ಆಗಿದ್ದಾರೆ. ರಿಚರ್ಡ್ ಕ್ಯಾಟಲ್‌ಬರೋ ಟಿ.ವಿ ಅಂಪೈರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.

ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಫೈನಲ್‌ಗೆ ಶ್ರೀಕಾಂತ್ ದಾಪುಗಾಲು

ಕೌಲಾಲಂಪುರ: ಭಾರತದ ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ಆರು ವರ್ಷಗಳಲ್ಲಿ ಇದೇ ಮೊದಲ ಬಾರಿ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಟೂರ್ನಿಯೊಂದರ ಫೈನಲ್ ತಲುಪಿದರು. ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಅವರು ಶನಿವಾರ ಜಪಾನಿನ ಯುಶಿ ತನಾಕ ಅವರನ್ನು ನೇರ ಗೇಮ್‌ಗಳಿಂದ ಹಿಮ್ಮೆಟ್ಟಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟರು. 2021ರ ವಿಶ್ವ ಚಾಂಪಿಯನ್‌ಶಿಪ್‌ನ ಬೆಳ್ಳಿ ವಿಜೇತ, 32 ವರ್ಷ ವಯಸ್ಸಿನ ಶ್ರೀಕಾಂತ್ ತಮ್ಮ ಸೊಗಸಾದ ಆಟವಾಡಿ ವಿಶ್ವ ಕ್ರಮಾಂಕದಲ್ಲಿ 23ನೇ ಸ್ಥಾನದಲ್ಲಿರುವ ತನಾಕ ಅವರನ್ನು 21-18, 24-22ರಿಂದ ಪರಾಭವಗೊಳಿಸಿದರು. ಭಾನುವಾರ ನಡೆಯುವ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಚೀನಾ ಆಟಗಾರ ಲಿ ಶಿ ಅವರನ್ನು ಎದುರಿಸಲಿದ್ದಾರೆ. ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಲಿ ಶಿ ಇನ್ನೊಂದು ಸೆಮಿಫೈನಲ್‌ನಲ್ಲಿ 21-15, 21-15ರಿಂದ ಜಪಾನಿನ ಕೊಡೈ ನರವೊಕಾ ಅವರನ್ನು ಸೋಲಿಸಿದರು.

ಇಂಗ್ಲೆಂಡ್ ಟೆಸ್ಟ್ ಸರಣಿಗೆ ತಂಡ ಪ್ರಕಟ | ಗಿಲ್ ನಾಯಕ, ಪಂತ್ ಉಪ-ನಾಯಕ

8 ವರ್ಷಗಳ ಬಳಿಕ ಕರುಣಾಗಮನ

ದೆಹಲಿ: ಇಂಗ್ಲೆಂಡ್ ವಿರುದ್ಧದ ಮುಂಬರುವ ಐದು ಪಂದ್ಯಗಳ ಟೆಸ್ಟ್ ಸರಣಿಗೆ 18 ಸದಸ್ಯರ ಭಾರತ ತಂಡವನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಶನಿವಾರ ಪ್ರಕಟಿಸಿದೆ.

ನಿರೀಕ್ಷೆಯಂತೆ ಶುಭಮನ್ ಗಿಲ್‌ಗೆ ಭಾರತ ಟೆಸ್ಟ್ ತಂಡದ ನಾಯಕತ್ವವನ್ನು ನೀಡಲಾಗಿದ್ದು, ಉಪ ನಾಯಕನನ್ನಾಗಿ ರಿಷಭ್ ಪಂತ್ ಅವರನ್ನು ಆಯ್ಕೆ ಮಾಡಲಾಗಿದೆ. ಇತ್ತೀಚೆಗೆ ರೋಹಿತ್ ಶರ್ಮಾ ಅವರು ಟೆಸ್ಟ್ ಕ್ರಿಕೆಟ್‌ಗೆ ವಿದಾಯವನ್ನು ಹೇಳಿದ್ದ ಕಾರಣ, ಅವರಿಂದ ತೆರವಾಗಿದ್ದ ನಾಯಕತ್ವದ ಸ್ಥಾನಕ್ಕೆ ಗಿಲ್ ಅವರನ್ನು ಬಿಸಿಸಿಐ ಆಯ್ಕೆ ಮಾಡಿ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದೆ. ಇಂಗ್ಲೆಂಡ್ ಪ್ರವಾಸದ ಟೆಸ್ಟ್ ಸರಣಿಯ ಭಾರತ ತಂಡಕ್ಕೆ ಹಲವು ಯುವ ಆಟಗಾರರಿಗೂ ಅವಕಾಶವನ್ನು ನೀಡಲಾಗಿದೆ.

ಗಿಲ್ 37ನೇ ಟೆಸ್ಟ್ ನಾಯಕ: ಶನಿವಾರದಂದು ಮುಂಬೈನಲ್ಲಿ ನಡೆದಿದ್ದ ಅಜಿತ್ ಅಗರ್ಕರ್ ಸಾರಥ್ಯದ ಬಿಸಿಸಿಐ ಆಯ್ಕೆ ಸಮಿತಿಯ ಸಭೆಯಲ್ಲಿ ಆಯ್ಕೆಯಾಗಿರುವ ಗಿಲ್, ಭಾರತ ಟೆಸ್ಟ್ ತಂಡದ 37ನೇ ನಾಯಕ. 32 ಟೆಸ್ಟ್ ಪಂದ್ಯಗಳಿಂದ ಗಿಲ್ 1,893 ರನ್‌ಗಳನ್ನು ಕಲೆ ಹಾಕಿದ್ದು, ಅದರಲ್ಲಿ 5 ಶತಕವೂ ಸೇರಿದೆ. ದೀರ್ಘಾವಧಿ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಶುಭಮನ್ ಗಿಲ್‌ಗೆ ನಾಯಕತ್ವವನ್ನು ಬಿಸಿಸಿಐ ನೀಡಿದೆ. ಜೂನ್ 20 ರಂದು ಇಂಗ್ಲೆಂಡ್‌ನ ಹೆಡಿಂಗ್ಲೆಯಲ್ಲಿ ಮೊದಲನೇ ಟೆಸ್ಟ್ ಪಂದ್ಯದ ಮೂಲಕ ಭಾರತ ತಂಡದ ಇಂಗ್ಲೆಂಡ್ ಪ್ರವಾಸ ಆರಂಭವಾಗಲಿದೆ. 18 ವರ್ಷಗಳ ಬಳಿಕ ಇಂಗ್ಲೆಂಡ್‌ನಲ್ಲಿ ಟೆಸ್ಟ್ ಸರಣಿ ಗೆಲ್ಲಲು ಗೌತಮ್ ಗಂಭೀರ್ ಮಾರ್ಗದರ್ಶನದ ಭಾರತ ತಂಡ ಎದುರು ನೋಡುತ್ತಿದೆ.

ಸುದರ್ಶನ್, ಅರ್ಷದೀಪ್‌ಗೂ ಅವಕಾಶ: ದೇಶಿ ಕ್ರಿಕೆಟ್‌ನಲ್ಲಿ ಅತ್ಯುತ್ತಮ ದಾಖಲೆಗಳನ್ನು ಹೊಂದಿರುವ ತಮಿಳುನಾಡಿನ ಸಾಯಿ ಸುದರ್ಶನ್ ಹಾಗೂ ಪಂಜಾಬ್ ತಂಡದ ಅರ್ಷದೀಪ್ ಸಿಂಗ್‌ಗೆ ಭಾರತ ಟೆಸ್ಟ್ ತಂಡದಲ್ಲಿ ಚೊಚ್ಚಲ ಅವಕಾಶವನ್ನು ನೀಡಲಾಗಿದೆ. ಫಿಟ್‌ನೆಸ್ ಸಮಸ್ಯೆಯಿಂದಾಗಿ ಹಿರಿಯ ವೇಗಿ ಮೊಹಮ್ಮದ್ ಶಮಿ ಸ್ಥಾನವನ್ನು ಕಳೆದುಕೊಂಡಿದ್ದಾರೆ. ಜಸ್‌ಪ್ರೀತ್ ಬುಮ್ರಾ ಹಾಗೂ ಮೊಹಮ್ಮದ್ ಸಿರಾಜ್ ತಂಡದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಶಾರ್ದುಲ್ ಠಾಕೂರ್ ಟೆಸ್ಟ್ ತಂಡಕ್ಕೆ ಮರಳಿದ್ದಾರೆ. ಭಾರತ-ಎ ತಂಡದ ನಾಯಕ ಅಭಿಮನ್ಯು ಈಶ್ವರನ್‌ಗೂ ಅವಕಾಶ ನೀಡಲಾಗಿದೆ.

ಬುಮ್ರಾಗೆ ತಪ್ಪಿದ ನಾಯಕತ್ವ: ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಸ್ಥಾನಕ್ಕೆ ಜಸ್‌ಪ್ರೀತ್ ಬೂಮ್ರಾ ಹೆಸರೂ ಕೇಳಿ ಬಂದಿತ್ತು. ಆದರೆ ಆಗಾಗ ಗಾಯಾಳುವಾಗುತ್ತಿರುವ ಹಿನ್ನೆಲೆಯಲ್ಲಿ ಅವರನ್ನು ಸಾಧ್ಯವಾದಷ್ಟು ಏಕದಿನ ಸರಣಿಗೆ ಬಳಸಬೇಕೆನ್ನುವ ಕಾರಣಕ್ಕಾಗಿ ಬೂಮ್ರಾಗೆ ನಾಯಕತ್ವ ನೀಡಿಲ್ಲ. ತಂಡದಲ್ಲಿ ಸ್ಥಾನ ಪಡೆದುಕೊಂಡಿದ್ದರೂ, ಬೂಮ್ರಾ ಇಂಗ್ಲೆಂಡ್ ವಿರುದ್ಧ ಮೂರು ಪಂದ್ಯಗಳನ್ನಷ್ಟೇ ಆಡಬಹುದೆಂದು ಬಿಸಿಸಿಐ ಮೂಲಗಳು ವರದಿ ಮಾಡಿದೆ.

ಟೀಮ್ ಇಂಡಿಯಾ ಟೆಸ್ಟ್ ತಂಡ: ಶುಭಮನ್ ಗಿಲ್ (ನಾಯಕ), ರಿಷಭ್ ಪಂತ್ (ಉಪ ನಾಯಕ), ಯಶಸ್ವಿ ಜೈಸ್ವಾಲ್, ಕೆ.ಎಲ್. ರಾಹುಲ್, ಸಾಯಿ ಸುದರ್ಶನ್, ಅಭಿಮನ್ಯು ಈಶ್ವರನ್, ಕರುಣ್ ನಾಯರ್, ನಿತೀಶ್ ಕುಮಾರ್ ರೆಡ್ಡಿ, ರವೀಂದ್ರ ಜಡೇಜಾ, ಧ್ರುವ್ ಜುರೆಲ್, ವಾಷಿಂಗ್ಟನ್ ಸುಂದರ್, ಶಾರ್ದುಲ್ ಠಾಕೂರ್, ಜಸ್‌ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ, ಆಕಾಶ್ ಸಿಂಗ್, ಅರ್ಷದೀಪ್ ಸಿಂಗ್, ಕುಲ್ದೀಪ್ ಯಾದವ್.

ಕರ್ನಾಟಕದ ಮೂವರಿಗೆ ಅವಕಾಶ

ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾರಂತಹ ಹಿರಿಯರು ಟೆಸ್ಟ್ ಕ್ರಿಕೆಟ್‌ನಿಂದ ಹೊರಗುಳಿದಿರುವುದರಿಂದ ಅನುಭವಿ ಆಟಗಾರ ಕೆ. ಎಲ್. ರಾಹುಲ್ ಅವರಿಗೆ ಇಂಗ್ಲೆಂಡ್ ವಿರುದ್ಧ ದ ಟೆಸ್ಟ್ ಸರಣಿಯಲ್ಲಿ ಸ್ಥಾನ ನೀಡಲಾಗಿದ್ದು, ಅವರು ಆರಂಭಿಕ ಆಟಗಾರರಾಗಿ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿದೆ. ಇನ್ನೋರ್ವ ಕನ್ನಡಿಗ ಕನ್ನಡಿಗ ಕರುಣ್ ನಾಯರ್ 8 ವರ್ಷಗಳ ಬಳಿಕ ಟೆಸ್ಟ್ ತಂಡಕ್ಕೆ

ಮರಳಿದ್ದು, 2017ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಅವರು ಧರ್ಮಶಾಲಾದಲ್ಲಿ ಕೊನೆಯ ಟೆಸ್ಟ್ ಪಂದ್ಯವನ್ನು ಆಡಿದ್ದರು. ಇತ್ತೀಚೆಗೆ ದೇಶೀಯ ಕ್ರಿಕೆಟ್‌ನಲ್ಲಿ ಕರುಣ್ ರನ್ ಹೊಳೆ ಹರಿಸಿದ್ದರು. ಪ್ರಸ್ತುತ ನಡೆಯುತ್ತಿರುವ ಐಪಿಎಲ್‌ನಲ್ಲಿ ಗುಜರಾತ್ ತಂಡದ ಪರವಾಗಿ ಅಮೋಘ ಬೌಲಿಂಗ್ ದಾಳಿ ನಡೆಸುವ ಮೂಲಕ ಪರ್ಪಲ್ ಕ್ಯಾಪ್ ತನ್ನದಾಗಿಸಿಕೊಂಡಿರುವ ಪ್ರಸಿದ್ ಕೃಷ್ಣ ಅವರನ್ನು ಕೂಡ ಟೆಸ್ಟ್ ತಂಡಕ್ಕೆ ಆಯ್ಕೆ ಮಾಡಲಾಗಿದೆ, ಕೆಲ ತಿಂಗಳ ಹಿಂದೆ ನಡೆದಿದ್ದ ಬಾರ್ಡರ್-ಗವಾಸ್ಕರ್ ಸರಣಿಯಲ್ಲಿ ಅವರೂ ಟೀಮ್ ಇಂಡಿಯಾ ಸದಸ್ಯರಾಗಿದ್ದರು.

ಡೆಲ್ಲಿಗೆ 207 ರನ್‌ಗಳ ಗೆಲುವಿನ ಗುರಿ

ಜೈಪುರ: ಇಲ್ಲಿನ ಸವಾಯಿ ಮಾನ್‌ಸಿಂಗ್ ಕ್ರಿಕೆಟ್ ಸ್ಟೇಡಿಯಂನಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ನಾಯಕ ಶ್ರೇಯಸ್ ಅಯ್ಯರ್ ಅವರ ಆಕರ್ಷಕ ಅರ್ಧ ಶತಕದ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡವು 8 ವಿಕೆಟ್ ನಷ್ಟಕ್ಕೆ 206 ರನ್ ಗಳಿಸಿ, ಡೆಲ್ಲಿ ಕ್ಯಾಪಿಟಲ್‌ಗೆ 207 ರನ್‌ಗಳ ಗೆಲುವಿನ ಗುರಿ ನೀಡಿದೆ.

ಟಾಸ್ ಗೆದ್ದ ಡೆಲ್ಲಿ ತಂಡವು ಮೊದಲು ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್ ಆರಂಭಿಸಿದ ಪಂಜಾಬ್ ತಂಡದ ಆರಂಭ ಅಷ್ಟೇನೂ ಚೆನ್ನಾಗಿರಲಿಲ್ಲ. ತಂಡದ ಮೊತ್ತ 8 ರನ್ ಗಳಿಸಿದ್ದಾಗ 9 ಬಾಲ್‌ಗಳಲ್ಲಿ ಕೇವಲ 6 ರನ್ ಗಳಿಸಿದ್ದ ಆರಂಭಿಕ ಆಟಗಾರ ಪ್ರಿಯಾಂಶ್ ಆರ್ಯ ರಹಮಾನ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯೂ ಔಟ್ ಆಗಿ ಪೆವಿಲಿಯನ್‌ಗೆ ನಿರ್ಗಮಿಸಿದರು.

ಆ ಬಳಿಕ ಪ್ರಭ್‌ಸಿಮ್ರಾನ್ ಮತ್ತು ಜೋಶ್ ಇಂಗ್ಲಿಸ್ ಮಧ್ಯೆ ಜತೆಯಾಟ ಮುಂದುವರಿಯಿತು. ತಂಡದ ಮೊತ್ತ 55 ಆಗಿದ್ದಾಗ 12 ಬಾಲ್‌ಗಳಲ್ಲಿ 32 ರನ್ ಗಳಿಸಿದ್ದ ಜೋಶ್ ಇಂಗ್ಲಿಸ್ ಔಟ್ ಆದರು. ಅವರ ಇನ್ನಿಂಗ್ಸ್‌ನಲ್ಲಿ 2 ಸಿಕ್ಸರ್ ಮತ್ತು 3 ಬೌಂಡರಿಗಳಿದ್ದವು.

ನಂತರ ಪ್ರಭ್‌ಸಿಮ್ರಾನ್ ಮತ್ತು ಪಂಜಾಬ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಮಧ್ಯೆ ಸ್ವಲ್ಪ ಹೊತ್ತು ಜತೆಯಾಟ ಸಾಗಿತು. ತಂಡದ ಮೊತ್ತ 77 ರನ್ ಆಗಿದ್ದಾಗ ಪ್ರಭ್‌ಸಿಮ್ರಾನ್ ಅವರು ವಿಪ್ರಜ್ ನಿಗಮ್ ಅವರ ಬೌಲಿಂಗ್‌ನಲ್ಲಿ ತಮ್ಮ ವಿಕೆಟ್ ಕಳೆದುಕೊಂಡರು. 18 ಬಾಲ್‌ಗಳನ್ನು ಎದುರಿಸಿದ್ದ ಪ್ರಭ್‌ಸಿಮ್ರಾನ್ 28 ರನ್ ಗಳಿಸಿದ್ದರು, ಅವರ ಇನ್ನಿಂಗ್ಸ್‌ನಲ್ಲಿ 1 ಸಿಕ್ಸರ್ ಮತ್ತು 1 ಬೌಂಡರಿ ಇತ್ತು.

ಮುಂದಿನ ಬ್ಯಾಟ್ಸ್‌ಮನ್ ಆಗಿ ಕ್ರೀಸ್‌ಗೆ ಬಂದ ನೆಹಲ್ ವಧೇರಾ, ನಾಯಕ ಅಯ್ಯರ್ ಜೊತೆಗೂಡಿ ಇನ್ನಿಂಗ್ಸ್ ಕಟ್ಟಲು ಪ್ರಯತ್ನ ಪಟ್ಟರು. ಆದರೆ ವಧೇರಾ 16 ರನ್ ಗಳಿಸಿದ್ದ ವೇಳೆ ಮುಕೇಶ್ ಕುಮಾರ್ ಬೌಲಿಂಗ್‌ನಲ್ಲಿ ಡ್ಯುಪ್ಲೆಸಿಸ್‌ಗೆ ಕ್ಯಾಚ್ ನೀಡಿ ಪೆವಿಲಿಯನ್‌ಗೆ ತೆರಳಿದರು, ಆಗ ಪಂಜಾಬ್ ತಂಡದ ಮೊತ್ತ 118 ರನ್‌ಗಳಾಗಿತ್ತು.

ನಂತರ ನಾಯಕ ಶ್ರೇಯಸ್ ಅಯ್ಯರ್ ಜತೆಗೂಡಿದ ಶಶಾಂಕ್ ಸಿಂಗ್ ಉತ್ತಮ ಬ್ಯಾಟಿಂಗ್ ಪ್ರದರ್ಶನದ ಸೂಚನೆ ಕೊಟ್ಟರೂ, ವೈಯಕ್ತಿಕ ಮೊತ್ತ 11 ರನ್ ಗಳಿಸಿದ್ದ ವೇಳೆ ರಹಮಾನ್ ಬೌಲಿಂಗ್‌ನಲ್ಲಿ ಸ್ಟಬ್ಸ್‌ಗೆ ಕ್ಯಾಚ್ ಕೊಟ್ಟು ಔಟ್ ಆದರು, ಆಗ ಪಂಜಾಬ್ ತಂಡದ ಮೊತ್ತ 144 ರನ್‌ಗಳಾಗಿತ್ತು.

ಬಳಿಕ ಶ್ರೇಯಸ್ ಅಯ್ಯರ್-ಸ್ಟೋಯಿನಿಸ್ ಜತೆಯಾಟ ಸ್ವಲ್ಪ ಹೊತ್ತು ಮುಂದುವರಿಯಿತು. ಆದರೆ ಆಗ 34 ಬಾಲ್‌ಗಳಲ್ಲಿ ಅರ್ಧ ಶತಕ (53) ಪೂರೈಸಿದ್ದ ಶ್ರೇಯಸ್ ಅಯ್ಯರ್ ಅವರು ಕುಲ್ದೀಪ್ ಬೌಲಿಂಗ್‌ನಲ್ಲಿ ಮೋಹಿತ್ ಶರ್ಮಾಗೆ ಕ್ಯಾಚ್ ಕೊಟ್ಟು ಔಟ್ ಆದರು. ಅಯ್ಯರ್ ತಮ್ಮ ಇನ್ನಿಂಗ್ಸ್‌ನಲ್ಲಿ 2 ಸಿಕ್ಸರ್ ಮತ್ತು 5 ಬೌಂಡರಿ ಬಾರಿಸಿದ್ದರು.

ಆ ನಂತರ ಬಂದ ಓಮರ್ಜೈ ಕೇವಲ 1 ರನ್ ಗಳಿಸಿ ಕುಲ್ದೀಪ್ ಯಾದವ್ ಬೌಲಿಂಗ್‌ನಲ್ಲಿ ರಿಜ್ವಿಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು. ಬಳಿಕ ಬಂದ ಮಾರ್ಕೊ ಜಾನ್ಸನ್ ಕೂಡಾ ಕ್ರೀಸ್‌ಗೆ ಅಂಟಿಕೊಳ್ಳದೆ ಯಾವುದೇ ರನ್ ತೆಗೆಯಲಾರದೆ ರಹಮಾನ್ ಬೌಲಿಂಗ್‌ನಲ್ಲಿ ಸ್ಟಬ್ಸ್‌ಗೆ ಕ್ಯಾಚ್ ನೀಡಿ ರಹಮಾನ್ ಬೌಲಿಂಗ್‌ನಲ್ಲಿ ಔಟ್ ಆದರು.

ಕೊನೆಯಲ್ಲಿ ಹರ್‌ಪ್ರೀತ್ ಬ್ರಾರ್ ಕೇವಲ 7 ರನ್ ಗಳಿಸಿ ಹಾಗೂ 16 ಬಾಲ್‌ಗಳಿಂದ ಸಿಡಿಲಬ್ಬರದಂತೆ 44 ರನ್ ಗಳಿಸಿದ್ದ ಮಾರ್ಕೋಸ್ ಸ್ಟೋನಿಸ್ ಅಜೇಯರಾಗಿ ಉಳಿದರು. ಸ್ಟೋಯಿನಿಸ್ ಇನ್ನಿಂಗ್ಸ್‌ನಲ್ಲಿ 4 ಸಿಕ್ಸರ್ ಮತ್ತು 3 ಬೌಂಡರಿಗಳಿದ್ದವು.

ಡೆಲ್ಲಿ ಕ್ಯಾಪಿಟಲ್ಸ್ ಪರ ಉತ್ತಮವಾಗಿ ಬೌಲಿಂಗ್ ಮಾಡಿದ ರಹಮಾನ್ 3 ವಿಕೆಟ್ ಗಳಿಸಿದರೆ, ವಿಪ್ರಜ್ ನಿಗಮ್ ಮತ್ತು ಕುಲ್ದೀಪ್ ಯಾದವ್ ತಲಾ 2 ವಿಕೆಟ್ ಗಳಿಸಿದರು. ಮಕೇಶ್ ಕುಮಾರ್ 1 ವಿಕೆಟ್ ಪಡೆದರು.

ನಿರ್ಗಮಿತರ ಕೊನೆಯ ಸೆಣಸಾಟ

ದೆಹಲಿ: ಇಲ್ಲಿನ ಅರುಣ್ ಜೇಟ್ಲಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಹೈದರಾಬಾದ್ ತಂಡವು ಕೋಲ್ಕತ್ತಾ ವಿರುದ್ಧ ಭಾನು ವಾರ ಐಪಿಎಲ್ ಪಂದ್ಯದಲ್ಲಿ ಸೆಣಸಾಡಲಿದೆ. ಈಗಾ ಗಲೇ ಐಪಿಎಲ್ ಪ್ಲೇ ಆಫ್‌ನಿಂದ ಹೊರಬಿದ್ದು, ಅಂಕಪಟ್ಟಿಯಲ್ಲಿ 7ನೇ ಸ್ಥಾನದಲ್ಲಿರುವ ರಹಾನೆ ಪಡೆಗೆ ಮತ್ತು 8ನೇ ಸ್ಥಾನದಲ್ಲಿರುವ ಪಾಟ್ ಕಮಿನ್ಸ್ ನಾಯಕತ್ವದ ಹೈದರಾಬಾದ್ ತಂಡಕ್ಕೂ ಭಾನುವಾರದ ಪಂದ್ಯವು ಈ ಐಪಿಎಲ್‌ನ ಕೊನೆಯ ಹಣಾಹಣಿಯಾಗಲಿದೆ.

ಈ ಬಾರಿಯ ಐಪಿಎಲ್ ಆವೃತ್ತಿಯ ಮೊದಲ ಪಂದ್ಯದಲ್ಲೇ ರಾಜಸ್ಥಾನದ ವಿರುದ್ಧ ಗೆದ್ದ ಹೈದರಾ ಬಾದ್ ತಂಡವು ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಲಿದೆ ಎಂಬುದು ಕ್ರಿಕೆಟ್‌ಪ್ರೇಮಿಗಳ ನಿರೀಕ್ಷೆಯಾಗಿತ್ತು. ಆದರೆ ಮಾರ್ಚ್-27ರಂದು ಲಖನೌ ವಿರುದ್ಧ, ಮಾರ್ಚ್-30ರಂದು ಡೆಲ್ಲಿ ವಿರುದ್ಧ, ಏಪ್ರಿಲ್-3ರಂದು ಕೋಲ್ಕತ್ತಾ ವಿರುದ್ಧ ಮತ್ತು ಏಪ್ರಿಲ್-6ರಂದು ಗುಜರಾತ್ ವಿರುದ್ಧ ಸೋಲನ್ನು ಕಾಣುವ ಮೂಲಕ ಹೈದರಾಬಾದ್ ತಂಡವು ತನ್ನ ದೌರ್ಬಲ್ಯವನ್ನು ಜಗಜ್ಜಾಹೀರು ಮಾಡಿತು.

ಏಪ್ರಿಲ್-12ರಂದು ಪಂಜಾಬ್ ವಿರುದ್ಧ ಹೈದರಾಬಾದ್ ತಂಡವು 7 ವಿಕೆಟ್‌ಗಳ ಭರ್ಜರಿ ಜಯ ಪಡೆಯಿತು. ಆದರೆ ಮತ್ತೆ ಏಪ್ರಿಲ್-17 ಹಾಗೂ ಏಪ್ರಿಲ್-23ರಂದು ಮುಂಬೈ ವಿರುದ್ಧ ಸತತ ಸೋಲನ್ನು ಒಪ್ಪಿಕೊಂಡಿತು. ಏಪ್ರಿಲ್-25ರಂದು ಚೆನ್ನೈ ವಿರುದ್ಧ ಹೈದರಾಬಾದ್ ತಂಡವು 5 ವಿಕೆಟ್ ಜಯ ಪಡೆಯಿತು.

ಮೇ-2ರಂದು ನಡೆದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಹೈದರಾಬಾದ್ ಸೋಲೊಪ್ಪಿದರೆ, ಮೇ-5ರಂದು ಡೆಲ್ಲಿ ವಿರುದ್ಧದ ಪಂದ್ಯ ನಡೆಯದ ಕಾರಣ 1 ಅಂಕ ಗಳಿಸಿತು. ಆದರೆ ಮೇ-19ರಂದು ಲಖನೌ ವಿರುದ್ಧ ಮತ್ತು ಮೇ-23ರಂದು ಆರ್‌ಸಿಬಿ ವಿರುದ್ಧ ಹೈದರಾಬಾದ್ ಗೆಲುವನ್ನು ಕಂಡಿತು.

ಪಂದ್ಯಾವಳಿಯಲ್ಲಿ ಒಟ್ಟು 12 ಅಂಕಗಳನ್ನಷ್ಟೇ ಇದುವರೆಗೂ ಗಳಿಸಿರುವ ಕೋಲ್ಕತ್ತಾ ತಂಡವು ತನ್ನ ಮೊದಲ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಸೋತಿದ್ದರೂ, ಮಾರ್ಚ್-26ರಂದು ರಾಜಸ್ಥಾನದ ವಿರುದ್ಧ ಗೆದ್ದಿತ್ತು. ಮಾರ್ಚ್-31ರಂದು ನಡೆದಿದ್ದ ಪಂದ್ಯದಲ್ಲಿ ಮುಂಬೈ ವಿರುದ್ಧ ಮುಗ್ಗರಿಸಿತ್ತು. ಬಳಿಕ ಏಪ್ರಿಲ್-3ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಕೋಲ್ಕತ್ತಾವನ್ನು ಹೈದರಾಬಾದ್ ಪರಾಭವಗೊಳಿಸಿತ್ತು.

ಏಪ್ರಿಲ್-8ರಂದು ಜರುಗಿದ್ದ ಪಂದ್ಯದಲ್ಲಿ ಕೋಲ್ಕತ್ತಾ ತಂಡವು ಲಖನೌದೆದುರು ಮಣಿದಿತ್ತು. ಏಪ್ರಿಲ್-11ರಂದು ನಡೆದ ಪಂದ್ಯದಲ್ಲಿ ಕೋಲ್ಕತ್ತಾ ತಂಡವು ಚೆನ್ನೈಯನ್ನು ಸೋಲಿಸಿತ್ತು, ಆದರೆ ಏಪ್ರಿಲ್-15 ಮತ್ತು 21ರಂದು ಆಯೋಜಿಸಿದ್ದ ಪಂದ್ಯಗಳಲ್ಲಿ ಕೋಲ್ಕತ್ತಾ ತಂಡವು ಸೋಲನ್ನುಂಡಿತ್ತು. ಏಪ್ರಿಲ್-26ರಂದು ನಡೆದ ಪಂಜಾಬ್ ವಿರುದ್ಧದ ಪಂದ್ಯ ಮಳೆಯಿಂದಾಗಿ ರದ್ದಾದ ಕಾರಣ ಕೋಲ್ಕತ್ತಾ ತಂಡವು ಒಂದು ಅಂಕವನ್ನು ಪಡೆಯಿತು. ಏಪ್ರಿಲ್-29 ಮತ್ತು ಮೇ-4ರಂದು ನಡೆದ ಪಂದ್ಯಗಳಲ್ಲಿ ಕೋಲ್ಕತ್ತಾ ತಂಡವು ಗೆಲುವನ್ನು ಪಡೆದಿದ್ದರೂ, ಪ್ಲೇ ಆಫ್ ಹಂತಕ್ಕೇರುವಲ್ಲಿ ವಿಫಲವಾಯಿತು. ಮೇ-7ರಂದು ನಡೆದ ಪಂದ್ಯದಲ್ಲಿ ಅದು ಚೆನ್ನೈ ವಿರುದ್ಧ ಜಯ ಪಡೆದಿತ್ತು. ಮೇ-17ರಂದು ಆರ್‌ಸಿಬಿ ವಿರುದ್ಧದ ಪಂದ್ಯದ ವೇಳೆ ಮಳೆ ಬಂದ ಕಾರಣ ಕೋಲ್ಕತ್ತಾ ತಂಡವು 1 ಅಂಕ ಪಡೆಯಿತು.

ಕೋಲ್ಕತ್ತಾ ತಂಡ
ಅಜಿಂಕ್ಯ ರಹಾನೆ (ನಾಯಕ)
ವೆಂಕಟೇಶ್ ಅಯ್ಯರ್
ರಿಂಕು ಸಿಂಗ್
ವರುಣ್ ಚಕ್ರವರ್ತಿ
ಸುನಿಲ್ ನರ್ಯೆನ್
ಆ್ಯಂಡ್ರೆ ರಸೆಲ್
ಹರ್ಷಿತ್ ರಾಣಾ
ರಮಣ್‌ದೀಪ್ ಸಿಂಗ್
ಕ್ವಿಂಟನ್ ಡಿ ಕಾಕ್
ಆಂಗ್‌ಕ್ರಿಶ್ ರಘುವಂಶಿ
ಎಂ. ಅರೋರಾ
ಲುವ್ನಿತ್ ಸಿಸೋಡಿಯಾ
ಅನುಕುಲ್ ರಾಯ್
ಮೊಯಿನ್ ಅಲಿ



ಹೈದರಾಬಾದ್
ಪ್ಯಾಟ್ ಕಮಿನ್ಸ್ (ನಾಯಕ)
ಅಭಿಷೇಕ್ ಶರ್ಮಾ
ನಿತೀಶ್ ರೆಡ್ಡಿ
ಹೆನ್ರಿಚ್ ಕ್ಲಾಸೆನ್
ಟ್ರಾವಿಸ್ ಹೆಡ್
ಮೊಹಮ್ಮದ್ ಶಮಿ
ಹರ್ಷಲ್ ಪಟೇಲ್
ಇಶಾನ್ ಕಿಶನ್
ರಾಹುಲ್ ಚಹರ್
ಆ್ಯಡಂ ಝಂಪ
ಅಭಿನವ್ ಮನೋಹರ್
ಸಿಮ್ರಾನ್‌ಜಿತ್ ಸಿಂಗ್
ಜಯದೇವ್ ಉನಾದ್ಕತ್
ಕಮಿಂದು ಮೆಂಡಿಸ್

ಇಂದು ಗಿಲ್-ಧೋನಿ ತಂಡಗಳ ಹಣಾಹಣಿ

ಗುಜರಾತ್ ತಂಡ
ಶುಭ್‌ಮನ್ ಗಿಲ್ (ನಾಯಕ)
ಸಾಯಿ ಸುದರ್ಶನ್
ಜೋಸ್ ಬಟ್ಲರ್
ಶಾರುಖ್ ಖಾನ್
ರಾಹುಲ್ ತೆವಾಟಿಯಾ
ಅರ್ಷದ್ ಖಾನ್
ರಶೀದ್ ಖಾನ್
ಸಾಯಿ ಕಿಶೋರ್
ಮೊಹಮ್ಮದ್ ಸಿರಾಜ್
ಪ್ರಸಿದ್ಧ್ ಕೃಷ್ಣ
ಇಶಾಂತ್ ಶರ್ಮಾ
ಕುಮಾರ್ ಕುಶಾಗ್ರ
ವಾಷಿಂಗ್ಟನ್ ಸುಂದರ್
ಜಯಂತ್ ಯಾದವ್

ಚೆನ್ನೈ ತಂಡ
ಎಂಎಸ್ ಧೋನಿ (ನಾಯಕ)
ಮಥೀಶ ಪತಿರಾನ
ಶಿವಂ ದುಬೆ
ರವೀಂದ್ರ ಜಡೇಜಾ
ಡೆವೊನ್ ಕಾನ್ವೆ
ರಾಹುಲ್ ತ್ರಿಪಾಠಿ
ರಚಿನ್ ರವೀಂದ್ರ
ರವಿಚಂದ್ರನ್ ಅಶ್ವಿನ್
ನೂರ್ ಅಹ್ಮದ್
ಶೇಕ್ ರಶೀದ್
ನಾಥನ್ ಎಲ್ಲಿಸ್
ಕಮಲೇಶ್ ನಾಗರಕೋಟಿ
ಶ್ರೇಯಸ್ ಗೋಪಾಲ್

ಅಹಮದಾಬಾದ್: ಇಲ್ಲಿನ ನರೇಂದ್ರ ಮೋದಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಭಾನುವಾರ ನಡೆಯಲಿರುವ ಐಪಿಎಲ್ ಲೀಗ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವು ಚೆನ್ನೈಯನ್ನು ಎದುರಿಸಲಿದ್ದು, ಧೋನಿ ಪಡೆಗೆ ಇದು ಈ ಐಪಿಎಲ್ ಆವೃತ್ತಿಯ ಕೊನೆಯ ಪಂದ್ಯ ಎನಿಸಲಿದೆ.

ಈಗಾಗಲೇ ಅಂಕಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವ ಗುಜರಾತ್ ತಂಡವು ತಾನು ಆಡಿರುವ 13 ಪಂದ್ಯಗಳ ಪೈಕಿ 9 ಪಂದ್ಯಗಳನ್ನು ಈ ಆವೃತ್ತಿಯಲ್ಲಿ ಗೆದ್ದುಕೊಂಡಿದೆ. ಮೊದಲ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಸೋತು ಮುಖಭಂಗ ಅನುಭವಿಸಿದ್ದರೂ, ಶುಭ್‌ನಮ್ ಗಿಲ್ ಪಡೆಯು ಆ ನಂತರ ನಿರಂತರವಾಗಿ 4 ಪಂದ್ಯಗಳನ್ನು ಗೆದ್ದು ಪುಟಿದೆದ್ದಿತು. ಮಾರ್ಚ್-29ರಂದು ಮುಂಬೈ ವಿರುದ್ಧ, ಏಪ್ರಿಲ್-2ರಂದು ಆರ್‌ಸಿಬಿ ವಿರುದ್ಧ, ಏಪ್ರಿಲ್-6ರಂದು ಹೈದರಾಬಾದ್ ವಿರುದ್ಧ ಮತ್ತು ಏಪ್ರಿಲ್-9ರಂದು ರಾಜಸ್ಥಾನದ ವಿರುದ್ಧದ ಪಂದ್ಯಗಳನ್ನು ಗೆದ್ದು ಬೀಗಿತ್ತು.

ಏಪ್ರಿಲ್-12ರಂದು ಲಖನೌ ತಂಡದ ವಿರುದ್ಧ ಸೋತರೂ, ಆ ಬಳಿಕ ಡೆಲ್ಲಿ ಮತ್ತು ಕೋಲ್ಕತ್ತಾ ವಿರುದ್ಧದ ಪಂದ್ಯಗಳನ್ನು ಗೆಲ್ಲುವಲ್ಲಿ ಗಿಲ್ ಪಡೆ ಯಶಸ್ವಿಯಾಗಿತ್ತು. ಏಪ್ರಿಲ್-28ರಂದು ನಡೆದ ಪಂದ್ಯದಲ್ಲಿ ಗುಜರಾತ್ ತಂಡವು ರಾಜಸ್ಥಾನವನ್ನು ಸೋಲಿಸುವಲ್ಲಿ ಯಶಸ್ಸನ್ನು ಕಂಡಿತ್ತು.

ಮೇ-5ರಂದು ಹೈದರಾಬಾದ್ ವಿರುದ್ಧ, ಏಪ್ರಿಲ್-6ರಂದು ಮುಂಬೈ ವಿರುದ್ಧ ಮತ್ತು ಮೇ-18ರಂದು ಡೆಲ್ಲಿ ವಿರುದ್ಧ ಆಯೋಜಿಸಲಾಗಿದ್ದ ಪಂದ್ಯಗಳಲ್ಲೂ ಗುಜರಾತ್ ತಂಡವು ಗೆದ್ದು ಬೀಗಿತ್ತು. ಮೇ-22ರಂದು ನಡೆದ ಪಂದ್ಯದಲ್ಲಿ ಶುಭ್‌ನಮ್ ಗಿಲ್ ಪಡೆಯನ್ನು ಲಖನೌ ತಂಡವು 33 ರನ್‌ಗಳಿಂದ ಸೋಲಿಸಿದ್ದರೂ, ಗುಜರಾತ್‌ಗೆ ಟೇಬಲ್ ಟಾಪರ್ ಸ್ಥಾನವನ್ನು ಸದ್ಯ ಉಳಿಸಿಕೊಳ್ಳಲು ಸಾಧ್ಯವಾಗಿದೆ.

ಅಂಕಪಟ್ಟಿಯ ಕೊನೆಯ ಸ್ಥಾನದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಈ ಐಪಿಎಲ್ ಆವೃತ್ತಿಯ ಮೊದಲ ಪಂದ್ಯದಲ್ಲಿ ಮುಂಬೈ ವಿರುದ್ಧ ಗೆಲುವು ಕಂಡಿತ್ತು. ಆದರೆ ಆ ಬಳಿಕ ಸತತವಾಗಿ 5 ಪಂದ್ಯಗಳಲ್ಲಿ ಸೋತು ತೀವ್ರ ಮುಖಭಂಗಕ್ಕೊಳಗಾಯಿತು. ಏಪ್ರಿಲ್-14ರಂದು ನಡೆದ ಪಂದ್ಯದಲ್ಲಿ ಚೆನ್ನೈ ತಂಡವು ಲಖನೌ ವಿರುದ್ಧ ಗೆದ್ದಾಗ ಮತ್ತೆ ಪುಟಿದೇಳಬಹುದೇನೋ ಎಂದು ಕ್ರಿಕೆಟ್‌ಪ್ರೇಮಿಗಳು ನಿರೀಕ್ಷಿಸಿದ್ದರು. ಆದರೆ ಆ ಬಳಿಕ ಸತತವಾಗಿ 4 ಪಂದ್ಯಗಳಲ್ಲಿ ಸೋಲು ಕಾಣುವ ಮೂಲಕ ಚೆನ್ನೈ ತಂಡವು ಈ ಐಪಿಎಲ್‌ನ ಪ್ಲೇ ಆಫ್‌ನಿಂದ ಹೊರ ಬಿತ್ತು. ಮೇ-7ರಂದು ಕೋಲ್ಕತ್ತಾ ವಿರುದ್ಧದ ಪಂದ್ಯದಲ್ಲಿ ಚೆನ್ನೈ ತಂಡ ಗೆದ್ದರೂ, ಮೇ-20 ರಂದು ನಡೆದ ಪಂದ್ಯದಲ್ಲಿ ರಾಜಸ್ಥಾನದ ವಿರುದ್ಧ ಸೋಲೊಪ್ಪಿತು.



ವಿಶ್ವವಾಣಿ

ಭಾನುವಾರ 25.05.2025

ಓದುವ ಲೋಕಕ್ಕೆ ಓದುವ ನಿಲ್ದಾಣ

ವಿರಾಮ

ಜಗವನೇ ಬೆಳಗಿದ ಎದೆಯ ಹಣತೆ!

» ಶಶಾಂಕ್ ಮುದೂರಿ

ಹಾಸನದಂತಹ ಪುಟ್ಟ ಪಟ್ಟಣದಲ್ಲಿರುವ ವಕೀಲೆ, ಸಾಹಿತಿ, ಸಾಮಾಜಿಕ ಹೋರಾಟಗಾರ್ತಿ ಬಾನು ಮುಷ್ತಾಕ್ ಅವರ 'ಎದೆಯ ಹಣತೆ'ಯ ಬೆಳಕು, ಇಂಟರ್‌ನ್ಯಾಷನಲ್ ಬೂಕರ್ ಪ್ರಶಸ್ತಿ ಪಡೆಯುವ ಮೂಲಕ, ಜಗತ್ತಿಗೆ ಮತ್ತೊಮ್ಮೆ ಕನ್ನಡದ ಬೆಳಕನ್ನು ಪಸರಿಸಿದೆ. ಬಾನು ಅವರ 'ಎದೆಯ ಹಣತೆ'ಯನ್ನು 'ಹಾರ್ಟ್ ಲ್ಯಾಂಪ್' ಹೆಸರಿನಲ್ಲಿ ಇಂಗ್ಲಿಷ್‌ಗೆ ಅನುವಾಸಿದಿರುವ ದೀಪಾ ಬಾಸ್ತಿಯವರು ಸಹ, ಕನ್ನಡದ 'ದೀಪ'ವು ಜಗತ್ತಿನ ಸಾಹಿತ್ಯ ಲೋಕದಲ್ಲಿ ತನ್ನ ಪ್ರಭೆಯನ್ನು ಬೆಳಗುವಂತೆ ಮಾಡಿದ್ದಾರೆ! ಕನ್ನಡಕ್ಕೆ, ಕನ್ನಡ ಸಾಹಿತ್ಯಕ್ಕೆ ಇಂದು ಎಂತಹ ಸುದಿನ! 'ಬಾನು' ಬೆಳಗಲು 'ದೀಪ' ಸಹಕರಿಸಿದ ಒಂದು ಅಪರೂಪದ ಕ್ಷಣ.

1990ರ ದಶಕದಿಂದಲೇ ಬರವಣಿಗೆಯನ್ನು ಆರಂಭಿಸಿದ, ಹಾಸನ ಸಂಜಾತೆ ಬಾನು ಮುಷ್ತಾಕ್ ಅವರ ಸಾಹಿತ್ಯವನ್ನು ಬೆಳಕಿಗೆ ತಂದದ್ದು, ಸಾಹಿತ್ಯ ಲೋಕದ ಅವರ ಪಯಣಕ್ಕೆ ಬೆಳಕು ತೋರಿದ್ದು ಪತ್ರಕರ್ತ ಪಿ.ಲಂಕೇಶ್. ಸುಮಾರು 1981ರಿಂದ 1990ರ ತನಕ 'ಲಂಕೇಶ್ ಪತ್ರಿಕೆ'ಗೆ ಹಾಸನದ ವರದಿಗಾರ್ತಿಯಾಗಿ ಜವಾಬ್ದಾರಿಯನ್ನು ನಿರ್ವಹಿಸಿದ ಬಾನು ಮುಷ್ತಾಕ್ ಅವರು ಬರೆದ ಕಥೆಗಳನ್ನು ನಾಡಿಗೆ ಪರಿಚಯಿಸುವಲ್ಲಿ ಪಿ. ಲಂಕೇಶ್ ಅವರ ಪಾತ್ರ ಹಿರಿದು. ಬೆಂಗಳೂರಿನಿಂದ ಸಾಕಷ್ಟು ದೂರವಿರುವ ಹಾಸನದ ಸಾಹಿತ್ಯಕ ಪ್ರತಿಭೆಯೊಂದು ಬೆಳಕಿಗೆ ಬಂದು, ಕಥೆಗಾರ್ತಿಯಾಗಿ ಬೆಳೆದು, ಈಗ ಇಂಟರ್‌ನ್ಯಾಷನಲ್ ಬೂಕರ್ ಪ್ರಶಸ್ತಿ ಪಡೆದದ್ದು ನಿಜಕ್ಕೂ ವಿಶೇಷ. ಬಾಲ್ಯದಲ್ಲಿ ಅವರ ವಿದ್ಯಾಭ್ಯಾಸವು ಶಿವಮೊಗ್ಗದಲ್ಲಿ ನಡೆಯಿತು ಎಂಬುದು ಸಹ ಇಲ್ಲಿ ಗಮನಾರ್ಹ. ಬಂಡಾಯ ಸಾಹಿತ್ಯ ಚಳವಳಿಯೊಂದಿಗೆ ಗುರುತಿಸಿಕೊಂಡಿದ್ದ ಬಾನು ಮುಷ್ತಾಕ್ ಅವರು, ವಕೀಲೆಯಾಗಿಯೂ ಚಟುವಟಿಕೆಯಿಂದ ವೃತ್ತಿ ನಿರ್ವಹಿಸಿದರು; ಕೋಮು ಸೌಹಾರ್ದ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸುವ ಮೂಲಕ, ಸಾಹಿತಿಯೊಬ್ಬ ಹೇಗೆ ಸಾಮಾಜಿಕ ಸಮಸ್ಯೆಗಳಿಗೆ ತೀವ್ರವಾಗಿ ಸ್ಪಂದಿಸಬಹುದು ಎಂಬುದನ್ನು ತೋರಿಸಿಕೊಟ್ಟರು. ಈ ಬದ್ಧತೆಯು ಅವರ ಸಣ್ಣ ಕಥೆಗಳಲ್ಲೂ ಪ್ರತಿಬಿಂಬಿತವಾಗಿದೆ. ಅವರ ಸಾಹಿತ್ಯ ಕೃತಿಗಳ ಹೆಸರುಗಳೇ (ಬೆಂಕಿಯ ಮಳೆ, ಹಸೀನಾ ಮತ್ತು ಇತರ ಕಥೆಗಳು, ಬಡವರ ಮಗಳು ಹೆಣ್ಣಲ್ಲ, ಕರಿ ನಾಗರಗಳು ಇ) ಹೊಸ ಹಾದಿಯ ತುಡಿತವನ್ನು ಬಿಂಬಿಸುತ್ತವೆ.

> ಬೆಂಗಳೂರಿನಿಂದ ದೂರವಿರುವ ಹಾಸನ ಮತ್ತು ಮಡಿಕೇರಿಯ ಇಬ್ಬರು ಮಹಿಳಾ ಸಾಹಿತ್ಯ ಪ್ರತಿಭೆಗಳು ಜಂಟಿಯಾಗಿ ಇಂಟರ್‌ನ್ಯಾಷನಲ್ ಬೂಕರ್ ಪ್ರಶಸ್ತಿ ಪಡೆಯುವುದರ ಮೂಲಕ, ಕನ್ನಡ ಸಾಹಿತ್ಯದ ಸತ್ವವನ್ನು ಜಗತ್ತಿಗೇ ತೋರಿಸಿಕೊಟ್ಟಿದ್ದಾರೆ.

ಸವಾಲು ಎದುರಿಸಿ ಕಥೆ ಬರೆದ ಬಾನು

ಮುಸ್ಲಿಂ ಸಮುದಾಯದ ಹೆಣ್ಣುಮಗಳೊಬ್ಬಳು, ಹಾಸನದಂತಹ ಸಣ್ಣ ಪಟ್ಟಣದಲ್ಲಿದ್ದುಕೊಂಡು, ತಮ್ಮ ಸಮಾಜದ ಕಟ್ಟುಪಾಡುಗಳನ್ನು, ಹೆಣ್ಣಿನ ಶೋಷಣೆಯನ್ನು ಬಿಂಬಿಸುವ ಕಥೆಗಳನ್ನು ಬರೆಯುವುದು ಮತ್ತು ಸಾಮಾಜಿಕ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಸುಲಭದ ಸಂಗತಿಯಲ್ಲ! ಅದೊಂದು ಕಷ್ಟದ, ಸವಾಲಿನ ಹಾದಿ. ತಮ್ಮ ಕಥೆಗಳಲ್ಲಿ ವ್ಯಕ್ತಪಡಿಸಿದ ವಿಚಾರಗಳಿಗಾಗಿ ಬಾನು ಮುಷ್ತಾಕ್ ಅವರು ಹಲವು ಬಾರಿ ಪ್ರತಿರೋಧವನ್ನು ಎದುರಿಸಬೇಕಾಯಿತು; ಸಾಕಷ್ಟು ಬೆದರಿಕೆಗಳನ್ನೂ ಎದುರಿಸಬೇಕಾಯಿತು! ಆದರೂ ಅವರು ತಮ್ಮ 'ಎದೆಯ ಹಣತೆ'ಯ ಪ್ರಭೆಯನ್ನು ಕಾಪಾಡಿಕೊಂಡು ಬಂದರು; ತಮ್ಮಲ್ಲಿನ ಸಾಹಿತ್ಯದ ಬೆಳಕು ಆರಿಹೋಗದಂತೆ ನೋಡಿಕೊಂಡರು. ನಿರಂತರವಾಗಿ ಹೊಸ ಹೊಸ ಕಥೆಗಳನ್ನು ಬರೆಯುತ್ತಲೇ ಬಂದರು; ತಮ್ಮ ಸುತ್ತಲಿನ ಸಮಾಜವು ಬೇಸರಗೊಳ್ಳುತ್ತದೆ, ಬೆದರಿಸುತ್ತದೆ ಎಂಬ ಅರಿವಿದ್ದರೂ, ಅವರ ಅಭಿವ್ಯಕ್ತಿಯು ನಿಲ್ಲಲಿಲ್ಲ. ಆದ್ದರಿಂದಲೇ ಕಳೆದ ವಾರ ಅವರು ಇಂಟರ್‌ನ್ಯಾಷನಲ್ ಬೂಕರ್ ಪ್ರಶಸ್ತಿಯನ್ನು, ದೀಪಾ ಬಾಸ್ತಿಯವರೊಂದಿಗೆ ಜಂಟಿಯಾಗಿ ಸ್ವೀಕರಿಸಿದ ಕ್ಷಣವು, ಕನ್ನಡ ಮತ್ತು ಭಾರತೀಯ ಸಾಹಿತ್ಯದ ಸಂದರ್ಭದಲ್ಲಿ ಬಹು ವಿಶೇಷ ಎನಿಸಿದೆ.



ಬಾನು ಕೃತಿಗಳು

- ಹೆಜ್ಜೆ ಮೂಡಿದ ಹಾದಿ
- ಬೆಂಕಿ ಮಳೆ
- ಎದೆಯ ಹಣತೆ
- ಹಸೀನಾ ಮತ್ತು ಇತರ ಕಥೆಗಳು
- ಸಫೀರಾ
- ಇಬ್ಬನಿಯ ಕಾವು
- ಒದ್ದೆ ಕಣ್ಣಿನ ಬಾಗಿನ ಮೊದಲಾದವು

ಬಾನು ಮುಷ್ತಾಕ್ ಅವರ 'ಎದೆಯ ಹಣತೆ'ಯನ್ನು ಸಮರ್ಥವಾಗಿ ಇಂಗ್ಲಿಷ್‌ಗೆ ಅನುವಾದಿಸಿದ ದೀಪಾ ಬಾಸ್ತಿಯವರ ಸಾಧನೆಯೂ ವಿಶೇಷ ಮತ್ತು ಅಭಿನಂದನೀಯ. ಹಾಸನದ ರೀತಿಯೇ, ಬೆಂಗಳೂರಿನಿಂದ ಸಾಕಷ್ಟು ದೂರದಲ್ಲಿರುವ ಮಡಿಕೇರಿಯಲ್ಲಿ ಹುಟ್ಟಿ ಬೆಳೆದ ದೀಪಾ ಬಾಸ್ತಿಯವರು, ಪತ್ರಕರ್ತೆಯಾಗಿಯೂ ಅನುಭವಿ; ಶಿವರಾಮ ಕಾರಂತರ 'ಅದೇ ಊರು ಅದೇ ಮರ' ಕಾದಂಬರಿಯೂ ಸೇರಿದಂತೆ ಹಲವು ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಬಾನು ಮುಷ್ತಾಕ್ ಅವರ ಕೃತಿಗಳನ್ನು ಅವರು ಇಂಗ್ಲಿಷ್‌ಗೆ ಅನುವಾದಿಸಿರುವ ಪರಿ ನಿಜಕ್ಕೂ ಅನನ್ಯ; 2024ರಲ್ಲೂ ಅವರು ತಮ್ಮ ಅನುವಾದಕ್ಕಾಗಿ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. (ಪೆನ್ ಇಂಗ್ಲಿಷ್ ಟ್ರಾನ್ಸ್‌ಲೇಟ್ ಅವಾರ್ಡ್: ಬಾನು ಮುಷ್ತಾಕ್ ಅವರ ಹಸೀನಾ ಮತ್ತು ಇತರ ಕಥೆಗಳು ಅನುವಾದಕ್ಕಾಗಿ). ಜತೆಗೆ, ಈಗ ಇಂಟರ್‌ನ್ಯಾಷನಲ್ ಬೂಕರ್ ಪ್ರಶಸ್ತಿ ಪಡೆದ ಮೊದಲ ಭಾರತೀಯ ಸಾಹಿತಿ (ಅನುವಾದಕಿ) ಎಂಬ ದಾಖಲೆಯನ್ನೂ ಬರೆದಿದ್ದಾರೆ.

ಹಾಸನ ಮತ್ತು ಮಡಿಕೇರಿಯಂತಹ ಪುಟ್ಟ ಪಟ್ಟಣಗಳ ಎರಡು ಸಾಹಿತ್ಯ ಪ್ರತಿಭೆಗಳು, ಇಬ್ಬರೂ ಮಹಿಳೆಯರು, ಇಂಟರ್‌ನ್ಯಾಷನಲ್ ಬೂಕರ್ ಪ್ರಶಸ್ತಿ ಪಡೆದಿರುವ ಈ ಸನ್ನಿವೇಶವು, ಕನ್ನಡ ಸಾಹಿತ್ಯದ ಸತ್ವವನ್ನು ಮತ್ತೊಮ್ಮೆ ಎತ್ತಿರೋರಿದಂತಾಗಿದೆ. ಈ ಪ್ರಶಸ್ತಿಯ ಮೂಲಕ ಕನ್ನಡ ಸಾಹಿತ್ಯವು ಜಗತ್ತಿಗೆ ಪರಿಚಯಗೊಳ್ಳುವುದರ ಜತೆಯಲ್ಲೇ, ಕನ್ನಡದಲ್ಲಿ ಈಗ ಬರೆಯುತ್ತಿರುವ ಎಲ್ಲರಿಗೂ ಹೊಸ ಸ್ಫೂರ್ತಿಯನ್ನು ತುಂಬಿದೆ. ಮತ್ತು, ನಮ್ಮ ಭಾಷೆಯ ಸಾಹಿತ್ಯಕ್ಕೆ ಅಂತಾರಾಷ್ಟ್ರೀಯ ಮಾನ್ಯತೆ ದೊರಕಲು, ಹೇಗೆ ಗುಣಮಟ್ಟದ ಇಂಗ್ಲಿಷ್ ಅನುವಾದವು ಇಂದಿನ ಅಗತ್ಯ ಎಂಬುದನ್ನು ತೋರಿಸಿಕೊಟ್ಟಿದೆ.

ಕನ್ನಡದ ಅಪರೂಪದ ಕಥೆಗಳನ್ನು ಅಂತಾರಾಷ್ಟ್ರೀಯ ಓದುಗರು ಆಸಕ್ತಿಯಿಂದ ಓದುವಂತೆ ಮಾಡಿದ ಬಾನು ಮುಷ್ತಾಕ್ ಮತ್ತು ದೀಪಾ ಬಾಸ್ತಿ ಅವರಿಗೆ ಹಾರ್ದಿಕ ಅಭಿನಂದನೆಗಳು.

ಸಿಕ್ಕಿಂನಲ್ಲಿ ಸಿಕ್ಕಿತೊಂದು ಹೂವಿನ ಕಣಿವೆ!

» ಶ್ರೀಧರ್ ಎಸ್. ಸಿದ್ದಾಪುರ

ಅ ಒಂದು ದಣಪೆ ಆಚೆಗಿನ ದಾರಿ ದಾಟುತ್ತಲೇ ಸಿಕ್ಕಿಂನ ತೀಸ್ತಾ ನದಿ ಮೌನವಾಗಿ ಹರಿಯುತ್ತಾಳೆ. ಎಲ್ಲೆಲ್ಲೂ ಅಡ್ಡಗಟ್ಟಿಸಿಕೊಂಡು ಮನುಜನ ಅಭೀಪ್ಸೆಗೆ ಬಲಿಯಾಗಿ 'ಹರಿ'ಯುತ್ತಾ ಅನೇಕರ ತುತ್ತಿನ ಚೀಲಕ್ಕೂ ದಾರಿಯಾಗಿದ್ದಾಳೆ.

ಸಿಕ್ಕಿಂನ ಲಾಚೆನ್ ಕಣಿವೆಯುದ್ದಕ್ಕೂ ಬೆಳೆವ ಸೊಪ್ಪು ತರಕಾರಿಗಳಲ್ಲಿ ಇವಳದೇ ಪರಿಮಳ. ಸಿಕ್ಕಿಂನಲ್ಲಿ ಹುಟ್ಟಿ ತಾಯಿಯಾದವಳು ಬಂಗಾಲಕ್ಕೆ ಬರುತ್ತಲೇ ಕಾಳಿಯಾಗುತ್ತಾಳೆ. ಇಬ್ಬರಿಗೂ ನದಿಯು ಸೇತುವೆ ಕಟ್ಟಿದೆ. ಇವಳು ಸಿಕ್ಕಿಂನಿಂದ ಬ್ರಹ್ಮ ಪುತ್ರ ನದಿಯನ್ನು ಅಪ್ಪುವವರೆಗಿನ ತನ್ನ ದೀರ್ಘ ಪಯಣದಲ್ಲಿ ಮನುಜರ ಅಪರಿಮಿತ ಅಭೀಪ್ಸೆಗೆ ಕನಿಕರಿಸಿದ್ದಾಳೆ. ಬಂಗಾಲಿಗರಿಗೆ ಬುಟ್ಟಿ ತುಂಬಾ ಮೀನಿತ್ತು ಹರಿಸಿದ್ದಾಳೆ. ತೀಸ್ತಾ ನದಿಯ ಟ್ರೌಟ್ ಮೀನಿನ ರುಚಿ ಅದ್ಭುತ. ಗುಡ್ಡ ಗುಡ್ಡಗಳ ಹನಿಗಳಿಗೂ ಇವಳ ಪ್ರೇಮ. ಲಾಚೆನ್‌ನಿಂದ ಝೀರೋ ಪಾಯಿಂಟ್ ತಲುಪುವವರೆಗಿನ ಇವಳ ಸಂಗಕ್ಕೆ ಸಿಲುಕಿದ ನೂರಾರು ಝರಿಗಳ ಕಥನವು ವಿಭಿನ್ನ. ಬನ್ನಿ 'ಹರಿ' ಕಥೆ ಶುರು ಮಾಡೋಣ!

ಬ್ರಹ್ಮಪುತ್ರ ಸೇರಲು ಓಡುವ ತೀಸ್ತಾ ನದಿ

ಲಾಚೆನ್ ದಾಟುತ್ತಲೇ ಯುಗಾಂಗ್ ಜಲಧಾರೆಯೊಂದು ಅದೆಲ್ಲಿಂದಲೋ ಇದನ್ನು ಕಾಣಲು ಕಾತರತೆಯಿಂದ ಧುಮುಕುತ್ತದೆ. ಕಿವಾ ಎಂಬ ಇನ್ನೊಂದು ಜಲಧಾರೆ ನಾನೆಂಬ ನಾನು ಯಾವುದಕ್ಕೂ ಕಡಿಮೆ ಇಲ್ಲ ಎನ್ನುತ್ತಾ ಬಳುಕುತ್ತಾ ಹೋಗಿ ಬರುವವರಿಗೆಲ್ಲಾ ಟಾಟಾ ಬಾಯ್ ಬಾಯ್ ಮಾಡುತ್ತಿದ್ದಳು. ಪದ್ಯಗಳ ಅಡಿಗಡಿಗೆ ನುಗ್ಗುವ ಪ್ರಾಸದಂತೆ ಪ್ರಯಾಸವಿಲ್ಲದೇ ಗಿರಿ ನೆತ್ತಿಗಳ ಮೇಲಿಂದ ಸುರಿಯುತ್ತಲೇ ಇರುತ್ತದೆ. ಇವರನ್ನೆಲ್ಲಾ ಸೆರಗಿಗೆ ಕಟ್ಟಿಕೊಂಡು ಬ್ರಹ್ಮ ಪುತ್ರದೊಡಲಿಗೆ ಸೇರಲು ತವಕದಿ ಓಡುತ್ತಾಳೆ ತೀಸ್ತಾ.

ರಸ್ತೆ ರಿಪೇರಿಗೆ ನಿಂತ ಕಿನ್ನರರು 'ಎಲ್ಲಿಗೆ ಹೊರಟಿರುವಿರಿ?' ಎಂದು ಸನ್ನೆಯಲ್ಲೇ ಕೇಳುವರು. ಬ್ರೆಡ್ಡು ಕೂಡಿಟ್ಟಂತಹ ಕಲ್ಲು ರಸ್ತೆಯಲ್ಲಿ ಜೀಪು ಜೋಲಿ ಹೊಡೆಯುತ್ತಿತ್ತು. ಕೆಲವು ಕಲ್ಲುಗಳು ನಮ್ಮನ್ನು ಕಾಣಲು ರಸ್ತೆ ಬದಿಗೆ ಬಂದು ನಿಂತಿದ್ದವು! ಪ್ರತೀ ಕುಲುಕಾಟಕ್ಕೂ ಬೆನ್ನು ಹುರಿಯ ಲೆಕ್ಕ ಸಿಗುತ್ತಿತ್ತು. ಹೊಸ ಹಾದಿಯ ಹುಡುಕಾಟದಲ್ಲಿ ಇದೆಲ್ಲಾ ಮಾಮೂಲು ಎಂಬ ಹಸಿ ವೇದಾಂತ. ಇಂತಹ ಪರಿಸ್ಥಿತಿಯಲ್ಲೂ ತಣ್ಣಗೆ ಬದುಕುವ ಇವರ ಪ್ರಶಾಂತತೆಗೆ ದೊಡ್ಡ ಹೊಟ್ಟೆ ಕಿಚ್ಚು.

ಹೂ ಕಣಿವೆಯ ಧ್ಯಾನ

ಅಚಾನಕ್ ಆಗಿ ಆಯ್ದುಕೊಂಡ ಹೊಸ ದಾರಿಯಲ್ಲಿ ಸಿಕ್ಕಿದ್ದು, ಸಿಕ್ಕಿಂನ ಹೂ ಕಣಿವೆಯ ಯುಮ್ ತುಂಗ್ ಕಣಿವೆ ಮತ್ತು ಶಿಂಗ್ ಬಾ ರೆಡೋಡೆಂಡ್ರಾನ್ ಹೂ ಕಣಿವೆ. ಹೂ ಕಣಿವೆ ಸವಿಯಲು ಲಾಚುಂಗ್‌ನಲ್ಲಿ ತಂಗಲೇಬೇಕು! ಬೆಟ್ಟಕ್ಕೆ ಕಾವಲು ನಿಂತ ಇಂಡೋ ಟಿಬೇಟಿಯನ್ ಬೆಟಾಲಿನ್. ನಾರಿ ಕೊರಳ ಹಾರದಂತೆ ಊರ ಹೆಬ್ಬಾಗಿಲಿನಲ್ಲಿ ಬೆಟ್ಟವೊಂದಕ್ಕೆ ನಾಚಿಕೆ ಇಲ್ಲದೇ ಜಲಪಾತವೊಂದು ಜೋತುಬಿದ್ದಿತ್ತು. ಓಂ ಮಣಿ ಪದ್ಮೇ ನಮಃ ಹೀಗೆ ಸ್ಥಳೀಯ ಭಾಷೆಯಲ್ಲಿನ 'ಬೌದ್ಧ ಧ್ವಜ' ತೂಗುಹಾಕಲಾಗಿತ್ತು. ಊರ ಮಹನೀಯರಲ್ಲಿ ಹೆಸರ ಕೇಳಿದರೆ ನೀವೇ ಒಂದು ನಾಮಕರಣ ಮಾಡಿಕೊಳ್ಳಿ ಎಂದು ನಿರ್ಲಿಪ್ತರಾದರು.

ಊರ ಬೀದಿಯಲ್ಲಿ ಲಾಚುಂಗ್ ನದಿಯ ಹಿಮ್ಮೇಳ. ಹೊಟ್ಟೆ ಹಸಿದುದರಿಂದ ಬಜ್ಜಿ ಅಂಗಡಿಗೆ ಅಡಿ ಇಟ್ಟೆವು. ನೀರ ಕಣದೊಂದಿಗೆ ಬೆರೆತ ನದಿಯ ಹಿಮ್ಮೇಳ. ಸಂತೃಪ್ತ ಜನ. ಊರು ತಿಳಿಯಲು ನಾಲ್ಕು ಸುತ್ತು ಬಂದೆವು. ಎರಡು ಹಾಡಿ ನಷ್ಟೇ ದೂರದ ಪುಟಾಣಿ ಊರು. ಊರಿನ ಪೂರ್ವ ತುದಿಯಲ್ಲಿ ನಮಗೆ ತಂಗಲು ವ್ಯವಸ್ಥೆಯಾಗಿತ್ತು. ಜವೆ ಗೋಧಿ, ಬಾರ್ಲಿ, ಹೂ ಕೋಸು, ಆಲೂಗಡ್ಡೆಯ ತೋಟದ ನಡುವೆ ನಮಗೆ ರೂಂ ನೀಡಲಾಗಿತ್ತು. ಕರಿ ಮಣ್ಣಿನ ತೋಟದಲಿ ಹೂಕೋಸು ನಲಿಯುತ್ತಿತ್ತು. ಕೈ ಎಟುಕಿದರೆ ಹೂ ಕೋಸು.

ಧ್ಯಾನ ಮಾಡುವ ಊರು

ಧ್ಯಾನಕ್ಕೆ, ಆಧ್ಯಾತ್ಮಕ್ಕೆ ಹೇಳಿ ಮಾಡಿಸಿದ ಊರು ಇದು. ಇಲ್ಲಿಂದ ಶಿಂಗ್‌ಬಾ ಹೂ ಕಣಿವೆಗೆ ಬರೀ 23 ಕಿ.ಮೀ. ಸಂಜೆಯ ರಗ್ ಬಿಚ್ಚುತ್ತಲೇ ಚಳಿ ಅಮರಿಕೊಂಡಿತು. ಊರ ತುದಿಯಲ್ಲೊಂದು ತೊರೆ. ತೊರೆಗೆ ಕಾಲು ಬಿಟ್ಟು ಬೆಟ್ಟವೊಂದು ನಿಂತಿತ್ತು. ಬೆಟ್ಟದ ನೆತ್ತಿಯಲಿ ಐಸ್ ಕ್ರೀಂ ಟೋಪಿ. ಅದರ ಬುಡವ ಕಡಿದು ಅಲೆ ಅಲೆಯಾಗಿ ಗದ್ದೆ ನಿರ್ಮಿಸಿದ್ದರು. ಕೆಲವು ಗದ್ದೆಗಳ ಅಂಚಿನಲ್ಲಿ ಹೋಂ ಸ್ಟೇ ತಲೆ ಎತ್ತಿದ್ದವು; ಅಂತಹ ಒಂದು ತಾಣದಲ್ಲಿ ಆ ದಿನದ ನಮ್ಮ ವಸತಿ.

ಬೆಳ್ಳಂ ಬೆಳಗ್ಗೆ ಹೂ ಕಣಿವೆಯತ್ತ

ಮಗುಚಿ ಬಿದ್ದ ಶಿಂಗ್‌ಬಾ ರೆಡೋ ಡೆಂಡ್ರಾನ್ ಸ್ಯಾಂಚುರಿಯ ದಾರಿಯಲಿ ಸರ್ಕಸ್ ಮಾಡುತ್ತಾ ನಮ್ಮ ರಥವೇರಿ ಹೊರಟಾಗ ಮನದ ಕದ ತೆರೆದಂತೆ ಬೆಟ್ಟಗಳ ಕದವನ್ನು ಯಾರೋ ತೆರೆದಿಟ್ಟಂತೆ, ತಾಜಾ ಮಾವಿನ ರುಚಿಯಂತೆ, ತಾಜಾ ಕವಿತೆಯಂತೆ ಹೊಸ ಲೋಕವೊಂದು ತೆರೆದುಕೊಂಡಿತು. ದೂರದಿಂದ ಬಂದ ನಮ್ಮನ್ನು ಕಾಣಲು ನೂರಾರು ಕಲ್ಲುಗಳು ಕೈಯಲ್ಲಿ ಕಳಶವಿಲ್ಲದೇ ರಸ್ತೆ ಗುಂಟ ನೆರೆದಿದ್ದವು! ಅಮರೀಶ ಪುರಿಯ ಗಡ್ಡದಂತಹ ರಸ್ತೆ. ರಸ್ತೆಯಿಂದ ಅನತಿ ದೂರದಲ್ಲಿ ಹರಿವ ತಿಳಿ ಹಸಿರ ಲಾಚುಂಗ್ ನದಿ; ಹಳ್ಳಿಗರ ಬಾಯಲ್ಲಿ ಅದು ತೀಸ್ತಾ. ಲಾಚುಂಗ್ ದಾಟುತ್ತ ಸ್ವಲ್ಪ ದೂರದಲ್ಲೇ ಶಿಂಗ್‌ಬಾ ರೆಡೋಡೆಂಡ್ರಾನ್ ಹೂ ಕಣಿವೆ.

ಸ್ವಾಗತಿಸಲು ನಿಂತಂತೆ ಕಾಣುವ ಸಾಲು ಸಾಲು ಡೆಂಡ್ರಾನ್ ಮರ. ಪ್ರತಿ ಮರದಲ್ಲೂ ಅರಳಿ ನಿಂತ ನೂರಾರು ಡೆಂಡ್ರಾನ್ ಪುಷ್ಪಗಳು. ಕ್ರಿಸ್ ಮಸ್ ಮರಕ್ಕೆ ಶೃಂಗರಿಸಿದಂತೆ ಕೆಂಪು, ತಿಳಿ ಅರಶಿನ, ನೇರಳೆ ಹೂ ಶೃಂಗಾರ. ತಣ್ಣಗೆ ಹಸಿರಾಗಿ ಹರಿವ ನದಿ. ಮನಸೋ ಇಚ್ಚೆ ಹಿಮದಲ್ಲಿ ಆಡಬಹುದು. ಡೆಂಡ್ರಾನ್ ಹೂಗಳಿಗೆ ಮುತ್ತಿಕ್ಕಿ ಮುಂದಡಿ ಇಟ್ಟೆವು. ವಸಂತ ಕಾಲಿಡುತ್ತಿದ್ದಂತೆ ಯಾಕ್‌ಗಳನ್ನು ಇಲ್ಲಿ ಮೇಯಿಸಲಾಗುತ್ತದೆ. ವಸಂತವಿಡಿ ಕಣಿವೆಯಲ್ಲಿ ಮೆಂದು ಮಳೆಗಾಲಕ್ಕೆ ಮತ್ತೆ ಮರಳು ತ್ತವೆ. ಸ್ಥಳೀಯರು ತಮ್ಮ ಗೂಡಿಗೆ ಅವನ್ನು ಕರೆತರುತ್ತಾರೆ. ಐರಿಸ್, ಪ್ರಿಮುಲಾಸ್, ಪೊಪ್ಪಿಸ್ ಗಿಡಗಳನ್ನು ಬೀಜ ಸಮೇತ ವಾಗಿ ತಿಂದು ಗೊಬ್ಬರ ದಾನ ಮಾಡುತ್ತವೆ. ಮರು ವರುಷ ಹಿಮ ಕರಗಿದಂತೆ ಒಂದೊಂದಾಗಿ ಮತ್ತೆ ಚಿಗುರಿ ಹೂ ಅರಳಿ ಸುತ್ತದೆ. ಶಿಂಗ್‌ಬಾ ರೆಡೋ ಡೆಂಡ್ರಾನ್ ಸ್ಯಾಂಚುರಿ ಮದುವಣ ಗಿತ್ತಿಯಂತೆ ಮತ್ತೆ ತೋರುತ್ತದೆ; ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತದೆ.

> ಬೆಟ್ಟಕ್ಕೂ ಬಯಲಿಗೂ ಸೇತುವೆಯಾದ ನದಿ, ಬಯಲ ಕನಸು ಹೊತ್ತು ತಣ್ಣಗೆ ಹರಿಯುತ್ತಿತ್ತು. ಪಾಪ, ಆ ನದಿಗೆ ಅದೇನೋ ಧಾವಂತ. ನಾವು ಬೆಟ್ಟ ಅರಸಿ ಬಂದಿದ್ದೆವು; ಆದ್ದರಿಂದ ನಮಗ್ಯಾವ ಧಾವಂತವೂ ಇರಲಿಲ್ಲ. ಬಯಲಿನ ಬದುಕು ಹಸನಾಗಲು ಬೆಟ್ಟ ಹಿಮ ಹೊರಬೇಕು ಮತ್ತು ಸದಾ ಕರಗುತ್ತಲೇ ಇರಬೇಕು. ಯಾವುದನ್ನೋ ಸಲಹಲು ಇನ್ನಾವುದನ್ನೋ ಕರಗಿಸುವ ಗಾರುಡಿಗ ಈ ಪ್ರಕೃತಿ. ಈ ಎಲ್ಲಾ ಪ್ರಕೃತಿಯ ವಿಸ್ಮಯದಿಂದ ಝೀರೋ ಪಾಯಿಂಟ್ ಕೆಲವೇ ಕಿಲೋ ಮೀಟರ್, ಅಲ್ಲಿ ರಾಶಿ ರಾಶಿಯಾಗಿ ಬಿದ್ದಿತ್ತು ಬಿಳಿ ಬಣ್ಣದ ಹಿಮ! ಎಲ್ಲೆಲ್ಲೂ ಹಿಮ!

ಸದಾ ತಣ್ಣಗಿರುವ ಹಿಮ ಪಾತ್ರೆಯಂತಹ ಹಲವು ಹೆಕ್ಟೇರ್ ಜಾಗವನ್ನು 'ಶಿಂಗ್‌ಬಾ ರೆಡೋ ಡೆಂಡ್ರಾನ್' ಸ್ಯಾಂಚರಿ ಎಂದು ನಾಮಕರಿಸಿದ್ದಾರೆ. ಆದರೆ ಯಾವುದೇ ಹೆಸರಿನ ಹಂಗಿಲ್ಲದ ನೂರಾರೂ ಹೂಗಳು ಕಣಿವೆಯುದ್ದಕ್ಕೂ ಅರಳಿ ಸ್ವಾಗತಕ್ಕೆ ನಿಂತಿದ್ದವು. ಭಾರತದ ಒಂದು ವಿಶಿಷ್ಟ ಸ್ಯಾಂಚುರಿಯಲ್ಲಿ ನಾವಿದ್ದೆವು. ಎಪ್ರಿಲ್ ತಿಂಗಳು ಇಲ್ಲಿಗೆ ಭೇಟಿಕೊಡಲು ಪ್ರಶಸ್ತ. ಹಿಮಾಲಯದ ತಪ್ಪಲಿನಲಿ ಕೆಂಪು ರೆಡೋ ಡೆಂಡ್ರಾನ್ ಹೂಗಳು ಸಾಮಾನ್ಯ ಮತ್ತು ಸರ್ವಾಂತರಯಾಮಿ. ಆದರಿಲ್ಲಿ ನೀವು 24 ಬಗೆಯ ರೆಡೋ ಡೆಂಡ್ರಾನ್ ಹೂಗಳಿಗೆ ಸಾಕ್ಷ್ಯವಾಗಬಹುದು. ಪ್ರತಿ ಹೂವು ವಿಶಿಷ್ಟ. ಜೊತೆಗೆ ಲಾಚುಂಗ್‌ನಿಂದ 23 ಕಿ.ಮೀ. ದೂರವಿರುವ ಝೀರೋ ಪಾಯಿಂಟ್‌ಗೆ ಹೋಗಿ

ಬಿಸಿನೀರಿನ ಬುಗ್ಗೆಗಳು

ಶಿಂಗ್‌ಬಾ ರೆಡೋ ಡೆಂಡ್ರಾನ್ ಸ್ಯಾಂಚುರಿಯ ಸನಿಹದಲ್ಲೇ ಇರುವ ಇನ್ನೊಂದು ಸ್ಥಳ ಹಾಟ್ ಸ್ಪ್ರಿಂಗ್ ಅಥವಾ ಬಿಸಿನೀರಿನ ಬುಗ್ಗೆಗಳು. ಇಲ್ಲಿನ ಬೆಟ್ಟಗಳು ಸಡಿಲ ಮಣ್ಣಿನ ಬೆಟ್ಟಗಳು. ಅಲ್ಲಲ್ಲಿ ಬಾಯ್ದೆರೆದು ಬಿಸಿ ನೀರಿನ ಬುಗ್ಗೆಗಳ ಉಗುಳುತ್ತವೆ. ಒಡಲೊಳಗಿನ ರಾಸಾಯನಿಕಗಳನ್ನೆಲ್ಲಾ ಕರಗಿಸಿಕೊಂಡು, ಬಿಸಿ ನೀರನ್ನು ಮೇಲಕ್ಕೆ ಚಿಮ್ಮುತ್ತದೆ. ಹೆಚ್ಚಿನವುಗಳಲ್ಲಿ ಗಂಧಕದ ಪರಿಮಳ. ಹೂ ಕಣಿವೆಯ ದಾಟುತ್ತಿದ್ದಂತೆ ಬೃಹತ್ ಬೆಟ್ಟದ ಬುಡದಲ್ಲೊಂದು ಬಿಸಿ ನೀರಿನ ಬುಗ್ಗೆ. ಬುಗ್ಗೆಯ ಬಿಸಿ ನೀರನ್ನು ತೊಟ್ಟಿಯೊಂದಕ್ಕೆ ಹಾಯಿಸಿ ತಣ್ಣೀರನ್ನೂ ಮಿಶ್ರ ಮಾಡಿ ನೀರ ತಾಪವನ್ನು ಕಡಿಮೆ ಗೊಳಿಸಿದ್ದರು; ಸ್ನಾನ ಮಾಡುವುದಾದರೆ ಮಾಡಿ ಎಂಬ ಇಂಗಿತ. ಆದರೆ ಆ ತೊಟ್ಟಿಯಲ್ಲಿದ್ದ ಕೊಳಕನ್ನು ನೋಡಿ ಅಸಹ್ಯವೆನಿಸಿ ಹಾಗೇ ಬಂದೆವು. ನೀರು ಸಹಾ ವಿಪರೀತ ಬಿಸಿಯಿತ್ತು.

ಪಂಜಾಬಿ ಕುಟುಂಬವೊಂದು ಬಂದು ಬುಗ್ಗೆಯ ನೀರನ್ನು ಮೆಲಕ್ಕೆ ಚಿಮ್ಮಿಸಿದರು. ಮೌನದ ಬಗ್ಗೆ ಮತ್ತು ಸಾರ್ವಜನಿಕ ನಡೆವಳಿಕೆಯ ಕುರಿತು ವಿವರಿಸಿ ಹೇಳುವುದು ವ್ಯರ್ಥ ಎಂದು ಒಂದೂ ಮಾತನಾಡದೆ ಸುಮ್ಮನೆ ಬಂದೆ. ಸಾರ್ವಜನಿಕ ಸ್ಥಳಗಳಲ್ಲಿ ಹೇಗೆ ವರ್ತಿಸಬೇಕೆಂಬ ಮೂಲಪಾಠವನು ಇವರಿಗೆ ಕಲಿಸುವವರು ಯಾರು? ದಾಂದಲೆಗೆ ಕಿವುಡಾಗಿ ಯುಮ್ತಾಂಗ್ ಕಣಿವೆಯ ಸೌಂದರ್ಯವನು ಸವಿಯುತ್ತಾ ಕುಳಿತೆ. ಅಮ್ಮನ ನೀಲಿ ಸೆರಗಿನಂತೆ ತಿಳಿ ಹಸಿರಾಗಿ ಲಾಚುಂಗ್ ನದಿ ಹರಿಯುತ್ತಲೇ ಇತ್ತು. ದೂರದ ಝೀರೋ ಪಾಯಿಂಟ್‌ನಲ್ಲಿ ಹಿಮ ಹೊದ್ದ ಬೆಟ್ಟಗಳು ಕಣಿವೆಗೆ ನೀರುಣಿಸುವ ಬೆಟ್ಟದ ಮಹಾ ಅಲೆಗಳಂತೆ ಕಂಡವು.

ಜೋಳಿಗೆಯಲ್ಲಿ ಅಡಗಿದ್ದ ನಾಲ್ಕು ರೆಡೋಡೆಂಡ್ರಾನ್ ಹೂಗಳು ಕಿವಿ ಏರಿ ಖುಷಿ ಪಟ್ಟವು. ಕೆಲವನ್ನು ಚಟ್ನಿ ಮಾಡುವ ಆಸೆಯಿಂದಲೂ ತೆಗೆದುಕೊಂಡೆ. ಕಾಡಿಗೆ ಬೆಂಕಿ ಬಿದ್ದಂತೆ ಗಿರಿಯ ನೆತ್ತಿ ತುಂಬಾ ಡೆಂಡ್ರಾನ್ ಹೂಗಳ ರಾಶಿ ರಾಶಿ. ತುದಿಯಿಂದ ತುದಿಗೆ ಜೋಕಾಲಿಯಂತೆ ನೇತುಬಿದ್ದ ತೂಗು ಸೇತುವೆಯಲಿ ನಿಂತು ಪ್ರಕೃತಿಯಲಿ ಕರಗಿದೆವು. ಬೆಟ್ಟಕ್ಕೂ ಬಯಲಿಗೂ ಸೇತುವೆಯಾದ ನದಿ, ಬಯಲ ಕನಸು ಹೊತ್ತು ತಣ್ಣಗೆ ಹರಿಯುತ್ತಿತ್ತು. ಪಾಪ, ಆ ನದಿಗೆ ಅದೇನೋ ಧಾವಂತ. ನಾವು ಬೆಟ್ಟ ಅರಸಿ ಬಂದಿದ್ದೆವು; ನಮಗ್ಯಾವ ಧಾವಂತವೂ ಇರಲಿಲ್ಲ.

ಬಯಲಿನ ಬದುಕು ಹಸನಾಗಲು ಬೆಟ್ಟ ಹಿಮ ಹೊರಬೇಕು ಮತ್ತು ಸದಾ ಕರಗುತ್ತಲೇ ಇರಬೇಕು. ಯಾವುದನ್ನೋ ಸಲಹಲು ಇನ್ನಾವುದನ್ನೋ ಕರಗಿಸುವ ಗಾರುಡಿಗ ಈ ಪ್ರಕೃತಿ. ಈ ಎಲ್ಲಾ ಪ್ರಕೃತಿಯ ವಿಸ್ಮಯದಿಂದ ಝೀರೋ ಪಾಯಿಂಟ್ ಕೆಲವೇ ಕಿಲೋ ಮೀಟರ್.

ಹೊಟ್ಟೆ ತನ್ನ ಏಕತಾಳ ಶುರುವಿಟ್ಟುಕೊಂಡಿತು. 46 ನೆಯ ನಂಬರಿನ ಅಂಗಡಿಗೆ ನುಗ್ಗಿದೆವು. ಯಾವನೋ ಒಬ್ಬ ಯಾಕ್‌ನ ಮಾಂಸ ಹದ ಮಾಡುತ್ತಾ ಕುಳಿತಿದ್ದ. ದೂರದಲ್ಲಿ ಹಸನ್ಮುಖಿ ಅಜ್ಜಿಯೊಬ್ಬಳು ಶಾಖಹಾರಿ ತುಪ್ಕಾ ತಯಾರಿಯಲ್ಲಿದ್ದಳು. ನಾವು ಅನುಮಾನಿಸತೊಡಗಿದೆವು. 'ಇದು ಶುದ್ಧ ಶಾಖಹಾರಿ' ಎಂದು ಮತ್ತೊಮ್ಮೆ ಒತ್ತಿ ಹೇಳಿದಳು. ನಾವು ಆರ್ಡರಿಸಿ ಸಿಕ್ಕಿಂನ ಸ್ಪೆಷಲ್ ತುಪ್ಕಾ ಸವಿದೆವು. ಹೊಟ್ಟೆ ಮತ್ತು ಮನಸ್ಸನ್ನು ತಣಿಸಿತು.

ಇಂತಹ ಅವಿಸ್ಮರಣೀಯ ವಿಸ್ಮಯಗಳಿಗೆ ಸಾಕ್ಷಿಯಾಗಿ ಬಂದು ಹಲವು ದಿನಗಳೇ ಕಳೆದರೂ, ಲಾಚುಂಗ್ ನದಿಯ ಬೋರ್ಗರೆತದೊಂದಿಗೆ ಬೆರೆತ ರೆಡೊ ಡೆಂಡ್ರಾನ ಹೂವ ಗಂಧವಿನ್ನು ನನ್ನ ನಾಸಿಕಾಗ್ರದಲ್ಲೇ ಇದೆ. ಇವುಗಳ ಪರಿಮಳಕ್ಕೆ ಸಾಕ್ಷಿಯಾಗಲು ತೀಸ್ತಾ ನದಿಯ ಜುಳು ಜುಳುಗೆ ಕಿವಿಯಾಗಲು ನೀವು ಯಾವಾಗ ಬರುವಿರಿ?

ಪುಸ್ತಕ ವಿಮಾನ

ಒಂದು ಮಹತ್ವದ ಮಹಾಪ್ರಬಂಧ

» ಪ್ರೊ. ಜಿ. ಎನ್. ಉಪಾಧ್ಯ. ಮುಂಬೈ

ರಾಮಾಯಣ ಹಾಗೂ ಮಹಾಭಾರತ ಇವೆರಡೂ ಭಾರತೀಯರ ಭಾವಕೋಶದಲ್ಲಿ ಸೇರಿ ಹೋಗಿರುವ ಉತ್ಕೃಷ್ಟ ಮಹಾ ಕಾವ್ಯಗಳು. ವ್ಯಾಸ ಮುನಿ ವಿರಚಿತ ಮಹಾಭಾರತವನ್ನು ಇಪ್ಪತ್ತನೆಯ ಶತಮಾನದಲ್ಲಿ ನವನವೀನ ರೀತಿಯಲ್ಲಿ ಎರಕ ಹೊಯ್ದು ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಹೊಸ ಆಯಾಮವನ್ನು ನೀಡಿದವರು ಎಸ್. ಎಲ್. ಭೈರಪ್ಪ. ಅವರ 'ಪರ್ವ' ಒಂದು ಅಭಿಜಾತ ಕಾದಂಬರಿ. ಭಾರತದ ಬೇರೆ ಬೇರೆ ಭಾಷೆಗಳಲ್ಲಿ ಬೆಳಕು ಕಂಡ ಶ್ರೇಷ್ಠ ಕಾದಂಬರಿಗಳನ್ನು ಪಟ್ಟಿ ಮಾಡುವಾಗ ಪರ್ವ ಕೃತಿ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ. ವಾಲ್ಮೀಕಿ ರಾಮಾಯಣ ನಮ್ಮ ದೇಶದ ಆದಿ ಕಾವ್ಯ ಎಂದೇ ಜನಮಾನ್ಯವಾದ ಮಹಾಕೃತಿ. ರಾಮಾಯಣ ರಚನೆಯಾಗಿ ಎಷ್ಟೋ ಶತಮಾನಗಳ ಬಳಿಕ ಇಪ್ಪತ್ತೊಂದನೆಯ ಶತಮಾನದಲ್ಲಿ ಭೈರಪ್ಪ ಅವರು ಅದನ್ನು ಪುನರ್ ಸೃಷ್ಟಿಸಿ 'ಉತ್ತರಕಾಂಡ' ಎಂದು ನಾಮಕರಣ ಮಾಡಿದ್ದಾರೆ.

ಭೈರಪ್ಪ ಅವರ ಪರ್ವ ಹಾಗೂ ಉತ್ತರಕಾಂಡ ಕಾದಂಬರಿಗಳ ನಾನಾ ಆಯಾಮಗಳನ್ನು ಅಧ್ಯಯನ ಮಾಡಿ ಬಹು ಮಹತ್ವದ ಉದ್ಗ್ರಂಥವನ್ನು ರಚಿಸಿದ ಹೆಗ್ಗಳಿಕೆ ಡಾ. ಉಮಾ ರಾಮರಾವ್ ಅವರದು. ಡಾ. ಭೈರಪ್ಪ ಅವರ ಈ ಉಭಯ ಕಾದಂಬರಿಗಳ ತುಲನಾತ್ಮಕ ವಿಶ್ಲೇಷಣೆಯ ಜತೆ ಜತೆಗೆ ಅವುಗಳ ಆಳ, ಅಗಲ, ವೈಭವ, ಆಶಯ, ಆಕೃತಿ, ರಸಸ್ಥಾನಗಳನ್ನು ಸಾಕ್ಷಾತ್ಕರಿಸಿ ಕೊಳ್ಳುವ ಘನ ಪ್ರಯತ್ನವಿಲ್ಲಿ ಚೆನ್ನಾಗಿ ನೆರವೇರಿದೆ. ಭಾರತೀಯ ಸಾಹಿತ್ಯದ ಜೀವಾಳವಾಗಿರುವ ರಾಮಾಯಣ ಮತ್ತು ಮಹಾಭಾರತಗಳನ್ನು ಆಧರಿಸಿ ರಚಿತವಾಗಿರುವ ಆದರೆ ಮೂಲಕ್ಕಿಂತಲೂ ಬಹಳ ಭಿನ್ನವಾಗಿರುವ ಹೊಸ ರೂಪವನ್ನು ಧರಿಸಿ ನಿಂತಿರುವ 'ಉತ್ತರಕಾಂಡ' ಮತ್ತು 'ಪರ್ವ' ಇವುಗಳ ಅಧ್ಯಯನ ನಿಜವಾಗಲೂ ಒಂದು ಮಹಾನ್ ಸಾಹಸವೇ ಸರಿ. ಇದನ್ನು ಅತ್ಯಂತ ಯಶಸ್ವಿಯಾಗಿ ಇಲ್ಲಿ ನಿಭಾಯಿಸಲಾಗಿರುವುದು ಮೆಚ್ಚುವಂತಹದು. ಸಾಂದ್ರ ಆಲೋಚನೆಯ, ವಿಮರ್ಶೆಯ ಒಂದು ಅತ್ಯುತ್ತಮ ಮಹಾಪ್ರಬಂಧ ಇದಾಗಿದೆ.

'ಪರ್ವ'ವನ್ನು ಬರೆದ ನಾಲ್ಕು ದಶಕಗಳ ಸಾಹಿತ್ಯಕ ಪ್ರಯಾಣದಲ್ಲಿ ಭೈರಪ್ಪ ಅವರು ಅರಗಿಸಿಕೊಂಡಿದ್ದ ವಿಚಾರಗಳು, ತತ್ವಗಳು ಕಲ್ಪನೆಗಳು ಸುಪ್ತವಾಗಿ ಅವರ ಮನಸಿನಲ್ಲಿ ಹುದುಗಿದ್ದು ಅದು 'ಉತ್ತರ ಕಾಂಡ' ರಚನೆಯಲ್ಲಿ ಹೇಗೆಲ್ಲ ವಿಕಸಿತಗೊಂಡಿದೆ ಎಂಬುದನ್ನು ಸಾಧಾರವಾಗಿ ವಿಶ್ಲೇಷಿಸಿರುವುದು ಈ ಕೃತಿಯ ಬಲ್ಮೆ. ಈ ಎರಡೂ ಕಾದಂಬರಿಗಳು ಉತ್ತಮ ಕಲಾಕೃತಿಗಳಾಗಿ ಕಾಲದ ಪರೀಕ್ಷೆಯಲ್ಲಿ ಗೆದ್ದಿರುವ ಬಗೆಯನ್ನು ಇಲ್ಲಿ ಲೋಕಮುಖಕ್ಕೆ ತೋರಿಸಿಕೊಡಲಾಗಿದೆ.

ನಲ್ವತ್ತು ವರ್ಷಗಳ ನಂತರ

ಉತ್ತರಕಾಂಡ ಹಾಗೂ ಪರ್ವ ಕಾದಂಬರಿಗಳನ್ನು ಮೂಲ ಆಕರಗಳಾದ ರಾಮಾಯಣ ಮತ್ತು ಮಹಾಭಾರತಗಳೊಡನೆ ತುಲನೆ ಮಾಡುತ್ತಲೇ ಅಲ್ಲಿನ ಕಥನತಂತ್ರ, ಶೈಲಿ, ಪಾತ್ರಚಿತ್ರಣ, ಸನ್ನಿವೇಶ ನಿರ್ಮಾಣ, ಅಲ್ಲಿನ ಸಾಮ್ಯ, ವೈಷಮ್ಯಗಳನ್ನು ಬಹುಶಿಸ್ತುಗಳ ಹಿನ್ನೆಲೆಯಲ್ಲಿ ಬೆಳಕಿಗೆ ಹಿಡಿದಿರುವುದು ಈ ಕೃತಿಯ ಹೆಚ್ಚುಗಾರಿಕೆ. 'ಪರ್ವ'ವನ್ನು ಬರೆದ ನಲ್ವತ್ತು ವರ್ಷಗಳ ನಂತರ ಭೈರಪ್ಪನವರು 'ಉತ್ತರಕಾಂಡ'ವನ್ನು ಬರೆದಿದ್ದಾರೆ. ಇದೊಂದು ಸುದೀರ್ಘವಾದ ಅವಧಿ. ಮೇಧಾವಿಯೂ, ಸೂಕ್ಷ್ಮಸಂವೇದಿಯೂ, ತೆರೆದ ಮನಸ್ಸುಳ್ಳವನೂ ಆದ ವ್ಯಕ್ತಿಯು ಅಧ್ಯಯನಶೀಲನೂ ಆದರೆ ಆತನ ಬುದ್ಧಿ ಮನಸ್ಸುಗಳು ಸಂಪೂರ್ಣವಾಗಿ ಮಾಗುವುದಕ್ಕೆ ಸಹಕಾರಿಯಾಗುವಂತಹ ಅವಧಿಯಿದು. ಸಾಹಿತಿಯಾಗಿ ಸೃಜನಶೀಲತೆಯೇ ಭೈರಪ್ಪನವರ ಮೂಲ ಅಸ್ಮಿತೆಯೆನ್ನುವುದು ಸತ್ಯ, ಜೊತೆಗೇ ಅವರ ಅಧ್ಯಯನ ಜೀವನಾನುಭವಗಳು ಅವರಿಗೆ ದೊರಕಿಸಿಕೊಟ್ಟಿರುವ ತತ್ತ್ವಶಾಸ್ತ್ರಜ್ಞನ ಅಸ್ಮಿತೆಯನ್ನು ಹೊರತುಪಡಿಸಿ ಅದರ ವ್ಯಕ್ತಿತ್ವವಿಲ್ಲ ಎನ್ನುವುದೂ ಅಷ್ಟೇ ಸತ್ಯ. ಸೀತೆಯ ಕಥೆಯಾಗಿರುವ 'ಉತ್ತರಕಾಂಡ'ದಲ್ಲಿ ಸೀತೆಯ ವ್ಯಕ್ತಿತ್ವವು ಮಾಗುವುದನ್ನು ಭಾರತೀಯದರ್ಶನದ ಹಿನ್ನೆಲೆಯಲ್ಲಿ ಚಿತ್ರಿಸಿಯೂ ಕಾದಂಬರಿಯು ಶುಷ್ಕ ಸಿದ್ಧಾಂತದ ನೀರಸ ವರದಿಯಾಗದೇ ಕಲಾತ್ಮಕವಾಗಿ ವಿಜೃಂಭಿಸುವಂತೆ ಮಾಡಿರುವುದೇ ಭೈರಪ್ಪನವರು ಇಲ್ಲಿ ಸಾಧಿಸಿರುವ ಸಾಹಿತ್ಯಕ ಯಶಸ್ಸು ಎಂಬುದನ್ನು ಮುನ್ನೆಲೆಗೆ ತಂದು ಚರ್ಚಿಸಿರುವುದು ಔಚಿತ್ಯಪೂರ್ಣ ಉಪಕ್ರಮ.

ಬಹು ನೆಲೆಗಳ ಬೆರಗು
ಲೇ: ಡಾ. ಉಮಾ ರಾಮರಾವ್
ಪ್ರ:ಸಾಹಿತ್ಯ ಭಂಡಾರ, ಬೆಂಗಳೂರು
ಬೆಲೆ : ರು.540/-

ನಮ್ಮ ದೇಶದ ಎರಡು ಮಹಾಕಾವ್ಯಗಳ ಕಥನವನ್ನೇ ಆಧರಿಸಿ ರೂಪುಗೊಂಡ ಎರಡು ಕಾದಂಬರಿಗಳ ವಿಶ್ಲೇಷಣೆಯನ್ನು ಈ ಪುಸ್ತಕದಲ್ಲಿ ಮಾಡಿರುವ ಪರಿ ಅನನ್ಯ.

'ಉತ್ತರಕಾಂಡ'ವೂ ವಾಲ್ಮೀಕಿರಾಮಾಯಣದ ಪುನಸ್ಸೃಷ್ಟಿಯೇ. ಪಿತೃವಾಕ್ಯ ಪರಿಪಾಲಕನಾದ ಧೀರೋದಾತ್ತ ರಾಮನು ರಾವಣನನ್ನು ಕೊಂದು ತನ್ನ ಮಡದಿಯೊಡನೆ ವನವಾಸವನ್ನು ಮುಗಿಸಿ ಪಟ್ಟಾಭಿಷಿಕ್ತನಾಗಿ ನಂತರ ಪ್ರಜಾಸಮ್ಮತಿಯನ್ನು ಗಳಿಸಲು ತನ್ನ ಪರಮಪ್ರೀತಿಯ ಪತ್ನಿಯಿಂದ ಎರಡನೆಯ ಬಾರಿಗೆ ದೂರಾಗುವ ಕಥೆಯೇ. ಆದರೆ ಪತಿಯಿಂದ ಪರಿತ್ಯಕ್ತಳಾಗಿ, ಬಸುರಿನ ಭಾರದಿಂದ ಬಳಲಿ, ಅವಳಿಗಳನ್ನು ಹೆತ್ತು, ಏಕಪೋಷಕಳಾಗಿ ಅವರನ್ನು ಬೆಳೆಸುವ ಸೀತೆಯ ಒಳಗುದಿ ಎಷ್ಟು ತೀವ್ರವಾದುದೆನ್ನುವುದನ್ನು ಹೃದ್ಯವಾಗಿ ಅಭಿವ್ಯಕ್ತಿಸುವ ಕಥೆ. ಸೀತಾರಾಮನು ಹಂತಹಂತವಾಗಿ ಮಾರ್ಪಾಡಾಗುತ್ತಾ ರಾಜಾರಾಮನಾಗಿಬಿಡುವ ಸೀತೆಯ ಜೀವನದ ದುರಂತವನ್ನು ಅವಳದೇ ಮಾತುಗಳಲ್ಲಿ ಬಿಚ್ಚಿರಿಸುವ ಕಥೆ. ಅತಿಮಾನುಷತೆಯ ಆವರಣವು ಇಲ್ಲಿಯೂ ಭೇದಿತವಾಗಿದೆ. ನೈಜತೆ ಮತ್ತು ಸಂಭಾವ್ಯತೆಗಳ ಎರಡು ಗಟ್ಟಿಯಾದ ದಡಗಳ ನಡುವೆಯೇ ಉತ್ತರಕಾಂಡದ ಕಥಾವಾಹಿನಿಯು ಪ್ರವಹಿಸುತ್ತದೆ.ಮಿಥಕಗಳನ್ನು ಪವಾಡಗಳನ್ನು ನಿವಾರಿಸಿ ಕೊಂಡು ಅವು ಪ್ರತೀಕಗಳು ಎನ್ನುವ ನೆಲೆಯಲ್ಲಿ ಜೀವನದ ಅನ್ವೇಷಣೆಯಲ್ಲಿ ತೊಡಗುವ ಭೈರಪ್ಪ ಅವರ ಕೃತಿಗಳ ಗುಣಾತಿಶಯಗಳನ್ನು ಇಲ್ಲಿ ಗುರುತಿಸಿ ವಿವೇಚಿಸಿರುವುದು ಸಮೀಚೀನವಾಗಿದೆ.

'ಪರ್ವ' ಮತ್ತು 'ಉತ್ತರಕಾಂಡ' ಕಲಾ ಕೃತಿಗಳ ಆಶಯವನ್ನು ವಿಶ್ಲೇಷಿಸುವುದರ ಜೊತೆಗೆ ಅವೆರಡಕ್ಕೂ ಆಧಾರವಾಗಿರುವ ಮಹಾಭಾರತ ಮತ್ತು ರಾಮಾಯಣಗಳ ಆಶಯದತ್ತಲೂ ಗಮನಹರಿಸಿರುವುದು ಈ ಮಹಾಪ್ರಬಂಧದ ಧನಾತ್ಮಕ ಅಂಶ. ಆದಿಕವಿ ವಾಲ್ಮೀಕಿಗಳಾಗಲೀ, ಮಹಾಕವಿ ವ್ಯಾಸರಾಗಲೀ ತಮ್ಮ ಕೃತಿಗಳ ಮುಖಾಂತರವಾಗಿ ಏನನ್ನು ಸಂವಹಿಸಬಯಸಿದ್ದರೆನ್ನುವುದನ್ನು ಎತ್ತಿ ಹೇಳುತ್ತಲೇ ಆ ತಿಳಿವಳಿಕೆಯ ಬೆಳಕಿನಲ್ಲಿ 'ಪರ್ವ' ಮತ್ತು 'ಉತ್ತರಕಾಂಡ' ಕಾದಂಬರಿಗಳ ಆಶಯವನ್ನು ವಿಸ್ತಾರವಾಗಿ ಮನಗಾಣಿಸಿರುವುದು ಮೆಚ್ಚತಕ್ಕ ಸಂಗತಿ.

ಇನ್ನೊಂದು ಕ್ರೂರ ಮುಖ

ಮಹಾಭಾರತವನ್ನು ಓದಿದ ನಂತರ ಜೀವನಧರ್ಮದ ದರ್ಶನವು ಸಾಮಾನ್ಯರಿಗೆ ಅಷ್ಟಾಗಿ ಉಂಟಾಗದೇ ಹೋದರೂ ಎಲ್ಲರನ್ನೂ ಒಂದು ನಿರ್ವೇದವಂತೂ ಆವರಿಸಿಕೊಳ್ಳುತ್ತದೆ. 'ಪರ್ವ'ದಲ್ಲಿ ಈ ನಿರ್ವೇದವು ಮತ್ತೂ ಗಾಢವಾಗಿ ತೋರಿಕೊಳ್ಳುತ್ತದೆ. ಡಿವಿಜಿಯವರು ಹೇಳುವ ಮೂರು ಪ್ರಯೋಜನಗಳಲ್ಲಿ 'ಪರ್ವ'ವು ಕಾವ್ಯಾನಂದವನ್ನುಂಟುಮಾಡುವುದು, ಅದನ್ನು ಓದಿದ ಸಹೃದಯರೆಲ್ಲರ ಅನುಭವಕ್ಕೆ ಬಂದಿರುವಂತಹದು. ಇನ್ನು 'ಪರ್ವ'ದಂತೆ ಮಾನವಸ್ವಭಾವ ಪರ್ವ'ದ ನಿರ್ವೇದವು ಹುಟ್ಟುವುದು ಕೇವಲ ಯುದ್ಧದಲ್ಲಿ ಉಂಟಾದ ಅಪಾರವಾದ ಪ್ರಾಣಹಾನಿಯಿಂದ ಮತ್ತು ಗೆದ್ದವರು ಸೋತವರಿಬ್ಬರ ವಂಶಗಳೂ ಚಿಗುರುಗಳನ್ನು ಮುರುಟಿಸಿ ಕೊಂಡು ನಿರ್ವಂಶವಾಗಿಬಿಟ್ಟಿರುವ ದುರಂತಗಳಿಂದಷ್ಟೇ ಅಲ್ಲ; ಅದು ಹುಟ್ಟುವುದು ವ್ಯಾಸರು ತೋರಿಸದೇ ಬಿಟ್ಟಿರುವ ಯುದ್ಧದ ಇನ್ನೊಂದು ಕ್ರೂರಮುಖವನ್ನು ಭೈರಪ್ಪನವರು ಓದುಗರಿಗೆ ತೋರಿಸಿರುವುದರಿಂದ; ಸತ್ತವರಲ್ಲಿ ಕೊನೆಗೊಳ್ಳದೇ ಯುದ್ಧದ ಕ್ರೌರ್ಯವು ಬದುಕುಳಿದವರ ಜೀವವನ್ನೂ ನಿರ್ದಯವಾಗಿ ಹಿಂಡುತ್ತಿರುವುದರಿಂದ!

'ಉತ್ತರಕಾಂಡ' ಕಾದಂಬರಿಯ ಕೊನೆಯಲ್ಲಿ ಸೀತೆಯ ಸಾವಿನಿಂದ ದುಃಖಿತರಾಗಿದ್ದ ವಾಲ್ಮೀಕಿಮಹರ್ಷಿಗಳು ತಮ್ಮ ಶಿಷ್ಯನಿಗೆ ಹೇಳುತ್ತಾರೆ: ತಾರಕ, ಜೋಡಿಹಕ್ಕಿಗಳಲ್ಲಿ ಬೇಡನು ಒಂದನ್ನು ಹೊಡೆದು ಅಗಲಿಸಿದ ದುಃಖವನ್ನು ವ್ಯಕ್ತಪಡಿಸಲು ನಾನು ವಸ್ತುವನ್ನು ಹುಡುಕುತ್ತಿದ್ದುದು ನಿನಗೇ ಗೊತ್ತಿದೆ. ಈ ಕಥೆಯನ್ನಾದರೂ ಸುಖಾಂತ್ಯ ಮಾಡಬೇಕು ಅಂತ ನಾನೇ ಅಯೋಧ್ಯೆಗೆ ಹೋಗಿ ಧರ್ಮಸಭೆ ಏರ್ಪಡಿಸಿದೆ. ಆದರೂ ಕಥೆಯ ದಿಕ್ಕನ್ನು ಬದಲಿಸಲು ಆಗಲಿಲ್ಲ. ಕಾವ್ಯದಲ್ಲಿ ಕೂಡ ಸುಖವನ್ನು ಸೃಷ್ಟಿಸುವುದು ಸಾಧ್ಯವಿಲ್ಲದಂತಾಯಿತಲ್ಲ, ಕವಿಯು ಏನನ್ನು ತಾನೇ ಬದಲಿಸಬಲ್ಲ? ಎಂಬ ವೈಫಲ್ಯ ಬಾಧಿಸುತ್ತಿದೆ..... 'ಉತ್ತರಕಾಂಡ'ದ ಹಿನ್ನೆಲೆಯಲ್ಲಿ ಮಾತನ್ನು ನೋಡೋಣ. ಸಹೃದಯವಾಚಕರ ಸಂವೇದನಾಶೀಲತೆಯನ್ನು ಮತ್ತೂ ಸೂಕ್ಷ್ಮಗೊಳಿಸಿ ನಿರ್ವೇದದ ಗಾಢವಾದ ಅನುಭೂತಿಯಲ್ಲಿ ಮತ್ತೆ ಮತ್ತೆ ಮುಳುಗೇಳುವಂತೆ ಮಾಡಿರುವುದು ಕಡಮೆಯ ಸಾಧನೆಯಲ್ಲ. ಉತ್ತರಕಾಂಡ'ವನ್ನು ಬರೆದುದರ ಆಶಯ ಈ ಮಟ್ಟಿಗೆ ಖಂಡಿತವಾಗಿಯೂ ಸಫಲವಾಗಿದೆ. ಇಲ್ಲೆಲ್ಲ ಡಾ. ಉಮಾ ರಾಮರಾವ್ ಅವರ ಪ್ರತಿಭೆ, ವೈಜ್ಞಾನಿಕ ನಿಲುವು, ತರ್ಕಬದ್ಧ ತೀರ್ಮಾನ, ನೇರವಾದ ಖಚಿತವಾದ ವಿಶ್ಲೇಷಣೆಗಳಿಂದ ಪ್ರಸ್ತುತ ಕೃತಿ ಸಮೃದ್ಧವಾಗಿ ಮೈದಾಳಿದೆ. ಹೀಗೆ ಭೈರಪ್ಪ ಅವರ ಎರಡು ಮಹಾ ಕಾದಂಬರಿಗಳ ಹಿರಿಮೆ ಗರಿಮೆಗಳನ್ನು ತುಲನಾತ್ಮಕವಾಗಿ ಪುನರ್ ಮೌಲ್ಯಮಾಪನಕ್ಕೆ ಗುರಿಪಡಿಸಿರುವುದು ಸಹ ಈ ಕೃತಿಯ ಇನ್ನೊಂದು ವಿಶೇಷ ಸಾಧನೆ. ಕನ್ನಡ ಸಾರಸ್ವತ ಪ್ರಪಂಚಕ್ಕೆ ಇದೊಂದು ಮೌಲಿಕ ಸೇರ್ಪಡೆ.

ಸುಲಲಿತ ಓದಿನ ಕಥನ

» ಕಿರಣ್

ಈ ಕಾದಂಬರಿಯು ಎ.ಪಿ.ಮಾಲತಿಯವರ 22ನೆಯ ಕಾದಂಬರಿ. ಸಾಮಾಜಿಕ ಕಥನದ ಹಿನ್ನೆಲೆಯನ್ನು ಸಮರ್ಥವಾಗಿ ದುಡಿಸಿಕೊಂಡು, ಸುಲಲಿತವಾಗಿ ಓದಿಸಿಕೊಂಡು ಹೋಗುವ ಕೃತಿಗಳನ್ನು ರಚಿಸುವಲ್ಲಿ ಎ.ಪಿ.ಮಾಲತಿವರು ಸಿದ್ಧಹಸ್ತರು. ಅವರ ಕಥನ ಕೌಶಲ ಮತ್ತು ಸಾಮಾಜಿಕ ಮತ್ತು ಕೌಟುಂಬಿಕ ಸಮಸ್ಯೆಗಳ ವಿಶ್ಲೇಷಣೆಯ ಅನನ್ಯತೆಯು 'ಬೆಳ್ಳಿ ಚುಕ್ಕಿ' ಕಾದಂಬರಿಯಲ್ಲಿ ಮತ್ತೊಮ್ಮೆ ಋಜುವಾತಾಗಿದೆ. ''ಬದುಕು ಗಣಿತದ ಸೂತ್ರಗಳ ಲೆಕ್ಕಾಚಾರದಂತೆ. ಒಂದು ಅಂಕೆ ತಪ್ಪಿದರೆ ಇಡೀ ಸೂತ್ರವೇ ತಪ್ಪಿಹೋಗುತ್ತದೆ' ಎಂದು ಕಾದಂಬರಿಯ ಕೇಂದ್ರ ಪಾತ್ರ ವಸಂತಿ ಹೇಳುವ ಮಾತು ಕಾದಂಬರಿಯ ಆಶಯವನ್ನು ಹೇಳುವಂತಹದ್ದು. ಬದುಕಿನ ಬವಣೆಗಳನ್ನು, ಕ್ಲಿಷ್ಟ ಸಮಸ್ಯೆಗಳನ್ನು ತಾಳ್ಮೆಯಿಂದ, ಧೈರ್ಯದಿಂದ , ಅಂತಃಕರಣದಿಂದ ಬಿಡಿಸುತ್ತಾ ಸಾಗಬೇಕೇ ಹೊರತು ಕೋಪತಾಪ, ಆತುರದ ನಿರ್ಧಾರಗಳು ಬದುಕನ್ನು ಹಾಳುಗೆಡವುತ್ತವೆಂಬುದನ್ನು ಲೇಖಕಿ ಈ ಕಾದಂಬರಿಯ ಮೂಲಕ ಚಂದವಾಗಿ ಕಟ್ಟಿಕೊಡುತ್ತಾರೆ. ಯುವ ಮನಸ್ಸುಗಳು ಎದುರಿಸುವ ಅನೇಕ ಸಂಘರ್ಷಗಳಿಗೆ ಪ್ರೀತಿ, ಬೆಂಬಲ, ಪ್ರೋತ್ಸಾಹದ ಕೊರತೆ ಕಾರಣವಾಗಿರುವುದನ್ನು ಕುರಿತು ಹೇಳುವ ಲೇಖಕಿ, ಹಾಗೆಯೇ ಅತಿ ಕೊಂಡಾಟ ಕೂಡಾ ಅವರನ್ನು ದಿಕ್ಕುಗೆಡಿಸುತ್ತದೆ ಎಂಬ ಪ್ರಸ್ತುತ ಸಮಾಜದ ಜ್ವಲಂತ ಸಮಸ್ಯೆನ್ನು ಇಲ್ಲಿ ಕುತೂಹಲಕಾರಿಯಾಗಿ, ಆಪ್ತವಾಗಿ ಚಿತ್ರಿಸಿದ್ದಾರೆ. ತಲ್ಲಣಗಳನ್ನು ಎದುರಿಸುವ, ಅದರಿಂದ ಹೊರಬರುವ ಮಾರ್ಗಗಳನ್ನು ಕಥಾನಕ ಸರಳ, ಸುಂದರವಾಗಿ ಚಿತ್ರಿಸಿದರು. ಬದುಕೆಂಬುದು ಅಷ್ಟು ಸಲೀಸಲ್ಲ, ಅನೂಹ್ಯವಾದದ್ದು ಎಂಬ ಧ್ವನಿಯೂ ಅಂತರ್ಗತವಾಗಿದೆ. ಆಶಾದಾಯಕ, ಭರವಸೆಯ ದಿಕ್ಕಿನೆಡೆ ಕಥೆ ಮುಖಮಾಡಿರುವುದು ವಿಶೇಷವಾಗಿದೆ.''(ಬೆನ್ನುಡಿಯಿಂದ)



ಬೆಳ್ಳಿ ಚುಕ್ಕಿ
ಲೇ: ಎ.ಪಿ.ಮಾಲತಿ
ಪ್ರ: ಅಂಕಿತ ಪುಸ್ತಕ ಬೆಂಗಳೂರು
ಬೆಲೆ ರು.250/-

ಪ್ರೀತಿ, ಒತ್ತಾಸೆ, ಬೆಂಬಲ ಮತ್ತು ವಿಶ್ವಾಸ ತುಂಬಿದ ವಾತಾವರಣವು ಯುವ ಮನಸ್ಸುಗಳಿಗೆ ವಿಶೇಷ ಶಕ್ತಿ ನೀಡಿ, ಸಮರ್ಥ ಬದುಕನ್ನು ಕಟ್ಟಿಕೊಳ್ಳುವಲ್ಲಿ ಸಹಾಯ ಮಾಡುತ್ತವೆ ಎನ್ನುತ್ತದೆ ಈ ಕಾದಂಬರಿ.

ವಿಶಿಷ್ಟ ಓದಿನ ಅನುಭವ

» ಶಶಿ

ಪ್ರಸಿದ್ಧ ಲೇಖಕ ಚಿನುವ ಅಚೆಬೆ, ವಿಭಿನ್ನವಾದ ಸೃಜನಶೀಲ ಬರವಣಿಗೆಯ ಮೂಲಕ ಜಗತ್ತಿನ ಓದುಗರಿಗೆ ತಲುಪಿದ ನೈಜೀರಿಯಾದ ಸಾಹಿತಿ. ಆತ ರಚಿಸಿದ'ಥಿಂಗ್ಸ್ ಫಾಲ್ ಅಪಾರ್ಟ್' ಕಾದಂಬರಿಯು ತನ್ನ ವಿಶಿಷ್ಟ ಕೃತಿವಿನ್ಯಾಸದಿಂದ, ಆಫ್ರಿಕಾದ ಬದುಕನ್ನು ತೆರೆದಿಡುವ ಅನನ್ಯ ಪರಿಯಿಂದ ಹೆಸರು ಮಾಡಿತು. ಆನುವ ಅಚೆಬೆ ಒಂದು ಕಥಾ ಸಂಕಲನವನ್ನು ಹೊರತಂದಿದ್ದಾರೆ; ಅದರ ಹೆಸರು 'ಗರ್ಲ್ಸ್ ಅಟ್ ವಾರ್'; ಅದನ್ನು ಹಿರಿಯ ಸಾಹಿತಿ ಚನ್ನಪ್ಪ ಕಟ್ಟಿಯವರು ಕನ್ನಡದಕ್ಕೆ ಅನುವಾದಿಸಿದ್ದಾರೆ. ದಕ್ಷಿಣ ಆಫ್ರಿಕಾದ ಬದುಕಿನ ವಿಶಿಷ್ಟ ಆಯಾಮಗಳನ್ನು ಪರಿಚಯಿಸುವ, ಕಲಾತ್ಮಕವಾಗಿ ಕಟ್ಟಿಕೊಡುವ ಇಲ್ಲಿನ ಕಥೆಗಳು ಕನ್ನಡದ ಓದುಗರಿಗೆ ಹೊಸದೊಂದು ಪ್ರಪಂಚವನ್ನೇ ತೆರೆದಿಡುತ್ತವೆ.

ಈ ಕಥಾ ಸಂಕಲನದ ಕುರಿತು ಬೆನ್ನುಡಿಯಲ್ಲಿ ಪ್ರೊ. ಎಚ್. ಎಸ್.ಶಿವಪ್ರಕಾಶ ಅವರು ಬರೆದಿರುವ ಮಾತುಗಳು ಅರ್ಥಪೂರ್ಣ: ''ದ ಗರ್ಲ್ಸ್ ಅಟ್ ವಾರ್ ಚಿನುವ ಅಚೆಬೆಯ ಏಕೈಕ ಕಥಾಸಂಕಲನ. ಈ ಸಂಕಲನದಲ್ಲಿ ಅಚೆಬೆ ಬಳಸಿರುವ ವ್ಯಕ್ತಿಭಾಷೆಯ ರೂಪುರೇಷೆಗಳನ್ನು ಸೂಕ್ಷ್ಮವಾಗಿ ಗಮನಿಸಿ, ಸಂವೇದನಾಶೀಲ ತರ್ಜುಮೆದಾರ ಚನ್ನಪ್ಪ ಕಟ್ಟಿ ಅವರು ಅಚೆಬೆಯ ವ್ಯಕ್ತಿಭಾಷೆಗೆ ಹತ್ತಿರವಾದ ನುಡಿಗಟ್ಟಿನಲ್ಲಿ ಈ ಕತೆಗಳನ್ನು ಕನ್ನಡಕ್ಕೆ ತಂದಿದ್ದಾರೆ. ಅವರು ಅನುವಾದಕ್ಕಾಗಿ ಎತ್ತಿಕೊಂಡಿರುವ ಈ ಕಥಾ ಸಂಕಲನದ ಪ್ರತಿಯೊಂದು ಕತೆಯೂ ವಿಶಿಷ್ಟ. ಹುಚ್ಚ, ಅಟೆಕ, ಅಂಕೆಲ್ ಬೆನ್‌ನ ಆಯ್ಕೆ, ಯುದ್ಧಕಾಲದ ಹುಡುಗಿಯರು ಮುಂತಾದ ಕತೆಗಳು ಮಾಮೂಲಿನ ಘಟನೆಗಳ ನಿರೂಪಣೆಯಂತೆ ಹೊರಟು ಟವು ನಮಗರಿವಿರದಂತೆ ಹಠಾತ್ತನೆ ನಮ್ಮನ್ನು ನರಳಿಕೆಯ ನರಕಗಳ ಪಾತಾಳಕ್ಕೆ ದೂಡಿ ತಡವರಿಸುವಂತೆ ಮಾಡುತ್ತವೆ. ಅಚೆಬೆಯ ಕತೆಗಳು ಅನುಭವದ್ರವ್ಯದಲ್ಲಿ ದಸ್ತಯೇವ್ಸ್ಕಿ ನಿರ್ಮಿಸುವಂತಹ ಅಧೋಲೋಕಗಳಿಗೆ ನಮ್ಮನ್ನೊಯ್ದರೂ ಅದನ್ನು ಸಾಧಿಸುವ ಈ ಕತೆಗಳ ಭಾಷೆ ತೊಲ್ಸ್ತೊಯನ ಭಾಷೆಯಂತೆ ಅಚ್ಚುಕಟ್ಟುತನದಿಂದ ಕೂಡಿದ್ದು ಅನುಭವದ ಬರ್ಬರ ಬೆರಳುಗಳು ತಣ್ಣಗೆ ನಮ್ಮನ್ನು ಸೋಕುತ್ತವೆ. . . ಅನುವಾದದ ಯಶಸ್ಸಿರುವುದು ಮೂಲಕೃತಿಯ ನಾಡಿಮಿಡಿತವನ್ನು ಹಿಡಿದಿಡುವ ನುಡಿಗಟ್ಟನ್ನು ಇನ್ನೊಂದು ಭಾಷೆಯಲ್ಲಿ ಕಂಡುಕೊಳ್ಳುವಲ್ಲಿ. ಅನುವಾದ ತತ್ತ್ವದ ಈ ಕಾಣ್ಕೆಯಿಂದ ರೂಪಿತವಾಗಿರುವ ಚನ್ನಪ್ಪ ಕಟ್ಟಿ ಅವರ 'ಯುದ್ಧ ಕಾಂಡದ ಹುಡುಗಿಯರು' ಅನುವಾದ ಕೃತಿ ಅಭಿನಂದನೀಯವೂ ಅನುಕರಣೀಯವೂ ಆಗಿದೆ. ''(ಬೆನ್ನುಡಿಯಲ್ಲಿ ಪ್ರೊ. ಎಚ್. ಎಸ್.ಶಿವಪ್ರಕಾಶ).



ಯುದ್ಧ ಕಾಲದ ಹುಡುಗಿಯರು
ಲೇ: ಚಿನುವ ಅಚೆಬೆ
ಅನು: ಚನ್ನಪ್ಪ ಕಟ್ಟಿ
ಪ್ರ: ನೆಲೆ ಪ್ರಕಾಶನ ಸಂಸ್ಥೆ, ಸಿಂದಗಿ
9481082518 ಬೆಲೆ ರು.180/-

ಚನ್ನಪ್ಪ ಕಟ್ಟಿಯವರು ಅನುವಾದಿಸಿರುವ 'ಯುದ್ಧ ಕಾಲದ ಹುಡುಗಿಯರು' ಸಂಕಲನದ ಇನ್ನೊಂದು ವೈಶಿಷ್ಟ್ಯವೆಂದರೆ, ಅರ್ಥಪೂರ್ಣ ಮುಖಪುಟ ಮತ್ತು ಆಕರ್ಷಕ ಪುಟವಿನ್ಯಾಸ; ಮತ್ತು ಆ ಮೂಲಕ, ಓದುಗನೊಬ್ಬ ಪುಸ್ತಕವನ್ನು ಕಂಡ ಕೂಡಲೆ ಕೈಗೆತ್ತಿಕೊಂಡು, ಪುಟ ತಿರುವಿಹಾಕುವಂತೆ ಪ್ರೇರೇಪಿಸುವ ಗುಣ. ಕನ್ನಡದ ಅನುವಾದಿತ ಪುಸ್ತಕಗಳ ಅತ್ಯಂತ ಅರ್ಥಪೂರ್ಣ ಮುಖಪುಟ ವಿನ್ಯಾಸಗಳ ಸ್ಪರ್ಧೆ ನಡೆಸಿದರೆ, ಈ ಸಂಕಲನವು ಮೊದಲ ಸಾಲಿನಲ್ಲಿ ನಿಲ್ಲುವುದರಲ್ಲಿ ಸಂಶಯವಿಲ್ಲ. ಈ ಅನುವಾದಿತ ಸಂಕಲನದ 12 ಕಥೆಗಳು, ವಿಭಿನ್ನ, ವಿಶಿಷ್ಟ ಓದಿನ ಅನುಭವವನ್ನು ನೀಡುವುರದಲ್ಲಿ ಸಂದೇಹವಿಲ್ಲ.

ಅನುವಾದ ಅಧ್ಯಯನದ ಮಹತ್ವ



ಕೃತಿ: ಅನುವಾದ- ಅಧ್ಯಯನ (ಸಂಶೋಧನಾ ಪ್ರಬಂಧಗಳು)
ಲೇ: ಡಾ. ಎಂ.ಎಸ್. ದುರ್ಗಾಪ್ರವೀಣ
ಪ್ರ: ಸಿದ್ದು ಪ್ರಕಾಶನ, ರಾಮನಗರ
ಫೋ: 9535001953
ಬೆಲೆ ರೂ. 130/

» ಡಾ. ರವಿಶಂಕರ ಜಿ. ಕೆ., ಪಾಣಾಜೆ

ಆಂಧ್ರಪ್ರದೇಶದಲ್ಲಿರುವ ದ್ರಾವಿಡ ವಿಶ್ವವಿದ್ಯಾನಿಲಯದ ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ.ಎಂ.ಎಸ್. ದುರ್ಗಾಪ್ರವೀಣ ಅವರು ಭಾಷಾಂತರಕಾರರಾಗಿಯೂ ದುಡಿಯುತ್ತಿರುವವರು. ಅವರ ಇತ್ತೀಚಿನ ಅನುವಾದ- ಅಧ್ಯಯನ ಕೃತಿಯಲ್ಲಿ ಕನ್ನಡದ ಭಾಷಾಂತರ ಕ್ಷೇತ್ರವನ್ನು ಗಂಭೀರವಾಗಿ ಅಧ್ಯಯನ ಮಾಡಿರುವ ಸಂಶೋಧನಾ ಪ್ರಬಂಧಗಳಿವೆ. ಇವು ಆಯಾ ಕಾಲಮಾನಗಳಿಗೆ ಅನುಗುಣವಾಗಿ ಅನುವಾದ ಕ್ಷೇತ್ರದ ವಿವಿಧ ಆಯಾಮಗಳನ್ನು ಮತ್ತು ಕುತೂಹಲಕರವಾದ ಅಂಶಗಳನ್ನು ತೆರೆದಿಡುತ್ತವೆ.

ಈ ಕೃತಿಯಲ್ಲಿ ಒಟ್ಟು ಏಳು ಲೇಖನಗಳಿದ್ದು ಅವು ಒಂದಕ್ಕೊಂದು ಪೂರಕವಾಗಿದೆ. ಆಯಾ ಲೇಖನಗಳ ಶೀರ್ಷಿಕೆಯಲ್ಲಿಯೇ ಉದ್ದೇಶ ಮತ್ತು ವ್ಯಾಪ್ತಿ ಸ್ಪಷ್ಟವಾಗುವಂತಿವೆ. ಇಲ್ಲಿನ ಮೊದಲ ಎರಡು ಪ್ರಬಂಧಗಳಲ್ಲಿ ಆರಂಭದ ಕಾಲಘಟ್ಟದ ಅನುವಾದಿತ ಕಥೆ ಮತ್ತು ಕಾದಂಬರಿಗಳ ಸಮೀಕ್ಷೆಯಿದೆ. ನವೋದಯಪೂರ್ವದ ಕಾಲಘಟ್ಟದಲ್ಲಿ ಮಾತ್ರವಲ್ಲದೆ ನವೋದಯದಲ್ಲಿಯೂ ನಿರಂತರವಾಗಿ ನಡೆದ ಅನುವಾದದ ಚಟುವಟಿಕೆಗಳು ಕನ್ನಡ ಗದ್ಯಸಾಹಿತ್ಯದ ವಿಸ್ತಾರ ಮತ್ತು ವೈವಿಧ್ಯತೆಯನ್ನು ತಂದು ಕೊಡಲು ಎಷ್ಟು ನೆರವಾಗಿವೆ ಎಂಬುದನ್ನು ಈ ಎರಡು ಲೇಖನಗಳು ಕಂಡುಕೊಳ್ಳುತ್ತವೆ. ಅನಂತರದ ಎರಡು ಪ್ರಬಂಧಗಳಲ್ಲಿ ಸಾಹಿತ್ಯಪಂಥ, ಚಳುವಳಿ ಮತ್ತು ಸಂವೇದನೆಯ ನೆಲೆಗಳಲ್ಲಿ ಅನುವಾದ ಸಾಹಿತ್ಯದ ಸಾಧ್ಯತೆಗಳನ್ನು ಚರ್ಚಿಸಲಾಗಿದೆ. ಜನಪ್ರಿಯ ಕಾದಂಬರಿಗಳ ಅನುವಾದದ ಪ್ರಕ್ರಿಯೆಯ ಬಗ್ಗೆ ಎರಡು ಲೇಖನಗಳಿದ್ದು, ಪತ್ರಿಕೆಗಳಲ್ಲಿ ಧಾರಾವಾಹಿಗಳಾಗಿ ಪ್ರಕಟವಾಗಿದ್ದ ಅನುವಾದಿತ ಕಾದಂಬರಿಗಳನ್ನು ಕೂಡ ಅಧ್ಯಯನಕ್ಕೆ ಒಳಪಡಿಸಿರುವುದು ಮಹತ್ವದ ಅಂಶವಾಗುತ್ತದೆ. ಇವು ಅಧ್ಯಯನದ ಹಲವು ಸಾಧ್ಯತೆಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಕೊನೆಯ ಲೇಖನವು ತುಳು ಭಾಷೆಯ ಅನುವಾದ ಕ್ಷೇತ್ರದ ಸಾಧ್ಯತೆಯನ್ನು ಚರ್ಚಿಸುತ್ತದೆ. ಇಲ್ಲಿನ ಎಲ್ಲಾ ಪ್ರಬಂಧಗಳಲ್ಲಿಯೂ ಈವರೆಗೆ ಅಷ್ಟಾಗಿ ಚರ್ಚೆಗೆ ಒಳಗಾಗದಿರುವ ಹಲವು ಕೃತಿಗಳ ಅಧ್ಯಯನವಿರುವುದರಿಂದ ಈ ಕ್ಷೇತ್ರದಲ್ಲಿ ಸಂಶೋಧನೆಗೆ ತೊಡಗಿಸಿಕೊಂಡವರಿಗೆ ನೆರವಾಗುವಂತಿದೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಕೃತಿಗಳು ಪರಿಚಿತವಾಗಬೇಕಾದರೆ, ಸ್ವೀಕೃತವಾಗಬೇಕಾದರೆ ಗುಣಮಟ್ಟದ ಅನುವಾದ ಎಷ್ಟು ಮುಖ್ಯ ಎಂದು ಕಳೆದ ವಾರದ ಬೂಕರ್ ಪ್ರಶಸ್ತಿ ತೋರಿಸಿಕೊಟ್ಟಿದೆ. ಅನುವಾದ ಅಧ್ಯಯನದ ಕುರಿತ ಮಹತ್ವದ ಚರ್ಚೆ ಈ ಕೃತಿಯಲ್ಲಿದೆ.

ವರ್ತಮಾನದಲ್ಲಿ ಅನುವಾದದ ಕಾರ್ಯ ಮತ್ತು ಆ ಕ್ಷೇತ್ರದ ಅಧ್ಯಯನ ಯಾಕೆ ಮಹತ್ತ್ವವನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ಈ ಮಾತುಗಳು ಖಚಿತಪಡಿಸುತ್ತವೆ- ''ಅನುವಾದದಂತಹಾ ಚಟುವಟಿಕೆಗಳು ಸಾಂಸ್ಥಿಕ, ವೈಯಕ್ತಿಕ ನೆಲೆಗಟ್ಟಿನಲ್ಲಿ ಭಾಷೆ ಸಾಹಿತ್ಯ ಸಂಸ್ಕೃತಿಗಳ ನಡುವೆ ಬಾಂಧವ್ಯವನ್ನು ಬೆಸೆಯುತ್ತವೆ. ಕನ್ನಡ ಅನುವಾದಗಳು, ಅನುವಾದಕರು ಮತ್ತು ಓದುಗವಲಯಗಳ ವಿಸ್ತರಣೆಯ ಬಗೆಗಳನ್ನು ಅಧ್ಯಯನಗಳು ತಮ್ಮೊಳಗು ಮಾಡಿಕೊಳ್ಳುವ ಬಗೆಯನ್ನಿಂದು ಹುಡುಕಬೇಕಾಗಿದೆ. ಸಾಹಿತ್ಯದ ವಿವಿಧ ಪ್ರಕಾರಗಳು ಕಳೆದ ದಶಕಗಳಲ್ಲಿ ಪಡೆದುಕೊಂಡ ಬದಲಾವಣೆಗಳಿಗೂ, ಸಾಹಿತ್ಯವನ್ನು ಪರಿಭಾವಿಸಲಾಗುತ್ತಿರುವ ಬಗೆಗೂ, ಓದುಗವಲಯಗಳ ವೈವಿಧ್ಯಕ್ಕೂ, ತಂತ್ರಜ್ಞಾನದ ವಿವಿಧ ರೀತಿಯ ಬಳಕೆಗೂ, ವಿವಿಧ ಮಾಧ್ಯಮಗಳಲ್ಲಿ ಸಾಹಿತ್ಯವು ಪರಿಗಣನೆಯಾಗುತ್ತಿರುವ ಬಗೆಗೂ ಜಾಗತೀಕರಣಕ್ಕೂ ಸಂಬಂಧವಿದೆ. ಇವನ್ನು ಅಧ್ಯಯನಕ್ಕೆ ಬಳಸಿಕೊಳ್ಳುವಲ್ಲಿ, ಹೊಸ ಆಕರಗಳನ್ನು ಒಳಗುಮಾಡಿಕೊಳ್ಳುವ ಸವಾಲಿನಲ್ಲಿ ಹೊಸ ಹಾದಿಯ ಅನ್ವೇಷಣೆಯ ಅಗತ್ಯವಿದೆ.'' (ಪು.48)

ಒಟ್ಟಿನಲ್ಲಿ ಈ ಪ್ರಬಂಧಗಳು ಅನುವಾದ ಕ್ಷೇತ್ರವನ್ನು ಗಂಭೀರವಾಗಿ ಅಧ್ಯಯನ ಮಾಡಿದ್ದು ಆಳವಾದ ಓದು, ಸೂಕ್ಷ್ಮವಾದ ಒಳನೋಟಗಳು ಮತ್ತು ಹೊಸ ಸಾಧ್ಯತೆಗಳ ಹುಡುಕಾಟಗಳಿಂದ ಕೂಡಿವೆ ಮತ್ತು ಕನ್ನಡದ ಅನುವಾದ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಹಸೀನಾ ಮತ್ತು ಇತರ ಕಥೆಗಳು
(ಬೂಕರ್ ಪ್ರಶಸ್ತಿಗೆ ನಾಮಕರಣಗೊಂಡ ಕೃತಿ)
ಲೇ: ಬಾನು ಮುಷ್ತಾಕ್
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ : ರೂ 750/-

2



ಬರೆಯದ ಕತೆಗಳು
(ಮಾಧ್ಯಮ ಅನುಭವಗಳು)
ಲೇ: ರವೀಂದ್ರ ಭಟ್ಟ
ಪ್ರ: ಬಹುರೂಪಿ, ಬೆಂಗಳೂರು
ಬೆಲೆ : ರೂ 175/-

3



ವಾರೆನ್ ಹೇಸ್ಟಿಂಗ್ಸ್‌ನ ಹೋರಿ
(ಬ್ರಿಟಿಷ್ ಆಡಳಿತದ ಮೊದಲ ಗವರ್ನರ್ ಜನರಲ್‌ನ ಕಥೆ)
ಹಿಂದಿ ಮೂಲ : ಉದಯ ಪ್ರಕಾಶ
ಅನು : ಪ್ರಕಾಶ ಗರುಡ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 130/-

4



ಶಾಂತಿನಾಥ ದೇಸಾಯಿ
(ಸಾಹಿತ್ಯ-ವ್ಯಕ್ತಿತ್ವ)
ಸಂ : ಡಾ। ರೇಚಲ್ ಕುರಿಯನ್ ಬಾರಿ
ಪ್ರ: ಕುವೆಂಪು ವಿಶ್ವವಿದ್ಯಾಲಯ, ಶಂಕರ ಘಟ್ಟ
ಬೆಲೆ : ರೂ 250/-

5



ಅಮೀಬಾ
(ಕ್ರೈಸಿಸ್ ಮ್ಯಾನೇಜ್‌ಮೆಂಟ್ ಕುರಿತು)
ಲೇ: ಯಂಡಮೂರಿ ವೀರೇಂದ್ರನಾಥ್
ಅನು : ಗಣೇಶ ಭಟ್ಟ ಕೊಪ್ಪಲತೋಟ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರೂ 395/-

6



ಹಾವು ಏಣಿ ಆಟ
(ರೋಚಕ ಕಾದಂಬರಿ)
ಲೇ: ವಾಸುದೇವ್ ಮೂರ್ತಿ
ಪ್ರ: ಹರಿವು ಬುಕ್ಸ್, ಬೆಂಗಳೂರು
ಬೆಲೆ : ರೂ 300/-

7

ಆಕಾಶ ಇಷ್ಟೇ ಯಾಕಿದೆಯೋ ?
(ವಾಯುಸೇನೆಯ ಅನುಭವ ಕಥನ)
ಲೇ: ಪೂರ್ಣಿಮಾ ಮಾಳಗಿಮನಿ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 225/-

8



ದುಷ್ಕೃತ್ಯ
(ಮನೋ ವೈಜ್ಞಾನಿಕ ಕಾದಂಬರಿ)
ಲೇ: ಗಿರಿಮನೆ ಶ್ಯಾಮರಾವ್
ಪ್ರ: ಗಿರಿಮನೆ ಪ್ರಕಾಶನ, ಸಕಲೇಶಪುರ
ಬೆಲೆ : ರೂ 200/-

9

ಕತೆ ಜಾರಿಯಲ್ಲಿರಲಿ
(ಈ ಹೊತ್ತಿಗೆ ಕಥಾಪ್ರಶಸ್ತಿ ವಿಜೇತ ಕೃತಿ)
ಲೇ: ಪೂರ್ಣಿಮಾ ಭಟ್ಟ, ಸಣ್ಣಕೇರಿ
ಪ್ರ: ಸಸಿ ಪ್ರಕಾಶನ, ಮೈಸೂರು
ಬೆಲೆ : ರೂ 125/-

10



ನಾಟಿ ಹುಂಜ
(ಹೊಸ ಕಥೆಗಳು)
ಲೇ: ಗುರುಪ್ರಸಾದ್ ಕಂಟಲಗೆರೆ
ಪ್ರ: ಜೀರುಂಡೆ ಪುಸ್ತಕ, ಬೆಂಗಳೂರು
ಬೆಲೆ : ರೂ 150/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ನಮ್ಮ ಬಸ್‌ನಲ್ಲಿ ಬಣ್ಣಗಳು!

ನಮ್ಮ ನಗರ ಸಾರಿಗೆ ಬಸ್‌ಗಳು ಹಲವು ಬಣ್ಣದ ಹೊದಿಕೆ ಹೊದ್ದು ಇಂದು ಸೌಂದರ್ಯದಲ್ಲಿ ಖಾಸಗಿ ಬಸ್‌ಗಳೊಂದಿಗೆ ಸ್ಪರ್ಧೆಗಳಿದೆವೆ ಎನಿಸುತ್ತಿದೆಯೆ?

ಕಲರ್ ಕಲರ್ ವಾಟ್ ಕಲರ್' ಇದು ಅಂದಿನ ತೊದಲು ನುಡಿಯ ಮಕ್ಕಳ ಗೀತೆ. ನಮ್ಮ ಕನ್ನಡದಲ್ಲೇ ಇದಕ್ಕೆ ಹಲವು ಬಣ್ಣದ ಪದಗಳಿವೆ. 'ಬಣ್ಣಾ ನನ್ನ ಒಲವಿನ ಬಣ್ಣಾ' ಅಂತ ಒಬ್ಬರು ಹಾಡಿದರೆ 'ಏಳು ಬಣ್ಣ ಸೇರಿ ಬಿಳಿಯ ಬಣ್ಣ ವಾಯಿತು' ಎಂದರು ಇನ್ನೊಬ್ಬರು. ಅದೇ ಸಮಯದಲ್ಲಿ 'ಬಣ್ಣದ ತಗಡಿನ ತುತ್ತೂರಿ' ಸದಾ ಸದ್ದು ಮಾಡತ್ತಲೇ ಇದೆ!

ಇಲ್ಲಿ ನಾನು ಹೇಳ ಹೊರಟಿರುವುದು ನಗರ ಸಾರಿಗೆ ಬಸ್‌ಗಳ ಕಾಮನ ಬಿಲ್ಲಿನ ಛಾಪುಗಳ ಕುರಿತು. ದಶಕಗಳ ಹಿಂದೆ ಹೋದರೆ, ಆಗೆಲ್ಲ ಈ ಸಾರಿಗೆಯವರು ಕೆಂಪು ಸೀರೆಯ ಸುಂದರಿಯರು. ಮೊದಲಿಗೆ ಮೂತಿ ಉದ್ದವಿದ್ದು ನಂತರ ಚಪ್ಪಟೆ ವದನ, ಇನ್ನು ಕೆಲವು ಒಂದೇ ಕಣ್ಣಿನವೂ ಆಗಿದ್ದಿತು. ಮಹಡಿ ಬಸ್ ಎಂಬ ಸುಂದರಿಯರು, ಕೆಂಪಿನ ಢಾಳು ಬಣ್ಣ ಹೊದ್ದು, ಬೆಂಗಳೂರಿನ ರಸ್ತೆಯುದ್ದಕ್ಕೂ ಸಂಚರಿಸುತ್ತಾ, ಜನರನ್ನು ಅಲ್ಲಿಂದಿಲ್ಲಿಗೆ ಸಾಗಿಸುತ್ತಿದ್ದವು! ಏನೇ ಇರಲಿ ಅವುಗಳ ಬಣ್ಣದ ದಿರಿಸು ಅದರ ಮೇಲೆ ಢಾಳಾಗಿ ಕಾಣುವ ಗಂಡ ಭೆರುಂಡ ಮತ್ತು ಸತ್ಯಮೇವಜಯತೆ ಘೋಷವಾಕ್ಯ ಮಾತ್ರ ಬದಲಾಗಿರಲಿಲ್ಲ.

ನನ್ನ ನೆನಪಿನಂತೆ ಸುಮಾರು ಎಂಭತ್ತರ ದಶಕದಲ್ಲಿ ಅದೇನೋ ಕೆಲವರಿಗೆ ಕೆಂಪು ಸೀರೆ ಇಷ್ಟವಾಗದೇ ಬದಲಾವಣೆಗೆ ಕಾನೂನಿನ ಮೊರೆ ಹೋದರು. ಅಂದಿನ ವಿಚಾರಣಾ ಪ್ರಾಧಿಕಾರವು, ಇವರ ಅಹವಾಲಿಗೆ ಪುರಸ್ಕಾರ ನೀಡಿತು. ಇದರಿಂದಾಗಿ ಇವೆಲ್ಲ ನೀಲಿ ಹಳದಿ ಮಿಶ್ರಿತ ಬಣ್ಣದ ಹೊಳಪಿನೊಡನೆ ರೋಡಿಗಿಳಿದ ರಾಧಿಕ ಆದರೂ ಗಂಡ ಭೇರುಂಡ ಮಾತ್ರ ತನ್ನ ಛಾಪು ಬಿಟ್ಟಿರಲಿಲ್ಲ.

ಕಾಲಾಂತರದಲ್ಲಿ ಈ ಬಣ್ಣದ ಸೌಂದರ್ಯ ಬಹುಮುಖವಾಯಿತು. ನೀಲಿ, ಹಸಿರು ಹೀಗೆ ಕಾಮನ ಬಿಲ್ಲಿಗೇ ಸೆಡ್ಡು ಹೊಡೆಯುವಂತೆ ಕಂಗೊಳಿಸುತ್ತ ರಸ್ತೆಯಲ್ಲಿ ತನ್ನ ಕುಲುಕಾಟ ನಡೆಸಿದ್ದಿತು. ಈ ಬಣ್ಣಗಳ ಹೊಯ್ದಾಟದಲ್ಲಿ ಆ ಗಂಡ ಭೇರುಂಡ ಸ್ವಲ್ಪ ಮಸುಕಾಯಿತು.

ಹವಾನಿಯಂತ್ರಿತ ಬಸ್‌ಗಳ ಆಗಮನದ ನಂತರ, 'ಬಣ್ಣದ ಬುಗುರಿ'ಗಳೇ ರಸ್ತೆಗಿಳಿದಂತಾಯಿತು!

ಇತ್ತೀಚಿನ ದಿನಗಳಲ್ಲಿ ಬಸ್‌ಗಳ ಚಂದವು, ಬಣ್ಣದ ಓಕುಳಿಯನ್ನೇ ನಡೆಸಿದೆ. ಕೆಲವು ತಮ್ಮ ಮೈ ಮೇಲೆ ಒಂದೇ ಬಣ್ಣದ ದಿರಿಸಿನಿಂದ ತನ್ನ ಮೈ ಮೇಲೆ ಹಚ್ಚೆ ಹಾಕಿದಂತಿರುವ ಸಂಸ್ಥೆಗಳ ಜಾಹೀರಾತಿನಿಂದ ಓಡಾಡುತ್ತಿವೆ. ಕೆಲವು ಬಸ್ ಗಳಲ್ಲಿ ಅದೊಂದು ಆಭರಣ ತಯಾರಿಕಾ ಸಂಸ್ಥೆಯ ಬಿಳಿ ಬೂದು ಮಿಶ್ರಿತ ಬಣ್ಣ. ರಿಯಾಯಿತಿಯಲ್ಲಿ ಆಭರಣಗಳ ಕೊಡುವ ಜಾಹೀರಾತು. ಅದರಲ್ಲಿ ಆ ಸಂಸ್ಥೆಯ ಮುಖ್ಯಸ್ಥರೇ ದೊಡ್ಡದಾಗಿ ಕಂಡು ನಮ್ಮ ಬಿ.ಎಮ್.ಟಿ.ಸಿ. ಛಾಪು, ಶೈಲಿಯು

ಅದೃಶ್ಯವಾದಂತಿದೆ. ಇದೇ ರೀತಿಯ ನೀಲಿ ಬಣ್ಣದ ಕೆಲವು ಜಾಹಿರಾತುಗಳು, ನಿಮ್ಮ ಚಿನ್ನವನ್ನು ಗೌರವದಿಂದ ಮಾರಾಟ ಮಾಡಿ ಎನ್ನುತ್ತಾ ಬಸ್‌ಗಳ ಹೊರ ಮೈಯನ್ನು ಅಪ್ಪಿಕೊಂಡಿದೆ. ಬಸ್ ಹತ್ತುವ ಪ್ರಯಾಣಿಕರು ತಮ್ಮ ಚಿನ್ನವನ್ನು ಗೌರವದಿಂದ ಏಕೆ ಮಾರಾಟಮಾಡಬೇಕು ಎಂದು ಯಾರಾದರೂ ಕಿಡಿಗೇಡಿ ಪ್ರಶ್ನಿಸಿದ್ದರೂ ಇರಬಹುದು!

ಇದರಲ್ಲಿ ಸ್ವಲ್ಪ ಮುಂದುವರಿದು ಒಬ್ಬ ನಿರ್ವಾಹಕನ ಕಾರ್ಟೂನ್ ಕೂಡ ಬಂದು 'ಮುಂದೆ ಬನ್ನಿ' ಅಂತ ಮಾರಾಟ ಮಾಡಲು ಆಹ್ವಾನಿಸುತ್ತಿದೆ ಇನ್ನೊಂದು ಹಳದಿ ಬಣ್ಣದಲ್ಲಿ ನಿಮಗೆ ಬ್ರಾಡ್ ಬ್ಯಾಂಡ್ ಸೇವೆಗೆ ಕೈಕಟ್ಟಿ ನಿಂತಿದೆ. ಅದೇ ರೀತಿ ಇನ್ನಷ್ಟು ಮತ್ತಷ್ಟು ಎಲ್ಲ ಬಿಗ್ ಆಗಿಯೇ ಬ್ಯಾಸ್ಕೆಟ್ ನಿಂದ ತುಂಬಿ ತುಳುಕುತ್ತಾ ಹೊರ ಬಂದಿದೆ.

ಈ ರೀತಿಯ ಬಣ್ಣದೋಕುಳಿಯನ್ನು ಆವರಿಸಿರುವ ನಮ್ಮ ಸಾರಿಗೆ ಬಸ್ಸುಗಳನ್ನು ನೋಡಿದಾಗ ನಾವು ಸರಿದು ನಿಲ್ಲುವಂತಾಗಿದೆ. ಕಾರಣ, ಇವು ನಮ್ಮವೇ , ಇಲ್ಲ ಬೇರೆ ಕಂಪನಿಯದೇ ಅಥವಾ ಇನ್ಯಾವುದಾದರೂ ಕಂಪನಿ ಒತ್ತೆಯಾಳಗಿಸಿಕೊಂಡಿದೆಯೇ ಎನಿಸುತ್ತದೆ. ಅವುಗಳ ಮೇಲೆ ಕಾಣುವ ರೂಟ್ ನಂಬರ್‌ನಿಂದ ಇವ ನಮ್ಮವ ಎಂದು ಗುರುತಿಸಿ, ಉಸಿರೆಳೆದು ಹತ್ತಬಹುದಾಗಿದೆ. ನಮ್ಮ ಬಿ.ಟಿ.ಎಸ್. ಈಗ ಬಿ.ಎಮ್.ಟಿ.ಸಿ. ಆಗಿ 'ಎಲ್ಲಿ ಮರೆಯಾದೇ?' ಎನುವಂತಿದೆ. ಹಿಂದಿನ 'ನಮ್ಮತನ' ಸಣ್ಣಗೆ ಮರೆಯಾಗಿದೆ.

ಈ ರೀತಿಯಲ್ಲಿ ವಿವಿಧ ಬಣ್ಣಗಳಲ್ಲಿ ನಮ್ಮ ಸಾರಿಗೆ ಬಸ್‌ಗಳನ್ನು ರಸ್ತೆಯಲ್ಲಿ ಕ್ಯಾಟ್ ವಾಕ್ ಮಾಡಿಸುತ್ತಿರುವ ಆ ಸಂಸ್ಥೆಗೆ ಒಂದು ಧನ್ಯವಾದ. ಇದನ್ನು ಇತರೆ ಖಾಸಗಿ ಬಸ್‌ಗಳ ಜೊತೆ ರಸ್ತೆಗಳಲ್ಲಿ ನೋಡಿದಾಗ, ಹೆದ್ದಾರಿಗಳಲ್ಲಿ ಸೌಂದರ್ಯ ಸ್ಪರ್ಧೆ ಎನುವಂತಾಗಿದೆ. ಅದೇನೇ ಇರಲಿ, ಈ ನಮ್ ಬಸ್ ಮೇಲೆ ನಮ್ಮ ಗಂಢ ಬೇರುಂಡ ಮತ್ತು ಸತ್ಯ ಮೇವ ಜಯತೆ ಮಾತ್ರ ಮಾಸಲು ಬಿಡಬೇಡಿ. ಅದರ ಛಾಪು ನಿನ್ನೆ ಮೊನ್ನೆಯದಲ್ಲ ದಶಕಗಳದು. ಅದು ಸಾರಿಗೆ ಬಸ್‌ಗಳ ಮೇಲೆ ತನ್ನತನವನ್ನು ತೋರಿಸುವಂತಿರಬೇಕು.

ಹಹ್ಹಾಸ್ಯ

ಇಲಿಗಳು ಸಾರ್ ಇಲಿಗಳು

ಇಲಿ ನೋಡಲು ಮುಷ್ಟಿ ಗಾತ್ರದ್ದಿರಬಹುದು, ಆದರೆ ಅದರ ಪ್ರಭಾವ ಆನೆಗಿಂತಲೂ ಮಿಗಿಲು. ಕಾರಣ ಅನೇಕರ ಜೀವನದಲ್ಲಿ ಆನೆ ಯಾವತ್ತೂ ಕಾಡಿರಲಿಕ್ಕಿಲ್ಲ, ಆದರೆ ಇಲಿ ಪ್ರತಿಯೊಬ್ಬರ ಜೀವನದಲ್ಲೂ ಒಮ್ಮೆಯಾದರೂ ಕಾಡಿಸಿ ಗೋಳಾಡಿಸಿರುತ್ತದೆ.

» ರಾಜು ಅಡಕಳ್ಳಿ

ಇಲಿ ಚಿಲಿಯಿಂದ ಕೊಲ್ಲಿಯ ತನಕ ಎಲ್ಲಿ ಬೇಕಾದರೂ ವಾಸವಿರುವಂಥ, ಯಾರದ್ದೇ ಸಹವಾಸಕ್ಕೂ ಅಷ್ಟೇ ಏಕೆ ವನವಾಸಕ್ಕೂ ಹೆದರದಂಥ ಗಟ್ಟಿ ಪ್ರಾಣಿ. ಎಲ್ಲೂ ನಿತ್ರಾಣಿಯಾಗದೇ ಎಲ್ಲ ಕಡೆಯೂ ಮಹಾರಾಣಿಯಂತೆ ಮೆರೆಯುವ ಕಲೆಯಂತೂ ಈ ಇಲಿಗೆ ಸಿದ್ಧಿಸಿರುವುದಂತೂ ನಿಜ. ಜಗತ್ತಿನ ಯಾವುದೇ ದೇಶದಲ್ಲೂ ಕೂಡ ಚೆಂದಾಗಿ ಸಂಸಾರ ಹೂಡಿ ಬದುಕಬಹುದಾದಂಥ ದಿಟ್ಟ ಕುಳ ಈ ಇಲಿ. ಮನುಷ್ಯನಾದರೆ ಅತಿಯಾದ ಮಳೆ, ಬಿಸಿಲು, ಚಳಿಗೆ ಹೆದರುತ್ತಾನೆ. ಆದರೆ ಇಲಿಗೆ ಅಂತಹ ಯಾವುದೇ ಭಯವಿಲ್ಲ. ಇಲಿಗೆ ಮನುಷ್ಯರಂತೆ ಕೈ ಇಲ್ಲ. ಆದರೆ ಗಟ್ಟಿ ನೆಲವನ್ನೂ ಕೊರೆದು ತೂತು ಮಾಡುವ, ಬಿಲ ತೋಡಿ ಠಿಕಾಣಿ ಹೂಡುವ ಅದರ ಕಸರತ್ತು ನಿಜಕ್ಕೂ ಬೆರಗು ಹುಟ್ಟಿಸುವಂಥದ್ದು. ಪುಟ್ಟ ಪೈಪ್ ಆಗಲಿ, ಪಡಕಾಗಲಿ, ಪಡಸಾಲೆಯಾಗಲೀ, ಜೀವನ ನಿರ್ವಹಿಸುವುದನ್ನು ಯಾವುದೇ ಶಾಲೆ ಕಾಲೇಜಿಗೆ ಹೋಗದೇ ಕಲಿತಿರುವ ಇಲಿಗೆ ನಾವು ಶಹಭಾಸ್ ಎನ್ನಲೇಬೇಕು. ಕಟ್ಟಿಗೆಯಾಗಲಿ, ಇಟ್ಟಿಗೆಯಾಗಲೀ ಕತ್ತರಿಸಿ ಹಾಕುವ ಕಲೆ ಈ ಇಲಿಗೆ ಕರಗತ.

ಬೆಕ್ಕಿಗೇ ಪಂಗನಾಮ

ಇಲಿ ಕಾಟ ನಿಯಂತ್ರಿಸಲು ಮಾಟ ಮಂತ್ರ ಮಾಡಿಸುವುದಕ್ಕಿಂತ ಬೆಕ್ಕನ್ನು ಸಾಕಿದರೆ ಇಲಿ ನಿರ್ನಾಮವಾಗುತ್ತದೆ ಎಂಬುದು ಸಾರ್ವತ್ರಿಕ ಅಭಿಪ್ರಾಯ. ಸೊಕ್ಕಿನ ಬೆಕ್ಕನ್ನು ಮನೆಯಲ್ಲಿ ತಂದಿಟ್ಟುಕೊಂಡರೆ ಇಲಿಯ ಆಟಾಟೋಪಕ್ಕಿಂತ ಬೆಕ್ಕಿನ ಉಪಟಳವೇ ಜಾಸ್ತಿಯಾದೀತಲ್ಲವೇ. ಇಲಿಯಾದರೆ ಎಲ್ಲೋ ಮೂಲೆಯಲ್ಲಿ ಹರಕು ಬಟ್ಟೆಯನ್ನಾದರೂ ತಿಂದುಕೊಂಡಿರುತ್ತೆ.ಆದರೆ ಮುದ್ದಿನಿಂದ ಬೆಕ್ಕನ್ನು ಸಾಕಿದರೆ ಅದಕ್ಕೆ ಮೊಟ್ಟೆಯೇ ಬೇಕು! ಇಲಿಯನ್ನು ಕಂಟ್ರೋಲು ಮಾಡಲು ಬೆಕ್ಕನ್ನು ಸಾಕುವುದೇನೋ ಸರಿ. ಹಾಗಾದರೆ ಆ ಬೆಕ್ಕು ಕೂಡ ಮನೆಯಲ್ಲಿ ಹಾವಳಿ ಮಾಡುವುದಿಲ್ಲ ಎಂಬ ಗ್ಯಾರಂಟಿಯೇನು? ಅಂತಹ ಸಂದರ್ಭದಲ್ಲಿ ಬೆಕ್ಕಿಗೆ ಗಂಟೆ ಕಟ್ಟಬೇಕೇ ಅಥವಾ ಬೆಕ್ಕನ್ನು ಕಂಟ್ರೋಲ್ ಮಾಡುವುದಕ್ಕೆ ಮನೆಯಲ್ಲೇ ಸಿಂಹ ಸಾಕಬೇಕಾದ ಅನಿವಾರ್ಯ ಬರಬಹುದೇ? ಕೆಲವು ಇಲಿಗಳು ಬೆಕ್ಕನ್ನೇ ಯಾಮಾರಿಸುತ್ತವೆ!

ಇಲಿಯ ದೇಹ ರಚನೆಗೂ ಮನುಷ್ಯನ ದೇಹಕ್ಕೂ ತುಂಬಾ ಹೋಲಿಕೆಯಿದೆಯಂತೆ. ಆದ್ದರಿಂದಲೇ ಪ್ರಯೋಗಾಲಯದಲ್ಲಿ ಇಲಿಯ ಮೇಲೆಯೇ ಔಷಧಿ ಪ್ರಯೋಗಿಸಿ ಪ್ರಯೋಗ ಮಾಡುತ್ತಾರಂತೆ.

ಇನ್ನು ಮನುಷ್ಯ ಸ್ವಭಾವಕ್ಕೆ ಹೋಲಿಸಿದರೂ ಇಲಿಯ ಸ್ವಭಾವವೇ ಮೇಲು. ಇಲಿ ಯಾವತ್ತೂ ಹೆಂಡತಿಯಂತೆ ಗಂಡನ ಮೇಲೆ ಸಿಟ್ಟು ಮಾಡಿಕೊಳ್ಳುವುದಿಲ್ಲ. ಇಲಿ ಆಲಸ್ಯತನದಿಂದ ಅಥವಾ ನಿದ್ದೆ ಮಾಡುತ್ತಾ

ಸುಖಾಸುಮ್ಮನೆ ಕಾಲ ಕಳೆದಿದ್ದನ್ನು ಯಾರೂ ಈವರೆಗೆ ನೋಡಿದವರಿಲ್ಲ. ಸದಾ ಚುರುಕು, ಚಟಪಿಟಿಕೆ, ಚಟುವಟಿಕೆ ಇಲಿಯ ಹುಟ್ಟು ಗುಣ. ಗೆದ್ದಾಗ ಹಿಗ್ಗದೇ, ಸೋತಾಗ ಕುಗ್ಗದೇ ಸಮಚಿತ್ತದ ಬದುಕಿನ ಸೂತ್ರಗಳನ್ನು ಇಲಿಯಿಂದ ನಾವು ಕಲಿತುಕೊಳ್ಳಬಾರದೇ ?

ಬೆಟ್ಟ ಅಗೆದು ಇಲಿ ಹಿಡಿದರೆ?

ಯಾರ ಕೆಲಸಕ್ಕಾದರೂ ಕೊಂಕು ನುಡಿಯಬೇಕೆಂದರೆ, ಬೆಟ್ಟ ಅಗೆದು ಇಲಿ ಹಿಡಿದಂತೆ ಎಂಬುದಾಗಿ ಅಪಹಾಸ್ಯ ಮಾಡುವುದುಂಟು. ಆದರೆ ವಾಸ್ತವವಾಗಿ ಬೆಟ್ಟ ಅಗೆಯುವುದಕ್ಕಿಂತ ಇಲಿಯನ್ನು ಮಟ್ಟ ಹಾಕುವುದೇ ಮತ್ತಷ್ಟು ಕಷ್ಟ. ನೀವು ಬೆಕ್ಕನ್ನಾದರೂ ಸಾಕಿ, ಹುಲಿಯನ್ನಾದರೂ ಸಾಕಿ. ಬಲೆಯನ್ನಾದರೂ ಹಾಕಿ, ಬೇಲಿಯನ್ನಾದರೂ ಕಟ್ಟಿ,.. ಒಟ್ಟಾರೆ ಈ ಇಲಿಯ ಬಲಿ ಹಾಕಿ ಎಂಬುದು ಎಲ್ಲರ ಮನೆಯಲ್ಲೂ ಗಂಡನಲ್ಲಿ ಹೆಂಡತಿಯರು ಕೇಳುವ ಬೇಡಿಕೆ.

ಹಾವಿನ ದ್ವೇಷ ಹನ್ನೆರಡು ವರ್ಷ; ಆದರೆ ಇಲಿಯ ಮೇಲೆ ಮಹಿಳೆಯರಿಗೆ 24 ವರ್ಷ ಕಳೆದರೂ ದ್ವೇಷ ಇಳಿಯುವುದೇ ಇಲ್ಲ. ಏಕೆಂದರೆ ಇಲಿಗಳು ಮಹಿಳೆಯರ ರೇಷ್ಮೆ ಸೀರೆಯನ್ನೇ ಚಿತ್ರಾನ್ನ ಮಾಡುತ್ತಾ,

ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುವ ಕಳ್ಳರಂತೆ ತಪ್ಪಿಸಿಕೊಳ್ಳುತ್ತಲೇ ಇರುತ್ತವೆ. ಹುಲಿಯ ಕಾಟ ಅತಿಯಾದರೆ ಬಂದೂಕಿನ ಗುಂಡಿನಿಂದಾದರೂ ಅದರ ಸದ್ದಡಗಿಸಬಹುದು. ಆದರೆ ಮನೆ ಹೊಕ್ಕಿರುವ ಇಲಿಯ ಮೇಲೆ ಗುಂಡು ಹಾರಿಸುವುದೆಂದರೆ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರದಂತಲ್ಲವೇ?

ಪಂಜರವಿಟ್ಟು ಫಾಶಿ ಶಿಕ್ಷೆ

ಇನ್ನು ಪಂಜರವಿಟ್ಟು ಒಂದೆರಡು ಇಲಿಗಳಿಗೆ ಫಾಶಿ ಶಿಕ್ಷೆ ವಿಧಿಸಿದ್ದರೂ ಸಹಾ ಮರುದಿನ ಮತ್ತಷ್ಟು ಹೊಸ ಇಲಿಗಳು ಅವತಾರವೆತ್ತುವುದು ಅವುಗಳ ಜಾಯಮಾನ. ಉತ್ತರ ಧ್ರುವದಿಂ ದಕ್ಷಿಣ ಧ್ರುವಕೋ... ಎಂಬಂತೆ, ಇಲಿ ಉತ್ತರ ದಕ್ಷಿಣ ಧ್ರುವವಷ್ಟೇ ಅಲ್ಲ, ಧ್ರುವ ನಕ್ಷತ್ರ ಲೋಕದವರೆಗೂ ಸರ್ವಾಂತರ್ಯಾಮಿಯಾಗಿದೆ. ಕೋಳಿಯನ್ನಾಗಲಿ, ಕುರಿಯನ್ನಾಗಲಿ, ದನವನ್ನಾಗಲಿ ನಾವು ಕಷ್ಟಪಟ್ಟು ಸಾಕಬೇಕು, ಆದರೆ ಇಲಿ ಹಾಗಲ್ಲ. ನೀವು ಸಾಕದಿದ್ದರೂ ನಿಮಗೆ ಸಾಕುಸಾಕು ಮಾಡುವಷ್ಟು ನಿಮ್ಮ ಮನೆಯೊಂದಿಗೆ ಅದು ನಂಟು ಬೆಳೆಸಿಕೊಂಡಿರುತ್ತದೆ. ನಿಮ್ಮ ಮನೆಯ ಊಟ ತಿಂಡಿಗೆ ಗಂಟು ಬಿದ್ದಿರುತ್ತದೆ.

ಇಲಿಗಳು ಮನೆಯಲ್ಲಿ ಮಾಡುವ ಹರಣ, ಹಗರಣಗಳನ್ನು ಸಿಬಿಐಗೆ ಕೂಡ ತನಿಖೆ ಮಾಡಲು ಸಾಧ್ಯವಿಲ್ಲ. ಈಗಿನ ಕಾಲದ ಇಲಿಗಳಂತೂ ಆ ಕಿಂದಿರಿಜೋಗಿ ಬಂದರೂ ಹೆದರುವುದಿಲ್ಲ, ಸಾಕ್ಷಾತ್ ಬಿನ್ ಲಾಡೆನ್ನನ ದಾಳಿಗೂ ಹೆದರುವುದಿಲ್ಲ. ಮೊನ್ನೆ ಒಬ್ಬರ ಹೊಸಮನೆಯ ಪೂಜೆ. ಈ ಗೃಹಪ್ರವೇಶಕ್ಕೆ ಗೋವನ್ನು ತಂದು, ಆ ಗೋವಿನಿಂದಲೇ ಮೊದಲ್ಗೊಂಡು ಮನೆಯ ಪ್ರವೇಶ ಮಾಡಬೇಕೆಂದು ಅವರು ಸಿದ್ಧತೆ ಮಾಡಿಕೊಂಡಿದ್ದರು. ಆದರೆ ಪ್ರವೇಶದ ಮುಹೂರ್ತಕ್ಕೆ ಮುಂಚೆಯೇ ಇಲಿ ಸಕುಟುಂಬ ಸಪರಿವಾರ ಸಮೇತ, ಇಷ್ಟ ಮಿತ್ರರಿಂದೊಡಗೂಡಿ ಮನೆಯೊಳಗೆ ಸೇರಿಕೊಂಡು ಗೃಹಪ್ರವೇಶದ ಶಾಸ್ತ್ರವನ್ನು ನೆರವೇರಿಸಿಯಾಗಿತ್ತು! ಗೃಹಪ್ರವೇಶಕ್ಕೆ ಸಿಂಗಾರಗೊಂಡು ವಿಐಪಿಯಂತೆ ಬಂದಿದ್ದ ಆ ಗೋವು ಇದರಿಂದ ಪರದೇಶಿಯಂತೆ ಪೆಚ್ಚು ಮೋರೆ ಹಾಕಿಕೊಂಡು ನಿಂತಿತ್ತು.

ಒಟ್ಟಾರೆ ಇಲಿ ತುಂಬಾ ಬುದ್ಧಿವಂತ ಅಷ್ಟೇ ಅಲ್ಲ ಕಿತಾಪತಿ ಜೀವಿಯೂ ಹೌದು. ಹೆಂಡತಿಯಂತೆ ಇಲಿಯೂ ಜೀವನದಲ್ಲಿ ಒಂದಷ್ಟು ತಕ್ಕ ಪಾಠಗಳನ್ನು ಕಲಿಸುವುದಂತೂ ಕಟು ಸತ್ಯ.

ವಿರಾಮದ ಪೋಸ್ಟ್ ಆಫೀಸು

ಭಾನುವಾರದ ವಿರಾಮದಲ್ಲಿ ಎನ್. ಎಸ್. ಶ್ರೀಧರ ಮೂರ್ತಿಗಳ 'ಬೇಂದ್ರೆ ಸಂಗೀತ' ಲೇಖನವು ಪ್ರಬುದ್ಧವೂ, ಪಾಂಡಿತ್ಯಭರಿತವೂ, ಆಗಿದ್ದು ಸಾಹಿತ್ಯ ಸಂಗೀತ ಆಧ್ಯಾತ್ಮಗಳ ಅಭಿರುಚಿಯುಳ್ಳವರಿಗಲ್ಲದೆ ಸಾಮಾನ್ಯ ಓದುಗರಿಗೂ ಮನಮುಟ್ಟುವಂತೆ ಮೂಡಿಬಂದಿತ್ತು. ಬೇಂದ್ರೆಯವರ ಬಹುಮುಖ ಪ್ರತಿಭೆಯನ್ನು ಮತ್ತಷ್ಟು ಅರಿಯಬೇಕು ಎಂದು ಪ್ರೇರಣೆ ನೀಡಿತಲ್ಲದೆ ಸಂಗೀತದ ಬಗ್ಗೆ ಒಲವುಳ್ಳವರಿಗೆ ಸಂಗ್ರಹಯೋಗ್ಯ ಬರಹವಾಗಿತ್ತು.

ಕರ್ನಲ್ ಮಹೇಶ್ ಹೊಸಮನಿ (ವಿಶ್ರಾಂತ)

ಸುದೀರ್ಘ ಲೇಖನ 'ಬೇಂದ್ರೆ ಸಂಗೀತ'ವನ್ನು ವಿರಾಮ ಪುರವಣಿಯಲ್ಲಿ ಓದಿದೆ. 'ರವೀಂದ್ರ ಸಂಗೀತ'ಕ್ಕೆ ಹೋಲಿಸಿ 'ಬೇಂದ್ರೆ ಸಂಗೀತ'ದ ಮಹತ್ವವನ್ನು ಸಂಶೋಧನಾತ್ಮಕವಾಗಿ ಮತ್ತು ಮನೋಜ್ಞವಾಗಿ ಸಾದರಪಡಿಸಿದ್ದಾರೆ. ಈ ಬರಹದ ವಿಷಯದ ಹಾಗೂ ವಿಶ್ಲೇಷಣೆಗಳ ಹರವು ಎಷ್ಟಿದೆ ಎಂದರೆ, ಮತ್ತೆರಡು ಬಾರಿ ನಿಧಾನವಾಗಿ ಓದಿದೆ. ನನ್ನ ಮಡದಿ ಶೈಲಾಳೊಂದಿಗೆ ಕೂಡ ಹಂಚಿಕೊಂಡೆ. ಚಿಕ್ಕವನಿದ್ದಾಗ ಸಾಗರದ ಪ್ರಭಾಕರ ರಾಯರಿಂದ ಸಂಗೀತ ಕಲಿತಿದ್ದು ನೆನಪಾಯ್ತು. 22/7 ರ ಸೂಕ್ಷ್ಮತೆಯ ಬಗ್ಗೆ ಹಿಂದುಸ್ತಾನಿ ಸಂಗೀತದ ಮೂಲ ಪಾಠಗಳು ಮತ್ತೆ ನೆನಪಾದವು. ಅವರು ಹೇಳಿಕೊಡುತ್ತಿದ್ದ ತಂಬೂರಿ ಶೃತಿಯಲ್ಲಿನ ಸಂಗೀತಕ್ಕೂ, 12/7 ರ ಹಾರ್ಮೋನಿಯಂ ಜೊತೆ ಬೆಳೆದು ಬಂದ ಸಂಗೀತಕ್ಕೂ ಇದ್ದ ವ್ಯತ್ಯಾಸ ಆಗ ತಿಳಿದಿರಲಿಲ್ಲ. ಹಾರ್ಮೋನಿಯಂ ಪೆಟ್ಟಿಗೆಯ ಜೊತೆ ಕರ್ನಾಟಕ ಸಂಗೀತವನ್ನು ಕಲಿತಿದ್ದೂ ಆಯ್ತು. ಶೈಲಾ ಕೂಡ ತನ್ನ ಬಾಲ್ಯದಲ್ಲಿ ಹಡಿನಬಾಳು ಪುರೋಹಿತರು ಅವಳ ಮನೆಗೆ ಬಂದಾಗೆಲ್ಲಾ ಸಾಮವೇದ ಪಠಿಸುವಾಗ ವೇದದ ಕೆಲವು ಸಾಲುಗಳಲ್ಲಿ ಬರುವ ಹಾರ್ಮೋನಿಯಂನಲ್ಲಿ ಇಲ್ಲದ ಅಕಾರಗಳು, ಆಕಾರಗಳನ್ನು ಮುಖವನ್ನು ಆಚೆಗೆ ಮಾಡಿ, ಮೇಲೆ, ಕೆಳಗೆ ಓರೆಮಾಡಿ ಸ್ವರಹೊಮ್ಮಿಸುವ ಅವಶ್ಯಕತೆಗಳನ್ನು ವಿವರಿಸಿದ್ದರಂತೆ. 20 ವರ್ಷಗಳ ಹಿಂದೆ ನೀನಾಸಂ ಸಂಸ್ಕೃತಿ ಶಿಬಿರದ ಸಮಯದಲ್ಲಿ ತಂತಿ ವಾದ್ಯ ಪ್ರವೀಣ ಭಾಸ್ಕರ್ ಚಂದಾವರ್ಕರ್ ಕೊಟ್ಟ ಉಪನ್ಯಾಸದಲ್ಲಿ ಭಾರತೀಯ ಸಂಗೀತದ ಮೂಲದಲ್ಲಿ ಇದ್ದ ವೇದಗಳ ಆ ಎಕ್ಸ್ ಟ್ರಾ ನಾದಗಳ ಬಗ್ಗೆ ಹೇಳಿದ್ದು ಮತ್ತೆ ನೆನಪಾಯಿತು. ಈಗಿನ ಸಂಗೀತದಲ್ಲಿ ಅವೆಲ್ಲ ಅಪ್ರಸ್ತುತವಾಗಿದೆಯಲ್ಲ ಎಂಬ ಖೇದವನ್ನು ಈ ಲೇಖನ ನನ್ನ ಮನದ ಆಳಕ್ಕೆ ನುಗ್ಗಿಸಿ ಬಿಟ್ಟಿದೆ! ಒಟ್ಟಾರೆ ಇದೊಂದು ಅತ್ಯುತ್ತಮವಾದ ಸಮಗ್ರ ಸಂಗೀತ ತತ್ವಗಳ ಅಂಶಗಳನ್ನು ಒಳಗೊಂಡ ಕವಿ ಶ್ರೇಷ್ಠರಾದ ಬೇಂದ್ರೆ ಅವರ ನೆನಪಿನಲ್ಲಿ ಹಂಚಿಕೊಂಡ ಬಹುಮುಖ್ಯವಾದ ಬರಹ. ಕವಿ ಬೇಂದ್ರೆ ಅವರ ಬಗ್ಗೆ, ಜೊತೆಯಲ್ಲಿ ಕೆಲವು ಪ್ರಮುಖವಾದ ಕಾವ್ಯಗಳ ಸಾಲುಗಳೊಂದಿಗೆ ಇಷ್ಟೊಂದು ಉಪಯುಕ್ತವಾದ ಸಂಗ್ರಹ ಯೋಗ್ಯ ಲೇಖನವನ್ನು ನೀಡಿದ್ದಕ್ಕಾಗಿ ಶ್ರೀಧರಮೂರ್ತಿಯವರಿಗೂ, ವಿರಾಮ ತಂಡಕ್ಕೂ ಧನ್ಯವಾದಗಳು.

ರಾಜಾರಾಮ್ ಕೆ. ಎಸ್. ಬೆಂಗಳೂರು

» ಸುಮಾ ರಮೇಶ್ ಹಾಸನ

ಪೀಲು ಹಿಂದಿನ ಫೀಲಿಂಗ್

ತರಕಾರಿ, ಹಣ್ಣು, ಈರುಳ್ಳಿ ಇವೆಲ್ಲವನ್ನೂ ಬಳಸುವ ಮುಂಚೆ ಸಿಪ್ಪೆಯನ್ನು ತೆಗೆಯುವುದು ಅಥವಾ ಪೀಲ್ ಮಾಡುವುದು ಅವಶ್ಯ. ಬದುಕಿನಲ್ಲೂ ಇಂತಹ ಪೀಲ್ ಇರುತ್ತವೆ! ಆಗ ಆಗುವ ಫೀಲಿಂಗ್ ಎಂಥದ್ದು?

ಹಣ್ಣು ತರಕಾರಿಗಳನ್ನು ಸಿಪ್ಪೆಯೊಂದಿಗೆ ತಿಂದರೆ ದೇಹಕ್ಕೆ ಹಿತವೆಂದು ಹಿಂದಿನಿಂದಲೂ ಹಿರಿಯರು ನಂಬಿದ್ದರು. ಹಾಗೆಂದು ಹಲಸು, ಬಾಳೆ, ಸೀತಾಫಲ, ನುಗ್ಗೆಕಾಯಿಗಳನ್ನು ಹಾಗೆಯೇ ತಿನ್ನುವುದು ಅಸಾಧ್ಯ. ಸಪೋಟ ಆಲೂಗೆಡ್ಡೆ, ತೊಂಡೆ, ಬೆಂಡೆಗಳನ್ನು ಚೆನ್ನಾಗಿ ತೊಳೆದು ಪೀಲ್ ಮಾಡದೆಯೂ ಮೀಲ್ ಮಾಡಬಹುದು. ತರಕಾರಿ ಹಣ್ಣುಹಂಪಲುಗಳಿಗೆ ಇಂದು ಮಳೆಯ ನೀರಿಗಿಂತಲೂ ಕೆಮಿಕಲ್ ದ್ರವದ ಜಳಕವೇ ಹೆಚ್ಚಾಗಿರುವುದರಿಂದ ಹಾಗೆಯೇ ತಿಂದರೆ ಸಿಪ್ಪೆಯೊಂದಿಗೆ ರಾಸಾಯನಿಕಗಳೂ ಒಳಸೇರಿ ದೇಹವನ್ನು ಹಿಪ್ಪೆ ಮಾಡಿಬಿಡುವವು.

ಮಾಲ್‌ಗಳಲ್ಲಿರಿಸಿದ, ಎಲೈಟ್ ಗುಂಪಿಗೆ ಸೇರಿದ ಕೆಲವು ತರಕಾರಿ, ಹಣ್ಣುಗಳು ಸೆಲಿಬ್ರಿಟಿಗಳಂತೆಯೇ ಮಿಂಚುವ ಮುಖವಾಡ ಧರಿಸಿ ಗ್ರಾಹಕರನ್ನು ಸೆಳೆಯುತ್ತವೆ. ಕಲ್ಲಂಗಡಿ, ಸೇಬು, ಬೆಂಡೆಕಾಯಿಗಳು ಚುಚ್ಚುಮದ್ದು ಪಡೆದು, ಮೇಣ ಹೊದ್ದು ತಮ್ಮ ಸಾಂಪ್ರದಾಯಿಕ ಸೌಂದರ್ಯವನ್ನು ಮೀರಿ ಮಿರಿಮಿರಿ ಮಿಂಚುತ್ತಾ ಅಲ್ಲಿನ ಪ್ರೊಡ್ಯೂಸ್ ಸೆಕ್ಷನ್ ನಲ್ಲಿ ಕುಳಿತಿರುತ್ತವೆ. 'ಮೇಲೆ ತಳುಕು ಒಳಗೆ ಹುಳುಕು' ಎಂಬಂತೆ ಇವುಗಳ ಹೊಳಪಿಗೆ ಮರುಳಾದರೆ ಕರುಳಿಗೆ ಉರುಳಾಗುವುದೆಂದು ಆಹಾರ ಸುರಕ್ಷತಾ ಇಲಾಖೆಯವರು ಎಚ್ಚರಿಸುವರು.

ಮುಖದ ಕಾಂತಿಯನ್ನು ಹೆಚ್ಚಿಸುವ ಕ್ರೀಮು, ಬಾಮುಗಳಂತೆಯೇ ಇಂದು ಹಲವು ಬಗೆಯ ಪೀಲಿಂಗ್ ಜೆಲ್‌ಗಳು ಮಾರುಕಟ್ಟೆಯಲ್ಲಿ ಲಭ್ಯ. ಅವನ್ನು ಮುಖಕ್ಕೆ ತೀಡಿದರೆ ದೇಹದ ಶಾಖಕ್ಕೆ ಅದು ಮಾಸಿ ಮುಖವಾಡದಂತಾಗುವುದು. ಆ ಮೇಲ್ಕವಚವನ್ನು ಪೀಲ್ ಮಾಡಿದರೆ ಬ್ಲ್ಯಾಕ್ ಹೆಡ್ಸ್ ವೈಟ್ ಹೆಡ್ಸ್‌ಗಳೆಲ್ಲಾ ಚಿಮುಟಕ್ಕೆ ಸಿಲುಕಿದ ಮುಳ್ಳುಗಳಂತೆ ಮುಖವಾಡದೊಂದಿಗೇ ಹೊರಬರುತ್ತವೆ. ಹೀಗೆ ಕೊಳೆ, ಕಳೆ ಕಳಚಿದ ಮೊಗ, ನೊಗ ಹೂಡಿ ಹಸನಾಗಿಸಿದ ಇಳೆಯಂತೆ ಕಳೆಗಟ್ಟುವುದು. ಆಂತರಿಕ ಸೌಂದರ್ಯ ಘನವಾಗಿದ್ದರೆ ಬಾಹ್ಯವೂ ಕಾಂತಿಯುಕ್ತವಾಗುವುದು ಎಂಬುದು ಹಲವರ ಅಂಬೋಣ. ಆದರೂ ಪಾಲೀಶ್ ಮಾಡದಿರೆ ಆಭರಣ, ಪೀಠೋಪಕರಣಗಳೂ ಆಕರ್ಷಕವಾಗಿ ಕಾಣವು ಎಂಬುದೂ ಅಷ್ಟೇ ಸತ್ಯ. ಕೆಮಿಕಲ್ ಪೀಲ್, ದುಬಾರಿ ಕಾಸ್ಮೆಟಿಕ್ ಸರ್ಜರಿಯಂತಹ ಸೌಂದರ್ಯ ಚಿಕಿತ್ಸೆಯಿಂದ ಮಿಂಚುವ ನಟಿಯರು, ಸೆಲೆಬ್ರಿಟಿಗಳನ್ನು ಕಂಡಾಗ 'ಯು ಆರ್ ನಾಟ್ ಅಗ್ಲಿ ಯು ಆರ್ ಜಸ್ಟ್ ಪೂರ್' ಎಂಬ ಭಾವ ಹಾದು ಹೋಗುವುದು.

ಬಾಲ್ಯದಲ್ಲಿ ನಮ್ಮ ತರಲೆ ತುಂಟಾಟಗಳಿಗೆ ಹರಿಹಾಯುತ್ತಿದ್ದ ಹಿರಿಯರ ಬೈಗುಳಗಳ ಪಟ್ಟಿಯಲ್ಲಿ ಚಮಡ (ಚರ್ಮ) ಸುಲೀತೀನಿ ನೋಡು... ಎಂಬ ಅಂಶವೂ ಇರುತ್ತಿತ್ತು. ಆ ಚಣ ನಮ್ಮ ಮನದ ಭಿತ್ತಿಯಲ್ಲಿ ಪೊರೆ ಕಳಚಿ ಪೊದೆಯೊಳಗೆ ಸರಿದು ಹೋಗುವ ಹಾವುಗಳು, ಸೆಲ್ಫ್ ಫೀಲಿಂಗ್ ನಿಂದ ಬೆಳ್ಳಗಾಗುವ ಜಿರಲೆಗಳ ಚಿತ್ರ ಮೂಡಿ ಆ ಗದರಿಕೆಯಲ್ಲೂ ಹಿತವಾದ ಕನಸೊಂದು ಜಾಗೃತವಾಗುತ್ತಿತ್ತು. ಗೌರವರ್ಣದ ಬಗೆಗೆ ಅಗಾಧ ಗೌರವ ಇದ್ದ ಆ ಎಳೆಯ ಪ್ರಾಯದಲ್ಲಿ ಚರ್ಮ ಸುಲಿಯುವಿಕೆಯಿಂದ ಶ್ವೇತ ವರ್ಣ ಪ್ರಾಪ್ತವಾದೀತು ಎಂದು ಭಾವಿಸಿದ್ದೆವು. ಇಂದು ಚರ್ಮದ ಲೇಸರ್ ರೀಸರ್ಫೇಸಿಂಗ್ ಪ್ರಕ್ರಿಯೆಗೆ ಒಡ್ಡಿಕೊಳ್ಳುವವರನ್ನು ಕಂಡಾಗ ಆ ನೆನಪು ಮರುಕಳಿಸಿ ಮುಖದಿ ಮಂದಹಾಸ ಮೂಡುವುದು.

ನಮ್ಮ ತ್ವಚೆಯು ಸುಲಭವಾಗಿ ಮರುಹುಟ್ಟು ಪಡೆಯುವ, ರಿಸೈಕ್ಲಿಂಗ್‌ಗೆ ಒಗ್ಗುವ ಗುಣವುಳ್ಳದ್ದು. ಆಘಾತ, ಅಪಘಾತಗಳಿಂದ ಚರ್ಮಕ್ಕೆ ಗಾಯವಾದರೆ ಘಾಸಿಗೊಂಡ ಮೇಲ್ಪದರ ಒಣಗಿ ಬೀಳುವಷ್ಟರಲ್ಲಿ ಅದರ ಕೆಳಗೆ ಹೊಸ ಚರ್ಮ ಸೃಷ್ಟಿಯಾಗಿರುತ್ತದೆ. ಹರಿದ ಬಟ್ಟೆಗೆ ತೇಪೆ ಹಾಕಿದಂತೆ ತರಿದ ಚರ್ಮಕ್ಕೂ ತೇಪೆ ಹಾಕುವ ಪ್ಲಾಸ್ಟಿಕ್ ಸರ್ಜನ್‌ಗಳಿರುವರು. ಅದಕ್ಕಾಗಿ ಅದೇ ದೇಹದ ಬೇರೆ ವಲಯದಿಂದ ವಲಸೆ ಬರುವ ಚರ್ಮವನ್ನು ಘಾಸಿಗೊಂಡ ಜಾಗದಲ್ಲಿರಿಸಿ ಕಸಿ ಮಾಡಲಾಗುವುದು.

ಮನೆಯ ಹೆಂಗಳೆಯರು ಈಳಿಗೆ ಮಣೆಯ ಮೇಲೆ ಕುಳಿತು ಕ್ಯಾರೆಟ್, ಸೌತೇಕಾಯಿಗಳನ್ನು ನಾಜೂಕಾಗಿ ಪೀಲ್ ಮಾಡುವಾಗ ಚಿಕ್ಕಂದಿನಲ್ಲಿ ನಾವು ಅವರ ಬದಿ ಕುಳಿತು ಹೋಳುಗಳಿಗಾಗಿ ಕೈ ಚಾಚುತ್ತಿದ್ದೆವು. ಇಂದು ಪೀಲರ್ ಹಾಗು ಚಾಕು ಬಳಸಿ ಮಕ್ಕಳೂ ಸರಾಗವಾಗಿ ಹೆರೆಯುವ ಹೆಚ್ಚುವ ಕೆಲಸವನ್ನು ಮಾಡುವರು. ಕೆಜಿ ಗಟ್ಟಲೆ ಆಲೂಗಡ್ಡೆಯನ್ನು ವಾಶಿಂಗ್ ಮಶೀನ್‌ಗೆ ತುಂಬಿ ಅದರ ಸಿಪ್ಪೆಯನ್ನು ಪೀಲ್ ಮಾಡಿದ ವಿಡಿಯೋ ಭಾರೀ ವೈರಲ್ ಆಗಿತ್ತು. ಸುಲಭವಾಗಿ ಮಾಡುವ ಕೆಲಸಕ್ಕೆ ಬಾಳೆಹಣ್ಣು ಸುಲಿದಷ್ಟು ಸರಳ ಎನ್ನುವುದಿದೆ. ಆದರೆ ಹಲಸು, ಪೈನಾಪಲ್‌ಗಳನ್ನು ಪೀಲ್ ಮಾಡುವುದು ಸೇಫ್ ಲಾಕರ್‌ಗಳನ್ನು ಬೇಧಿಸಿದಷ್ಟೇ ಕಠಿಣ ಬಿಡಿ.

ಮದುವೆ ಸಮಾರಂಭಗಳಲ್ಲಿ ಕೊಬ್ಬರಿಯ ಸಿಪ್ಪೆಯನ್ನು ಅಲ್ಲಲ್ಲಿ ಹೆರೆದು ಸುಂದರ ಕಲಾಕೃತಿಯಾಗಿಸಿ ಬೀಗರಿಗೆ ನೀಡುವ ಸಂಪ್ರದಾಯವಿದೆ. ಹೀಗೆ ಪೀಲ್ ಆದ ಗಿಟಕುಗಳಲ್ಲಿ ಚುಟುಕಾಗಿ ಹೆಂಗಳೆಯರು ತಮ್ಮ ಕಲೆಯನ್ನು ಮೆರೆಯುವರು. ಕೆಲವೊಮ್ಮೆ ಆಪ್ತರು ಕೊಡುವ ಉಡುಗೊರೆಗಿಂತಲೂ ಅದರ ಹೊರಕವಚವೇ ಹೆಚ್ಚು ಆಕರ್ಷಕವಾಗಿರುತ್ತದೆ. ಒಳಗಿರುವ ವಸ್ತು ಕೊಡುವ ಖುಷಿಗಿಂತಲೂ ಅದರ ಹೊರಪದರವನ್ನು ಬಿಡಿಸುವಾಗಿನ ಚಣ ಕೌತುಕಭರಿತ, ಆಸಕ್ತಿದಾಯಕ!

ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಹಲವು ಕೃತಿಕಾರರು ಅದೆಷ್ಟು ಸೊಗಸಾಗಿ ತಮ್ಮ ಹೊತ್ತಿಗೆಗಳನ್ನು ಸೀಲ್ ಮಾಡುವರೆಂದರೆ ಅತಿಥಿಗಳು ಅದನ್ನು ಪೀಲ್ ಮಾಡುವ ಹೊತ್ತಿಗೆ ಸಾಕಷ್ಟು ಬೆವರಿಳಿಸುವರು. ಸಮಯಕ್ಕೆ ಕತ್ತರಿ, ಚಾಕುವಿನಂತಹ ಪರಿಕರಗಳು ದೊರಕದೆ ಅಲ್ಲಲ್ಲಿ ಪೇಸ್ಟ್ ಮಾಡಿದ ಪಾರದರ್ಶಕ ಟೇಪನ್ನು ತಿಣುಕುತ್ತಲೇ ಭೇದಿಸಿ ಕೃತಿಯೊಂದಿಗೆ ತಾವೂ ಬಿಡುಗಡೆ ಹೊಂದುವರು.

ಬಾಲ್ಯ ಕಾಲದಲ್ಲಿ ಚಿಣ್ಣರನ್ನೆಲ್ಲಾ ಹಿರಿಯರು ಒಂದು ಚಾಪೆಯ ಮೇಲೆ ಕೂರಿಸಿ ಸುಲಿಯಲು ಕೊಡುತ್ತಿದ್ದ ಅವರೆ, ತಿಂಗಳ ಹುರುಳಿ ಕಾಯಿಗಳನ್ನು ಕತೆ, ಹಾಡು, ಹಾಸ್ಯ ಚಟಾಕಿಗಳ ಸಿಡಿಸುತ್ತಾ ಬಿಡಿಸುತ್ತಿದ್ದೆವು. ಕೆಲವೊಮ್ಮೆ ಅವರೆಯ ಮೇಲ್ಕವಚವನ್ನು ತೆರೆದೊಡನೆಯೇ ಹಸಿರು ಹುಳುಗಳು ಪುಟಿದೇಳುತ್ತಿದ್ದವು. ನಾವು ಬೆದರಿ, ಬೆಚ್ಚಿ, ಕಿರುಚಿ ಥಟ್ಟನೆ ಸ್ಪ್ರಿಂಗ್‌ನಂತೆ ಮೇಲೇಳುತ್ತಿದ್ದೆವು. ಅವರೆ ಸೀಸನ್‌ನಲ್ಲಿ ಹಿಚುಕವರೆಯದ್ದು ಮತ್ತೊಂದು ವಿಶೇಷ. ಅದು ಹುಳಿ, ರೊಟ್ಟಿ, ಹುರಿಗಾಳು, ಉಪ್ಪಿಟ್ಟು ಇನ್ನಿತರ ಖಾದ್ಯಗಳಲ್ಲಿ ಬೆರೆತು ಅಡುಗೆಯ ಸ್ವಾದವನ್ನು ಹೆಚ್ಚಿಸುತ್ತಿತ್ತು. ಅದಕ್ಕಾಗಿ ಸಡಗರಿಸುತ್ತಿದ್ದ ಮಹಿಳೆಯರು ಕಾಳು ಹಿಚುಕುವ ಕೆಲಸಕ್ಕೆ ಚಿಣ್ಣರನ್ನು ಪುನಃ ಒಗ್ಗೂಡಿಸುತ್ತಿದ್ದರು. ಎರಡನೆಯ ಹಂತದ ಫೀಲಿಂಗ್ ಪ್ರಕ್ರಿಯೆಗಾಗಿ ನೀರಿನಲ್ಲಿ ಮುಳುಗೆದ್ದ ಕಾಳುಗಳನ್ನು ಬೇಳೆಯಾಗಿಸಲು ನಾವು ಬೆರಳುಗಳ ನಡುವೆ ಕಸರತ್ತು ನಡೆಸುತ್ತಿದ್ದೆವು. ಶುರುವಿನಲ್ಲಿ ಇದು ಕಠಿಣವೆನಿಸಿ ಒಮ್ಮೆ ಕಟಿಂಗ್ ಪ್ಲೇಯರ್ ಬಳಸಿ ಹಿಚುಕಲು ಹೋಗಿ ಅದು ಹಿಟ್ಟಾಗಿ ಹೊರಬಂದಿತ್ತು. ಕೆಲವು ಕಾಳುಗಳು ಪೀಲಿಂಗ್ ಸಮಯ ಟಣ್ಣನೆ ಜಿಗಿದು ಸೋಫಾ, ಚೇರು, ಟೇಬಲ್‌ಗಳಡಿ ಬಚ್ಚಿಟ್ಟುಕೊಂಡು ಕಣ್ಣಾಮುಚ್ಚಾಲೆ ಆಡಿಸುತ್ತಿದ್ದವು.

ಬೆಳ್ಳುಳ್ಳಿ ಗೆಡ್ಡೆ, ಹಿಳುಕುಗಳನ್ನು ಸುಲಿಯುವ ಸಮಯ ನಮ್ಮ ಉಗುರುಗಳು ಉರಿಯಲು ಶುರುವಿಡುತ್ತಿದ್ದವು. ಹಲವು ಮುಖಂಡರುಗಳ, ರಾಜಕೀಯ ಧುರೀಣರ ಹಗರಣಗಳ ಹಿಸ್ಟರಿಯನ್ನು ಪೀಲ್ ಮಾಡುತ್ತಾ ಹೋದಂತೆ ಇನ್ನಷ್ಟು ಮತ್ತಷ್ಟು ಹೊಸ ಚಿತ್ರಣಗಳ ರೀಲುಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಮೀನಿನ ಹೆಜ್ಜೆಯನ್ನೂ ಹೆಣ್ಣಿನ ಮನಸನ್ನೂ ಅರಿಯಲಾಗದು ಎಂಬ ಮಾತನ್ನು ಇವರಿಗೂ ವಿಸ್ತರಿಸಬಹುದು.

ಈರುಳ್ಳಿಯ ಪದರಗಳನ್ನು ಬಿಡಿಸುತ್ತಾ ಹೋದಂತೆ ಎಲ್ಲವೂ ಖಾಲಿಯಾಗಿ ಕೊನೆಗೆ ಉಳಿಯುವುದು ಬರೀ ಕಣ್ಣೀರು! ಅಂತೆಯೇ ಮನದ ಪದರಗಳ ಪೀಲ್ ಮಾಡುತ್ತಾ ಹೋದಂತೆ ಹೃದಯ, ಬುದ್ಧಿಯಲ್ಲಿರುವ ಗಂಟು ತಂಟೆಗಳು ಗಾಢವಾಗಿ ಗೋಚರಿಸುವವು.

ಭಾರತೀಯ ವೈಚಾರಿಕ ಪ್ರಜ್ಞೆಯ ಅಸಾಮಾನ್ಯ ಅಧ್ವರ್ಯು

ಹೊ.ವೆ.ಶೇಷಾದ್ರಿ

» ಮಂಜುನಾಥ ಅಜ್ಜಂಪುರ

ಕಳೆದ ಒಂದೆರಡು ಶತಮಾನಗಳ ಕಾಲಘಟ್ಟದಲ್ಲಿ, ಬ್ರಿಟಿಷರು, ರಮೆಕಾಲೆವಾದಿಗಳು ಭಾರತದ ಅಸ್ಮಿತೆ – ಆತ್ಮಾಭಿಮಾನಗಳನ್ನೇ ನಾಶ ಮಾಡಿಬಿಟ್ಟರು. ಭಾರತೀಯ ಕೃಷಿ, ಉದ್ಯಮ ಮತ್ತು ಶಿಕ್ಷಣ ವ್ಯವಸ್ಥೆಯನ್ನು ಬ್ರಿಟಿಷರು ಅಷ್ಟರಲ್ಲಿಯೇ ಬುಡಮೇಲು ಮಾಡಿದ್ದರು. ಅನೇಕ ದೇಶಗಳಿಂದ ವಿದ್ಯಾರ್ಥಿಗಳು ಇಲ್ಲಿನ ವಿಶ್ವವಿದ್ಯಾಲಯಗಳಿಗೆ ವಿದ್ಯಾರ್ಜನೆಗಾಗಿ ಬರುತ್ತಿದ್ದ ಕಾಲ ಹೋಗಿ, ಎಲ್ಲ ಭಾರತೀಯರೂ ನಿರಕ್ಷರಕುಕ್ಷಿಗಳಾಗಿಬಿಟ್ಟರು. ಉದ್ಯಮ, ತಂತ್ರಜ್ಞಾನಗಳನ್ನು ಇಲ್ಲಿಂದ ವಿದೇಶೀಯರು ಕೊಂಡೊಯ್ಯುತ್ತಿದ್ದ ಕಾಲ ಹೋಗಿ, ನಮ್ಮ ಜನರೇ ಅವಿವೇಕಿ ದಿಕ್ಕುಗೇಡಿಗಳಾಗಿಹೋದರು. ವಿದೇಶೀಯರಿಗೂ ಉಚಿತ ಅನ್ನ, ವಿದ್ಯೆ ನೀಡುತ್ತಿದ್ದ ಈ ದೇಶವು ಭಿಕ್ಷುಕರ, ದರಿದ್ರರ, ರೋಗಿಷ್ಠರ ನಾಡಾಗಿಹೋಯಿತು. ಇಷ್ಟು ಸಾಲದೆಂದು ಬ್ರಿಟಿಷರು ಮತ್ತು ಅವರ ದುಷ್ಟವಾರಸಿಕೆಯವರು, ತಮ್ಮ ಪಠ್ಯಪುಸ್ತಕಗಳ ಮೂಲಕ ನಮ್ಮದೊಂದು ದೇಶವೇ ಅಲ್ಲ, ನಮ್ಮದು ಒಂದು ಸಂಸ್ಕೃತಿಯೂ ಅಲ್ಲ, ಎನ್ನುವ ಪ್ರಥೆಯನ್ನೇ ನಮ್ಮ ತಲೆಗೆ ತುಂಬಿದರು.

ಡಾ. ಕೇಶವ ಬಲಿರಾಮ್ ಹೆಡಗೇವಾರ್ ಅವರು 1925ರಲ್ಲಿ ಹಿಂದೂ ಸಂಘಟನೆಗಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರಾರಂಭಿಸಿದ ಪರ್ವಕಾಲದಲ್ಲಿ ಧರ್ಮ ಮತ್ತು ಹಿಂದೂ ಪದಗಳ ವ್ಯಾಖ್ಯಾನವೂ ಸಹ ಒಂದು ಸವಾಲೇ ಆಗಿತ್ತು. ಈ ವ್ಯಾಖ್ಯಾನವು ಇಂದಿಗೂ ಒಂದು ಸಮಸ್ಯೆಯೇ ಆಗಿದೆ, ಸವಾಲಾಗಿಯೇ ಉಳಿದಿದೆ. ಅನಂತರದ ಮುಖ್ಯಸ್ಥರಾದ ಗುರೂಜಿ ಮಾಧವ ಸದಾಶಿವ ಗೋಳವಲಕರ್ ಅವರು ಬಹಳ ದೊಡ್ಡ ವಿದ್ವಾಂಸರು. ಭಾರತೀಯ ಗುರುಕುಲಗಳು ನಾಶವಾಗಿ, 19 ಮತ್ತು 20ನೆಯ ಶತಮಾನಗಳಲ್ಲಿ ಪ್ರಕಟವಾದ ಅಪ–ವ್ಯಾಖ್ಯಾನದ ಇಂಗ್ಲಿಷ್ ಗ್ರಂಥಗಳನ್ನು ಸೋಸಿ, ಭಾರತೀಯತೆಯ ಸತ್ಯದ ಬಂಗಾರವನ್ನು ತೆಗೆಯಬೇಕಿತ್ತು. ಕಾಲದ ಅಗತ್ಯವಾಗಿ, ಅಪಾರ ಚಿಂತನ – ಮಂಥನಗಳಿಂದ ಸೂಕ್ತ ವ್ಯಾಖ್ಯಾನ–ನವನೀತದ ಸೃಷ್ಟಿಯಾಗಬೇಕಿತ್ತು.

ನಿಜ. ಸನಾತನ ಧರ್ಮ ಮತ್ತು ಹಿಂದೂ ಸಮಾಜಗಳನ್ನು ಉಳಿಸಲು ಬೆಳೆಸಲು ಚಿಂತನೆಯ ಒಂದು ಅಧಿಕೃತ ಅಧಿಕರಣವು ಆವಶ್ಯಕವೂ ಆಗಿತ್ತು. ಗುರೂಜಿಯವರ ಹಿಂದೀ ಭಾಷೆಯ ಉಪನ್ಯಾಸಗಳೂ ಸೇರಿದಂತೆ, ಅವರ ಅಮೂಲ್ಯ ಚಿಂತನೆಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿ ಅತಿಮಹತ್ತ್ವದ 'ಬಂಚ್ ಆಫ್ ಥಾಟ್ಸ್' ಗ್ರಂಥವನ್ನು 1966ರಲ್ಲಿ ಹೊರತರಲಾಯಿತು. ಈ ಸಾಗರೋಪಮ ಸಾಹಿತ್ಯ ಸಾಹಸದ ಹಿಂದೆ ಜ್ಞಾನಿ, ವಿದ್ವಾಂಸ, ಲೇಖಕ, ಅಂಕಣಕಾರ, ಚಿಂತಕ ಹೊ.ವೆ.ಶೇಷಾದ್ರಿ ಅವರ ಕಠಿಣತಮ ಪರಿಶ್ರಮವಿತ್ತು. ಮುಂದೆ ಈ ಗ್ರಂಥವನ್ನು ಕನ್ನಡಕ್ಕೆ ತಂದಾಗಲೂ (ಚಿಂತನಗಂಗಾ) ಅವರದ್ದೇ ಪರಿಶ್ರಮ, ಪರಿಪಾಕ. ಹತ್ತಾರು ಸಹಸ್ರ ವರ್ಷಗಳ ಅದ್ಭುತ ಎನಿಸುವ ಧಾರ್ಮಿಕ ಪರಂಪರೆಯನ್ನು ಮತ್ತು ಅದನ್ನು ಉಳಿಸಿ ಬೆಳೆಸುವ ಚಿಂತನೆಗಳನ್ನು ಗ್ರಂಥವೊಂದರಲ್ಲಿ ಹಿಡಿದಿಡುವುದು ಸಾಮಾನ್ಯ ಕೆಲಸವಲ್ಲ.

ಯಾವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮರ್ಪಿತ ಪ್ರಚಾರಕರಾಗಿ ಹೊ.ವೆ.ಶೇಷಾದ್ರಿ (1926-2005) ಅವರು ತಮ್ಮ ಪೂರ್ಣ ಜೀವನವನ್ನು ಹಿಂದೂ ಸಮಾಜಕ್ಕಾಗಿ ಮುಡುಪಿಟ್ಟರೋ, ಈಗ ಆ ಸಂಘದ ಶತಮಾನೋತ್ಸವವೂ ಹೌದು; ಜತೆಗೆ ಹೊ.ವೆ.ಶೇಷಾದ್ರಿ ಅವರ ಶತಮಾನೋತ್ಸವ ವರ್ಷವೂ ಹೌದು. ಶೇಷಾದ್ರಿಗಳು ಹುಟ್ಟಿದ್ದು 26ನೆಯ ಮೇ 1926ರಂದು. ಇದೀಗ ಅವರ ಶತಮಾನೋತ್ಸವ ವರ್ಷಾರಂಭ.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮರ್ಪಿತ ಪ್ರಚಾರಕರಾಗಿ ಸರಕಾರ್ಯವಾಹ ಸ್ಥಾನದವರೆಗಿನ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿ, ಜೊತೆಜೊತೆಯಲ್ಲಿಯೇ ತಮ್ಮ ಬರೆಹಗಳಿಂದ, ಉಪನ್ಯಾಸಗಳಿಂದ ಹಿಂದೂ ಸಮಾಜಕ್ಕೆ ಮಾರ್ಗದರ್ಶನ ನೀಡಿದ ಹೊ.ವೆ.ಶೇಷಾದ್ರಿ ಅವರದ್ದು ಅನುಪಮ ಸಾಧನೆ. ಅವರ ಹರಿತವಾದ ಭಾಷೆ, ವ್ಯಂಗ್ಯ, ಅವರು ನೀಡುತ್ತಿದ್ದ ಉದಾಹರಣೆಗಳು, ಅವರ ಉಲ್ಲೇಖಗಳು ಬಹಳ ಪರಿಣಾಮಕಾರಿಯಾಗಿರುತ್ತಿದ್ದವು. ಅವರ ಅಧ್ಯಯನ ವೈಶಾಲ್ಯವೂ ವಿಸ್ತೃತ ಆಯಾಮದ್ದು.

ಆರು ದಶಕಗಳ ಹಿಂದೆಯೇ, ಅಂಕಣಗಳಿಗೆ ಅವರಂತೆ ಶೀರ್ಷಿಕೆಗಳನ್ನು ಕೊಟ್ಟವರೂ, ಅವರಂತೆ ಭಾಷೆಯನ್ನು ಬಳಸಿದವರೂ ಯಾರೂ ಇಲ್ಲ. ಅವರೇ ಮೊದಲಿಗರು

ಅದು 1960ರ ದಶಕ ಎಂಬುದನ್ನು ಕಣ್ಮುಂದೆ ತಂದುಕೊಂಡಾಗ ಶೇಷಾದ್ರಿಗಳ ಕಥನವೈಶಿಷ್ಟ್ಯದ ಅನುಭೂತಿ ನಮ್ಮದಾಗುತ್ತದೆ. ದೇಶವಿಭಜನೆಯ ನಿಜ ಇತಿಹಾಸವೇ ಅಪರಿಚಿತವಾಗಿ ಹೋಗಿದ್ದಾಗ ಅವರು ಬರೆದ 'ಆ ಕಾಳರಾತ್ರಿಯ ಪ್ರಶ್ನೆ' ಮತ್ತು 'ದೇಶವಿಭಜನೆಯ ದುರಂತ ಕಥೆ' ಇಂಗ್ಲಿಷಿನಲ್ಲಿ ಬರೆದ 'ದ ಟ್ರ್ಯಾಜಿಕ್ ಸ್ಟೋರಿ ಆಫ್ ಪಾರ್ಟಿಷನ್' ಗ್ರಂಥಗಳು ಸಾಹಿತ್ಯ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ತಲ್ಲಣವನ್ನೇ ಹುಟ್ಟಿಸಿದವು. ಬಹಳ ದೊಡ್ಡ ಲೇಖಕರಾದ ಸೀತಾರಾಮ ಗೋಯಲ್, ಅರುಣ್ ಶೌರಿ ಮುಂತಾದವರು ಸಹ ಈ ಮಹತ್ಕೃತಿಗಳ ಉಲ್ಲೇಖವನ್ನು ಮಾಡಿದ್ದಾರೆ.

ತುರ್ತು ಪರಿಸ್ಥಿತಿಯ ಅತಿರೇಕಗಳು

1975ರ ಕರಾಳ ತುರ್ತುಪರಿಸ್ಥಿತಿಯ ಅತಿರೇಕಗಳ ಬಗೆಗೆ, ಅನ್ಯಾಯಗಳ ಬಗೆಗೆ ಅವರು ಸಂಪಾದಿಸಿದ 'ಭುಗಿಲು' (ಪ್ರಕಟಣೆ 1977) ಅಪರೂಪದ ಸಾಕ್ಷ್ಯಾಧಾರಗಳ ದಾಖಲೆಯ ಕೃತಿಯೇ ಆಗಿದೆ. ಇಂಗ್ಲಿಷ್, ಹಿಂದೀ ಮತ್ತಿತರ ಭಾಷೆಗಳಲ್ಲಿ ತುರ್ತುಪರಿಸ್ಥಿತಿಯ ಅತಿರೇಕಗಳ ಬಗೆಗೆ ಅಕ್ಷರಶಃ ನೂರಾರು ಗ್ರಂಥಗಳು ಪ್ರಕಟವಾದವು. ಭುಗಿಲು ಕರ್ನಾಟಕದಲ್ಲಿ, ಕನ್ನಡದಲ್ಲಿ ಕಾರಣಾಂತರದಿಂದ ಏಕಮೇವ ಆಗಿಹೋಯಿತು. ಅಸಾಮ್ ಎಲ್ಲಿದೆ ಎಂಬುದೇ ಬಹಳ ಜನರಿಗೆ ಗೊತ್ತಿರಲಿಲ್ಲ, ಎನ್ನುವ ಕಾಲಘಟ್ಟದಲ್ಲಿ ಶೇಷಾದ್ರಿಗಳ 'ಅಸಾಮಿನ ಆರ್ತಸ್ವರ' (1980) ಅಲ್ಲಿನ ಬಹುಆಯಾಮದ ಸಮಸ್ಯೆಗಳ ಚಿತ್ರಣ ನೀಡಿತು. ಮತಾಂತರವೆಂದರೆ ರಾಷ್ಟ್ರಾಂತರ ಎಂದು ಎಚ್ಚರಿಸಿದ ಅವರ 'ಮೀನಾಕ್ಷಿಪುರಂ, ಒಂದು ಎಚ್ಚರಿಕೆ' (1981) ಆ ಕುರಿತ ಒಂದು ಸಾಮಾಜಿಕ, ಚಾರಿತ್ರಿಕ ಪುರಾವೆಯೂ ಆಗಿದೆ.

ಧ್ಯೇಯಯಾತ್ರಿ ಕೃತಿ

ಹೊ.ವೆ.ಶೇಷಾದ್ರಿಗಳ ನಿಧನಾನಂತರ ಅವರ ಜೀವನದರ್ಶನ ಕೃತಿ 'ಧ್ಯೇಯಯಾತ್ರಿ' ರಚಿಸುವಾಗ ನನಗೆ ಅಚ್ಚರಿಯ ಅಪೂರ್ವಾನುಭವ. ಅಂತಹ ಧ್ಯೇಯಸಮರ್ಪಿತ ಮಹಾಚೇತನಗಳ ಜೀವನದಲ್ಲಿ ಸಾಮಾನ್ಯರ ಜೀವನದಲ್ಲಿ ನಾವು ಕಾಣುವ ಸಾಮಾನ್ಯ ಅನುಭವಗಳೇ ಇರುವುದಿಲ್ಲ. ಎಲ್ಲವೂ ಎಲ್ಲವೂ ಸಂಘ, ಹಿಂದೂ ಸಮಾಜ, ಸನಾತನ ಧರ್ಮ, ರಾಷ್ಟ್ರಜೀವನ, ಇತ್ಯಾದಿ ಧ್ಯೇಯಗಳ ಪರಿಧಿಯಲ್ಲಿಯೇ ಇರುತ್ತವೆ. (ಎಷ್ಟೆಂದರೆ, ನನ್ನ ಕಿಡಿಗೇಡಿ ಬಾಲ್ಯಸ್ನೇಹಿತರು ಧ್ಯೇಯಯಾತ್ರಿ ಕೃತಿಯಲ್ಲಿ ಶೇಷಾದ್ರಿಗಳ ವಿಷಯವನ್ನೇ ಏಕೆ ಬರೆದಿಲ್ಲ, ಎಂದು ಹಾಸ್ಯ ಮಾಡುತ್ತಿದ್ದರು!)

ಸುಮಾರು ಮೂರು ದಶಕಗಳ ಹಿಂದೆ ಶೇಷಾದ್ರಿಗಳು ಶಿವಮೊಗ್ಗಕ್ಕೆ ಬಂದಿದ್ದರು. ವೃತ್ತಿನಿಮಿತ್ತ ನಾನಾಗ ಶಿವಮೊಗ್ಗದಲ್ಲಿದ್ದೆ ಮತ್ತು ಸಂಘದ ಸಂಪರ್ಕ ತುಂಬಾ ಕಡಿಮೆಯಾಗಿಹೋಗಿತ್ತು. 1974ರ ದಾಂಡೇಲಿಯ ಸಂಘ ಶಿಕ್ಷಾ ವರ್ಗದ ಅನಂತರ ಅವರೊಂದಿಗೆ ವಿಸ್ತೃತವಾದ ಚರ್ಚೆ ಸಾಧ್ಯವಾಗಿರಲಿಲ್ಲ. ಆದರೂ, ಶಿವಮೊಗ್ಗದಲ್ಲಿ ಅವರೊಂದಿಗೆ ಒಂದಿಷ್ಟು ಮಾತನಾಡುವ ಮತ್ತು ಪ್ರಶ್ನೆ ಕೇಳುವ ಅವಕಾಶ ಸಿಕ್ಕಿತ್ತು.

ಸಮಸ್ಯೆಗಳು ಪ್ರಶ್ನೆಗಳು ನೂರಾರು!

ಜಾತಿ, ಉಪಜಾತಿ, ಜಾತೀಯತೆ, ಜಾತಿವಿನಾಶ ಆಂದೋಲನ, ಮತಾಂತರ, ಮರಳಿ ಮಾತೃಧರ್ಮಕ್ಕೆ ಅಭಿಯಾನ, ಮತೀಯ ಆಕ್ರಮಣಕಾರೀ ದುಃಶಕ್ತಿಗಳು ದೇಶಗಳ ಜನಸಂಖ್ಯಾ ಸಮತೋಲನವನ್ನೇ (ಡೆಮಾಗ್ರಾಫಿಕ್ ಇಂಬ್ಯಾಲೆನ್ಸ್) ತಮ್ಮ ಜನಸಂಖ್ಯಾಸ್ಫೋಟದಿಂದ ನಾಶಮಾಡಿಬಿಡುವುದು, ಮುಸ್ಲಿಮರಾಗಲೀ – ಕ್ರೈಸ್ತರಾಗಲೀ ಮರಳಿ ಮಾತೃಧರ್ಮಕ್ಕೆ ಬಂದಾಗ ಅವರು ಯಾವ ಸಮುದಾಯಕ್ಕೆ ಸೇರಬೇಕಾಗುತ್ತದೆ, ಅವರದ್ದೇ ಪ್ರತ್ಯೇಕ ಸಮುದಾಯವಾಗಬೇಕೇ : ಈ ರೀತಿ ಸಮಸ್ಯೆಗಳು – ಪ್ರಶ್ನೆಗಳು..... ಒಂದೇ ಎರಡೇ!? ಸಿಕ್ಕ ಅವಕಾಶದಲ್ಲಿಯೇ ಪ್ರಶ್ನಿಸಿದೆ. ಅವರ ಉತ್ತರಗಳು ದಶಕಗಳಿಂದ ಎದೆಯಲ್ಲಿ – ತಲೆಯಲ್ಲಿ ಅನುರಣಿಸುತ್ತಿವೆ.

'... ನೋಡಪ್ಪಾ, ಮಂಜೂ. ನಮ್ಮ ಹಿಂದೂ ಸಮಾಜದಲ್ಲಿ ಜಾತಿಗಳು ವಾಸ್ತವ. ಜಾತಿಗಳು ಹೋಗುವುದಿಲ್ಲ. ನಮಗೆ ಬೇಕಾದುದು ಜಾತಿಜಾತಿಗಳ ನಡುವಿನ ಸಾಮರಸ್ಯ. ಸಾಮರಸ್ಯಕ್ಕೇ ಸಂಘವೂ ಒತ್ತು ಕೊಡುತ್ತಿದೆ. ಸಾಮರಸ್ಯವೇ ಪರಿಹಾರ ಕಣಪ್ಪಾ. ಹಿಂದಿನ ಅನೇಕ ಶತಮಾನಗಳಲ್ಲಿ, ದೇಶಾದ್ಯಂತ ತುಂಬ ತುಂಬ ಮತಾಂತರ ಆಗಿದೆ. ಬಹುತೇಕ ಸಮುದಾಯಗಳು ಮತಾಂತರದ ನಂತರವೂ ಅಲ್ಲಿ ಉಪಸಮುದಾಯಗಳಾಗಿಯೇ ಮುಂದುವರಿದಿವೆ. ಮಾತೃಧರ್ಮಕ್ಕೆ ಮರಳಿದಮೇಲೆ ಆಯಾ ಸಮುದಾಯಗಳು ಹಿಂದೂ ಸಮಾಜದ ಅದೇ ಜಾತಿಗೇ ಸೇರಬೇಕಾಗುತ್ತದೆ. ಬೇರೆ ಪರಿಹಾರ, ಇಲ್ಲಪ್ಪಾ' ಎಂದರು.

ಜೀರ್ಣಿಸಿಕೊಳ್ಳಲು ಕಷ್ಟ!

ಅವರ ಮಾತುಗಳನ್ನು ಅರ್ಥ ಮಾಡಿಕೊಳ್ಳಲು, ಜೀರ್ಣಿಸಿಕೊಳ್ಳಲು, ಒಪ್ಪಿಕೊಳ್ಳಲು ಸಾಕಷ್ಟು ಕಾಲವೇ ಬೇಕಾಯಿತು. ಇಡೀ ದೇಶದಲ್ಲಿ ಜಾತಿ, ಉಪಜಾತಿ, ಕೋಮುಗಳ ನಡುವಿನ ನಿಲ್ಲದ ರಾಜಕೀಯವು ಅನೇಕ ದಶಕಗಳಿಂದ ದೊಡ್ಡ ಸಮಸ್ಯೆಯೇ ಆಗಿದೆ. ಮೀಸಲಾತಿಯು ಇದಕ್ಕೆ ಇನ್ನೊಂದೇ ಆಯಾಮ ನೀಡಿದೆ. ಅನೇಕ ಚಿಂತನಧಾರೆಗಳ ಪ್ರಭೃತಿಗಳು ದೊಡ್ಡ ದೊಡ್ಡ ಮಾತುಗಳನ್ನು ಆಡಿದರೂ, ವಾಸ್ತವದಲ್ಲಿ ಸಾಮರಸ್ಯದ ಪರಿಕಲ್ಪನೆಗೆ ಒತ್ತು ಕೊಡುವ ಮಾತೇ ಆಡುವುದಿಲ್ಲ.

ನಿಜ ಹೇಳಬೇಕೆಂದರೆ, ಶೇಷಾದ್ರಿಗಳು ಹೇಳಿದ ಪರಿಹಾರಕ್ಕಿಂತ ಉತ್ತಮವಾದುದು ಈವರೆಗೆ ಯಾವುದೂ ಕಾಣಲಿಲ್ಲ. ಈ ದಿಸೆಯಲ್ಲಿ ಜಾತಿ, ಉಪಜಾತಿ, ಉಪಉಪಜಾತಿಗಳಲ್ಲಿ ಮುಳುಗಿಹೋಗಿರುವ ನಮ್ಮ ಮಠಾಧೀಶರು, ಸ್ವಾಮಿಗಳು ಈಗಲಾದರೂ ಎಚ್ಚೆತ್ತುಕೊಂಡು ಇಸ್ಲಾಂ ಮತ್ತು ಕ್ರೈಸ್ತ ಮತಗಳಿಗೆ ಹೋಗಿರುವ ಸಮುದಾಯಗಳನ್ನು ಮರಳಿ ಮಾತೃಧರ್ಮಕ್ಕೆ ಕರೆದುಕೊಂಡು ಬರುವ ಮೂಲಕ ಅರ್ಥಪೂರ್ಣವಾದ ಸೇವೆ ಮಾಡಬಹುದು.

ಹಿಂದೂ ಧರ್ಮ, ಹಿಂದೂ ಸಂಘಟನೆ, ಹಿಂದೂ ಸಮಾಜಗಳಿಗಾಗಿಯೇ ಸಮರ್ಪಿತರಾಗಿದ್ದ ಶೇಷಾದ್ರಿಗಳು ನಮ್ಮ ದೇಶ ಕಂಡ ಬಹಳ ದೊಡ್ಡ ಚಿಂತಕರು, ಬರೆಹಗಾರರು. ಕಮ್ಯೂನಿಸಂ, ಇಸ್ಲಾಂ ಮತ್ತು ಕ್ರೈಸ್ತ ಮತಗಳ ಸಾಮ್ರಾಜ್ಯಶಾಹಿ ಆಕ್ರಮಣ ಮತ್ತು ಅಪಾಯಗಳ ಬಗೆಗೆ ಬಹುಮೂಲ್ಯ ಚಿಂತನೆಗಳನ್ನು ಅವರು ನೀಡಿದ್ದಾರೆ. ಕನ್ನಡ, ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲೂ ಲಭ್ಯವಿರುವ ಅವರ ಕೃತಿಗಳು ಭಾರತವನ್ನು ಮತ್ತು ಸನಾತನ ಧರ್ಮವನ್ನು ಉಳಿಸುವೆಡೆಗೆ ಅಪೂರ್ವ ಕೊಡುಗೆಗಳಾಗಿವೆ. ಅವರ ಚಿಂತನೆಗಳ ಅಧ್ಯಯನ ಮತ್ತು ಅನುಷ್ಠಾನಗಳು ಅವರಿಗೆ ನಾವು ನೀಡಬಹುದಾದ ನೈಜ ಶ್ರದ್ಧಾಂಜಲಿ, ಸ್ಮರಣಾಂಜಲಿ.

Work before scroll ಈ ನಿಯಮ ನಿಜಕ್ಕೂ ಉತ್ತಮ!

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ನಿಂಗಣ್ಣಾ ಮಲಕನ್ನವರ, ರಾಯಬಾಗ

- **ಭಟ್ರೇ, ಸೋಮಾರಿತನ ಮತ್ತು ಆಲಸ್ಯತನದಿಂದ ಹೊರ ಬರುವುದು ಹೇಗೆ? ಈ ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಿ.**

– ಮಲಕನ್ನವರ ಅವರೇ, Lazy is such an ugly word. I prefer to call it selective participation ಎಂದು ಹೇಳುವುದನ್ನು ಕೇಳಿದ್ದೇನೆ. ಕೆಲವರು ಸೋಮಾರಿತನಕ್ಕೆ Yesterday I did nothing and today I am finishing what I did yesterday ಎಂದು ತಮಾಷೆಯಾಗಿ ಹೇಳುವುದನ್ನೂ ಕೇಳಿದ್ದೇನೆ. Laziness is nothing more than the habit of resting before you get tired ಎಂಬ ಮಾತು ಪ್ರಸಿದ್ಧ. ಇರಲಿ.

ಸೋಮಾರಿತನ (laziness) ಮತ್ತು ಆಲಸ್ಯ (procras tination) ಎಲ್ಲರಲ್ಲೂ ಇತ್ತೀಚೆಗೆ ಹೆಚ್ಚಾಗಿ ಕಂಡುಬರುವ ಸಮಸ್ಯೆಗಳಾಗಿವೆ. ಇದರಿಂದ ಹೊರಬರಲು ಕೆಲವು ಮಾರ್ಗಗಳಿವೆ. ಯಾವತ್ತೂ ನಮ್ಮ ಮುಂದೆ ಸಣ್ಣ ಗುರಿಗಳನ್ನು ಇಟ್ಟುಕೊಳ್ಳುವುದು. ದೊಡ್ಡ ಕೆಲಸವನ್ನು ನೋಡಿದಾಗಲೇ ಸೋಮಾರಿತನ ಹುಟ್ಟುತ್ತದೆ. ಅಷ್ಟು ದೊಡ್ಡ ಕೆಲಸವನ್ನು ಹೇಗೆ ಮಾಡುವುದು ಎಂಬ ಪ್ರಶ್ನೆ ತಕ್ಷಣ ಹುಟ್ಟಿಕೊಳ್ಳುತ್ತದೆ. ಹೀಗಾಗಿ ಒಂದು ದೊಡ್ಡ ಗುರಿಯನ್ನು ಇಳಿಮುಖ ಮಾಡಿಕೊಳ್ಳಬೇಕು. ಉದಾಹರಣೆ, "ಇಂದು ಒಂದು ಪುಟ ಓದೋಣ', "ಇಂದು ಎರಡು ಸಸಿ ನೆಡೋಣ'...ಇತ್ಯಾದಿ.

ಪ್ರತಿದಿನದ ಆಚರಣೆ (Routine) ಯನ್ನು ರೂಪಿಸಿಕೊಳ್ಳಬೇಕು. ಪ್ರತಿದಿನ ನಿಶ್ಚಿತ ಸಮಯದಲ್ಲಿ ಏನು ಮಾಡಬೇಕು ಅಂತ ಪಟ್ಟಿ ಮಾಡಿಕೊಳ್ಳಬೇಕು. ಮೊದಲ 7–14 ದಿನ ಇಡೀ ಶಿಸ್ತನ್ನು ಮೈಗೂಡಿಸಿಕೊಳ್ಳುವುದು ಕಷ್ಟವಾಗಬಹುದು, ನಂತರ ಅದು ಸಹಜವಾಗುತ್ತದೆ. ಸಾಧ್ಯವಾದರೆ "ಎರಡು ನಿಮಿಷ ನಿಯಮ'ವನ್ನು ರೂಢಿಸಿಕೊಳ್ಳುವುದು. ಯಾವ ಕೆಲಸವನ್ನಾದರೂ ಆರಂಭಿಸಲು ಇದು ಸರಳ ತಂತ್ರ. ಯಾವುದಾದರೂ ಕೆಲಸವನ್ನು ಎರಡು ನಿಮಿಷಗಳಲ್ಲಿ ಆರಂಭಿಸಬಹುದೇ ಎಂದು ಯೋಚಿಸಿ. ಉದಾಹರಣೆಗೆ, "ನಾನು ಇಂದು ಎರಡು ನಿಮಿಷ ಮಾತ್ರ ಓದುತ್ತೇನೆ' ಎಂದು ಅಂದುಕೊಳ್ಳುವುದು. ಆಗ ಯಾವ ಕೆಲಸವೂ ಹೊರೆ ಎಂದು ಅನಿಸುವುದಿಲ್ಲ.

ಈಗ ಸೋಮಾರಿತನಕ್ಕೆ ನಿರಂತರವಾಗಿ ಡಿಜಿಟಲ್ ಬಳಕೆ (ಮೊಬೈಲ್, ಸೋಷಿಯಲ್ ಮೀಡಿಯಾ..)ಮುಖ್ಯ ಕಾರಣ ಎನಿಸಿದೆ. ಫೋನ್‌ನ್ನು ದೂರ ಇಡಿ ಅಥವಾ ಆ್ಯಪ್ ಬಳಕೆ ಟ್ರ್ಯಾಕರ್ ಬಳಸಿ. Work before scroll ಎನ್ನುವ ನಿಯಮ ಹಾಕಿಕೊಳ್ಳಬೇಕು.

ನಿಮ್ಮ ಆಲಸ್ಯದ ಮೂಲ ಕಾರಣ ಏನು ಎಂಬ ಪ್ರಶ್ನೆಯನ್ನು ಹಾಕಿಕೊಂಡು ಉತ್ತರ ಪಡೆಯಲು ಯತ್ನಿಸಬೇಕು. ಅಂಜಿಕೆ? ಸ್ವಲ್ಪ ಆತ್ಮವಿಶ್ವಾಸದ ಕೊರತೆ? ಅಥವಾ ದುಃಖ? ಮೂಲ ಕಾರಣವನ್ನು ಅರ್ಥ ಮಾಡಿಕೊಂಡರೆ ಪರಿಹಾರವೂ ಸ್ಪಷ್ಟವಾಗುತ್ತದೆ. ಬೆಳಗ್ಗೆ ವಾಕಿಂಗ್ ಹೋಗಬೇಕಲ್ಲ ಎಂದು ಹಾಸಿಗೆಯಲ್ಲಿ ಸೋಮಾರಿಯಾಗಿ ಹೊರಳುವ ಬದಲು, ಮೊದಲು ಮಾಡುವ ಕೆಲಸ ಅಂದ್ರೆ, ಥಟ್ಟನೆ ಹಾಸಿಗೆಯಿಂದ ಏಳುವುದು! I am not lazy, but I am on power saving mode ಎಂದು ಮಾತ್ರ ಅಂದುಕೊಳ್ಳಬೇಡಿ.

ಪ್ರಕಾಶ ವಜ್ಜಲ್, ಸುರಪುರ

- **ಭಟ್ರೇ, ನಾನು ನಿಮ್ಮ ಪತ್ರಿಕೆಗೆ ಈ ಮೊದಲು ವಾರಕ್ಕೊಂದು ಅಂಕಣಗಳನ್ನು ಕಳಿಸುತ್ತಿದ್ದೆ. ಆದರೆ ಕಳಿಸಿದ ಅಂಕಣಗಳಲ್ಲಿ ಕೇವಲ ಒಂದು ಅಂಕಣ ಮಾತ್ರ ಪ್ರಕಟವಾಗಿದೆ. ನಿಮ್ಮ ಪತ್ರಿಕೆಯಲ್ಲಿ ನನ್ನ ಅಂಕಣ ಕಳಿಸಿದ್ದು ಪ್ರಕಟವಾಗಬೇಕಾದರೆ ಯಾವ ರೀತಿಯಲ್ಲಿ ಅಂಕಣ ಬರೆದು ಕಳಿಸಬೇಕು ತಿಳಿಸಿ. ನಿಮ್ಮ ಪತ್ರಿಕೆಯಲ್ಲಿ ನನ್ನ ಅಂಕಣ ಪ್ರಕಟವಾಗದ ಕಾರಣ, ನಿಮಗೆ ಕಳಿಸುವುದನ್ನೇ ನಿಲ್ಲಿಸಿದ್ದೇನೆ. ಮುಖ್ಯವಾಗಿ ನಾನು ಸ್ಫೂರ್ತಿದಾಯಕ ಲೇಖನ ಕಳಿಸಿದಾಗ ಮಾತ್ರ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಅದೇ ರೀತಿಯ ಲೇಖನಗಳನ್ನು ಕಳಿಸಬೇಕಾ? ಯಾಕಂದ್ರೆ, ನನ್ನ ಸಹೋದ್ಯೋಗಿ ಮಿತ್ರರೊಬ್ಬರು ನಿಮ್ಮ ಪತ್ರಿಕೆಗೆ ಕಳಿಸಿದ ಪ್ರತಿಯೊಂದು ಅಂಕಣವೂ ತಪ್ಪದೇ ಪ್ರಕಟವಾಗುತ್ತವೆ. ನನ್ನ ಅಂಕಣ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗಲು ಏನು ಮಾಡಬೇಕು?**

–ವಜ್ಜಲ ಅವರೇ, ಪ್ರಾಯಶಃ ನೀವು ಲೇಖನವನ್ನು "ಅಂಕಣ' ಎಂದು ಭಾವಿಸಿದ್ದೀರಿ ಎಂದು ಅಂದುಕೊಳ್ಳುತ್ತೇನೆ. ಲೇಖನವೇ ಬೇರೆ, ಅಂಕಣವೇ ಬೇರೆ. ಪತ್ರಿಕೆಗೆ ಯಾರು ಬೇಕಾದರೂ ಲೇಖನಗಳನ್ನು ಬರೆಯಬಹುದು. ಆದರೆ "ಅಂಕಣ' ಬರೆಯುವಂತೆ ವಿನಂತಿಸುವುದು ಪತ್ರಿಕೆಯವರು. ಸಮಾಜದಲ್ಲಿ ಪ್ರಸಿದ್ಧ ವ್ಯಕ್ತಿಗಳನ್ನು, ವಿಷಯ ಪರಿಣತರನ್ನು ಹಾಗೂ ಲೋಕಾನುಭವ ಇರುವವರನ್ನು ಅಂಕಣಕಾರರನ್ನಾಗಿ ಸಾಮಾನ್ಯವಾಗಿ ನೇಮಿಸಿಕೊಳ್ಳಲಾಗುತ್ತದೆ.

ಇನ್ನು ನಿಮ್ಮ ವಿಷಯಕ್ಕೆ ಬರುವುದಾದರೆ, ನಿಮ್ಮನ್ನು ನಾವು ಅಂಕಣಕಾರರಾಗಿ ನೇಮಿಸಿಕೊಂಡಿಲ್ಲ. ಪ್ರಾಯಶಃ ನೀವು ಲೇಖನಗಳನ್ನು ಬರೆದು, ನಮಗೆ ಕಳುಹಿಸಿರಬಹುದು. ನೀವು ಕಳುಹಿಸಿದ ಲೇಖನ ಪ್ರಕಟವಾಗಿಲ್ಲ ಎಂದ ಮಾತ್ರಕ್ಕೆ ಅದು ತಿರಸ್ಕೃತವಾಗಿದೆ ಎಂದು ಭಾವಿಸಬೇಕಾಗಿಲ್ಲ. ಸೂಕ್ತ ಕಾಲದಲ್ಲಿ ಪ್ರಕಟಣೆಗೆಂದು ನಿಮ್ಮ ಬರಹವನ್ನು ಆಯಾ ವಿಭಾಗದ ಮುಖ್ಯಸ್ಥರು ಎತ್ತಿಟ್ಟುಕೊಂಡಿರಬಹುದು. ಹೀಗಾಗಿ ನೀವು ಲೇಖನ ಪ್ರಕಟಣೆಗೆ ತುಸುಕಾಲ ಕಾಯುವುದು ಅನಿವಾರ್ಯ. ನಿಮ್ಮ ಬರಹ ಪ್ರಕಟಣೆಗೆ ಸೂಕ್ತವಲ್ಲದಿದ್ದರೆ ಅದನ್ನು ನಿಮಗೆ ತಿಳಿಸುತ್ತಾರೆ. ನಮ್ಮಿಂದ ನಿಮಗೆ ಅಂಥ ಪತ್ರ, ಇಮೇಲ್ ಬಂದಿಲ್ಲ ಎಂದಾದರೆ, ನಿಮ್ಮ ಲೇಖನ ಪ್ರಕಟಣೆಗೆ ಇನ್ನೂ ಸೂಕ್ತ ಕಾಲ ಬಂದಿಲ್ಲ ಎಂದೇ ಅರ್ಥ.

ಪತ್ರಿಕೆಯಲ್ಲಿ ಲೇಖನಗಳನ್ನು ಪ್ರಕಟಿಸಲು ಅಥವಾ ಪ್ರಕಟಿಸದೇ ಇರಲು ಯಾವುದೇ ವಶೀಲಿಬಾಜಿ ನಡೆಯುವುದಿಲ್ಲ. ಲೇಖನ ಚೆನ್ನಾಗಿದ್ದರೆ ಅದನ್ನು ಬರೆದವರು ಯಾರೇ ಇರಲಿ ಪ್ರಕಟಿಸಲಾಗುತ್ತದೆ. ಪತ್ರಿಕೆ ಎಂಬುದು ಆನೆಯ ಹೊಟ್ಟೆಯಿದ್ದಂತೆ. ಪ್ರತಿನಿತ್ಯವೂ ನಾವು ಅದಕ್ಕೆ ಸುರಿಯುತ್ತಲೇ ಇರಬೇಕು. ಆದರೆ ಕೆಲವೊಮ್ಮೆ ಲೇಖನಗಳಲ್ಲಿ ಪ್ರಮುಖ ಮಾಹಿತಿ ಇಲ್ಲದೇ ಹೋಗಬಹುದು ಅಥವಾ ಕೊಟ್ಟ ಮಾಹಿತಿ ದೋಷ ಪೂರ್ಣವಾಗಿರಬಹುದು ಅಥವಾ ಸರಿಯಾದ ಕಾಲಕ್ಕೆ ಪ್ರಕಟಿಸೋಣ ಎಂದು ಕಾಯ್ದಿರಿಸಿರಬಹುದು. ಲೇಖನಕ್ಕೆ ಒಂದು ಪೂರ್ಣ ಸ್ವರೂಪ ನೀಡಲು, ಸರಿಯಾಗಿ ಪರಾಂಬರಿಸಲು ಸಮಯ ಬೇಕಾಗುತ್ತದೆ. ಅದು ಸಹ ನಿಮ್ಮ ಲೇಖನ ಪ್ರಕಟಣೆ ವಿಳಂಬಕ್ಕೆ ಕಾರಣವಾಗಿರಬಹುದು. ಯಾವುದಕ್ಕೂ ನೀವು ಪತ್ರಿಕೆಯ ಪುರವಣಿ ಸಂಪಾದಕರ ಜತೆ ಉತ್ತಮ ಬಾಂಧವ್ಯ ಮತ್ತು ಒಡನಾಟವನ್ನು ಇಟ್ಟುಕೊಳ್ಳುವುದು ಒಳ್ಳೆಯದು. ಆಗ ಅವರು ಇಂಥದ್ದೊಂದು ಲೇಖನ ಬರೆದುಕೊಡಿ ಎಂದು ಸೂಚಿಸಬಹುದು. ಆದರೆ, ನಿಮ್ಮ ಒಂದು ಲೇಖನ ಪ್ರಕಟವಾಗಿಲ್ಲವೆಂದು, ಮುಂದೆ ಬರೆಯುವುದನ್ನೇ ನಿಲ್ಲಿಸಬೇಡಿ. ಬರೆಯುತ್ತಲೇ ಇರಿ, ಆ ಒಂದು ಅಭ್ಯಾಸದಿಂದ ನಿಮ್ಮ ಬರವಣಿಗೆಯ ಕೌಶಲ ಸುಧಾರಿಸುತ್ತದೆ.

ಮಂಗಳ ಭಾವಿಕಟ್ಟಿ, ಧಾರವಾಡ

- **ಭಟ್ರೇ, ಇತ್ತೀಚಿಗೆ ನನಗೆ ಹೊಸತಾಗಿ ಪರಿಚಯವಾದ ಸ್ನೇಹಿತೆ, "ನೀನು ಮಾಡರ್ನ್ ಆಗಿಲ್ಲ, ಪೆಡಿಕ್ಯೂರ್, ಮೆನಿಕ್ಯೂರ್ ಮಾಡಿಸಿಕೊಳ್ಳೊಲ್ಲ. ಈಗಿನ ಕಾಲಕ್ಕೆ ತಕ್ಕಂತೆ ಇರುವುದನ್ನು ಅಭ್ಯಾಸ ಮಾಡಿಕೊ' ಅಂತ ಹೇಳಿದಳು. ಅವಳ ಮಾತಿನಿಂದ ನನಗೆ ತುಸು ಬೇಸರ, ಅವಮಾನ ಆಯಿತು. ನಾನು ಅವಳು ಹೇಳಿದಂತೆ ಇರಬೇಕಾ? ಅಥವಾ ಈಗಿರುವಂತೆಯೇ ಇರಬಹುದೇ? ಈ ವಿಚಾರದಲ್ಲಿ ನಿಮ್ಮ ಮಾರ್ಗದರ್ಶನ ಬೇಕು.**

–ಮಂಗಳ ಅವರೇ, ನಿಮ್ಮ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಹುದು. "ನಾನು ನನ್ನ ಆದರ್ಶಗಳಂತೆ ಇರಬೇಕಾ? ಅಥವಾ ಜನರ ಅಭಿಪ್ರಾಯದಂತೆ ಬದಲಾಗ ಬೇಕಾ?' ಎಂಬ ಇಂಗಿತವೂ ನಿಮ್ಮ ಪ್ರಶ್ನೆಯಲ್ಲಿದೆ. ಮೊದಲು ಸತ್ಯವನ್ನು ಒಪ್ಪಿಕೊಳ್ಳೋಣ. ಮಾಡರ್ನ್ ಆಗಿರುವುದು ಅಥವಾ ರೂಪಕ ಸಂಸ್ಕೃತಿಯ (grooming) ಭಾಗವನ್ನಿಟ್ಟುಕೊಳ್ಳುವುದು ನಿಮ್ಮ ವೈಯಕ್ತಿಕ ಆಯ್ಕೆ. ಈ ಸನ್ನಿವೇಶದಲ್ಲಿ ನಿಮ್ಮ ಒಳಮನಸ್ಸು ಏನು ಹೇಳುತ್ತದೆ ಎಂಬುದನ್ನು ಗಮನವಿಟ್ಟು ಕೇಳಿಕೊಳ್ಳಿ.

ಪೆಡಿಕ್ಯೂರ್–ಮೆನಿಕ್ಯೂರ್ ಮಾಡಿಸಿಕೊಳ್ಳುವುದು ಒಂದು ರೀತಿಯ ಆತ್ಮಪೋಷಣೆ (self-care) ಆಗಿರಬಹುದು. ಆದರೆ ಅದು ಮಾಡಲೇಬೇಕು ಎನ್ನುವ ಯಾವುದೇ ನಿಯಮವಿಲ್ಲ. ನೀವು ಅದನ್ನು ಮಾಡಿಸಿಕೊಳ್ಳದಿದ್ದರೆ, ಅದರರ್ಥ ನೀವು "ಮಾಡರ್ನ್ ಅಲ್ಲ" ಎಂದು ಯಾರೂ ಭಾವಿಸಬೇಕಿಲ್ಲ. ಈ ದೇಶದಲ್ಲಿ ಕೇವಲ ಶೇ.ಒಂದಕ್ಕಿಂತ ಕಮ್ಮಿ ಮಹಿಳೆಯರು ಪೆಡಿಕ್ಯೂರ್–ಮೆನಿಕ್ಯೂರ್ ಮಾಡಿಸಿಕೊಳ್ಳಬಹುದು ಎಂದು ಒಂದು ಅಂದಾಜು. ಇಲ್ಲಿ ನೀವು ಎಂಥ ವ್ಯಕ್ತಿಯಾಗಲು ಬಯಸುತ್ತೀರಿ ಎಂಬುದು ಮುಖ್ಯ. ನೀವು ಬದಲಾವಣೆ ತರಬೇಕಾದರೆ, ಅದು ನಿಮ್ಮ ಒಳಗಿನ ಪ್ರೇರಣೆಯಿಂದ ಬರಬೇಕು. "ನನಗೆ ಅದು ಸರಿ ಅನಿಸಿದ್ದರಿಂದ ನಾನು ಬದಲಾಗುತ್ತಿದ್ದೇನೆ' ಎಂದು ನಿಮಗೆ ಅನಿಸಬೇಕು.

ನಿಜವಾಗಿಯೂ ನೀವು ಏನು ಮಾಡಬಹುದು? ನಿಮ್ಮ ಸ್ನೇಹಿತೆಯ ಮಾತುಗಳಲ್ಲಿ ಏನಾದರೂ ನಿಜವಿದ್ದರೆ, ಒಳ್ಳೆಯ ಅಂಶಗಳಿದ್ದರೆ ತಾಳ್ಮೆಯಿಂದ ಕೇಳುವುದರಲ್ಲಿ ತಪ್ಪೇನಿಲ್ಲ. ಆದರೆ ತಕ್ಷಣವೇ ಪಾಲಿಸಬೇಕೆಂದೇನೂ ಇಲ್ಲ. ನಿಮ್ಮದೇ ಆದ ಪಥದಲ್ಲಿ ನಿಮಗೇನು ಬೇಕೋ ಅದನ್ನು ಅನುಸರಿಸಿ. ಬೇಕಿದ್ದರೆ ಮೆನಿಕ್ಯೂರ್–ಪೆಡಿಕ್ಯೂರ್ ಮಾಡಿಸಿಕೊಳ್ಳಿ. ಆದರೆ ಅದು ನಿಮ್ಮ ಜೀವನದ ಮುಖ್ಯ ಅಂಶವೇನಲ್ಲ ಎಂಬುದು ಗೊತ್ತಿರಲಿ. "ನನಗೆ ನನ್ನ (ಜೀವನ) ಶೈಲಿಯಲ್ಲಿ ತೃಪ್ತಿ ಇದೆ. ನಾನು ಬದಲಾಯಿಸಬೇಕೆಂದರೆ, ಅದು ನನಗಾಗಿಯೇ, ಇಷ್ಟದಿಂದ ಮಾಡುತ್ತೇನೆ' ಎಂದು ನಿಮ್ಮ ಸ್ನೇಹಿತೆಗೆ ಹೇಳಬಹುದು.

ನಿಮ್ಮೊಳಗಿನ ಶಕ್ತಿಯೇ ನಿಮ್ಮ ಶೃಂಗಾರ. ಯಾರ ತೀರ್ಪಿಗೂ ಅದು ಕುಗ್ಗಬಾರದು. ಬೇರೆ ಯಾರಿಗಾದರೂ ಅದನ್ನು ತೋರಿಸಬೇಕೆಂಬ ಅಗತ್ಯವಿಲ್ಲ. ಮೆನಿಕ್ಯೂರ್–ಪೆಡಿಕ್ಯೂರ್ ಮಾಡಿಸಿಕೊಂಡರೆ ನಿಮ್ಮ ಕೈ–ಕಾಲಿನ ಉಗುರು ಮತ್ತು ಹಸ್ತ ಹಾಗೂ ಪಾದ ಸುಂದರವಾಗಿ ಕಾಣುವುದೇನೋ ನಿಜ. ನೀವು ನಿಮಗೆ ಮತ್ತು ಬೇರೆಯವರಿಗೆ ಸುಂದರವಾಗಿ ಕಾಣುವುದು ಒಳ್ಳೆಯದೇ ಅಲ್ಲವೇ?

ಹರಿ ಓಂ ಶಾಸ್ತ್ರೀ, ಶಂಕರಪುರ

- **ಸಂಪಾದಕರೇ, ಶ್ರೀನಗರದಲ್ಲೊಂದು ಸೇಬಿನ ತೋಟ ಖರೀದಿಸಿ ಅಲ್ಲೇ ಖಾಯಂ ಆಗಿ ನೆಲೆಸಬೇಕೆಂಬ ಬಯಕೆ ನನ್ನದು. ನನ್ನ ಕನಸು ಪ್ರಾಯೋಗಿಕವೆ? ನನ್ನ ಕನಸು ಯಾವಾಗ ನನಸಾಗಬಹುದು?**

–ಶಾಸ್ತ್ರೀ ಅವರೇ, ನಿಮ್ಮ ಕನಸು ಬಹಳ ಸುಂದರವೂ, ಆಳವಾದ ನೆಲೆಯ ಕನಸೂ ಆಗಿದೆ. "ಕನಸು ಯಾವಾಗ ನನಸಾಗಬಹುದು?' ಅನ್ನೋದು ನೀವು ತೆಗೆದುಕೊಳ್ಳುವ ನಿರ್ಧಾರಗಳು ಮತ್ತು ಅನುಸರಿಸುವ ಕ್ರಮಗಳ ಮೇಲೆ ನಿಖರವಾಗಿ ಅವಲಂಬಿತವಾಗಿದೆ. ನಿಮ್ಮ ಬಯಕೆಯನ್ನು ಗುರಿಯಾಗಿ ರೂಪಿಸಿಕೊಳ್ಳುವುದು ಮುಖ್ಯ. "ಒಂದು ದಿನ ತೋಟವಿದ್ದರೆ ಚೆನ್ನಾಗಿರುತ್ತದೆ' ಎಂಬ ಕಲ್ಪನೆಯಿಂದ, "2028 ರ ಒಳಗೆ ಶ್ರೀನಗರದಲ್ಲಿ ಸೇಬಿನ ತೋಟ ಖರೀದಿಸುವೆ' ಎಂಬ ಗುರಿಗೆ ಬದಲಿಸುವುದು ಮುಖ್ಯ. ನಿಮ್ಮ ಇತ್ತೀಚಿನ ಉಳಿತಾಯ, ಆದಾಯ, ಖರ್ಚುಗಳನ್ನು ಪರೀಕ್ಷಿಸಿಕೊಳ್ಳುವುದು ಒಳ್ಳೆಯದು. ನಿಮ್ಮ ಕನಸನ್ನು ನನಸು ಮಾಡಿಕೊಳ್ಳುವ ಉದ್ದೇಶಕ್ಕಾಗಿ, ಪ್ರತಿ ತಿಂಗಳು ಒಂದು "ಕನಸು ನಿಧಿ'ಯನ್ನು (dream fund) ಆರಂಭಿಸಿ.

ಭೂಮಿ ಖರೀದಿ ಮೌಲ್ಯಮಾಪನ ಮತ್ತು ಕಾನೂನು ವಿಚಾರಗಳನ್ನು ನೋಡಿಕೊಳ್ಳುವುದು ಮುಖ್ಯ. ಜಮ್ಮು ಮತ್ತು ಕಾಶ್ಮೀರದಲ್ಲಿ ಭೂಮಿ ಖರೀದಿಸಲು ಈಗ ಹೊರರಾಜ್ಯ ನಿವಾಸಿಗಳಿಗೆ ನಿಯಮಗಳು ಕೆಲವು ರೂಪಾಂತರಗೊಂಡಿವೆ (2020 ರಿಂದ). ಆದರೆ ಕೃಷಿಭೂಮಿ, ವಿಶೇಷವಾಗಿ ಸೇಬಿನ ತೋಟದ ಮಾಲೀಕತ್ವಕ್ಕೆ ಇನ್ನೂ ಕೆಲವು ನಿರ್ಬಂಧಗಳು ಇರಬಹುದು. ವೃತ್ತಿಪರ ಕಾನೂನು ಸಲಹೆಗಾರ ಅಥವಾ ಸ್ಥಳೀಯ ರಿಯಲ್ ಎಸ್ಟೇಟ್ ಏಜೆಂಟ್ ಮೂಲಕ ನಿಖರ ಮಾಹಿತಿ ಪಡೆದುಕೊಳ್ಳಿ. ತಾಳ್ಮೆಯೊಂದಿಗೆ ಕನಸಿನತ್ತ ನಡೆಯುವುದು ಮುಖ್ಯ. ಪ್ರತಿದಿನ ಕನಸಿನತ್ತ ಒಂದು ಹೆಜ್ಜೆ ಇಡಿ. ಕಾಲಾನಂತರ ತೋಟದಿಂದ ಲಾಭ ಬರಲಾರಂಭಿಸಿದ ಬಳಿಕ, ಅಲ್ಲೇ ಮನೆಯ ಕನಸು ಸಾಕಾರ ಮಾಡಿಕೊಳ್ಳಬಹುದು.

ಶ್ರೀನಗರದಲ್ಲಿ ಸೇಬಿನ ತೋಟ ಖರೀದಿಸುವ ಬದಲು, ಅಲ್ಲಿಂದ ಸೇಬಿನ ಹಣ್ಣನ್ನು ತರಿಸಿಕೊಂಡು ಇಲ್ಲಿ ಮಾರಾಟ ಮಾಡಿ, ಲಾಭಗಳಿಸಿ, ಅಲ್ಲಿಯೇ ಮನೆ ಖರೀದಿಸಬಹುದು. ಯಾವುದಕ್ಕೂ ಪೆಹಲ್ಗಾಮ್ ಘಟನೆಯನ್ನು ನೆನಪಿಸಿಕೊಂಡು, ಸ್ವಲ್ಪ ಯೋಚನೆ ಮಾಡಿ, ಮುಂದುವರಿಯುವುದು ಒಳ್ಳೆಯದು.

ವಿ.ನಿರಂಜನ, (ಇಮೇಲ್ ಮೂಲಕ)

- **ಸಂಪಾದಕರೇ, ನಾನು ಖಾಸಗಿ ಕಂಪನಿಯಲ್ಲಿ ಉದ್ಯೋಗದಲ್ಲಿದ್ದೇನೆ. ನನ್ನ ಆತ್ಮೀಯ ಸ್ನೇಹಿತ ಕಳೆದ ಒಂದು ವಾರದಿಂದ ಐವತ್ತು ಸಾವಿರ ರುಪಾಯಿ ನೀಡುವಂತೆಯೂ, ಎರಡು ತಿಂಗಳ ನಂತರ ವಾಪಸ್ ಮಾಡುವುದಾಗಿಯೂ ಹೇಳುತ್ತಿದ್ದಾನೆ. ವಿಪರೀತ ಕಷ್ಟದಲ್ಲಿದ್ದೇನೆ ಎಂದು ಬೇರೆ ಹೇಳುತ್ತಿದ್ದಾನೆ. ಏನು ಮಾಡಲಿ? ಒಂದು ವೇಳೆ ಹಣ ವಾಪಸ್ ಮಾಡುವುದು ತಡವಾದರೆ? ನನಗೆ ನಿಮ್ಮ ಸಲಹೆ ಬೇಕು.**

–ನಿರಂಜನ ಅವರೇ, ನಿಮ್ಮ ಸ್ಥಿತಿ ತುಂಬ ನಾಜೂಕು ಮತ್ತು ಸೂಕ್ಷ್ಮವಾಗಿದೆ. ಸ್ನೇಹ ಮತ್ತು ಆರ್ಥಿಕತೆ ಎರಡೂ ತುಂಬಾ ಪ್ರಭಾವ ಬೀರುವ ವಿಷಯಗಳು. ನಿಮ್ಮ ಆತ್ಮೀಯ ಸ್ನೇಹಿತ ಹಣ ಕೇಳುತ್ತಿದ್ದಾನೆ, ಆದರೆ ಹಣ ಕೊಡದಿದ್ದರೆ ಮುಂದೇನು ಎಂಬ ಚಿಂತೆ ನಿಮ್ಮನ್ನು ಕಾಡುತ್ತಿರುವಂತಿದೆ. ಆಗ ಹಣವೂ ಇಲ್ಲ, ಸ್ನೇಹವೂ ಹೋಯಿತು ಎಂಬ ದ್ವಂದ್ವದಲ್ಲಿ ನೀವಿದ್ದಂತೆ ತೋರುತ್ತದೆ.

ಪ್ರಥಮವಾಗಿ ಆತ್ಮಪರಿಶೀಲನೆ ಮಾಡಿಕೊಳ್ಳಿ. ನಾನು ಈ ಹಣ ನೀಡುವ ಸ್ಥಿತಿಯಲ್ಲಿ ಇದ್ದೇನಾ? ಈ ಹಣ ಮುಂದಿನ 2–3 ತಿಂಗಳುಗಳಲ್ಲಿ ನನ್ನ ಇತರೆ ಅಗತ್ಯಗಳಿಗೆ ಬೇಕಾಗಬಹುದಾ? ನಾನು ಈ ಹಣವನ್ನು ಸಂಪೂರ್ಣ ಕಳೆದುಕೊಂಡರೂ ಆತನೊಂದಿಗೆ ಸ್ನೇಹ ಮುಂದುವರಿಸಬಹುದಾ? ಈ ಪ್ರಶ್ನೆಗಳಿಗೆ "ಹೌದು' ಎಂದರೆ ಮುಂದಕ್ಕೆ ಹೋಗಬಹುದು. ಇಲ್ಲದಿದ್ದರೆ, ಇಲ್ಲ ಎಂದು ಹೇಳುವುದು ಲೇಸು.

ಆರ್ಥಿಕ ಸಹಾಯವನ್ನು ಕೇವಲ ಹಣ ಕೊಡುವುದೊಂದೇ ಅಲ್ಲ, "ಸಾಧ್ಯವಾದ ಬೇರೆ ನೆರವಿನ' ರೂಪದಲ್ಲಿ ಮಾಡಲು ಸಾಧ್ಯವಾ ಎಂದು ಯೋಚಿಸಬಹುದು. ನಿಮಗೆ ಐವತ್ತು ಸಾವಿರ ರುಪಾಯಿ ಕೊಡುವುದು ಕಷ್ಟವಾದರೆ, ನಿಮ್ಮ ಸ್ನೇಹಿತನಿಗೂ ಸಹಾಯ ಮಾಡಬೇಕು ಎಂದು ಅನಿಸಿದರೆ, ತಕ್ಷಣಕ್ಕೆ ಹತ್ತು ಸಾವಿರ ರುಪಾಯಿ ನೀಡಬಹುದಲ್ಲ? ಈಗ ಇಷ್ಟು ಮಾತ್ರ ನನ್ನಿಂದ ಸಾಧ್ಯ ಎಂದು ಸ್ನೇಹಿತನಿಗೆ ಸ್ಪಷ್ಟವಾಗಿ ಹೇಳಬಹುದು. ಒಂದು ವೇಳೆ ಐವತ್ತು ಸಾವಿರ ರುಪಾಯಿ ನೀಡಿದರೆ, ಲಿಖಿತ ಒಪ್ಪಂದವನ್ನಾಗಲೀ ಅಥವಾ ಮೆಸೇಜ್ ಮೂಲಕ ಸ್ಪಷ್ಟ ಸಂಭಾಷಣೆಯನ್ನಾಗಲೀ ಇಟ್ಟುಕೊಂಡಿರುವುದು ಉತ್ತಮ.

"ನಿನ್ನಿಂದ ಐವತ್ತು ಸಾವಿರ ರುಪಾಯಿ ಪಡೆದುಕೊಂಡಿದ್ದೇನೆ. ಎರಡು ತಿಂಗಳಲ್ಲಿ ಹಿಂತಿರುಗಿಸುವೆ' ಎಂಬ ಮೊಬೈಲ್ ಮೆಸೇಜ್, ಇಮೇಲ್ ಅಥವಾ ಆಡಿಯೋ ಒಪ್ಪಂದವನ್ನು ಇಟ್ಟುಕೊಂಡಿರಿ. ಇದು ನಂಬಿಕೆಯ ಸಮಸ್ಯೆ ಅಲ್ಲ, ಆದರೆ ಇಂತಹ ಒಂದು ಚಿಕ್ಕ ಸಂದೇಶದಿಂದ, "ಸ್ಪಷ್ಟತೆ' ಕಾಯ್ದುಕೊಳ್ಳಲು ಸಾಧ್ಯ.

ನಿಮ್ಮ ಸ್ನೇಹಿತ ಹಣ ನೀಡಲು ವಿಳಂಬ ಮಾಡಿದರೆ? ಅಂಥ ಸಂದರ್ಭದಲ್ಲಿ, "ಹಣ ನೀಡುವುದು ಸಾಧನೆ ಅಲ್ಲ. ಹಣ ಕಳೆದುಕೊಂಡರೂ ಸ್ನೇಹ ಉಳಿಸಿಕೊಳ್ಳುವುದು ಮುಖ್ಯ' ಎಂಬ ಅಂಶವನ್ನು ಗಮನದಲ್ಲಿಟ್ಟುಕೊಳ್ಳಿ. ಹಣವೂ ಹೋಯಿತು, ಸ್ನೇಹವೂ ಹೋಯಿತು ಎಂಬ ಪರಿಸ್ಥಿತಿಯನ್ನು ತಂದುಕೊಳ್ಳಬಾರದು.